ಸೋಮವಾರ, ಜುಲೈ 19, 2021 | ₹ 6.00

www.prajavani.net

/prajavani.net @prajavani /prajavani http://bit.ly/Prajavani

ಪ್ರಜಾ ವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಜಾಗೃತಿ
ಬೆಂಗಳೂರಿನ ಕೆ.ಆರ್. ವೃತ್ತದ ಬಳಿ ಭಾನುವಾರ ಹಿರಿಯ ನಾಗರಿಕರೊಬ್ಬರಿಗೆ ಬಿಬಿಎಂಪಿ ಮಾರ್ಷಲ್ ಮುಖಗವಸು ತೊಡಿಸಿ ಜಾಗೃತಿ ಮೂಡಿಸಿದರು

ಮಹತ್ವಾಕಾಂಕ್ಷಿ ಯೋಜನೆಯ ಅನುಷ್ಠಾನದ ಹಾದಿಯ ತುಂಬಾ ಕತ್ತಲು • ಮೂರು ಬಾರಿ ಗಡುವು ಬದಲಾದರೂ ಪ್ರಗತಿ ಆಮೆಗತಿ

ಇನ್ನೂ ಬೆಳಗದ ಸ್ಮಾರ್ಟ್ ಎಲ್ಇಡಿ ಬೀದಿ ದೀಪ

• ಪ್ರವೀಣ್ ಕುಮಾರ್ ಪಿ.ವಿ.

ಬೆಂಗಳೂರು: ನಗರದ ಬೀದಿ ಬೀದಿಗಳ ಕತ್ತಲು ನಿವಾರಿಸುವುದಷ್ಟೇ ಅಲ್ಲ, ಸುರಕ್ಷತೆಗೆ ಸಂಬಂಧಿಸಿಯೂ ಆಮೂಲಾಗ್ರ ಬದಲಾವಣೆ ತರಬಲ್ಲುದು ಚತುರ ಎಲ್ಇಡಿ ಬೀದಿ ದೀಪ ಯೋಜನೆ (ಸ್ಮಾರ್ಟ್ ಎಲ್ಇಡಿ ಸ್ಟ್ರೀಟ್ ಲೈಟಿಂಗ್). ಸಮರ್ಪಕವಾಗಿ ಅನುಷ್ಠಾನವಾಗಿದ್ದೇ ಆದರೆ ಬಿಬಿಎಂಪಿ ಪಾಲಿಗೆ ವರ್ಷಕ್ಕೆ ನೂರಾರು ಕೋಟಿಗಳಷ್ಟು ವಿದ್ಯುತ್ ಬಿಲ್ ಉಳಿಸಬಲ್ಲ ಮಹತ್ವಾಕಾಂಕ್ಷಿ ಯೋಜನೆ ಇದು. ಈ ಯೋಜನೆಯ ಟೆಂಡರ್‌ಗೆ ಬಿಬಿಎಂಪಿ ಅನುಮೋದನೆ ನೀಡಿಯೇ ಮೂರು ವರ್ಷಗಳಾಗಿವೆ. ಇನ್ನೂ ಈ ಯೋಜನೆಯಡಿ ಒಂದೇ ಒಂದು ಎಲ್ಇಡಿ ಬೀದಿ ದೀಪವೂ ಬೆಳಗಿಲ್ಲ.

2018ರ ಜ. 11ರಂದು ಈ ಯೋಜನೆಗೆ ಬಿಬಿಎಂಪಿ ಟೆಂಡರ್ ಆಹ್ವಾನಿಸಿತ್ತು. ಅದೇ ವರ್ಷ ಆಗಸ್ಟ್‌ನಲ್ಲಿ ಬಿಬಿಎಂಪಿ ಕೌನ್ಸಿಲ್ ಸಭೆಯಲ್ಲಿ ಟೆಂಡರ್‌ಗೆ ಅನುಮೋದನೆಯೂ ಸಿಕ್ಕಿತ್ತು. ಆ ಬಳಿಕ ಕೆಲ ತಾಂತ್ರಿಕ ವಿಚಾರಗಳಿಗೆ ಸಂಬಂಧಿಸಿ ಬಿಬಿಎಂಪಿ ಮತ್ತು ನಗರಾಭಿವೃದ್ಧಿ ಇಲಾಖೆ ನಡುವೆ ಹಗ್ಗಜಗ್ಗಾಟ ನಡೆದಿತ್ತು. ಯೋಜನೆ ಅನುಷ್ಠಾನದ ವಿಳಂಬವಾಗುತ್ತಿರುವುದರಿಂದ ಎದುರಾಗಿದ್ದ ತೊಂದರೆಗಳ ಬಗ್ಗೆ ಪಾಲಿಕೆಯ ಕೆಲವು ಸದಸ್ಯರೂ ಕೌನ್ಸಿಲ್ ಸಭೆಯಲ್ಲಿ ಧ್ವನಿ ಎತ್ತಿದ್ದರು. ಮೇಯರ್ ಅವರು ಸರ್ಕಾರಕ್ಕೆ ಪತ್ರ ಬರೆದು ಗುತ್ತಿಗೆ ರದ್ದುಪಡಿಸುವಂತೆಯೂ ಒತ್ತಾಯಿಸಿದ್ದರು. ಬಳಿಕ ಕೆಲವು ತೊಡಕುಗಳ ನಿವಾರಣೆಗೆ ಕ್ರಮ ಕೈಗೊಳ್ಳಲಾಗಿತ್ತು. ಒಟ್ಟು ಎರಡೂವರೆ ವರ್ಷಗಳಲ್ಲಿ ಐದು ಹಂತಗಳಲ್ಲಿ ಈ ಯೋಜನೆಯನ್ನು ಅನುಷ್ಠಾನಗೊಳಿಸುವ ತೀರ್ಮಾನಕ್ಕೆ ಬರಲಾಗಿತ್ತು.

ನಗರದಲ್ಲಿ ಈಗಿರುವ ಸೋಡಿಯಂ ದೀಪಗಳ ಬದಲು ಎಲ್ಇಡಿ ಬೀದಿದೀಪಗಳನ್ನು ಅಳವಡಿಸಲು ಶಾಪೂರ್ಜಿ ಪಲ್ಲೋಂಜಿ, ಎಸ್ಎಂಎಸ್ ಇನ್‌ಫ್ರಾಸ್ಟ್ರಕ್ಚರ್ ಮತ್ತು ಸಮುದ್ರ ಎಲೆಕ್ಟ್ರಾನಿಕ್ ಸಿಸ್ಟಮ್ ಪ್ರೈವೇಟ್ ಲಿಮಿಟೆಡ್‌ಗಳ ಒಕ್ಕೂಟಕ್ಕೆ (ಎಸ್ಕೊ) ಗುತ್ತಿಗೆ ನೀಡಲಾಗಿದೆ. ಈ ಯೋಜನೆಯನ್ನು ವಿನ್ಯಾಸ ರಚನೆ, ಹಣಕಾಸು ವ್ಯವಸ್ಥೆ, ನಿರ್ಮಾಣ, ನಿರ್ವಹಣೆ ಮತ್ತು ವರ್ಗಾವಣೆ (ಡಿಎಫ್‌ಬಿಒಟಿ) ಮಾದರಿಯಲ್ಲಿ ಜಾರಿಗೆ ತರಲಾಗುತ್ತಿದೆ. ಹೊಸ ಬೀದಿದೀಪ ಅಳವಡಿಕೆಗೆ ಗುತ್ತಿಗೆ ಸಂಸ್ಥೆಗೆ 30 ತಿಂಗಳ ಕಾಲಾವಕಾಶ ನೀಡಲಾಗಿದೆ. ಹತ್ತು ವರ್ಷಗಳ ಅವಧಿಗೆ ಬೀದಿ ದೀಪಗಳ ಕಾರ್ಯಾಚರಣೆ ಮತ್ತು ನಿರ್ವಹಣೆಯ ಹೊಣೆಯನ್ನೂ ವಹಿಸಲಾಗಿದೆ. ನಗರದಲ್ಲಿ 4.85 ಲಕ್ಷ ಸಾಂಪ್ರದಾಯಿಕ ಬೀದಿದೀಪಗಳನ್ನು ಬದಲಿಸಿ ಎಲ್ಇಡಿ ಬೀದಿದೀಪಗಳನ್ನು ಈ ಒಕ್ಕೂಟವೇ ಅಳವಡಿಸಬೇಕು. ಅವುಗಳನ್ನು 10 ವರ್ಷ ನಿರ್ವಹಣೆ ಮಾಡಬೇಕಿದೆ.

ಟೆಂಡರ್ ಕುರಿತ ಗೊಂದಲ ನಿವಾರಣೆಯಾಗಿ ಎರಡು ವರ್ಷಗಳು ಕಳೆದಿವೆ. ಆದರೂ ಈ ಯೋಜನೆಯಲ್ಲಿ ನಿರೀಕ್ಷಿತ ಪ್ರಗತಿ ಆಗಿಲ್ಲ. ಮೊದಲ ಹಂತದ ಅನುಷ್ಠಾನಕ್ಕೆ ವಿಧಿಸಿದ್ದ ಮೂರು ಗಡುವುಗಳು ಮೀರಿ ಹೋಗಿವೆ. ಮೊದಲ ನಾಲ್ಕು ಹಂತಗಳಲ್ಲಿ ತಲಾ 1 ಲಕ್ಷ ಹಾಗೂ ಐದನೇ ಹಂತದಲ್ಲಿ 85 ಸಾವಿರ ಎಲ್ಇಡಿ ದೀಪಗಳನ್ನು ಗುತ್ತಿಗೆದಾರರು ಅಳವಡಿಸಬೇಕಿದೆ. ಮೊದಲ ಹಂತದಲ್ಲಿ 1 ಲಕ್ಷ ಎಲ್ಇಡಿಗಳನ್ನು ಬದಲಿಸಬೇಕಿತ್ತು. ಅದರಲ್ಲಿ ಕನಿಷ್ಠ 20 ಸಾವಿರ ಎಲ್ಇಡಿಗಳನ್ನು 2020ರ ಡಿಸೆಂಬರ್ ಅಂತ್ಯದೊಳಗೆ ಬದಲಾಯಿಸಲು ಗುತ್ತಿಗೆದಾರರಿಗೆ ಬಿಬಿಎಂಪಿ ಸೂಚನೆ ನೀಡಿತ್ತು. ಆದರೆ, ಅದು ಈಡೇರದ ಕಾರಣ ಬಿಬಿಎಂಪಿಯ ಆಗಿನ ಆಯುಕ್ತರು ಎಸ್ಕೊ ಪ್ರಮುಖರನ್ನು ಕರೆಸಿಕೊಂಡು ತರಾಟೆಗೆ ತೆಗೆದುಕೊಂಡಿದ್ದರು. ಬಳಿಕ 2021ರ ಏಪ್ರಿಲ್ ಒಳಗೆ ಮೊದಲ ಹಂತ ಪೂರ್ಣಗೊಳಿಸಬೇಕು ಎಂದು ತಾಕೀತು ಮಾಡಿದ್ದರು. ಅದೂ ಈಡೇರಿಲ್ಲ. ಈ ಗಡುವನ್ನು 2021ರ ಜುಲೈವರೆಗೆ ವಿಸ್ತರಿಸಲಾಗಿತ್ತು.

ಈ ಯೋಜನೆಯಲ್ಲಿ ಬಿಬಿಎಂಪಿ ಯಾವುದೇ ಹೂಡಿಕೆ ಮಾಡುತ್ತಿಲ್ಲ. ಆದರೆ, ಪ್ರಸ್ತುತ ಎಷ್ಟು ವಿದ್ಯುತ್ ಬಳಕೆ ಆಗುತ್ತಿದೆ ಎಂಬುದನ್ನು ಆಧಾರವಾಗಿಟ್ಟುಕೊಂಡು, ಎಲ್ಇಡಿ ದೀಪ ಬಳಕೆಯಿಂದಾಗುವ ವಿದ್ಯುತ್ ಉಳಿತಾಯದ ಮೊತ್ತಕ್ಕೆ ಅನುಗುಣವಾಗಿ ಕಂಪನಿಗೆ ಹಣ ಪಾವತಿ ಮಾಡಲಿದೆ. ಎಲ್ಇಡಿ ಬೀದಿ ದೀಪಗಳನ್ನು ಕೇಂದ್ರೀಕೃತ ನಿಯಂತ್ರಣ ವ್ಯವಸ್ಥೆಯಡಿ ತರಲಾಗುತ್ತದೆ. ಯಾವುದೇ ದೀಪದಲ್ಲಿ ಲೋಪ ಕಾಣಿಸಿಕೊಂಡರೂ ತಕ್ಷಣ ತಿಳಿಯುತ್ತದೆ. ಲೋಪಗಳನ್ನು ತ್ವರಿತವಾಗಿ ಸರಿಪಡಿಸಬಹುದಾದ ವ್ಯವಸ್ಥೆ ಹಾಗೂ ಬೀದಿ ದೀಪಗಳ ಬೆಳಕಿನ ತೀವ್ರತೆಯನ್ನು ದೂರದಿಂದಲೇ ನಿಯಂತ್ರಿಸುವ ವ್ಯವಸ್ಥೆಯೂ ಇದರಲ್ಲಿ ಇರಲಿದೆ. ಯಾವುದಾದರೂ ಬೀದಿ ದೀಪ ಉರಿಯದಿದ್ದರೆ ಗುತ್ತಿಗೆದಾರರಿಗೆ ದಂಡ ವಿಧಿಸುವುದಕ್ಕೆ ಅವಕಾಶ ಇದೆ.

ಅಂಕಿ-ಅಂಶಗಳು

4.85 ಲಕ್ಷ — ಯೋಜನೆಯಡಿ ನಗರದಲ್ಲಿ ಅಳವಡಿಸಬೇಕಾದ ಎಲ್ಇಡಿ ಬಲ್ಬ್‌ಗಳ ಸಂಖ್ಯೆ

₹1,465 ಕೋಟಿ — ಈ ಯೋಜನೆಗೆ ತಗಲುವ ಒಟ್ಟು ವೆಚ್ಚ

₹500 ಕೋಟಿ — ಎಲ್ಇಡಿ ಬಲ್ಬ್ ಅಳವಡಿಕೆಗೆ ತಗಲುವ ವೆಚ್ಚ

₹ 330 ಕೋಟಿ — ಬೀದಿದೀಪಗಳ ನಿರ್ವಹಣೆಗೆ ವ್ಯವಸ್ಥೆಗೆ ತಗಲುವ ವೆಚ್ಚ

₹233 ಕೋಟಿ — ಎಲ್ಇಡಿ ಬೀದಿದೀಪ ಅನುಷ್ಠಾನ ಬಳಿಕ ಬಿಬಿಎಂಪಿ ವರ್ಷದಲ್ಲಿ ಪಾವತಿಸಬೇಕಾಗುವ ವಿದ್ಯುತ್ ಶುಲ್ಕ

₹204 ಕೋಟಿ — ಎಲ್ಇಡಿ ಬಲ್ಬ್‌ಗಳ ಅಳವಡಿಕೆ ಬಳಿಕ ವರ್ಷವೊಂದಕ್ಕೆ ಉಳಿತಾಯವಾಗುವ ವಿದ್ಯುತ್ ಶುಲ್ಕ

51.5 ಕೋಟಿ ಯೂನಿಟ್ — ಪ್ರತಿ ವರ್ಷ ಬೀದಿದೀಪಗಳ ಸಲುವಾಗಿ ಬಿಬಿಎಂಪಿ ಬಳಸುತ್ತಿರುವ ವಿದ್ಯುತ್

44 ಕೋಟಿ ಯೂನಿಟ್ — ಎಲ್ಇಡಿ ಅಳವಡಿಕೆ ಬಳಿಕ ಬಿಬಿಎಂಪಿಗೆ ಉಳಿತಾಯವಾಗುವ ವಿದ್ಯುತ್

ಸ್ಮಾರ್ಟ್ ಬೀದಿ ದೀಪ– ವಿಶೇಷಗಳೇನು?

- ಬೀದಿದೀಪಗಳ ವಿದ್ಯುತ್ ಬಳಕೆಯಲ್ಲಿ ಶೇ 85.50ರಷ್ಟು ಉಳಿತಾಯ
- ವಿದ್ಯುತ್ ಕಂಬದಲ್ಲಿ ಸಿ.ಸಿ.ಟಿ.ವಿ ಕ್ಯಾಮೆರಾ, ಮಾಲಿನ್ಯ ಸಂವೇದಕ ಅಳವಡಿಕೆಗೆ ಅವಕಾಶ
- ಪ್ರತಿ ದೀಪಕ್ಕೂ ನಿಸ್ತಂತು ಸಂವೇದಕ ಅಳವಡಿಕೆ
- ಕೇಂದ್ರೀಕೃತ ನಿಯಂತ್ರಣ ವ್ಯವಸ್ಥೆ ಮೂಲಕ ಬೀದಿದೀಪಗಳ ಮೇಲೆ ನಿಗಾ ಸಾಧ್ಯ
- 10 ವರ್ಷಗಳ ಕಾಲ ಬೀದಿದೀಪಗಳ ನಿರ್ವಹಣೆಯ ಹೊಣೆ ಗುತ್ತಿಗೆದಾರರದು

ವಿದ್ಯುತ್ ಬಿಲ್: ತಿಂಗಳ ಉಳಿಕೆ ₹ 17 ಕೋಟಿ

ನಗರದಲ್ಲಿ ಎಲ್ಇಡಿ ಬೀದಿದೀಪ ಅಳವಡಿಸುವಿಕೆಗೆ ಹಾಗೂ ಅವುಗಳ ನಿರ್ವಹಣೆಗೆ ಎಸ್ಕೊ ಒಟ್ಟು ₹ 830 ಕೋಟಿ ಹೂಡಿಕೆ ಮಾಡಲಿದೆ. ಎಲ್ಇಡಿ ಬಲ್ಬ್‌ಗಳ ಬಳಕೆಯಿಂದ ಶೇ 85ರಷ್ಟು ವಿದ್ಯುತ್ ಉಳಿತಾಯವಾಗಲಿದೆ. ಬಿಬಿಎಂಪಿಗೆ ಪ್ರತಿ ತಿಂಗಳ ವಿದ್ಯುತ್ ಬಿಲ್‌ನಲ್ಲಿ ₹ 17 ಕೋಟಿ ಉಳಿಯಲಿದೆ ಎಂದು ಅಂದಾಜಿಸಲಾಗಿದೆ. ಈ ಪೈಕಿ ₹ 13.5 ಕೋಟಿಯನ್ನು ಬಿಬಿಎಂಪಿಯು ಕಂಪನಿಗೆ ಪಾವತಿಸಲಿದೆ.

‘ಬೀದಿದೀಪ ಅಳವಡಿಕೆ 10 ದಿನಗಳಲ್ಲಿ ಶುರು’

ಸ್ಮಾರ್ಟ್ ಎಲ್ಇಡಿ ಲೈಟಿಂಗ್ ಯೋಜನೆಯ ಮೊದಲ ಹಂತದ ಸದ್ಯಕ್ಕೆ ಬೇಸ್‌ಲೈನ್ ಸರ್ವೆ ಹಾಗೂ ಜಂಟಿ ಸಮೀಕ್ಷೆಗಳು ಪೂರ್ಣಗೊಂಡಿವೆ. ವಸಂತನಗರ ವಾರ್ಡ್‌ನಲ್ಲಿ ಪ್ರಾಯೋಗಿಕವಾಗಿ ಈ ಯೋಜನೆ ಅನುಷ್ಠಾನಗೊಳಿಸಲಿದ್ದೇವೆ. ಸಾಂಪ್ರದಾಯಿಕ ಬೀದಿದೀಪಗಳನ್ನು ಎಲ್ಇಡಿ ಬೀದಿದೀಪಗಳಿಗೆ ಬದಲಾಯಿಸುವ ಪ್ರಕ್ರಿಯೆ ಈ ವಾರ್ಡ್‌ನಲ್ಲಿ 10 ದಿನಗಳಲ್ಲಿ ಆರಂಭವಾಗಲಿದೆ. ಆ.15ರ ಒಳಗೆ ಪೂರ್ಣಗೊಳ್ಳಲಿದೆ ಎಂದು ಬಿಬಿಎಂಪಿ ವಿಶೇಷ ಆಯುಕ್ತ (ಯೋಜನೆ) ಮನೋಜ್ ಜೈನ್ ‘ಪ್ರಜಾವಾಣಿ’ಗೆ ತಿಳಿಸಿದರು.

‘ಈ ಯೋಜನೆಯಡಿ ಆರ್.ಆರ್.ನಗರ, ದಾಸರಹಳ್ಳಿ ಹಾಗೂ ಬೊಮ್ಮನಹಳ್ಳಿ ವಲಯಗಳಲ್ಲಿ ಆರಂಭಿಕ ಹಂತದಲ್ಲಿ ಈ ಯೋಜನೆಯನ್ನು ಅನುಷ್ಠಾನಗೊಳಿಸಲಿದೆ. ಉಳಿದ ಹಂತಗಳಲ್ಲಿ ಬೇರೆ ವಲಯಗಳ ವಾರ್ಡ್‌ಗಳಿಗೂ ವಿಸ್ತರಿಸಲಾಗುತ್ತದೆ. ಮೊದಲ ಹಂತದಲ್ಲಿ 1 ಲಕ್ಷ ಬೀದಿದೀಪಗಳನ್ನು ಅಳವಡಿಸುವ ಕಾರ್ಯ ಎರಡು ತಿಂಗಳ ಒಳಗೆ ಪೂರ್ಣಗೊಳಿಸಲಿದ್ದೇವೆ’ ಎಂದು ಅವರು ತಿಳಿಸಿದರು.

‘ಅಪೇಕ್ಷಿತ ಮಟ್ಟದಲ್ಲಿ ಪ್ರಗತಿ ಕಾಣುತ್ತಿಲ್ಲ’

‘ಸ್ಮಾರ್ಟ್ ಎಲ್ಇಡಿ ಬೀದಿ ದೀಪ ಯೋಜನೆಯ ಅನುಷ್ಠಾನವು ಅಪೇಕ್ಷಿತ ಮಟ್ಟದಲ್ಲಿ ಪ್ರಗತಿ ಕಾಣುತ್ತಿಲ್ಲ. ಮೀಟರ್ ಅಳವಡಿಕೆ ಬಗ್ಗೆಯೂ ಕೆಲವು ತೊಡಕುಗಳಿವೆ. ಬೆಸ್ಕಾಂ ಜೊತೆಯೂ ಸಮಾಲೋಚನೆ ನಡೆಸಬೇಕಿದೆ. ಅವುಗಳನ್ನು ನಿವಾರಿಸಿಕೊಂಡು ಪ್ರಗತಿ ಸಾಧಿಸಬೇಕಿದೆ’ ಎನ್ನುತ್ತಾರೆ ಬಿಬಿಎಂಪಿ ಮುಖ್ಯ ಆಯುಕ್ತ ಗೌರವ್ ಗುಪ್ತ. ಈ ಯೋಜನೆ ಆಮೆಗತಿಯಲ್ಲಿ ಸಾಗುತ್ತಿರುವ ಬಗ್ಗೆ ಅವರೂ ಅಸಮಾಧಾನ ವ್ಯಕ್ತಪಡಿಸಿದರು.

‘2021ರ ಜನವರಿ ತಿಂಗಳಲ್ಲಿ ಒಮ್ಮೆ ಪ್ರಗತಿ ಪರಿಶೀಲನೆ ನಡೆಸಿ ಯೋಜನೆ ಅನುಷ್ಠಾನವನ್ನು ಚುರುಕುಗೊಳಿಸುವಂತೆ ಸೂಚನೆ ನಿಡಲಾಗಿತ್ತು. ಇತ್ತೀಚೆಗೆ ಮತ್ತೊಮ್ಮೆ ಪ್ರಗತಿ ಪರಿಶೀಲನೆ ನಡೆಸಿದ್ದೇವೆ. ವಾರದಲ್ಲಿ ಇನ್ನೊಂದು ಸುತ್ತಿನ ಸಭೆ ನಡೆಸಿ ಕಾಮಗಾರಿಗೆ ಎದುರಾಗಿರುವ ತೊಡಕುಗಳ ನಿವಾರಣೆಗೆ ಕ್ರಮ ಕೈಗೊಳ್ಳಲಿದ್ದೇನೆ’ ಎಂದು ಅವರು ಮಾಹಿತಿ ನೀಡಿದರು.

ಅಂತರ ಮಾಯ!

ನಗರದ ಅವೆನ್ಯೂ ರಸ್ತೆಯಲ್ಲಿ ಭಾನುವಾರ ಜನಸಾಗರವೇ ಸೇರಿತ್ತು. ಕೋವಿಡ್ ಮಾರ್ಗಸೂಚಿ ಪಾಲನೆಯನ್ನು ಮರೆತಿದ್ದ ಜನ ದೈಹಿಕ ಅಂತರ ಕಾಪಾಡಿಕೊಳ್ಳದೇ ವ್ಯಾಪಾರ-ವಹಿವಾಟಿನಲ್ಲಿ ತೊಡಗಿದ್ದರು -ಪ್ರಜಾವಾಣಿ ಚಿತ್ರ

ಪಿವಿ ಬ್ರ್ಯಾಂಡ್ ಸ್ಪಾಟ್

ಪತ್ರಿಕೆಯಲ್ಲಿ ಪ್ರಕಟವಾಗುತ್ತಿರುವ ಪಿವಿ ಬ್ರ್ಯಾಂಡ್ ಸ್ಪಾಟ್ ಪ್ರಸ್ತುತಿಯ ಲೇಖನ ಸಿದ್ಧಪಡಿಸುವಲ್ಲಿ ನಮ್ಮ ಪತ್ರಕರ್ತರ ಯಾವುದೇ ಪಾತ್ರ ಇರುವುದಿಲ್ಲ. ಸಂಸ್ಥೆಯ ಜಾಹೀರಾತು ಮತ್ತು ಬ್ರ್ಯಾಂಡ್ ವಿಭಾಗಗಳ ಪ್ರಸ್ತುತಿಯಾಗಿರುವ ‘ಪಿವಿ ಬ್ರ್ಯಾಂಡ್ ಸ್ಪಾಟ್’ನ ಮಾಹಿತಿಯನ್ನು (ಕಂಟೆಂಟ್) ಓದುಗರು ಜಾಹೀರಾತು ಎಂದೇ ಭಾವಿಸಬಹುದು.

ನೇಪಾಳ: ವಿಶ್ವಾಸ ಮತ ಗೆದ್ದ ಶೇರ್ ಬಹದ್ದೂರ್ ದೇವುಬಾ

ಕಠ್ಮಂಡು (ಪಿಟಿಐ): ನೇಪಾಳದ ನೂತನ ಪ್ರಧಾನಿ ನೇಪಾಳ ಕಾಂಗ್ರೆಸ್ ಪಕ್ಷದ ಅಧ್ಯಕ್ಷ ಶೇರ್ ಬಹದ್ದೂರ್ ದೇವುಬಾ ಅವರು ಭಾನುವಾರ ಸಂಸತ್ತಿನ ಕೆಳಮನೆಯಲ್ಲಿ ವಿಶ್ವಾಸ ಮತ ಪಡೆಯುವಲ್ಲಿ ಯಶಸ್ವಿಯಾದರು.

275 ಸದಸ್ಯರ ಸದನದಲ್ಲಿ ದೇವುಬಾ ಅವರು 165 ಮತಗಳನ್ನು ಗಳಿಸಿದ್ದಾರೆ ಎಂದು ‘ಹಿಮಾಲಯನ್ ಟೈಮ್ಸ್’ ವರದಿ ಮಾಡಿದೆ.

ಮತದಾನ ಪ್ರಕ್ರಿಯೆಯಲ್ಲಿ ಒಟ್ಟು 249 ಸದಸ್ಯರು ಭಾಗವಹಿಸಿದ್ದರು ಮತ್ತು ಅವರಲ್ಲಿ 83 ಮಂದಿ ದೇವುಬಾ ಅವರ ವಿರುದ್ಧ ಮತ ಚಲಾಯಿಸಿದರೆ, ಒಬ್ಬರು ತಟಸ್ಥರಾಗಿದ್ದರು. ವಿಶ್ವಾಸವನ್ನು ಗಳಿಸಲು ದೇವುಬಾ ಅವರಿಗೆ ಒಟ್ಟು 136 ಮತಗಳು ಬೇಕಾಗಿದ್ದವು.

ಸಂಕ್ಷಿಪ್ತ ಸುದ್ದಿ

ಅರ್ಜಿ ಆಹ್ವಾನ

ಬೆಂಗಳೂರು: ರಾಜ್ಯದಲ್ಲಿ 2021-22ನೇ ಶೈಕ್ಷಣಿಕ ಸಾಲಿನಲ್ಲಿ ಹೊಸ ಖಾಸಗಿ ಶಾಶ್ವತ ಅನುದಾನರಹಿತ ಪದವಿ ಪೂರ್ವ ಕಾಲೇಜುಗಳನ್ನು ಆರಂಭಿಸಲು ಅರ್ಜಿ ಆಹ್ವಾನಿಸಲಾಗಿದೆ.

ಕಾಲೇಜು ಆರಂಭಿಸಲು ಇಚ್ಛಿಸುವ ಅರ್ಹ ಖಾಸಗಿ ಶಿಕ್ಷಣ ಸಂಸ್ಥೆಗಳು, ಟ್ರಸ್ಟ್‌ಗಳು ಆನ್‌ಲೈನ್ ಮೂಲಕ ಇದೇ 19 ರಿಂದ 26 ರವರೆಗೆ ಹೆಸರು ನೋಂದಾಯಿಸಿಕೊಳ್ಳಬಹುದು. ಅರ್ಜಿ ನಮೂನೆ ಮತ್ತು ವಿವರಗಳನ್ನು ಇಲಾಖೆಯ ವೆಬ್‌ಸೈಟ್‌ನಿಂದ (www.pue.kar.nic.in) ಪಡೆಯಬಹುದು.

ಸಿದ್ದರಾಮಯ್ಯ– ರಕ್ಷಾ ಚರ್ಚೆ

ಬೆಂಗಳೂರು: ಮುಂದಿನ ಮೂರು ವರ್ಷದ ತಮ್ಮ ಅಧ್ಯಕ್ಷ ಅವಧಿಯನ್ನು ಪಕ್ಷದ ಹೈಕಮಾಂಡ್ ಇತ್ತೀಚೆಗೆ ಒಂದು ವರ್ಷಕ್ಕೆ ಸೀಮಿತಗೊಳಿಸಿದ್ದರಿಂದ ನೊಂದಿರುವ ರಾಜ್ಯ ಯುವ ಕಾಂಗ್ರೆಸ್ ಅಧ್ಯಕ್ಷ ರಕ್ಷಾ ರಾಮಯ್ಯ, ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಅವರನ್ನು ಭಾನುವಾರ ಭೇಟಿ ಮಾಡಿ ಮಾತುಕತೆ ನಡೆಸಿದರು.

ಸಿದ್ದರಾಮಯ್ಯ ಸೋಮವಾರ ದೆಹಲಿಗೆ ತೆರಳಲಿದ್ದು, ವರಿಷ್ಠರ ಜೊತೆ ಸಮಾಲೋಚನೆ ನಡೆಸಲಿದ್ದಾರೆ. ಈ ವೇಳೆ ಯುವ ಕಾಂಗ್ರೆಸ್ ಅಧ್ಯಕ್ಷ ಸ್ಥಾನದ ಗೊಂದಲದ ಬಗ್ಗೆಯೂ ಸಿದ್ದರಾಮಯ್ಯ ಪ್ರಸ್ತಾಪಿಸುವ ಸಾಧ್ಯತೆ ಇದೆ.

ಯುಪಿಎಸ್‌ಸಿ: ಆರ್‌ವೈಪಿಯಿಂದ ವಿದ್ಯಾರ್ಥಿ ವೇತನ ಘೋಷಣೆ

ಬೆಂಗಳೂರು: ಆರ್ಥಿಕವಾಗಿ ಸಂಕಷ್ಟದಲ್ಲಿರುವ ವಿದ್ಯಾರ್ಥಿಗಳಿಗೆ ಯುಪಿಎಸ್‌ಸಿ ಪರೀಕ್ಷೆಗೆ ತರಬೇತಿ ನೀಡಲು ಎರಡನೇ ವರ್ಷದ ‘ಯುಪಿಎಸ್‌ಸಿ ವಿದ್ಯಾರ್ಥಿವೇತನ ಯೋಜನೆ’ಯನ್ನು ಪ್ರಮೋದ್ ಶ್ರೀನಿವಾಸ್ ನೇತೃತ್ವದ ರಾಷ್ಟ್ರೀಯ ಯುವ ಪ್ರತಿಷ್ಠಾನ (ಆರ್‌ವೈಪಿ) ಘೋಷಿಸಿದೆ.

ವಿದ್ಯಾರ್ಥಿ ವೇತನ ಪಡೆಯಲು ಅರ್ಹತಾ ಪರೀಕ್ಷೆ ತೇರ್ಗಡೆಯಾಗಬೇಕಿದ್ದು, ಈ ಪರೀಕ್ಷೆ ಬೆಂಗಳೂರಿನ ಪದ್ಮನಾಭನಗರದ ಸಹಕಾರಿ ವಿದ್ಯಾ ಕೇಂದ್ರದ ಮೈದಾನದಲ್ಲಿ ಇದೇ 24ರಂದು ನಡೆಯಲಿದೆ.

‘ಯುಪಿಎಸ್‌ಸಿ ಪರೀಕ್ಷೆಗೆ ತಯಾರಿ ನಡೆಸುತ್ತಿರುವ ಬಡತನದಲ್ಲಿರುವ ವಿದ್ಯಾರ್ಥಿಗಳಿಗೆ ಆರ್ಥಿಕ ನೆರವು ನೀಡುವ ಮೂಲಕ, ಮಾನಸಿಕ ಒತ್ತಡವನ್ನು ದೂರ ಮಾಡುವುದು ಸಂಸ್ಥೆಯ ಗುರಿ’ ಎಂದು ಪ್ರಮೋದ್ ಶ್ರೀನಿವಾಸ್ ಹೇಳಿದರು.

‘ಪದವಿಯಲ್ಲಿ ಗಳಿಸಿದ ಅಂಕ, ಆರ್ಥಿಕ ಸ್ಥಿತಿ ಮತ್ತು ಸಂಸ್ಥೆ ನಡೆಸುವ ಪ್ರವೇಶ ಪರೀಕ್ಷೆಯಲ್ಲಿ ಗಳಿಸಿದ ಅಂಕದ ಆಧಾರದಲ್ಲಿ ಯುಪಿಎಸ್‌ಸಿ ವಿದ್ಯಾರ್ಥಿವೇತನ ನೀಡಲಾಗುವುದು. ಮಾಹಿತಿಗೆ 8147315515 ಸಂಪರ್ಕಿಸಬಹುದು’ ಎಂದು ಹೇಳಿದರು.

ಅಧಿವೇಶನದಲ್ಲಿ ಭಾಗಿ: ಸಂಸದರಿಗೆ ಒತ್ತಾಯ

ಬೆಂಗಳೂರು: ಮುಂಗಾರು ಅಧಿವೇಶನವು ಇದೇ 19ರಿಂದ ಆರಂಭವಾಗಲಿದ್ದು, ಇದರಲ್ಲಿ ಎಲ್ಲರೂ ಕಡ್ಡಾಯವಾಗಿ ಭಾಗವಹಿಸಬೇಕು ಎಂದು ಸಂಯುಕ್ತ ಹೋರಾಟ–ಕರ್ನಾಟಕ ಹಾಗೂ ಸಂಯುಕ್ತ ಕಿಸಾನ್ ಮೋರ್ಚಾ ಎಲ್ಲ ಸಂಸದರನ್ನು ಒತ್ತಾಯಿಸಿದೆ.

ಕೇಂದ್ರ ಹಾಗೂ ರಾಜ್ಯ ಸರ್ಕಾರಗಳ ರೈತ ಹಾಗೂ ಕಾರ್ಮಿಕ ವಿರೋಧಿ ನೀತಿಗಳ ವಿರುದ್ಧ ರೈತಾಂದೋಲನ ರೂಪಿಸಿರುವ ಈ ಸಂಘಟನೆಗಳು ರಾಜ್ಯದ ಎಲ್ಲ ಸಂಸದರಿಗೂ ಈಗಾಗಲೇ ವಿಪ್ ರವಾನಿಸಿವೆ. ಇದನ್ನು ಉಲ್ಲಂಘಿಸಿದರೆ ಸಂಸದರು ಪಾಲ್ಗೊಳ್ಳುವ ಸಾರ್ವಜನಿಕ ಕಾರ್ಯಕ್ರಮಗಳ ವೇಳೆ ತೀವ್ರ ಪ್ರತಿಭಟನೆ ನಡೆಸಲಾಗುತ್ತದೆ ಎಂದು ಎಚ್ಚರಿಸಿವೆ.

ಪ್ರಜಾವಾಣಿ

ಫೋನ್-ಇನ್ ಕಾರ್ಯಕ್ರಮ

ಕಾಲ್ ಮಾಡಿ ಸಮಸ್ಯೆ ಹೇಳ್ಕೊಳ್ಳಿ

- ಬಿಡಿಎ ಬಡಾವಣೆಗಳ ನಿರ್ವಹಣೆ ಸಮರ್ಪಕವಾಗಿ ನಡೆಯುತ್ತಿದೆ ಅನಿಸುತ್ತಿದೆಯೇ? ಹೊಸ ಬಡಾವಣೆಗಳಲ್ಲಿ ಮೂಲಸೌಕರ್ಯ ಕಲ್ಪಿಸುವಲ್ಲಿ ವಿಳಂಬ ಏಕೆ?
- ಎರಡು ದಶಕಗಳಿಂದ ಕಾಯುತ್ತಿರುವ ಅರ್ಕಾವತಿ ಬಡಾವಣೆಯ ನಿವೇಶನ ಆಕಾಂಕ್ಷಿಗಳ ಕನಸು ಈಡೇರುವುದು ಯಾವಾಗ?
- ಪೆರಿಫೆರಲ್ ವರ್ತುಲ ರಸ್ತೆಯ ಭೂಸ್ವಾಧೀನ ಪ್ರಕ್ರಿಯೆ ಗೊಂದಲ ನಿವಾರಣೆ ಎಂದು? ಭೂಮಿ ಕಳೆದುಕೊಂಡ ರೈತರಿಗೆ ಅನ್ಯಾಯ ಆಗಿದೆ ಎಂಬ ಭಾವನೆ ಇದೆಯಲ್ಲ?
- ಬಿಡಿಎ ನಿರ್ಮಿಸಿರುವ ವಸತಿ ಸಮುಚ್ಚಯಗಳ ಗುಣಮಟ್ಟ ಕಳಪೆ ಎಂಬ ಆರೋಪ ಇದೆಯಲ್ಲ? ಇದನ್ನು ಸರಿಪಡಿಸಲು ಕೈಗೊಂಡ ಕ್ರಮಗಳೇನು?
- ಬಿಡಿಎ ಕಚೇರಿಗಳಲ್ಲಿನ ಭ್ರಷ್ಟಾಚಾರ ನಿರ್ಮೂಲನೆಗೆ ಕ್ರಮವೇನು ? ಕಡತ ವಿಲೇವಾರಿ ಹಾಗೂ ಇತರ ಕೆಲಸ ಮಾಡಿಸಿಕೊಳ್ಳಲು ಜನರು ಕಚೇರಿಗಳಿಗೆ ಅಲೆದಾಡಬೇಕಾದ ಸ್ಥಿತಿ ಇದೆ ಎಂಬ ದೂರುಗಳಿವೆಯಲ್ಲ?

ನಿಮ್ಮ ಸಮಸ್ಯೆಗಳಿಗೆ ಸ್ಪಂದಿಸಲಿದ್ದಾರೆ

ಎಸ್.ಆರ್.ವಿಶ್ವನಾಥ್

ಬಿಡಿಎ ಅಧ್ಯಕ್ಷ, ಶಾಸಕ

19-7-2021, ಸೋಮವಾರ

ಮಧ್ಯಾಹ್ನ 3 ರಿಂದ 4 ಗಂಟೆಯವರೆಗೆ

ಇಂದೇ ಕರೆ ಮಾಡಿ 080 45557230

facebook LIVE facebook.com/prajavani.net

ಕೆಪಿಎಸ್‌ಸಿ ನೇಮಕಾತಿ: ಸಿ.ಎಸ್‌ಗೆ ರಾಷ್ಟ್ರಪತಿ ಭವನದಿಂದ ಸೂಚನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: 2011ರ ಗೆಜೆಟೆಡ್ ಪ್ರೊಬೇಷನರಿ ಹುದ್ದೆಗಳ ನೇಮಕಾತಿಗೆ ಸಂಬಂಧಿಸಿದಂತೆ ವಿಧಾನ ಪರಿಷತ್ ಸದಸ್ಯರಾದ ಪಿ.ಆರ್. ರಮೇಶ್ ಮತ್ತು ಇತರರು ಬರೆದ ಪತ್ರವನ್ನು ರಾಜ್ಯ ಮುಖ್ಯ ಕಾರ್ಯದರ್ಶಿಗೆ (ಸಿಎಸ್) ಮರಳಿಸಿರುವ ರಾಷ್ಟ್ರಪತಿ ಸಚಿವಾಲಯ, ಈ ಬಗ್ಗೆ ಸೂಕ್ತ ಗಮನವಹಿಸುವಂತೆ ಸೂಚಿಸಿದೆ.

‘ಈ ಸಾಲಿನ ಅಧಿಸೂಚನೆಯನ್ನೇ ರದ್ದುಗೊಳಿಸಿ 2014ರ ಆಗಸ್ಟ್ 14ರಂದು ಹೊರಡಿಸಿದ್ದ ಆದೇಶವನ್ನು ಹಿಂಪಡೆದು, ಆಯ್ಕೆಯಾದ ಎಲ್ಲ ಅಭ್ಯರ್ಥಿಗಳಿಗೂ ನೇಮಕಾತಿ ಆದೇಶ ನೀಡಬೇಕು’ ಎಂದು ವಿಧಾನಸಭೆ ಮತ್ತು ವಿಧಾನ ಪರಿಷತ್‌ನ ಹಲವು ಸದಸ್ಯರು ರಾಷ್ಟ್ರಪತಿ ರಾಮನಾಥ ಕೋವಿಂದ್ ಅವರಿಗೆ ಜೂನ್ 28ರಂದು ಪತ್ರ ಬರೆದಿದ್ದರು. ಈ ಪತ್ರದ ವಿಚಾರದಲ್ಲಿ ಸೂಕ್ತ ಕ್ರಮ ತೆಗೆದುಕೊಳ್ಳುವಂತೆ ರಾಷ್ಟ್ರಪತಿ ಭವನದ ವಿಶೇಷ ಕರ್ತವ್ಯಾಧಿಕಾರಿ ಆರ್.ಕೆ. ಶರ್ಮಾ ಸೂಚಿಸಿದ್ದಾರೆ.

ರಾಷ್ಟ್ರಪತಿಗೆ ಬರೆದಿದ್ದ ಪತ್ರಕ್ಕೆ ವಿಧಾನ ಪರಿಷತ್ ಸದಸ್ಯರಾದ ಆಯನೂರು ಮಂಜುನಾಥ, ವಿಧಾನ ಮಂಡಲದ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಕಲ್ಯಾಣ ಸಮಿತಿ ಅಧ್ಯಕ್ಷ ಎಂ.ಪಿ. ಕುಮಾರಸ್ವಾಮಿ, ಶಾಸಕರಾದ ಈಶ್ವರ ಖಂಡ್ರೆ, ಎ.ಟಿ. ರಾಮಸ್ವಾಮಿ, ಆರಗ ಜ್ಞಾನೇಂದ್ರ, ರಾಜಾ ವೆಂಕಟಪ್ಪ ನಾಯಕ, ಅಖಂಡ ಶ್ರೀನಿವಾಸ ಮೂರ್ತಿ, ಕೆ.ಬಿ. ಅಶೋಕ ನಾಯ್ಕ, ಎನ್. ಮಹೇಶ್, ವಿಧಾನ ಪರಿಷತ್ ಸದಸ್ಯರಾದ ಆರ್. ಧರ್ಮಸೇನ, ಯು.ಬಿ. ವೆಂಕಟೇಶ್, ಮೋಹನ್ ಕುಮಾರ್ ಕೊಂಡಜ್ಜಿ, ವಿವೇಕರಾವ್ ವ. ಪಾಟೀಲ, ಕೆ.ಟಿ. ಶ್ರೀಕಂಠೇಗೌಡ, ಮರಿತಿಬ್ಬೇಗೌಡ, ಎನ್. ಅಪ್ಪಾಜಿ ಗೌಡ ಮತ್ತು ನಜೀರ್ ಅಹ್ಮದ್ ಸಹಿ ಮಾಡಿದ್ದರು.

‘2011ರ ಗೆಜೆಟೆಡ್ ಪ್ರೊಬೇಷನರಿ ನೇಮಕಾತಿ ಪ್ರಕ್ರಿಯೆಯ ವಿಚಾರದಲ್ಲಿ ಸಂವಿಧಾನದ ಉಲ್ಲಂಘನೆಯಾಗಿದೆ. ಸಂವಿಧಾನಕ್ಕೆ ವಿರುದ್ಧವಾಗಿ ಇಡೀ ಪ್ರಕ್ರಿಯೆಯನ್ನೇ ರದ್ದು ಮಾಡಲಾಗಿದೆ. ಇದರಿಂದ ಅರ್ಹ ಅಭ್ಯರ್ಥಿಗಳಿಗೆ ನ್ಯಾಯ ದೊರಕಿಲ್ಲ. ನ್ಯಾಯ ಮತ್ತು ಸಂವಿಧಾನಾತ್ಮಕ ಮೌಲ್ಯಗಳನ್ನು ಎತ್ತಿ ಹಿಡಿಯುವುದಕ್ಕಾಗಿ ಆಯ್ಕೆಯಾದ ಎಲ್ಲ ಅಭ್ಯರ್ಥಿಗಳಿಗೂ 2017ರ ಮಾರ್ಚ್ 17ರ ಆದೇಶದಂತೆ ನೇಮಕಾತಿ ಆದೇಶ ನೀಡಬೇಕು’ ಎಂದು ಎಂಟು ಪುಟಗಳ ಪತ್ರದಲ್ಲಿ ಆಗ್ರಹಿಸಿದ್ದರು.

‘ಕೋವಿಡ್ ಕರ್ತವ್ಯದಿಂದ ಬಿಡುಗಡೆಗೊಳಿಸಿ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೋವಿಡ್ ಕರ್ತವ್ಯಕ್ಕೆ ನಿಯೋಜನೆಗೊಂಡಿರುವ ಕಾನೂನು ಮಾಪನಶಾಸ್ತ್ರ ಇಲಾಖೆಯ ಸಿಬ್ಬಂದಿಯನ್ನು ಕೂಡಲೇ ಕರ್ತವ್ಯದಿಂದ ಬಿಡುಗಡೆಗೊಳಿಸಬೇಕು ಎಂದು ಪಾಲಿಕೆಗೆ ಇಲಾಖೆ ಮನವಿ ಮಾಡಿದೆ.

ಈ ಸಂಬಂಧ ಇಲಾಖೆಯು ಪಾಲಿಕೆ ಮುಖ್ಯ ಆಯುಕ್ತ ಗೌರವ್ ಗುಪ್ತ ಅವರಿಗೆ ಪತ್ರ ಬರೆದಿದೆ.

‘ಅಗತ್ಯ ಸೇವೆಗಳ ಇಲಾಖೆಗಳ ಪಟ್ಟಿಯಲ್ಲಿ ಕಾನೂನು ಮಾಪನಶಾಸ್ತ್ರ ಇಲಾಖೆಯೂ ಇದೆ. ಗ್ರಾಹಕರ ಹಿತದೃಷ್ಟಿಯಿಂದ ತೂಕ ಮತ್ತು ಅಳತೆ ಮಾಪನಗಳ ನಿರಂತರ ತಪಾಸಣೆ, ಮುದ್ರೆ ಕಾರ್ಯ ಮಾಡುವುದು ಅಗತ್ಯ’.

‘ಗ್ರಾಹಕರಿಗೆ ನಿಗದಿತ ದರಕ್ಕಿಂತ ಹೆಚ್ಚಿನ ಬೆಲೆಗೆ ವಸ್ತುಗಳನ್ನು ಮಾರಾಟ ಮಾಡುವವರ ವಿರುದ್ಧ ಕ್ರಮ ಕೈಗೊಳ್ಳಲು ಹಾಗೂ ಮುದ್ರೆ ಶುಲ್ಕ ವಿಧಿಸಲು ಸಿಬ್ಬಂದಿಯ ಅವಶ್ಯಕತೆ ಇರುವುದರಿಂದ ಕೂಡಲೇ ಅವರನ್ನು ಕೋವಿಡ್ ಕರ್ತವ್ಯದಿಂದ ಬಿಡುಗಡೆ ಮಾಡಬೇಕು’ ಎಂದು ಮನವಿ ಮಾಡಿದೆ.

ಬೆಂಗಳೂರು ನಗರದ ಕೋವಿಡ್ ಅಂಕಿ–ಅಂಶ

12,22,189 ಒಟ್ಟು ಸೋಂಕಿತರು (12,21,803 ನಿನ್ನೆಯ ವಿವರ)

ಸಕ್ರಿಯ ಪ್ರಕರಣ	ಗುಣಮುಖ ಆದವರು	ಒಟ್ಟು ಸಾವು
11,751 ▼	11,94,641 ▲	15,796 ▲

ದಿನದ ಏರಿಕೆ

ಹೊಸ ಪ್ರಕರಣ	386 ▼
ಗುಣಮುಖ	793 ▲
ಸಾವು	9 ▲

ಆಧಾರ: ಆರೋಗ್ಯ ಇಲಾಖೆ

ಪ್ರಜಾವಾಣಿ ಗ್ರಾಫಿಕ್ಸ್

ಕೊರೊನಾ ಭೀತಿ ಬೇಡ, ಮುಂಜಾಗ್ರತೆ ಇರಲಿ

ಕೋವಿಡ್ ಅಂಕಿ-ಅಂಶ

ಆಧಾರ: ಕೋವಿಡ್19 ಇಂಡಿಯಾ, ಒಆರ್‌ಜಿ

	ವಿಶ್ವ	ಭಾರತ
ಒಟ್ಟು ಪ್ರಕರಣ	19.10 ಕೋಟಿ ▲	3.11 ಕೋಟಿ
ಸಕ್ರಿಯ ಪ್ರಕರಣ	1.29 ಕೋಟಿ	4.16 ಲಕ್ಷ
ಗುಣಮುಖ	17.40 ಕೋಟಿ ▲	3.03 ಕೋಟಿ
ಸಾವು	41.03 ಲಕ್ಷ ▲	4.14 ಲಕ್ಷ ▲

ದಿನದ ಮಾಹಿತಿ

	ವಿಶ್ವ	ಭಾರತ
ಹೊಸ ಪ್ರಕರಣ	4.84 ಲಕ್ಷ ▼	38,287 ▼
ಗುಣಮುಖ	3.35 ಲಕ್ಷ ▼	38,342 ▼
ಸಾವು	7,191 ▼	501 ▼

ಎಲ್ಲಿ ಹೆಚ್ಚು ಪ್ರಕರಣ (ಹಿಂದಿನ 24 ಗಂಟೆಗಳಲ್ಲಿ)

34,339 ▼ ಬ್ರೆಜಿಲ್ · 54,486 ▲ ಬ್ರಿಟನ್ · 25,116 ▼ ರಷ್ಯಾ

ಎಲ್ಲಿ ಹೆಚ್ಚು ಸಕ್ರಿಯ ಪ್ರಕರಣಗಳು (ಲಕ್ಷಗಳಲ್ಲಿ)

49.60 ▲ ಅಮೆರಿಕ · 8.17 ▲ ಬ್ರೆಜಿಲ್ · 8.66 ▲ ಬ್ರಿಟನ್

(*ರಾತ್ರಿ 12 ಗಂಟೆವರೆಗಿನ ವರೆಗಿನ ಮಾಹಿತಿ)

ಪ್ರಜಾವಾಣಿ ಗ್ರಾಫಿಕ್ಸ್

ಎಲ್ಲಿ ಹೆಚ್ಚು ಸಾವು (ಒಟ್ಟು)

1.27 ಲಕ್ಷ ▲ ಮಹಾರಾಷ್ಟ್ರ · 33,724 ▲ ತಮಿಳುನಾಡು · 25,027 ದೆಹಲಿ

ಎಲ್ಲಿ ಹೆಚ್ಚು ಪ್ರಕರಣ (ಲಕ್ಷಗಳಲ್ಲಿ)

62.14 ಮಹಾರಾಷ್ಟ್ರ ▲ · 31.60 ಕೇರಳ ▲ · 25.35 ತಮಿಳುನಾಡು ▲

ಪ್ರಜಾವಾಣಿ ಕ್ಲಾಸಿಫೈಡ್ಸ್ ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in

ಜಾಹೀರಾತುಗಳಿಗಾಗಿ ಸಂಪರ್ಕಿಸಿ: 080 - 45557160 /161/ 162/ 163/ 164 9845114560 / 9731810277/ 9886213331

JOB OPPORTUNITIES

Marketing & Sales

WANTED MARKETING Executives For Private Limited Company Bangalore with Good Communication Skill fluent In English, Kannada, Hindi Contact: 9108458798/ 23384085

Multiple Vacancy

REQUIRED IMMEDIATELY HR, Administration, Manager, Accounts, Supervisor, Technical Mechanical, Electronics, Electrical, Computer Engineers -7676760299/7676760399

Part-Time Jobs

PANDEMIC SITUATION Lost Job. MNC Provide Work From Home 30 to 35KCall: 7019215243/ 9886641282

Wanted

WANTED IMMEDIATELY Delivery Boy's. Salary 12,000/- + petrol, Incentive. Two wheeler must. REPUTE LOGISTICS Pvt Ltd, SR Nagar, Blr-27. Contact: 8618102693, 9342013702.

REAL ESTATE SELLING

House

Sahakarnagar

NTI LAYOUT 2nd Phase Behind Raintree Apartment Built on 40x61 Site Four Flats each Carpet Area 1850 Sft For Sale 9986160115.

PERSONAL

Lost

RC & RECORDS LOST - Reg. No - KL-02-BF-5513. If Found Contact - +91 9902223129

BUSINESS

Business to Business

Business

WANTED BUSINESS Partner, Lahab Veg Hotel, Investment Rs 5 Lakhs, Income 50:50. Contact: 8892501007/ 9606701007

Business Offers

Business For Sale

HMT MODEL : G13/500U working condition for sale in Hyderabad. contact:9849161543.

EDUCATION SPECIAL

We are coming out with special offer for Admission Notice, Education Success Congratulation Ads

DH Classifieds More value, more impact

For details contact: Jerry: 9731810277 Vishal: 9845114560 Tanveer: 9886213331

E-mail: dhclassifieds@deccanherald.co.in

CAUTION NOTICE

Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.

GM-Advertisement

ಸೋಮವಾರ, ಜುಲೈ 19, 2021 | ಬೆಂಗಳೂರು | ₹ 6.00 | ಸಂಪುಟ 74 | ಸಂಚಿಕೆ 200 | ಪುಟ 10 + 2
● www.prajavani.net
/prajavani.net @prajavani /prajavani http://bit.ly/Prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ



ಶಿಕ್ಷಣ
ಪಿಯುಸಿ ನಂತರ ವೃತ್ತಿಪರ ಕೋರ್ಸ್‌ಗಳಿಗೆ ಪ್ರವೇಶ ಪಡೆಯಲು ಬಯಸುವ ವಿದ್ಯಾರ್ಥಿಗಳು ಸಾಮಾನ್ಯ ಪ್ರವೇಶ ಪರೀಕ್ಷೆಯಲ್ಲಿ ಅತ್ಯುನ್ನತ ರ‍್ಯಾಂಕ್ ಗಳಿಸಬೇಕಾದರೆ ತಯಾರಿ ಹೇಗಿರಬೇಕು?

ಅನುಭವ ಮಂಟಪ ಕೇಂದ್ರದ ಸಹಕಾರ ಸಚಿವಾಲಯ ಹೊಸ ಆತಂಕ, ಹೊಸ ಅವಕಾಶ
'40ಕ್ಕೂ ಹೆಚ್ಚು ಭಾರತೀಯ ಪತ್ರಕರ್ತರ ಫೋನ್‌ಗಳು ಹ್ಯಾಕ್' 7
'ಆಲದ ಮರ'ದಡಿ ಸಿದ್ದಲಿಂಗಯ್ಯ ನೆನಪು 9
ಮಾರುಕಟ್ಟೆಯಲ್ಲಿ ಕಚ್ಚಾ ತೈಲದ ಬೆಲೆ ತಗ್ಗುವ ಸಂಭವ
ತೈಲ ಪೂರೈಕೆ ಹೆಚ್ಚಿಸಲು ಒಪೆಕ್+ ಸಮ್ಮತಿ 8

250 ಶಾಲೆಗಳ 60 ಸಾವಿರ ವಿದ್ಯಾರ್ಥಿಗಳು ಹೊರಗೆ?

ಪ್ರಜಾವಾಣಿ ವಾರ್ತೆ

ಬೆಂಗಳೂರು: ಖಾಸಗಿ ಶಾಲಾ ಶುಲ್ಕ ಗೊಂದಲ ಹೈಕೋರ್ಟ್ ಅಂಗಳದಲ್ಲಿರುವ ಮಧ್ಯೆಯೇ, ಕೋವಿಡ್‌ನಿಂದ ತೀವ್ರ ಆರ್ಥಿಕ ಸಂಕಷ್ಟಕ್ಕೆ ಒಳಗಾಗಿರುವ ಅನುದಾನರಹಿತ ಖಾಸಗಿ ಶಾಲೆಗಳ ಸಮೀಕ್ಷಾ ವರದಿಯೊಂದನ್ನು ರಾಜ್ಯ ಖಾಸಗಿ ಅನುದಾನರಹಿತ ಶಿಕ್ಷಣ ಸಂಸ್ಥೆಗಳ ಸಂಘಟನೆ (ಕ್ಯಾಮ್ಸ್) ಬಹಿರಂಗ ಪಡಿಸಿದೆ. ಅಲ್ಲದೆ, ಈ ವರದಿಯನ್ನು ನ್ಯಾಯಾಲಯಕ್ಕೆ ಶುಕ್ರವಾರ (ಜುಲೈ 16) ಸಲ್ಲಿಸಿದೆ.

ಕ್ಯಾಮ್ಸ್ ಪ್ರಧಾನ ಕಾರ್ಯದರ್ಶಿ ಡಿ. ಶಶಿಕುಮಾರ್ ಅವರು ಭಾನುವಾರ ಸುದ್ದಿಗೋಷ್ಠಿಯಲ್ಲಿ ಸಮೀಕ್ಷಾ ವರದಿಯ ಅಂಶಗಳನ್ನು ವಿವರಿಸಿದರು.

'ಸಂಘಟನೆಯಲ್ಲಿ ನೋಂದಣಿಯಾಗಿರುವ ಶಾಲೆಗಳ ಪೈಕಿ, ರಾಜ್ಯದ 250 ಶಾಲೆಗಳಲ್ಲಿ ಸಮೀಕ್ಷೆ ನಡೆಸಲಾಗಿದೆ. 2020-21ನೇ ಸಾಲಿನಲ್ಲಿ 60 ಸಾವಿರಕ್ಕೂ ಹೆಚ್ಚು ವಿದ್ಯಾರ್ಥಿಗಳು ಖಾಸಗಿ ಶಾಲೆಗಳನ್ನು ತೊರೆದಿರುವುದು ಗೊತ್ತಾಗಿದೆ. ಈ ವಿದ್ಯಾರ್ಥಿಗಳು ಬೇರೆ ಶಾಲೆಗಳಲ್ಲಿ ದಾಖಲಾಗಿ ಓದುತ್ತಿದ್ದಾರೆಯೇ ಅಥವಾ ನಿರಂತರ ಶಿಕ್ಷಣದಿಂದ ವಂಚಿತರಾಗಿದ್ದಾರೆಯೇ, ಬಾಲ ಕಾರ್ಮಿಕ ಪದ್ಧತಿಗೆ ಅಥವಾ ಬಾಲ್ಯ ವಿವಾಹಕ್ಕೆ ಒಳಗಾಗಿದ್ದಾರೆಯೇ ಎಂಬ ಬಗ್ಗೆ ಯಾರ ಬಳಿಯೂ ಮಾಹಿತಿ ಇಲ್ಲ' ಎಂದರು.

'ಸಮೀಕ್ಷೆ ನಡೆಸಿದ ಶಾಲೆಗಳಲ್ಲಿ ಒಟ್ಟು 1.85 ಲಕ್ಷಕ್ಕೂ ಹೆಚ್ಚು ವಿದ್ಯಾರ್ಥಿಗಳಿದ್ದರು. ಈ ಪೈಕಿ, ಕಳೆದ ಶೈಕ್ಷಣಿಕ ಸಾಲಿನಲ್ಲಿ ನಾನಾ ರೀತಿ ಕನಿಷ್ಠ ಶುಲ್ಕ ಕಟ್ಟಿ ಸುಮಾರು 1.25 ಲಕ್ಷ ವಿದ್ಯಾರ್ಥಿಗಳು ದಾಖಲಾಗಿದ್ದಾರೆ. ಇದು ಕೇವಲ ಮಾದರಿಯಷ್ಟೆ' ಎಂದ ಅವರು, 'ರಾಜ್ಯದಲ್ಲಿ ಶಿಕ್ಷಣ ವ್ಯವಸ್ಥೆ ಸಂಪೂರ್ಣ ಹದಗೆಡಲು ಶಿಕ್ಷಣ ಇಲಾಖೆ ಅನುಸರಿಸುತ್ತಿರುವ ಉಡಾಫೆ ನೀತಿಗಳೇ ಕಾರಣ' ಎಂದು ಆರೋಪಿಸಿದರು.

'ಕ್ಯಾಮ್ಸ್ ಅಡಿಯಲ್ಲಿ ಸುಮಾರು 3,655 ಶಾಲೆಗಳಿವೆ. ಇದರಲ್ಲಿ 15 ಲಕ್ಷಕ್ಕೂ ಹೆಚ್ಚು ವಿದ್ಯಾರ್ಥಿಗಳು ಓದುತ್ತಿದ್ದು, 55 ಸಾವಿರ ಬೋಧಕ, ಬೋಧಕೇತರರು ಕಾರ್ಯನಿರ್ವಹಿಸುತ್ತಿದ್ದಾರೆ. 2020-21ನೇ ಸಾಲಿನ ದಾಖಲಾತಿಯಲ್ಲಿ ರಿಯಾಯಿತಿ ನೀಡಿದ ಬಳಿಕ ಪೂರ್ಣ ಪ್ರಮಾಣದಲ್ಲಿ ಶುಲ್ಕ ಕಟ್ಟಿದ ವಿದ್ಯಾರ್ಥಿಗಳು ಶೇ 45 ರಷ್ಟು ಮಾತ್ರ. ಶೇ 17ರಷ್ಟು ಪೋಷಕರು ಶೇ 75ರಷ್ಟು ಶುಲ್ಕ ಪಾವತಿ ಮಾಡಿದ್ದಾರೆ. ಅಷ್ಟೇ ಪ್ರಮಾಣದ ಪೋಷಕರು ಅರ್ಧದಷ್ಟು ಶುಲ್ಕ ಕಟ್ಟಿದ್ದಾರೆ' ಎಂದರು. 'ರಾಜ್ಯದಲ್ಲಿ ಖಾಸಗಿ ಶಾಲೆಗಳು ಶುಲ್ಕ ವಸೂಲಿಗಾಗಿ ದೌರ್ಜನ್ಯ ಎಸಗುತ್ತಿವೆ ಎಂದೇ ಬಿಂಬಿಸಲಾಗಿದೆ. ಆದರೆ, ಸಮೀಕ್ಷೆಗೆ ಒಳಪಟ್ಟಿರುವ ಶಾಲೆಗಳ ಪೈಕಿ 178 ಶಾಲೆಗಳು ಒಂದಲ್ಲ ಒಂದು ರೂಪದಲ್ಲಿ ಸಾಲಕ್ಕೆ ತುತ್ತಾಗಿವೆ. ಇದೇ ಮಾನದಂಡ ಪರಿಗಣಿಸುವುದಾದರೆ, ರಾಜ್ಯದಲ್ಲಿರುವ ಶೇ 90ರಷ್ಟು ಅನುದಾನರಹಿತ ಖಾಸಗಿ ಶಾಲೆಗಳು ಸಾಲದ ಸಂಕಷ್ಟದಲ್ಲಿವೆ' ಎಂದರು.

'ಕೋವಿಡ್‌ನಿಂದಾಗಿ ಜನರು ಆರ್ಥಿಕ ಸಂಕಷ್ಟಕ್ಕೆ ಒಳಗಾಗಿದ್ದಾರೆ ನಿಜ. ಆದರೆ, ಅವರಿಗೆ ಮನೆ ಬಾಡಿಗೆಯಲ್ಲಿ ವಿನಾಯಿತಿ ಇಲ್ಲ. ವಿದ್ಯುತ್, ನೀರಿನ ಬಿಲ್‌ನಲ್ಲಿ ರಿಯಾಯಿತಿ ನೀಡಿಲ್ಲ. ಕೇವಲ ಖಾಸಗಿ ಶಾಲೆಗಳ ಶುಲ್ಕ ಕಡಿಮೆ ಮಾಡುವಂತೆ ಸರ್ಕಾರ ಒತ್ತಡ ಹಾಕುತ್ತಿದೆ' ಎಂದು ಟೀಕಿಸಿದರು. 'ಶಾಲಾ ಶುಲ್ಕ ವಿವಾದ ವಿಚಾರವಾಗಿ ಈಗಾಗಲೇ ಸುಪ್ರೀಂ ಕೋರ್ಟ್ ನ್ಯಾಯಸಮ್ಮತ ತೀರ್ಪು ನೀಡಿದೆ. ಅದಕ್ಕೆ ನಾವು ಬದ್ಧವಾಗಿದ್ದೇವೆ. ಹೈಕೋರ್ಟ್ ಕೂಡ ಸುಪ್ರೀಂ ಕೋರ್ಟ್ ತೀರ್ಪಿನಂತೆ ಸಾಮಾಜಿಕ ನ್ಯಾಯದ ತತ್ವದಡಿ ತೀರ್ಪು ಪ್ರಕಟಿಸಿ ಶಿಕ್ಷಣ ವ್ಯವಸ್ಥೆ ಉಳಿಸಲಿದೆ ಎಂಬ ನಂಬಿಕೆಯಿದೆ. ಇದೇ 22 ರಂದು ಶಾಲಾ ಶುಲ್ಕ ವಿವಾದ ವಿಚಾರಣೆಗೆ ಬರಲಿದೆ' ಎಂದು ಹೇಳಿದರು.

'ರಾಜ್ಯ ಸರ್ಕಾರ ಕೂಡಾ ನ್ಯಾಯಾಲಯದ ಕಣ್ಣು ಒರೆಸುವ ಕೆಲಸ ಮಾಡುತ್ತಿದೆ. ಸುಳ್ಳು ಮಾಹಿತಿ ನೀಡಲು ಮುಂದಾಗಿದೆ. ಮಕ್ಕಳು ನಿರಂತರ ಕಲಿಕೆಯಲ್ಲಿ ಭಾಗವಹಿಸದೇ ಇದ್ದರೂ, ಮಕ್ಕಳು ಶಾಲೆಯಲ್ಲೇ ಇದ್ದಾರೆ ಎಂದು ಅಂಕಿ ಅಂಶ ಕೊಟ್ಟು ನಂಬಿಸುತ್ತಿದೆ. ನಮ್ಮಿಂದ ಬಲವಂತವಾಗಿ ದತ್ತಾಂಶವನ್ನು ತುಂಬಿಸುತ್ತಿದ್ದು, ಸರ್ಕಾರದ ನಡೆಯನ್ನು ನಾವು ವಿರೋಧಿಸುತ್ತೇವೆ. ಮಕ್ಕಳು ನಿರಂತರ ಕಲಿಕೆಯಿಂದ ವಂಚಿತರಾಗುತ್ತಿದ್ದಾರೆ ಎನ್ನುವುದಕ್ಕೆ ಈ ಸಮೀಕ್ಷೆಯೇ ಸಾಕ್ಷಿ' ಎಂದರು.

ಲಾಕ್‌ಡೌನ್ ಇನ್ನಷ್ಟು ಸಡಿಲ ● ಇದೇ 26ರಿಂದ ಪದವಿ ತರಗತಿ ಆರಂಭಕ್ಕೆ ಹಸಿರು ನಿಶಾನೆ

ಇಂದಿನಿಂದ ಚಿತ್ರಮಂದಿರ ಶುರು

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯ ಸರ್ಕಾರ ಕೋವಿಡ್ ಲಾಕ್‌ಡೌನ್ ಅನ್ನು ಇನ್ನಷ್ಟು ಸಡಿಲಿಸಿದ್ದು, ಸೋಮವಾರದಿಂದಲೇ ರಾಜ್ಯದಾದ್ಯಂತ ಚಿತ್ರಮಂದಿರಗಳಲ್ಲಿ ಚಲನಚಿತ್ರ ಪ್ರದರ್ಶನ ಆರಂಭಿಸಲು ಮತ್ತು ಇದೇ 26ರಿಂದ ಪದವಿ ಕಾಲೇಜುಗಳಲ್ಲಿ ಭೌತಿಕ ತರಗತಿಗಳನ್ನು ನಡೆಸಲು ಒಪ್ಪಿಗೆ ನೀಡಿದೆ.

ಕೋವಿಡ್ ನಿಯಂತ್ರಣ ಮತ್ತು ಲಾಕ್‌ಡೌನ್ ಸಡಿಲಿಕೆಗೆ ಸಂಬಂಧಿಸಿದಂತೆ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಅವರ ನಿವಾಸದಲ್ಲಿ ಭಾನುವಾರ ನಡೆದ ಸಚಿವರು ಹಾಗೂ ಹಿರಿಯ ಅಧಿಕಾರಿಗಳ ಉನ್ನತಮಟ್ಟದ ಸಭೆಯಲ್ಲಿ ಈ ತೀರ್ಮಾನ ಕೈಗೊಳ್ಳಲಾಗಿದೆ. ಬಳಿಕ ಅದಕ್ಕೆ ಪೂರಕವಾಗಿ ನಿರ್ಬಂಧಗಳನ್ನು ಸಡಿಲಿಸಿ ಸರ್ಕಾರದ ಮುಖ್ಯ ಕಾರ್ಯದರ್ಶಿ ಪಿ. ರವಿಕುಮಾರ್ ಆದೇಶವನ್ನೂ ಹೊರಡಿಸಿದ್ದಾರೆ.

ಚಿತ್ರಮಂದಿರಗಳು, ಮಲ್ಟಿಪ್ಲೆಕ್ಸ್‌ಗಳು, ರಂಗಮಂದಿರಗಳು, ಸಭಾಂಗಣಗಳಲ್ಲಿ ಸಾಮರ್ಥ್ಯದ ಶೇಕಡ 50 ರಷ್ಟು ವೀಕ್ಷಕರಿಗೆ ಅವಕಾಶ ಕಲ್ಪಿಸಿ ಸೋಮವಾರದಿಂದಲೇ ಪ್ರದರ್ಶನ ಆರಂಭಿಸಬಹುದು. ಕೋವಿಡ್ ನಿಯಂತ್ರಣ ಮಾರ್ಗಸೂಚಿಗಳು ಹಾಗೂ ಸಂಬಂಧಿಸಿದ ಇಲಾಖೆಗಳು ಹೊರಡಿಸಿರುವ ನಿಗದಿತ ಕಾರ್ಯನಿರ್ವಹಣಾ ಪ್ರಕ್ರಿಯೆಗಳನ್ನು (ಎಸ್‌ಒಪಿ) ಆಧರಿಸಿ ಅಗತ್ಯ ಕ್ರಮಗಳನ್ನು ಕೈಗೊಳ್ಳುವುದು ಕಡ್ಡಾಯ ಎಂದು ಆದೇಶದಲ್ಲಿ ತಿಳಿಸಲಾಗಿದೆ.

ತರಗತಿ ಆರಂಭಕ್ಕೆ ಒಪ್ಪಿಗೆ: 2020 ರಲ್ಲಿ ಜಾರಿಯಾದ ಮೊದಲ ಲಾಕ್‌ಡೌನ್ ಸಮಯದಿಂದಲೇ ಬಹುತೇಕ ಶಾಲಾ, ಕಾಲೇಜುಗಳು ಆನ್‌ಲೈನ್ ತರಗತಿಗಳ ಮೂಲಕವೇ ನಡೆಯುತ್ತಿವೆ. ಕೆಲವು ಹಂತ ಮತ್ತು ಕೋರ್ಸ್‌ಗಳಿಗೆ ಸೀಮಿತವಾಗಿ ಅಲ್ಪಾವಧಿಗೆ ಭೌತಿಕ ತರಗತಿಗಳು ನಡೆದಿದ್ದವು. ಕೋವಿಡ್ ಪ್ರಕರಣಗಳ ಸಂಖ್ಯೆ ಗಣನೀಯ ಪ್ರಮಾಣದಲ್ಲಿ ಇಳಿಮುಖವಾಗಿರುವುದರಿಂದ ಜುಲೈ 26 ರಿಂದ ಪದವಿ ಕಾಲೇಜುಗಳಲ್ಲಿ ಭೌತಿಕ ತರಗತಿ ಆರಂಭಕ್ಕೆ ಸರ್ಕಾರ ಅನುಮತಿ ನೀಡಿದೆ.

ತರಗತಿ ಆರಂಭಕ್ಕೂ ಮುನ್ನ ಸಂಬಂಧಿಸಿದ ಇಲಾಖೆಗಳು ಹೊರಡಿಸಿರುವ ಸುತ್ತೋಲೆಯ ಪ್ರಕಾರ ಸಾಮಾನ್ಯ ಕಾರ್ಯನಿರ್ವಹಣಾ ವಿಧಾನ ಮತ್ತು ಕೋವಿಡ್ ನಿಯಂತ್ರಣ ಮಾರ್ಗಸೂಚಿಗಳನ್ನು ಕಡ್ಡಾಯವಾಗಿ ಪಾಲಿಸಬೇಕು. ಕನಿಷ್ಠ ಒಂದು ಡೋಸ್ ಕೋವಿಡ್ ಲಸಿಕೆ ಪಡೆದಿರುವ ವಿದ್ಯಾರ್ಥಿಗಳು, ಬೋಧಕ ಮತ್ತು ಬೋಧಕೇತರ ಸಿಬ್ಬಂದಿಗೆ ಮಾತ್ರ ಕಾಲೇಜುಗಳಿಗೆ ಹಾಜರಾಗಲು ಅವಕಾಶ ನೀಡಬೇಕು ಎಂದು ಆದೇಶದಲ್ಲಿ ತಿಳಿಸಲಾಗಿದೆ.

ದೀರ್ಘಾವಧಿಯ ತಾಂತ್ರಿಕ ಶಿಕ್ಷಣ ಕೋರ್ಸ್‌ಗಳೂ ಸೇರಿದಂತೆ ಎಲ್ಲ ಬಗೆಯ ಕೌಶಲ ಅಭಿವೃದ್ಧಿ ತರಬೇತಿ ಸಂಸ್ಥೆಗಳು ಜುಲೈ 26 ರಿಂದ ಭೌತಿಕ ತರಗತಿ ಆರಂಭಿಸಲು ಅವಕಾಶ ನೀಡಲಾಗಿದೆ. ಪದವಿ ತರಗತಿಗಳ ಆರಂಭಕ್ಕೆ ಅನ್ವಯವಾಗುವ ಎಲ್ಲ ಷರತ್ತು ಹಾಗೂ ಮಾರ್ಗಸೂಚಿಗಳು ಈ ತರಗತಿಗಳಿಗೂ ಅನ್ವಯಿಸುತ್ತವೆ ಎಂದು ಮುಖ್ಯ ಕಾರ್ಯದರ್ಶಿ ತಿಳಿಸಿದ್ದಾರೆ.

ಕಣ್ಗಾವಲು ಮುಂದುವರಿಕೆ: ಮಹಾರಾಷ್ಟ್ರ ಮತ್ತು ಕೇರಳದಿಂದ ರಾಜ್ಯಕ್ಕೆ ಬರುವವರಿಗೆ 72 ಗಂಟೆಗಳಿಗೂ ಮುನ್ನ ಆರ್‌ಟಿ-ಪಿಸಿಆರ್ ವಿಧಾನದಲ್ಲಿ ಪಡೆದ 'ಕೋವಿಡ್ ನೆಗೆಟಿವ್' ವರದಿ ಹಾಜರುಪಡಿಸಿರುವುದನ್ನು ಕಡ್ಡಾಯಗೊಳಿಸಿರುವ ಆದೇಶವನ್ನು ಮುಂದುವರಿಸಲಾಗಿದೆ. ಅಂತರ ರಾಜ್ಯ ಗಡಿಗಳಲ್ಲಿ ಕಣ್ಗಾವಲು ಮುಂದುವರಿಯಲಿದೆ.

ಪಬ್‌ಗಳನ್ನು ತೆರೆಯುವುದರ ಮೇಲಿನ ನಿಷೇಧ ಮುಂದುವರಿಯಲಿದೆ. ರಾಜಕೀಯ, ಧಾರ್ಮಿಕ, ಸಾಮಾಜಿಕ ಮತ್ತು ಸಾಂಸ್ಕೃತಿಕ ಸಮಾರಂಭಗಳನ್ನೂ ನಡೆಸುವಂತಿಲ್ಲ. ಕ್ರೀಡಾಕೂಟಗಳಲ್ಲಿ ಪ್ರೇಕ್ಷಕರ ಹಾಜರಿ ನಿರ್ಬಂಧವೂ ಮುಂದುವರಿಯಲಿದೆ.

ಸಭೆಗೆ ಮೂವರು ಸಚಿವರ ಗೈರು

ಆರೋಗ್ಯ ಸಚಿವ ಡಾ.ಕೆ. ಸುಧಾಕರ್ ಮತ್ತು ಕೋವಿಡ್ ನಿಯಂತ್ರಣ ಉಸ್ತುವಾರಿ ಹೊಂದಿರುವ ಕೈಗಾರಿಕಾ ಸಚಿವ ಜಗದೀಶ ಶೆಟ್ಟರ್ ಹಾಗೂ ಗೃಹ ಸಚಿವ ಬಸವರಾಜ ಬೊಮ್ಮಾಯಿ ಮುಖ್ಯಮಂತ್ರಿಯವರ ನೇತೃತ್ವದ ಸಭೆಗೆ ಗೈರಾಗಿದ್ದರು.

ಶೆಟ್ಟರ್ ಗುಜರಾತ್ ಪ್ರವಾಸದಲ್ಲಿದ್ದಾರೆ. ಬಸವರಾಜ ಬೊಮ್ಮಾಯಿ ಕೂಡ ಶನಿವಾರ ಹೂವಿನ ಹಡಗಲಿಗೆ ತೆರಳಿದ್ದರು ಈ ಕಾರಣದಿಂದ ಸಭೆಗೆ ಬಂದಿರಲಿಲ್ಲ. ಸುಧಾಕರ್ ಖಾಸಗಿ ಕಾರ್ಯಕ್ರಮದ ಕಾರಣ ನೀಡಿ ಸಭೆಯಿಂದ ದೂರ ಉಳಿದಿದ್ದರು.

ರಾತ್ರಿ ಕರ್ಫ್ಯೂ ಸಡಿಲಿಕೆ

ರಾತ್ರಿ ಕರ್ಫ್ಯೂ ಅವಧಿಯನ್ನು ಸಡಿಲಿಕೆ ಮಾಡಲಾಗಿದೆ. ಸೋಮವಾರದಿಂದ ರಾತ್ರಿ 10 ರಿಂದ ಬೆಳಿಗ್ಗೆ 5ರವರೆಗೆ ಮಾತ್ರ ರಾತ್ರಿ ಕರ್ಫ್ಯೂ ಜಾರಿಯಲ್ಲಿರಲಿದೆ. ಬೆಳಿಗ್ಗೆ 5ರಿಂದ ರಾತ್ರಿ 10ರವರೆಗೆ ಎಲ್ಲ ವಾಣಿಜ್ಯ ಚಟುವಟಿಕೆಗಳಿಗೂ ಅವಕಾಶ ದೊರೆಯಲಿದೆ.

> **ಆರೋಗ್ಯ ಕ್ಷೇತ್ರದ ತಜ್ಞರ ಸಲಹೆಯನ್ನು ಆಧರಿಸಿ ನಿರ್ಬಂಧಗಳನ್ನು ಮತ್ತಷ್ಟು ಸಡಿಲಿಸಿ, ಹೆಚ್ಚಿನ ಚಟುವಟಿಕೆಗಳಿಗೆ ಅವಕಾಶ ನೀಡುವ ನಿರ್ಧಾರಕ್ಕೆ ಬರಲಾಗಿದೆ**
> **ಪಿ. ರವಿಕುಮಾರ್,** ಮುಖ್ಯ ಕಾರ್ಯದರ್ಶಿ

ಎಸ್ಸೆಸ್ಸೆಲ್ಸಿ ಪರೀಕ್ಷೆ ಇಂದು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೋವಿಡ್ ಸಂಕಷ್ಟದ ಮಧ್ಯೆಯೂ ಸಾಕಷ್ಟು ಮುನ್ನೆಚ್ಚರಿಕೆ ಕ್ರಮಗಳನ್ನು ತೆಗೆದುಕೊಂಡು ಎಸ್ಸೆಸ್ಸೆಲ್ಸಿ ಪರೀಕ್ಷೆ ನಡೆಸಲು ಶಿಕ್ಷಣ ಇಲಾಖೆ ಮುಂದಾಗಿದ್ದು, ಕೋರ್ ವಿಷಯಗಳಿಗೆ ಸೋಮವಾರ ಹಾಗೂ ಭಾಷಾ ವಿಷಯಗಳಿಗೆ ಇದೇ 22ರಂದು ಪರೀಕ್ಷೆ ನಡೆಯಲಿದೆ.

'ಪರೀಕ್ಷೆ ನಡೆಸಲು ಇಲಾಖೆ ಸಂಪೂರ್ಣ ಸಜ್ಜಾಗಿದೆ. ಈ ಬಾರಿ ಒಎಂಆರ್ ಶೀಟ್‌ನಲ್ಲಿ ಪರೀಕ್ಷೆ ನಡೆಯಲಿದ್ದು, ವಿದ್ಯಾರ್ಥಿಗಳು ನೋಂದಣಿ ಸಂಖ್ಯೆಯನ್ನು ಸರಿಯಾಗಿ ನಮೂದಿಸಿರುವ ಬಗ್ಗೆ ಪರಿಶೀಲಿಸುವಂತೆ ಪರೀಕ್ಷಾ ಮೇಲ್ವಿಚಾರಕರಿಗೆ ಸೂಚಿಸಲಾಗಿದೆ. ಪರೀಕ್ಷಾ ಕೇಂದ್ರದಲ್ಲಿ ಮಕ್ಕಳಿಗೆ ಯಾವುದೇ ತೊಂದರೆ ಆಗದಂತೆ ವ್ಯವಸ್ಥೆ ಮಾಡಲು ಅಧಿಕಾರಿಗಳಿಗೆ ತಿಳಿಸಲಾಗಿದೆ' ಎಂದು ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವ ಎಸ್. ಸುರೇಶ್‌ಕುಮಾರ್ ಹೇಳಿದರು.

3ನೇ ಪುಟ ನೋಡಿ

ಹೊಸ ಮುಖ್ಯಮಂತ್ರಿ: ಕಟೀಲ್ ಆಡಿಯೊ 'ನಕಲಿ'?

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ರಾಜ್ಯದ ಹೊಸ ಮುಖ್ಯಮಂತ್ರಿಯಾಗುವವರು ದೆಹಲಿಯಿಂದ ಬರಲಿದ್ದಾರೆ' ಎಂದು ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ನಳಿನ್ ಕುಮಾರ್ ಕಟೀಲ್ ಹೇಳಿದ್ದಾರೆ ಎನ್ನಲಾದ ಆಡಿಯೊ ರಾಜಕೀಯ ಸಂಚಲನ ಮೂಡಿಸಿದ ಬೆನ್ನಲ್ಲೇ, 'ಈ ಆಡಿಯೊ ನಕಲಿ' ಎಂದು ಕಟೀಲ್ ಸ್ಪಷ್ಟನೆ ನೀಡಿದ್ದಾರೆ.

ನಳಿನ್‌ಕುಮಾರ್ ಕಟೀಲ್

ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಶುಕ್ರವಾರ ದೆಹಲಿಗೆ ತೆರಳಿದ ಸಂದರ್ಭದಲ್ಲಿ ನಾಯಕತ್ವ ಬದಲಾವಣೆ ಚರ್ಚೆ ಮುನ್ನೆಲೆಗೆ ಬಂದಿತ್ತಲ್ಲದೇ, ಅವರು ರಾಜೀನಾಮೆ ಕೊಡಲಿದ್ದಾರೆ ಎಂಬ ಸುದ್ದಿ ಹರಿದಾಡಿತ್ತು. 'ಮುಖ್ಯಮಂತ್ರಿಯಾಗಿ ಮುಂದುವರಿಯುವಂತೆ ಸೂಚನೆ ನೀಡಿರುವ ಅಮಿತ್ ಶಾ, ಪಕ್ಷ ಬಲವರ್ಧನೆ ಮಾಡುವಂತೆಯೂ ತಿಳಿಸಿದ್ದಾರೆ. ಮುಖ್ಯಮಂತ್ರಿ ಸ್ಥಾನಕ್ಕೆ ರಾಜೀನಾಮೆ ನೀಡುವ ಪ್ರಶ್ನೆಯೇ ಇಲ್ಲ. ಅವೆಲ್ಲ ವದಂತಿ' ಎಂದು ಯಡಿಯೂರಪ್ಪ ಶನಿವಾರ ಪ್ರತಿಪಾದಿಸಿದ್ದರು.

ಈ ಬೆಳವಣಿಗೆ ಮಧ್ಯೆಯೇ ಭಾನುವಾರ ರಾತ್ರಿ 9.15ರ ಸುಮಾರಿಗೆ ಕಟೀಲ್ ಮಾತನಾಡಿದ್ದಾರೆ ಎನ್ನಲಾದ ಆಡಿಯೊ ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡಿತು.

ಕಟೀಲ್ ಮಾತನಾಡಿದ್ದಾರೆ ಎನ್ನಲಾದ ಆಡಿಯೊ ಸಂಭಾಷಣೆ ತುಳುವಿನಲ್ಲಿದೆ. 'ಮುಖ್ಯಮಂತ್ರಿ ಬದಲಾವಣೆ ಮಾತ್ರವಲ್ಲ, ಜಗದೀಶ್ ಶೆಟ್ಟರ್, ಈಶ್ವರಪ್ಪ ಸೇರಿ ಹಲವು ಹಿರಿಯರನ್ನು ಕೈಬಿಟ್ಟು ಹೊಸ ತಂಡವನ್ನೇ ಕಟ್ಟುವ ಸ್ಪಷ್ಟ ಸೂಚನೆ ನೀಡಿದ್ದಾರೆ' ಎಂಬ ಮಾತುಗಳೂ ಇದ್ದವು.

'ಆಡಿಯೊ ನಕಲಿಯಾಗಿದ್ದು, ಇದರ ಮೂಲಕ ಕಳಂಕ ತರುವ ಕೆಲಸ ನಡೆದಿದೆ. ಈ ಬಗ್ಗೆ ತನಿಖೆ ನಡೆಸಬೇಕು' ಎಂದು ಆಡಿಯೊ ಹರಿದಾಡಿದ 2 ಗಂಟೆ ಬಳಿಕ ರಾತ್ರಿ 11.20 ಕ್ಕೆ ಕಟೀಲ್ ಸ್ಪಷ್ಟನೆ ನೀಡಿದ್ದಾರೆ.

3ನೇ ಪುಟ ನೋಡಿ

ಸಂಸತ್ ಅಧಿವೇಶನ: ತರಾಟೆಗೆ ಪ್ರತಿಪಕ್ಷ ಸಜ್ಜು

ಪ್ರಜಾವಾಣಿ ವಾರ್ತೆ

ನವದೆಹಲಿ: ಸೋಮವಾರದಿಂದ ಪ್ರಾರಂಭವಾಗುವ ಸಂಸತ್ತಿನ ಮುಂಗಾರು ಅಧಿವೇಶನದಲ್ಲಿ ಬೆಲೆ ಏರಿಕೆ, ರೈತರ ಪ್ರತಿಭಟನೆ, ಕೋವಿಡ್ ನಿರ್ವಹಣೆ ಮತ್ತು ಲಸಿಕೆ ಕೊರತೆ ವಿಚಾರಗಳು ಪ್ರತಿಧ್ವನಿಸುವ ಸಾಧ್ಯತೆ ಇದೆ.

ವಿವಿಧ ವಿಷಯಗಳ ಕುರಿತು ಆರೋಗ್ಯಕರ ಮತ್ತು ಫಲಪ್ರದ ಚರ್ಚೆಗಳಿಗೆ ತಮ್ಮ ಸರ್ಕಾರ ಸಿದ್ಧವಿದೆ ಎಂದು ಪ್ರಧಾನಿ ನರೇಂದ್ರ ಮೋದಿ ಭರವಸೆ ನೀಡಿದ್ದಾರೆ. ಅಧಿವೇಶನಕ್ಕೂ ಮುನ್ನ ಸರ್ಕಾರ ಭಾನುವಾರ ಕರೆದಿದ್ದ ಸರ್ವಪಕ್ಷ ಸಭೆಯ ಸಂದರ್ಭದಲ್ಲಿ ಪ್ರಧಾನಿ ಈ ಸ್ಪಷ್ಟನೆ ನೀಡಿದ್ದಾರೆ. ಜನರಿಗೆ ಸಂಬಂಧಿಸಿದ ಸಮಸ್ಯೆಗಳನ್ನು ಚರ್ಚಿಸದೇ, ಸಂಸತ್ತನ್ನು ಮಸೂದೆ ಅಂಗೀಕರಿಸುವ ಸಂಸ್ಥೆಯ ದರ್ಜೆಗೆ ಇಳಿಸಿರುವ ಕೇಂದ್ರ ಸರ್ಕಾರದ ನಡೆಯ ಬಗ್ಗೆ ಪಕ್ಷಗಳು ಅಸಮಾಧಾನ ವ್ಯಕ್ತಪಡಿಸಿದವು. ಅಧಿವೇಶನದಲ್ಲಿ ಚರ್ಚಿಸಬೇಕಾದ ವಿವಿಧ ವಿಷಯಗಳ ಕುರಿತು ಆಡಳಿತ ಪಕ್ಷದ 33 ಮತ್ತು ಪ್ರತಿಪಕ್ಷಗಳ 40ಕ್ಕೂ ಹೆಚ್ಚು ನಾಯಕರು ಮಾತನಾಡಿದರು.

9ನೇ ಪುಟ ನೋಡಿ

ನಿರಂತರ ಸದೃಢ ಆರೋಗ್ಯಕ್ಕಾಗಿ
SDM AYURVEDA PHARMACY
ಅಷ್ಟವರ್ಗಯುಕ್ತ CHYAVANAPRASH LEHA
ಚ್ಯವನಪ್ರಾಶ ಲೇಹ
ತಯಾರಕರು ISO / GMP CERTIFIED
ಶ್ರೀ ಧರ್ಮಸ್ಥಳ ಮಂಜುನಾಥೇಶ್ವರ ಆಯುರ್ವೇದ ಫಾರ್ಮಸಿ, ಉಡುಪಿ
Ph: 0820-2520852, 8970977513

ರಾಜ್ಯ ಕೋವಿಡ್ ಅಂಕಿ–ಅಂಶ

28,83,947 ▲	ಒಟ್ಟು ಸೋಂಕಿತರು (28,82,239 ನಿನ್ನೆಯ ವಿವರ)
29,291 ▼	ಸಕ್ರಿಯ ಪ್ರಕರಣಗಳು
28,18,476 ▲	ಗುಣಮುಖರಾದವರು
36,157 ▲	ಒಟ್ಟು ಸಾವು

ದಿನದ ಏರಿಕೆ

ಹೊಸ ಪ್ರಕರಣ	1,708 ▼
ಗುಣಮುಖ	2,463 ▼
ಸಾವು	36 ▼

ಆಧಾರ: ರಾಜ್ಯ ಆರೋಗ್ಯ ಇಲಾಖೆ
ಪ್ರಜಾವಾಣಿ ಗ್ರಾಫಿಕ್ಸ್

ಜಲಾವೃತ ರಸ್ತೆ ಭಾರಿ ಮಳೆಯ ಪರಿಣಾಮ ಮುಂಬೈನ ದಾದರ್‌ನಲ್ಲಿ ಜಲಾವೃತಗೊಂಡಿದ್ದ ರಸ್ತೆಯಲ್ಲೇ ಭಾನುವಾರ ಜನರು ನಡೆದುಕೊಂಡು ಹೋದರು –ಪಿಟಿಐ ಚಿತ್ರ

ಕೋವಿಡ್ ಲಸಿಕೆ: ಕುಂಠಿತ ಪ್ರಗತಿ 9

ಇಂದಿನ ಪಾಡ್‌ಕಾಸ್ಟ್ ವಿಶೇಷ
ವಚನವಾಣಿ
ಪ್ರತೀ ದಿನ: ದಿನದ ಸೂಕ್ತಿ, ಸಂಪಾದಕೀಯ, ಪ್ರಚಲಿತ
Prajavani.net/podcast

ರಾಜ್ಯದ ಹಲವೆಡೆ ಧಾರಾಕಾರ ಮಳೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕರಾವಳಿ ಜಿಲ್ಲೆಗಳು ಸೇರಿದಂತೆ ರಾಜ್ಯದ ಹಲವೆಡೆ ಭಾನುವಾರ ಧಾರಾಕಾರ ಮಳೆಯಾಗಿದೆ. ಜಲಾಶಯಗಳ ಒಳಹರಿವು ಹೆಚ್ಚತೊಡಗಿದೆ.

ತುರುವೇಕೆರೆ ತಾಲ್ಲೂಕಿನಲ್ಲಿ ಶನಿವಾರ ರಾತ್ರಿ ಸುರಿದ ಮಳೆಗೆ ಮನೆಯ ಗೋಡೆ ಕುಸಿದು ದಂಡಿನಶಿವರ ಹೋಬಳಿಯ ಅರಕೆರೆ ಗ್ರಾಮದ ನಿವಾಸಿ ಪುಟ್ಟಯ್ಯ (65) ಮೃತಪಟ್ಟಿದ್ದಾರೆ. ಮಳೆಗೆ ಮನೆಯ ಗೋಡೆ ಸಂಪೂರ್ಣ ನೆನೆದು ರಾತ್ರಿ ಮನೆಯಲ್ಲಿ ಮಲಗಿದ್ದ ಪುಟ್ಟಯ್ಯ ಅವರ ಮೇಲೆ ಗೋಡೆ ಕುಸಿದಿದೆ. ಅವರ ಪತ್ನಿ ಲಕ್ಕಮ್ಮ ಅವರ ಕಾಲುಗಳ ಮೇಲೆ ಗೋಡೆಯ ಕಲ್ಲು, ಇಟ್ಟಿಗೆ ಬಿದ್ದು ಸಣ್ಣ ಪುಟ್ಟ ಗಾಯಗಳಾಗಿವೆ.

ಕಲಬುರ್ಗಿ ಜಿಲ್ಲೆಯ ಚಿಂಚೋಳಿ ತಾಲ್ಲೂಕಿನ ಪೋತಂಗಲ್ ಗ್ರಾಮದಲ್ಲಿ ಶನಿವಾರ ಸಂಜೆ ಕಾಗಿಣಾ ನದಿಯಲ್ಲಿ ವ್ಯಕ್ತಿಯೊಬ್ಬರು ಕೊಚ್ಚಿಕೊಂಡು ಹೋಗಿದ್ದಾರೆ. ಅವರ ಪತ್ತೆಗೆ ಶೋಧ ಕಾರ್ಯಾಚರಣೆ ನಡೆಯುತ್ತಿದೆ.

ಉತ್ತರ ಕನ್ನಡ ಜಿಲ್ಲೆಯ ಭಟ್ಕಳ ತಾಲ್ಲೂಕಿನಲ್ಲಿ 20.9 ಸೆಂ.ಮೀ.ನಷ್ಟು ಭಾರಿ ಮಳೆಯಾಗಿದೆ. ಚೌಥನಿಯ ಶರಾಬಿ ನದಿ ಉಕ್ಕಿಹರಿದು ಚೌಥನಿ ಗ್ರಾಮ ಸಂಪೂರ್ಣ ಜಲಾವೃತವಾಗಿದೆ.

ಬಂಟ್ವಾಳ ತಾಲ್ಲೂಕಿನ ವಿಟ್ಲಪಡ್ನೂರು ಗ್ರಾಮದ ಕೊಡಂಗೆ ಎಂಬಲ್ಲಿ ಗುಡ್ಡ ಕುಸಿದು 100ಕ್ಕೂ ಹೆಚ್ಚು ಅಡಿಕೆ ಮರಗಳು ಧರೆಗೆ ಉರುಳಿವೆ. ಚಿತ್ರದುರ್ಗ ಜಿಲ್ಲೆಯಲ್ಲಿ 26 ಮನೆಗಳಿಗೆ ಭಾಗಶಃ ಹಾನಿ ಉಂಟಾಗಿದ್ದು, 36 ಎಕರೆ ಬೆಳೆ ನಷ್ಟವಾಗಿದೆ.

ಜುಲೈ19 ಮತ್ತು 20ರಂದು ಏಳು ಜಿಲ್ಲೆಗಳಲ್ಲಿ 'ರೆಡ್ ಅಲರ್ಟ್' ಹಾಗೂ ಐದು ಜಿಲ್ಲೆಗಳಲ್ಲಿ 'ಆರೆಂಜ್ ಅಲರ್ಟ್' ಘೋಷಿಸಿರುವುದಾಗಿ ಹವಾಮಾನ ಇಲಾಖೆ ತಿಳಿಸಿದೆ.

ಮುಂಬೈ: ಮಳೆಗೆ 33 ಮಂದಿ ಬಲಿ

ಮುಂಬೈ (ಪಿಟಿಐ): ಮುಂಬೈನಲ್ಲಿ ಶನಿವಾರ ತಡರಾತ್ರಿಯಿಂದ ಭಾರಿ ಮಳೆಯಾಗಿದ್ದು, ಮಳೆ ಸಂಬಂಧಿ ಅವಘಡಗಳಲ್ಲಿ 33 ಜನರು ಮೃತಪಟ್ಟಿದ್ದಾರೆ. ನಗರದ ಹಲವು ಪ್ರದೇಶಗಳಲ್ಲಿ ಪ್ರವಾಹ ಸ್ಥಿತಿ ತಲೆದೋರಿದೆ. ನಗರದಲ್ಲಿ ಮುಂದಿನ ಮೂರು ದಿನ ಭಾರಿ ಮಳೆಯಾಗಲಿದೆ. ನಗರವಾಸಿಗಳು ಅನಗತ್ಯವಾಗಿ ಮನೆಯಿಂದ ಹೊರಗೆ ಬರದಂತೆ ನಗರಾಡಳಿತವು ಸೂಚನೆ ನೀಡಿದೆ.

ಶನಿವಾರ ತಡರಾತ್ರಿ ಆರಂಭವಾದ ಮಳೆಯು ಭಾನುವಾರ ಬೆಳಿಗ್ಗೆ 8ರವರೆಗೂ ಮುಂದುವರಿದಿತ್ತು. ಈ ಅವಧಿಯಲ್ಲಿ ಮುಂಬೈ, ಮುಂಬೈ ಪೂರ್ವ ಉಪನಗರ ಮತ್ತು ಪಶ್ಚಿಮ ಉಪನಗರದ ಹಲವೆಡೆ ಭಾರಿ ಮಳೆಯಾಗಿದೆ. ನಗರದ ವಿಕ್ರೋಲಿ ಪ್ರದೇಶದಲ್ಲಿ ಕಟ್ಟಡ ಕುಸಿದು ಮೂವರು ಮೃತಪಟ್ಟಿದ್ದರೆ, ಚೆಂಬೂರ್ ಪ್ರದೇಶದಲ್ಲಿ ಭೂಕುಸಿತದಲ್ಲಿ 22 ಜನರು ಮೃತಪಟ್ಟಿದ್ದಾರೆ. ನಗರದ ಬೇರೆ ಪ್ರದೇಶಗಳಲ್ಲಿ ನಡೆದ ದುರಂತಗಳಲ್ಲಿ ಇನ್ನೂ ಎಂಟು ಮಂದಿ ಮೃತಪಟ್ಟಿದ್ದಾರೆ.

ಇನ್ನಷ್ಟು ಸುದ್ದಿಗಳು 4

ಚಿನಕುರಳಿ
ಪ್ರಕಾಶ್ ಶೆಟ್ಟಿ

ಭಾವಪೂರ್ಣ ಶ್ರದ್ಧಾಂಜಲಿ

'ಜೋಳವಾಳಿಯಾನಲ್ಲ, ವೇಳೆಯಾಳಿಯವ ನಾನಯ್ಯ,
ಹಾಳುಗೆಟ್ಟೋಡುವ ಆಳು ನಾನಲ್ಲವಯ್ಯ ಕೇಳು,
ಕೂಡಲಸಂಗಮದೇವಾ ಮರಣವೇ ಮಹಾನವಮಿ'
- ಬಸವಣ್ಣ

ಶ್ರೀ ಬಿ.ಎಸ್. ಪೃಥ್ವಿರಾಜ್ ಸಿಂಗ್
ಜನನ: 28-12-1937 ಮರಣ: 18-07-2021

ದುಃಖತಪ್ತರು
ಎಸ್.ವಿ.ಕೆ. ಕುಟುಂಬ ಮತ್ತು ಬಂಧು-ಮಿತ್ರರು
ಹೊಸಪೇಟೆ, ವಿಜಯನಗರ ಜಿಲ್ಲೆ.

ಬಾಂಗ್ಲಾ ಪ್ರಜೆ ಮಾಹಿತಿ ಪಡೆದ ಎನ್ಐಎ

ಬೆಂಗಳೂರು: ಬಾಂಗ್ಲಾ ಯುವತಿ ಮೇಲೆ ಸಾಮೂಹಿಕ ಅತ್ಯಾಚಾರ ಎಸಗಿದ್ದ ಪ್ರಕರಣದಲ್ಲಿ ಬಂಧಿಸಲಾಗಿರುವ ಆರೋಪಿಗಳ ಬಗ್ಗೆ ರಾಷ್ಟ್ರೀಯ ತನಿಖಾ ದಳದ (ಎನ್ಐಎ) ಅಧಿಕಾರಿಗಳು ಮಾಹಿತಿ ಪಡೆದುಕೊಂಡಿದ್ದಾರೆ.

ದಿ ರಾಜಾಜಿನಗರ ಕೋ–ಆಪರೇಟಿವ್ ಬ್ಯಾಂಕ್ ಲಿ,

ಪ್ರಕಟಣೆ

ದಿ ರಾಜಾಜಿನಗರ ಕೋ–ಆಪರೇಟಿವ್ ಬ್ಯಾಂಕ್ ಲಿ, ಬೆಂಗಳೂರು ಇಲ್ಲಿ ಖಾಲಿ ಇರುವ ಹುದ್ದೆಗಳನ್ನು ತುಂಬಲು ಅರ್ಜಿ ಆಹ್ವಾನಿಸಿ ದಿನಾಂಕ 30–06–2021 ರ ದಿನಪತ್ರಿಕೆಗಳಲ್ಲಿ ಪ್ರಕಟಣೆ ನೀಡಲಾಗಿದೆ. ಸದರಿ ಪ್ರಕಟಣೆಯಲ್ಲಿ ಹುದ್ದೆಗಳ ವಿದ್ಯಾರ್ಹತೆಗೆ ಸಂಬಂಧಪಟ್ಟಂತೆ ತಾಂತ್ರಿಕ ಲೋಪವಾಗಿದ್ದು, ಅದನ್ನು ಸರಿಪಡಿಸಿ ಕೆಳಕಂಡ ಪರಿಷ್ಕೃತ ಪ್ರಕಟಣೆಯನ್ನು ಈ ಮೂಲಕ ನೀಡಲಾಗಿದೆ.

1. **ಸಹಾಯಕ ವ್ಯವಸ್ಥಾಪಕರು/ಲೆಕ್ಕಿಗರು–02 ಹುದ್ದೆಗಳು**
ಅರ್ಹತೆ : ಭಾರತದ ಅಂಗೀಕೃತ ವಿಶ್ವವಿದ್ಯಾನಿಲಯ ದಿಂದ ಪಡೆದ ವಾಣಿಜ್ಯ/ಸಹಕಾರ/ವ್ಯವಸ್ಥಾಪನಾ ವಿಷಯದಲ್ಲಿ ಪದವಿಯನ್ನು ಪಡೆದಿರಬೇಕು, ಕಂಪ್ಯೂಟರ್ ಜ್ಞಾನ ಹಾಗೂ ಕನ್ನಡ ಭಾಷೆಯಲ್ಲಿ ಓದು, ಬರಹ ಬಲ್ಲವರಾಗಿರಬೇಕು. ಸ್ನಾತಕೋತ್ತರ ಪದವೀದರರಿಗೆ ಆದ್ಯತೆ ನೀಡಲಾಗುವುದು.
2. **ಸಹಾಯಕ ಲೆಕ್ಕಿಗರು/ಆಂತರಿಕ ಲೆಕ್ಕಪರಿಶೋಧಕರು/ಕ್ಷೇತ್ರಾಧಿಕಾರಿ/ ಮೇಲ್ವಿಚಾರಕರು/ಮುಖ್ಯ ನಗದು ಅಧಿಕಾರಿ –05 ಹುದ್ದೆಗಳು,**
ಅರ್ಹತೆ : ಭಾರತದ ಅಂಗೀಕೃತ ವಿಶ್ವವಿದ್ಯಾನಿಲಯದಿಂದ ಯಾವುದೇ ವಿಷಯದಲ್ಲಿ ಪದವಿಯನ್ನು ಪಡೆದಿರಬೇಕು. ಕಂಪ್ಯೂಟರ್ ಜ್ಞಾನ ಹಾಗೂ ಕನ್ನಡ ಭಾಷೆಯಲ್ಲಿ ಓದು, ಬರಹ ಬಲ್ಲವರಾಗಿರಬೇಕು. ಸ್ನಾತಕೋತ್ತರ ಪದವೀದರರಿಗೆ ಆದ್ಯತೆ ನೀಡಲಾಗುವುದು
3. **ಕಿರಿಯ ಸಹಾಯಕ–02 ಹುದ್ದೆಗಳು,**
ಅರ್ಹತೆ : ಪಿ.ಯು.ಸಿ ತೇರ್ಗಡೆ. ಕಂಪ್ಯೂಟರ್ ಜ್ಞಾನ ಹಾಗೂ ಕನ್ನಡ ಭಾಷೆಯಲ್ಲಿ ಓದು, ಬರಹ ಬಲ್ಲವರಾಗಿರಬೇಕು. ಪದವೀದರರಿಗೆ ಆದ್ಯತೆ ನೀಡಲಾಗುವುದು.
4. **ವಾಚ್‌ಮನ್/ವಾಹನ ಚಾಲಕ –04ಹುದ್ದೆಗಳು.**
ಅರ್ಹತೆ : ಎಸ್.ಎಸ್.ಎಲ್.ಸಿ ಪರೀಕ್ಷೆಯಲ್ಲಿ ಉತ್ತೀರ್ಣರಾಗಿರಬೇಕು. ಚಾಲನಾ ಪರವಾನಿಗೆ ಹೊಂದಿರಬೇಕು. ಎಸ್.ಎಸ್.ಎಲ್.ಸಿ ಪರೀಕ್ಷೆಯಲ್ಲಿ ಕನ್ನಡವನ್ನು ಒಂದು ವಿಷಯವನ್ನಾಗಿ ಅಭ್ಯಸಿಸಿರಬೇಕು

ಈಗಾಗಲೇ ದಿನಾಂಕ **30–06–2021** ರಂದು ಬ್ಯಾಂಕ್ ನೀಡಿರುವ ಪ್ರಕಟಣೆಯನ್ನು ಅನುಸರಿಸಿ ಈಗಾಗಲೇ ಅರ್ಜಿ ಸಲ್ಲಿಸಿದ ಅಭ್ಯರ್ಥಿಗಳು ಮತ್ತೊಮ್ಮೆ ಅರ್ಜಿ ಸಲ್ಲಿಸುವ ಅಗತ್ಯತೆ ಇರುವುದಿಲ್ಲ. ಮೇಲೆ ನಿಗದಿಪಡಿಸಿರುವ ವಿದ್ಯಾರ್ಹತೆಯುಳ್ಳ ಅಭ್ಯರ್ಥಿಗಳು ಅರ್ಜಿ ನಮೂನೆಯಲ್ಲಿ ವಿದ್ಯಾರ್ಹತೆಗೆ ಸಂಬಂಧಪಟ್ಟ ದಾಖಲೆಗಳನ್ನು ದೃಢೀಕರಿಸಿ ದಿನಾಂಕ **28–07–2021** ರೊಳಗೆ ಪ್ರಧಾನವ್ಯವಸ್ಥಾಪಕರು, ಅಂಚೆ ಪೆಟ್ಟಿಗೆ ಸಂಖ್ಯೆ 1036, ದಿ ರಾಜಾಜಿನಗರ ಕೋ–ಆಪರೇಟಿವ್ ಬ್ಯಾಂಕ್ ಲಿ, ರಾಜಾಜಿನಗರ ಪೋಸ್ಟ್ ಆಫೀಸ್, ರಾಜಾಜಿನಗರ, ಬೆಂಗಳೂರು–10 ಇಲ್ಲಿಗೆ ಸಲ್ಲಿಸತಕ್ಕದ್ದು.

ಸಹಿ/– ಪ್ರಧಾನ ವ್ಯವಸ್ಥಾಪಕರು ಹಾಗೂ
ನೇಮಕಾತಿ ಸಭೆಯ ಸದಸ್ಯ ಕಾರ್ಯದರ್ಶಿ

ತೆಲಂಗಾಣ ಪ್ರಸರಣ ನಿಗಮ ನಿಯಮಿತ

6ನೇ ಮಹಡಿ, ಎ–ಬ್ಲಾಕ್, ವಿದ್ಯುತ್ ಸೌಧ, ಖೈರತಾಬಾದ್, ಹೈದರಾಬಾದ್–500082

ಸಾರ್ವಜನಿಕ ಪ್ರಕಟಣೆ

1. ಟಿಎಸ್‌ಟ್ರಾನ್ಸ್ಕೊ ಒಡೆತನದಲ್ಲಿರುವ ಮತ್ತು ನೈಸರ್ಗಿಕವಾಗಿ ಅಂತರ್‌ರಾಜ್ಯಗಳಾದ ತೆಲಂಗಾಣ ಮತ್ತು ಆಂಧ್ರಪ್ರದೇಶ ಹಾಗೂ ತೆಲಂಗಾಣ ಮತ್ತು ಕರ್ನಾಟಕ ರಾಜ್ಯಗಳನ್ನು ಸಂಪರ್ಕಿಸುವ ಪ್ರಸರಣ ಲೈನ್‌ಗಳು/ಸಿಸ್ಟಮ್‌ಗಳಿಗೆ ಸಂಬಂಧಿಸಿದಂತೆ ಹಣಕಾಸು ವರ್ಷ 2019–20 ರಿಂದ ಹಣಕಾಸು ವರ್ಷ 2023–24 ಅವಧಿಗೆ ದರಪಟ್ಟಿಯನ್ನು ಇತ್ಯರ್ಥಪಡಿಸಲು ಕೇಂದ್ರಿಯ ವಿದ್ಯುತ್ ನಿಯಂತ್ರಣ ಮಂಡಳಿ (ದರಪಟ್ಟಿಯ ಷರತ್ತು ಮತ್ತು ನಿಬಂಧನೆಗಳು) ನಿಯಮಗಳಿಗಳು, 2019ರ ಅಡಿಯಲ್ಲಿ ಅನುಮೋದನೆ ಕೋರಿ ಸಲ್ಲಿಸಲಾಗಿರುವ ಪಿಟಿಷನ್‌ನಲ್ಲಿರುವ ಸ್ವತ್ತುವಾರು ವಿವರ ಹೀಗಿರುತ್ತದೆ: ಅಸೆಟ್ ನಂ. 1: 400 ಕೆವಿ ಶ್ರೀಶೈಲಂ–ಕರ್ನೂಲ (ಎಸ್‌ಸಿ), 2&3: 400 ಕೆವಿ ಕಲಪಾಕ–ಅಸುಪಾಕ & 400 ಕೆವಿ ಕಲಪಾಕ–ಖಮ್ಮಮ್, 4&5: 400ಕೆವಿ ವಿಟಿಪಿಎಸ್–ಸೂರ್ಯಪೇಟ್ 1&2 ಲೈನ್ಸ್, 6&7: 400 ಕೆವಿ ಶ್ರೈಶೈಲಂ–ಸಟ್ಟೇನಪಲ್ಲಿ–1&2 ಲೈನ್ಸ್, 8: 220 ಕೆವಿ ಲೋವರ್ ಸಿಲೇರು–ಕೆಟಿಪಿಎಸ್–1, 9: 220 ಕೆವಿ ಲೋವರ್ ಸಿಲೇರು–ಕೆಟಿಪಿಎಸ್–2, 10&11: 220 ಕೆವಿ ಶ್ರೀಶೈಲಂ–ದಿಂಡಿ–1&2 ಲೈನ್ಸ್, 12: 220 ಕೆವಿ ತಲ್ಲಪಲ್ಲಿ–ನಾಗಾರ್ಜುನಸಾಗರ–3, 13&14: 220 ಕೆವಿ ತಲ್ಲಪಲ್ಲಿ–ನಾಗಾರ್ಜುನಸಾಗರ–1&2 ಲೈನ್ಸ್, 15: 220 ಕೆವಿ ಎನ್'ಸಾಗರ ರಿಸೀವಿಂಗ್ ಸ್ಟೇಷನ್–ಶ್ರೀಶೈಲಂ (ಎಸ್‌ಸಿ), 16: 220 ಕೆವಿ ನುನ್ನಾ–ಕೆಟಿಪಿಎಸ್, 17: 220 ಕೆವಿ ತಾಂಡೂರ್–ಸೇಡಂ, 18: 220 ಕೆವಿ ತಲ್ಲಪಲ್ಲಿ–ಚಾಲುಕುರ್ತಿ, 19: 220 ಕೆವಿ ಬ್ರಹ್ಮನಕೊಟ್ಕೂರ್–ವಾನಪರ್ತಿ (ಎಲ್‌ಐಎಸ್), 20&21: 220 ಕೆವಿ ಚಿಲ್ಲಕಲ್ಲು–ನರ್ಕೆತಪಲ್ಲಿ–1&2 ಲೈನ್ಸ್, 22: 132 ಕೆವಿ ಚಿಲ್ಲಕಲ್ಲು–ರಾಮಮುರಂ, 23&24: 132 ಕೆವಿ ಕಮವಾರಮ ಕೋಟ–ಅಶ್ವರಾವ್‌ಪೇಟ್–1&2 ಲೈನ್ಸ್, 25: 132 ಕೆವಿ ನಾಗಾರ್ಜುನಸಾಗರ–ಆರ್‌ಸಿಪಿಎಚ್, 26: 132 ಕೆವಿ ಚಿಲ್ಲಕಲ್ಲು–ಕುಸುಮಾಂಚಿ, 27&28: 132 ಕೆವಿ ಚಿಲ್ಲಕಲ್ಲು–ಬೊನಕಲ್ಲು–1&2 ಲೈನ್ಸ್, 29: 132 ಕೆವಿ ಎ.ಪಿ.ಕಾರ್ಬೈಡ್ಸ್–ಆಲಂಪುರ–1, 30: 132 ಕೆವಿ ಚಿಲ್ಲಕಲ್ಲು–ಮಧಿರ, 31: 132 ಕೆವಿ ಚಿಲ್ಲಕಲ್ಲು–ಖಮ್ಮಮ್, 32: 132 ಕೆವಿ ಚಿಲ್ಲಕಲ್ಲು–ಸಿತಾಮುರಂ, 33: 132 ಕೆವಿ ಚಿಲ್ಲಕಲ್ಲು–ಕೊದಡ, 34: 132 ಕೆವಿ ಸಿತಾಮುರಂ–ಕೆಸಿಪಿ, 35: 132 ಕೆವಿ ತಾಂಗೆಡ–ವಾಡಪಲ್ಲಿ, 36: 132 ಕೆವಿ ಪಿಡುಗುರಲ್ಲ–ವಾಡಪಲ್ಲಿ, 37: 132 ಕೆವಿ ಎ.ಪಿ.ಕಾರ್ಬೈಡ್ಸ್–ಆಲಂಪುರ–2, 38&39: 400 ಕೆವಿ ವೆಲ್ಲೂರ್–ಉರವಕೊಂಡ–1&2 ಲೈನ್ಸ್, 40&41: 400 ಕೆವಿ ಸೂರ್ಯಪೇಟೆ–ಕೆ.ವಿ.ಕೋಟ–1&2 ಲೈನ್ಸ್.
2. ಪ್ರಸರಣ ವ್ಯವಸ್ಥೆಯ ಫಲಾನುಭವಿಗಳು: 1) ಅಪ್ಟ್ರಾನ್ಸ್ಕೊ 2) ಟಿಎಸ್‌ಪಿಸಿಸಿ 3) ಕೆಪಿಟಿಸಿಎಲ್.
3. ದರಪಟ್ಟಿ ವಿವರ [ವಾರ್ಷಿಕ ಪ್ರಸರಣ ಶುಲ್ಕ (ಎಟಿಸಿ)]: ಹಣಕಾಸು ವರ್ಷ 2019–20, 2020–21, 2021–22, 2022–23 ಮತ್ತು 2023–24 ನೇ ಸಾಲಿಗೆ.

ಯೋಜನೆ ಸ್ವತ್ತು	ಹಣಕಾಸು ವರ್ಷ	2019-20	2020-21	2021-22	2022-23	2023-24
ತೆಲಂಗಾಣ, ಆಂಧ್ರಪ್ರದೇಶ ಮತ್ತು ಕರ್ನಾಟಕ ರಾಜ್ಯಗಳ ಮಧ್ಯದ ಅಂತರ್‌ರಾಜ್ಯ ಪ್ರಸರಣ	ಲೈನ್ ಲೆಂಗ್ತ್ (ಸಿಕೆಎಂ ಗಳಲ್ಲಿ)	1250.86	1250.86	1250.86	1250.86	1250.86
	ದರಪಟ್ಟಿ (ಎಟಿಸಿ) (ರೂ. ಲಕ್ಷಗಳಲ್ಲಿ)	13415.62	13118.96	12830.61	12500.62	12219.60

4. ದರಪಟ್ಟಿ ಇತ್ಯರ್ಥಪಡಿಸಲು ಸಲ್ಲಿಸಲಾಗಿರುವ ಅರ್ಜಿಯ ಒಂದು ಪ್ರತಿಯನ್ನು ಅರ್ಜಿದಾರರ www.tstransco.in ವೆಬ್‌ಸೈಟ್‌ನಲ್ಲಿ ಪ್ರಕಟಿಸಲಾಗಿದೆ.
5. ಉದ್ದೇಶಿತ ದರಪಟ್ಟಿ ಇತ್ಯರ್ಥಪಡಿಸಲು ಸಲ್ಲಿಸಲಾಗಿರುವ ಅರ್ಜಿಗೆ ಸಂಬಂಧಿಸಿದಂತೆ, ಫಲಾನುಭವಿಗಳೂ ಸೇರಿದಂತೆ ಯಾವುದೇ ವ್ಯಕ್ತಿಯು ಸಲಹೆ ನೀಡಬೇಕಿದ್ದಲ್ಲಿ ಮತ್ತು ಆಕ್ಷೇಪಣೆಗಳನ್ನು ಸಲ್ಲಿಸಬೇಕಿದ್ದಲ್ಲಿ, ಅಂತಹವರು ಸದರಿ ಪ್ರಕಟಣೆಯು ಪ್ರಕಟಗೊಂಡ ದಿನಾಂಕದಿಂದ 30 ದಿನಗಳೊಳಗೆ ಕಾರ್ಯದರ್ಶಿ, ಕೇಂದ್ರಿಯ ವಿದ್ಯುತ್ ನಿಯಂತ್ರಣ ಮಂಡಳಿ, 3ನೇ ಮತ್ತು 4ನೇ ಮಹಡಿ, ಚಂದ್ರಲೋಕ ಬಿಲ್ಡಿಂಗ್, 36, ಜನಪಥ, ನವದೆಹಲಿ–110 001 ಇವರಿಗೆ ಸಲ್ಲಿಸುವುದು (ಅಥವಾ ಮಂಡಳಿಯ ಕಚೇರಿ ಇರುವ ಮತ್ತೊಂದು ವಿಳಾಸಕ್ಕೆ ಸಲ್ಲಿಸುವುದು), ಜೊತೆಗೆ ಒಂದು ಪ್ರತಿಯನ್ನು ಅರ್ಜಿದಾರರ ಪ್ರಧಾನ ಕಚೇರಿ, ಚೀಫ್ ಇಂಜಿನಿಯರ್ (ಕಮರ್ಷಿಯಲ್ & ಆರ್‌ಎಸಿ), ರೂಮ್ ನಂ. 149, ಟಿಎಸ್‌ಟ್ರಾನ್ಸ್ಕೊ, ಎ–ಬ್ಲಾಕ್, ವಿದ್ಯುತ್ ಸೌಧ, ಖೈರತಾಬಾದ್, ಹೈದರಾಬಾದ್–500082 ವಿಳಾಸಕ್ಕೆ ರವಾನಿಸುವುದು.

ಸ್ಥಳ: ಹೈದರಾಬಾದ್
ದಿನಾಂಕ: 19–07–2021 RO : 15/21

ಸಹಿ/–
ಚೇರ್ಮನ್ & ವ್ಯವಸ್ಥಾಪಕ ನಿರ್ದೇಶಕರು

ಕುಮಾರಸ್ವಾಮಿ ಲೇಔಟ್ ಪೊಲೀಸರಿಂದ 13 ರೌಡಿಗಳ ಬಂಧನ

ಕಾರ್ಖಾನೆಯಲ್ಲಿ 21 ಕೆ.ಜಿ ಗಾಂಜಾ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಯಲಚೇನಹಳ್ಳಿ ಬಳಿಯ ವೈ.ವಿ.ಅಣ್ಣಯ್ಯ ರಸ್ತೆಯಲ್ಲಿರುವ 'ಎಚ್‌ಎನ್‌ಎಸ್' ಪೀಠೋಪಕರಣ ವಿನ್ಯಾಸ ಕಾರ್ಖಾನೆ ಮೇಲೆ ಕುಮಾರಸ್ವಾಮಿ ಲೇಔಟ್ ಪೊಲೀಸರು ದಾಳಿ ಮಾಡಿದ್ದು, ಕಾರ್ಖಾನೆಯಲ್ಲಿದ್ದ 21 ಕೆ.ಜಿ 350 ಗ್ರಾಂ ಗಾಂಜಾವನ್ನು ಜಪ್ತಿ ಮಾಡಿದ್ದಾರೆ.

ಗಾಂಜಾ ಮಾರಾಟ ಮಾಡುತ್ತಿದ್ದ ಹಾಗೂ ಅಪರಾಧ ಕೃತ್ಯ ಎಸಗಲು ಸಂಚು ರೂಪಿಸುತ್ತಿದ್ದ 13 ರೌಡಿಗಳನ್ನೂ ಪೊಲೀಸರು ಬಂಧಿಸಿದ್ದಾರೆ. ಅವರೆಲ್ಲರ ವಿರುದ್ಧ ಎನ್‌ಡಿಪಿಎಸ್ ಕಾಯ್ದೆಯಡಿ ಪ್ರಕರಣ ದಾಖಲಾಗಿದೆ.

'ರೌಡಿ ಮಲಿಯಾಳಿ ಮಧು ಹಾಗೂ ಆತನ ಸಹಚರರು, ಗಾಂಜಾ ಮಾರಾಟ ಮಾಡಿ ಹಣ ಗಳಿಸುತ್ತಿದ್ದರು. ಅದರಿಂದ ಬಂದ ಹಣದಲ್ಲಿ ಐಷಾರಾಮಿ ಜೀವನ ನಡೆಸುತ್ತಿದ್ದರು. ಜೊತೆಗೆ, ಅಪರಾಧ ಕೃತ್ಯಕ್ಕೆ ಬೇಕಾದ ಸಿದ್ಧತೆಗಾಗಿ ಹಣ ಬಳಸುತ್ತಿದ್ದರು' ಎಂದು ಪೊಲೀಸ್ ಮೂಲಗಳು ಹೇಳಿವೆ.

'ಕಾರ್ಖಾನೆಯನ್ನೇ ಅಡ್ಡೆ ಮಾಡಿಕೊಂಡಿದ್ದ ರೌಡಿಗಳ ಗ್ಯಾಂಗ್ ನಿತ್ಯವೂ ಅಲ್ಲಿಯೇ ಸೇರುತ್ತಿತ್ತು. ಪೆಡ್ಲರೊಬ್ಬನ ಬಳಿ ಗಾಂಜಾ ಖರೀದಿಸುತ್ತಿದ್ದ ಮಲಿಯಾಳಿ ಮಧು ಹಾಗೂ ಸಹಚರರು, ಅದನ್ನು ಕಾರ್ಖಾನೆಗೆ ತಂದು ಪೊಟ್ಟಣಗಳಲ್ಲಿ ತುಂಬಿ ಮಾರುತ್ತಿದ್ದರು. ಈ ಬಗ್ಗೆ ಮಾಹಿತಿ ಬರುತ್ತಿದ್ದಂತೆ ಕಾರ್ಖಾನೆ ಮೇಲೆ ದಾಳಿ ಮಾಡಿ ಗಾಂಜಾ ಜಪ್ತಿ ಮಾಡಲಾಗಿದೆ' ಎಂದೂ ಮೂಲಗಳು ತಿಳಿಸಿವೆ.

ಜೋಡಿ ಕೊಲೆ ಆರೋಪಿಗಳು: 'ಯಲಚೇನಹಳ್ಳಿಯ ಮಲಿಯಾಳಿ ಮಧು, ಕೆ.ಬಿ. ಲಿಖಿನ್, ಎಂ. ಅಯ್ಯಪ್ಪ, ಕಾರಿಯಪ್ಪ, ಸಾಗರ್, ಸುಮಂತ್, ಕಿರಣ್‌ಕುಮಾರ್, ಮುನಿಕೃಷ್ಣ, ಶಿವಕುಮಾರ್, ಜಬಿವುಲ್ಲಾ, ಪ್ರಮೋದ್, ಮಂಜುನಾಥ್ ಹಾಗೂ ಸ್ಟಾಲಿನ್ ಬಂಧಿತರು. ಇವರೆಲ್ಲ 2019ರಲ್ಲಿ ಜೆ.ಪಿ. ನಗರದಲ್ಲಿ ನಡೆದಿದ್ದ ಜೋಡಿ ಕೊಲೆ ಪ್ರಕರಣದ ಆರೋಪಿಗಳು. ದಕ್ಷಿಣ ವಿಭಾಗದ ವಿವಿಧ ಠಾಣೆಗಳ ರೌಡಿ ಪಟ್ಟಿಯಲ್ಲಿ ಇವರ ಹೆಸರಿದೆ' ಎಂದು ಡಿಸಿಪಿ ಹರೀಶ್ ಪಾಂಡೆ ಹೇಳಿದರು.

'ಎದುರಾಳಿ ಗ್ಯಾಂಗ್ ಮೇಲೆ ದಾಳಿ ಮಾಡಲು ಸಂಚು ರೂಪಿಸುತ್ತಿದ್ದ ರೌಡಿಗಳು, ಅದಕ್ಕಾಗಿ ಹಣ ಹೊಂದಿಸುತ್ತಿದ್ದರು. ಬಹುಬೇಗನೇ ಹಣ ಗಳಿಸಬೇಕೆಂದು ತಿಳಿದು ಗಾಂಜಾ ಮಾರಾಟ ಮಾಡಲಾರಂಭಿಸಿದ್ದರು' ಎಂದೂ ತಿಳಿಸಿದರು.

ಕದ್ದ ಕಾರು ಮಾರಾಟ

ಬೆಂಗಳೂರು: ಮಾರಾಟದ ಸೋಗಿನಲ್ಲಿ ಮಾಲೀಕರಿಂದ ಐಷಾರಾಮಿ ಕಾರುಗಳನ್ನು ಕದಿಯುತ್ತಿದ್ದ ಆರೋಪದಡಿ ಸಿಸಿಬಿ ಪೊಲೀಸರು ಬಂಧಿಸಿರುವ ಮೂವರು, ನಗರದ ಶಾಸಕರೊಬ್ಬರ ಆಪ್ತರೆಂದು ಹೇಳಿ ಕಾರುಗಳನ್ನು ಮಾರಾಟ ಮಾಡಿದ್ದ ಸಂಗತಿ ಹೊರಬಿದ್ದಿದೆ.

ಕಾರು ಕಳ್ಳತನ ಆರೋಪದಡಿ ನಸೀಬ್, ಮಹಮ್ಮದ್ ಆಜಂ ಹಾಗೂ ಮಹೀರ್ ಖಾನ್ ಎಂಬುವವರನ್ನು ಸಿಸಿಬಿ ಪೊಲೀಸರು ಬಂಧಿಸಿದ್ದರು. ಅವರಿಂದ ₹ 3 ಕೋಟಿ ಮೌಲ್ಯದ 19 ಐಷಾರಾಮಿ ಕಾರುಗಳನ್ನು ಜಪ್ತಿ ಮಾಡಿದ್ದರು. 'ಆರೋಪಿಗಳ ಬಳಿ ಶಾಸಕರೊಬ್ಬರ ವಾಹನದ ಪಾಸ್ ಸಿಕ್ಕಿತ್ತು. ಅದನ್ನು ಆಧರಿಸಿ ವಿಚಾರಣೆ ನಡೆಸಿದಾಗ, ಶಾಸಕನ ಆಪ್ತರೆಂದು ಹೇಳಿ ಜನರನ್ನು ವಂಚಿಸುತ್ತಿದ್ದ ಸಂಗತಿ ಗೊತ್ತಾಯಿತು' ಎಂದು ಸಿಸಿಬಿ ಮೂಲಗಳು ಹೇಳಿವೆ. 'ಕದ್ದ ಕಾರುಗಳನ್ನು ಆರೋಪಿಗಳು ರಾಜಕೀಯ ಮುಖಂಡರು ಹಾಗೂ ಹಲವರಿಗೆ ಮಾರಾಟ ಮಾಡಿದ್ದಾರೆ. ಆರೋಪಿ ನಸೀಬ್ ಪತ್ನಿ ಬ್ಯಾಂಕೊಂದರ ವ್ಯವಸ್ಥಾಪಕಿ ಆಗಿದ್ದಾರೆ. ಪ್ರಕರಣದ ತನಿಖೆ ಮುಂದುವರಿದಿದೆ' ಎಂದೂ ಮೂಲಗಳು ತಿಳಿಸಿವೆ.

ಸಂಗೀತ ನಿರ್ದೇಶಕನ ಮೇಲೆ ಹಲ್ಲೆ; ಪೊಲೀಸರಿಗೆ ಅನುಮಾನ

ಬೆಂಗಳೂರು: 'ನನ್ನ ಮೇಲೆ ದುಷ್ಕರ್ಮಿಗಳು ಹಲ್ಲೆ ಮಾಡಿದ್ದಾರೆ' ಎಂದು ಆರೋಪಿಸಿ ಸಂಗೀತ ನಿರ್ದೇಶಕ ಕಿರಣ್ ತೋಟಂಬೈಲ್ ಅವರು ರಾಜರಾಜೇಶ್ವರಿನಗರ ಠಾಣೆಗೆ ಮಾಹಿತಿ ನೀಡಿದ್ದು, ಘಟನೆ ಬಗ್ಗೆಯೇ ಪೊಲೀಸರು ಅನುಮಾನ ವ್ಯಕ್ತಪಡಿಸಿದ್ದಾರೆ.

ಈ ಬಗ್ಗೆ ಮಾತನಾಡಿರುವ ರಾಜರಾಜೇಶ್ವರಿನಗರ ಪೊಲೀಸರು, 'ಅವರ ಹೇಳಿಕೆಯಲ್ಲಿ ಸಾಕಷ್ಟು ಅನುಮಾನಗಳಿವೆ. ಭಾನುವಾರ ನಸುಕಿನಲ್ಲಿ ಮಾಹಿತಿ ನೀಡಿ ಹೋಗಿರುವ ಕಿರಣ್, ಸ್ಪಷ್ಟ ದೂರು ನೀಡಲು ರಾತ್ರಿಯಾದರೂ ಠಾಣೆಗೆ ಬಂದಿಲ್ಲ' ಎಂದರು.

ಅಮೆರಿಕದ ಕೆಲಸಕ್ಕೆ ಸಂದರ್ಶನ ಯುವಕನಿಗೆ ₹ 45 ಲಕ್ಷ ವಂಚನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಅಮೆರಿಕದಲ್ಲಿ ಕೆಲಸ ಕೊಡಿಸುವ ಆಮಿಷವೊಡ್ಡಿ ನಗರದ ಅಭ್ಯರ್ಥಿಯೊಬ್ಬರಿಂದ ₹ 45 ಲಕ್ಷ ಪಡೆದು ವಂಚಿಸಲಾಗಿದ್ದು, ಈ ಬಗ್ಗೆ ವೈಟ್‌ಫೀಲ್ಡ್ ವಿಭಾಗದ ಸೈಬರ್ ಕ್ರೈಂ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

'ದೊಡ್ಡನೆಕ್ಕುಂದಿ ನಿವಾಸಿಯಾಗಿರುವ ಯುವಕರೊಬ್ಬರು ವಂಚನೆ ಬಗ್ಗೆ ದೂರು ನೀಡಿದ್ದಾರೆ. ಆರೋಪಿಗಳು ಎನ್ನಲಾದ ಬಾಲಾಜಿ, ಕಾರ್ತಿಕ್, ಚಂದ್ರಕಾಂತ್ ಹಾಗೂ ಅಮಿತ್ ವಿರುದ್ಧ ಎಫ್‌ಐಆರ್ ದಾಖಲಿಸಿಕೊಳ್ಳಲಾಗಿದೆ' ಎಂದು ಪೊಲೀಸ್ ಮೂಲಗಳು ಹೇಳಿವೆ.

'ದೂರುದಾರನಿಗೆ 2019ರ ಮಾರ್ಚ್‌ನಲ್ಲಿ ಪರಿಚಯವಾಗಿದ್ದ ಆರೋಪಿಗಳು, ಅಮೆರಿಕದಲ್ಲಿ ಪ್ರತಿಷ್ಠಿತ ಕಂಪನಿಗಳಲ್ಲಿ ಕೆಲಸ ಕೊಡಿಸುವುದಾಗಿ ಆಮಿಷವೊಡ್ಡಿದ್ದರು. ವೀಸಾ ಹಾಗೂ ಕೆಲ ಶುಲ್ಕ ಪಾವತಿಸಲು ಲಕ್ಷಾಂತರ ರೂಪಾಯಿ ಖರ್ಚಾಗುವುದಾಗಿಯೂ ಆರೋಪಿಗಳು ಹೇಳಿದ್ದರು.'

'ಐಟಿಪಿಎಲ್‌ನಲ್ಲಿರುವ ಕಚೇರಿಯೊಂದರಲ್ಲಿ ದೂರುದಾರರ ಸಂದರ್ಶನ ನಡೆಸಿದ್ದ ಆರೋಪಿಗಳು, ಹುದ್ದೆಗೆ ಆಯ್ಕೆ ಆಗಿರುವುದಾಗಿ ತಿಳಿಸಿದ್ದರು. ಹಣ ಕೊಟ್ಟರೆ ನೇಮಕಾತಿ ಪತ್ರ ನೀಡುವುದಾಗಿ ಹೇಳಿದ್ದರು. ಅವರ ಮಾತು ನಂಬಿದ್ದ ದೂರುದಾರ, ಆರೋಪಿಗಳು ಹೇಳಿದ್ದ ಬ್ಯಾಂಕ್ ಖಾತೆಗೆ ಹಂತ ಹಂತವಾಗಿ ₹ 45 ಲಕ್ಷ ಹಾಕಿದ್ದರು. ಅದಾದ ನಂತರ ಆರೋಪಿಗಳು, ಯಾವುದೇ ಹುದ್ದೆ ನೇಮಕಾತಿ ಪತ್ರ ನೀಡಿಲ್ಲ. ಹಣವನ್ನೂ ವಾಪಸು ಕೊಡದೇ ನಾಪತ್ತೆಯಾಗಿದ್ದಾರೆ' ಎಂದೂ ಪೊಲೀಸ್ ಮೂಲಗಳು ತಿಳಿಸಿವೆ.

ಸಿದ್ಧಗಂಗಾ ಮಠದ ಬಳಿ ಹೊಂಡದಲ್ಲಿ ವಿದ್ಯಾರ್ಥಿ ಶವ

ತುಮಕೂರು: ಸಿದ್ಧಗಂಗಾ ಮಠದ ಹಿಂಭಾಗದಲ್ಲಿ ಇರುವ ರಾಮದೇವರ ಬೆಟ್ಟದ ಮೇಲಿನ ಹೊಂಡದಲ್ಲಿ ವಿದ್ಯಾರ್ಥಿ ಶವ ಭಾನುವಾರ ಪತ್ತೆಯಾಗಿದೆ.

ಸಿದ್ಧಗಂಗಾ ಮಠದಲ್ಲಿರುವ ಶಾಲೆಯಲ್ಲಿ 10ನೇ ತರಗತಿ ಓದುತ್ತಿದ್ದ ಗಗನ್ ಗೌಡ (16) ಮೃತಪಟ್ಟಿರುವ ಬಾಲಕ. ನೆಲಮಂಗಲ ತಾಲ್ಲೂಕು ಹೆಸರುಘಟ್ಟ ಸಮೀಪದ ಕಾಕೋಳ ಗ್ರಾಮದ ಪ್ರಕಾಶ್ ಎಂಬುವರ ಪುತ್ರನಾಗಿದ್ದು, ಕಳೆದ ನಾಲ್ಕು ವರ್ಷಗಳಿಂದ ಮಠದಲ್ಲೇ ಇದ್ದುಕೊಂಡು ವಿದ್ಯಾಭ್ಯಾಸ ಮಾಡುತ್ತಿದ್ದ.

ಜುಲೈ 16ರಿಂದ ತಮ್ಮ ಮಗ ನಾಪತ್ತೆಯಾಗಿದ್ದಾನೆ ಎಂದು ಕ್ಯಾತ್ಸಂದ್ರ ಠಾಣೆಗೆ ತಂದೆ ಪ್ರಕಾಶ್ ಶನಿವಾರ ದೂರು ನೀಡಿದ್ದರು.

ನಿಧನ ವಾರ್ತೆ

ಆರ್. ಜೈಕುಮಾರ್

ಬೆಂಗಳೂರು: 'ಪ್ರಜಾವಾಣಿ' ಹಾಗೂ 'ಡೆಕ್ಕನ್ ಹೆರಾಲ್ಡ್' ಪ್ರೊಡಕ್ಷನ್ ವಿಭಾಗದ ನೌಕರ ಆರ್. ಜೈಕುಮಾರ್ (36) ಅವರು ಅನಾರೋಗ್ಯದಿಂದ ಭಾನುವಾರ ನಿಧನರಾದರು.

ಅವರಿಗೆ ಪತ್ನಿ, ತಾಯಿ ಹಾಗೂ ಐದು ತಿಂಗಳ ಮಗುವಿದೆ.

ಹೆಬ್ಬಾಳದ ವಿದ್ಯುತ್ ಚಿತಾಗಾರದಲ್ಲಿ ಭಾನುವಾರ ಸಂಜೆ ಅಂತ್ಯಕ್ರಿಯೆ ನಡೆಸಲಾಯಿತೆಂದು ಕುಟುಂಬದವರು ತಿಳಿಸಿದ್ದಾರೆ.

ಸುದ್ದಿ 2 ನಿಮಿಷ

ಸಿಸಿಬಿ ಇನ್‌ಸ್ಪೆಕ್ಟರ್ ಸೋಗಿನಲ್ಲಿ ₹ 10 ಲಕ್ಷ ವಸೂಲಿ

ಬೆಂಗಳೂರು: ಸಿಸಿಬಿ ಇನ್‌ಸ್ಪೆಕ್ಟರ್ ಸೋಗಿನಲ್ಲಿ ರಿಯಲ್ ಎಸ್ಟೇಟ್ ಉದ್ಯಮಿಯೊಬ್ಬರನ್ನು ಬೆದರಿಸಿ ₹ 10 ಲಕ್ಷ ವಸೂಲಿ ಮಾಡಿದ್ದ ಆರೋಪದಡಿ ವೆಂಕಟೇಶ್ ಎಂಬಾತನನ್ನು ಜಯನಗರ ಪೊಲೀಸರು ಬಂಧಿಸಿದ್ದಾರೆ.

'ಜಯನಗರ ನಿವಾಸಿ ವೆಂಕಟೇಶ್, ಬಟ್ಟೆ ಅಂಗಡಿ ಇಟ್ಟುಕೊಂಡಿದ್ದ. ಜೆ.ಪಿ.ನಗರದ ನಿವಾಸಿಯಾಗಿರುವ ಉದ್ಯಮಿ ನಾರಾಯಣ್ ನೀಡಿದ್ದ ದೂರು ಆಧರಿಸಿ ಆತನನ್ನು ಬಂಧಿಸಲಾಗಿದೆ' ಎಂದು ಪೊಲೀಸ್ ಮೂಲಗಳು ಹೇಳಿವೆ.

'ದೂರುದಾರ ನಾರಾಯಣ್, 2015ರಲ್ಲಿ ತಾವರೆಕೆರೆ ಬಳಿ 11 ಎಕರೆ 20 ಗುಂಟೆ ಜಮೀನು ಖರೀದಿಸಿದ್ದರು ಎನ್ನಲಾಗಿದೆ. ಅದೇ ಆಸ್ತಿ ವಿಚಾರವಾಗಿ ನಾರಾಯಣ್ ಹಾಗೂ ಖಾಸಗಿ ಕಂಪನಿಯೊಂದರ ನಡುವೆ ವ್ಯಾಜ್ಯ ಉಂಟಾಗಿತ್ತು. ಅದನ್ನು ತಿಳಿದಿದ್ದ ಆರೋಪಿ ವೆಂಕಟೇಶ್, ಜಯನಗರದ ಹೋಟೆಲೊಂದಕ್ಕೆ ನಾರಾಯಣ್ ಅವರನ್ನು ಕರೆಸಿ ಮಾತನಾಡಿದ್ದ.'

'ನಾನು ಸಿಸಿಬಿ ಇನ್‌ಸ್ಪೆಕ್ಟರ್ ಶ್ರೀನಿವಾಸ್. ನೀವು ಖರೀದಿಸಿರುವ ಜಮೀನಿನ ವಿಚಾರವಾಗಿ ತನಿಖೆ ಮಾಡುತ್ತಿದ್ದೇನೆ. ನೀವು ಮೋಸದಿಂದ ಜಮೀನು ಖರೀದಿ ಮಾಡಿರುವುದು ಗೊತ್ತಾಗಿದೆ. ನಿಮ್ಮನ್ನು ಬಂಧಿಸಲು ಪುರಾವೆಗಳು ಇವೆ. ಬಂಧಿಸಬಾರದೆಂದರೆ ₹ 15 ಲಕ್ಷ ಕೊಡಿ' ಎಂದು ಆರೋಪಿ ಹೇಳಿದ್ದ. ಬಂಧನದ ಭೀತಿಗೆ ಒಳಗಾಗಿದ್ದ ನಾರಾಯಣ್, ಸ್ಥಳದಲ್ಲೇ ಆರೋಪಿಗೆ ₹ 50 ಸಾವಿರ ಕೊಟ್ಟಿದ್ದರು. ₹ 10 ಲಕ್ಷ ಕೊಡುವುದಾಗಿ ಒಪ್ಪಿಕೊಂಡಿದ್ದರು. ನಂತರ, ಹಂತ ಹಂತವಾಗಿ ಆರೋಪಿ ಖಾತೆಗೆ ಹಣ ಜಮೆ ಮಾಡಿದ್ದರು' ಎಂದೂ ಪೊಲೀಸ್ ಮೂಲಗಳು ಹೇಳಿವೆ.

1 ಕೆ.ಜಿ 84 ಗ್ರಾಂ ಅಫೀಮು ಜಪ್ತಿ

ಬೆಂಗಳೂರು: ಮಾಗಡಿ ರಸ್ತೆ ಠಾಣೆ ವ್ಯಾಪ್ತಿಯಲ್ಲಿ ಡ್ರಗ್ಸ್ ಮಾರಾಟ ಮಾಡುತ್ತಿದ್ದ ಆರೋಪದಡಿ ಸುಖದೇವ್ ಎಂಬಾತನನ್ನು ಪೊಲೀಸರು ಬಂಧಿಸಿದ್ದಾರೆ.

'ಆರೋಪಿ ಡ್ರಗ್ಸ್ ಮಾರಾಟ ಮಾಡಲು ಮಾಗಡಿ ರಸ್ತೆಗೆ ಶನಿವಾರ ಬಂದಿದ್ದ. ಮಾಹಿತಿ ಬರುತ್ತಿದ್ದಂತೆ ಕಾರ್ಯಾಚರಣೆ ನಡೆಸಿ ಆತನನ್ನು ಬಂಧಿಸಲಾಗಿದೆ. ಆತನಿಂದ 1 ಕೆ.ಜಿ 84 ಗ್ರಾಂ ಅಫೀಮು, ₹ 9 ಸಾವಿರ ನಗದು ಹಾಗೂ ಮೊಬೈಲ್ ಜಪ್ತಿ ಮಾಡಲಾಗಿದೆ' ಎಂದು ಪೊಲೀಸರು ಹೇಳಿದರು.

'ಆರೋಪಿ ಪೆಡ್ಲರೊಬ್ಬನಿಂದ ಅಫೀಮು ಖರೀದಿಸುತ್ತಿದ್ದ. ಅದನ್ನೇ ಚಿಕ್ಕ ಪೊಟ್ಟಣಗಳಲ್ಲಿ ತುಂಬಿ ಮಾರಾಟ ಮಾಡುತ್ತಿದ್ದ. ಕೆಲ ಕಾಲೇಜು ವಿದ್ಯಾರ್ಥಿಗಳು, ಕೆಲ ಕಂಪನಿಗಳ ಉದ್ಯೋಗಿಗಳು, ಕೆಲ ಕಾರ್ಮಿಕರು ಹಾಗೂ ಇತರರು ಆರೋಪಿ ಬಳಿ ಅಫೀಮು ಖರೀದಿಸುತ್ತಿದ್ದರು.'

'ಡ್ರಗ್ಸ್ ಮಾರಾಟದಲ್ಲಿ ಆರೋಪಿ ಜೊತೆ ಮತ್ತಷ್ಟು ಮಂದಿ ಭಾಗಿಯಾಗಿರುವ ಮಾಹಿತಿ ಇದೆ. ಅವರ ಪತ್ತೆಗೆ ಶೋಧ ನಡೆದಿದೆ' ಎಂದೂ ಪೊಲೀಸರು ತಿಳಿಸಿದರು.

ಜನಾನುರಾಗಿ ನಾಯಕ ಸಿ.ಟಿ.ರವಿ

ಪ್ರಕಾಶ್ ಶೇಷರಾಘವಾಚಾರ್

1994ರ ಮಾತು. ಆಗ ಸಿ.ಟಿ ರವಿ ಅವರು ಬಿಜೆಪಿ ಯುವಮೋರ್ಚಾದ ರಾಜ್ಯ ಕಾರ್ಯದರ್ಶಿಯಾಗಿ ಜವಾಬ್ದಾರಿ ಹೊತ್ತಿದ್ದರು. ಜೊತೆಗೆ ಚಿಕ್ಕಮಗಳೂರು ವಿಧಾನಸಭಾ ಕ್ಷೇತ್ರದ ಪ್ರಬಲ ನಾಯಕರಾಗಿದ್ದರು.

ಯಡಿಯೂರಪ್ಪ ಮತ್ತು ಅನಂತಕುಮಾರ್ ಜೋಡಿ ರಾಜ್ಯ ಬಿಜೆಪಿಯಲ್ಲಿ ಮೋಡಿ ಮಾಡಿದ್ದ ಕಾಲವದು. ಬಿಜೆಪಿ ರಾಜ್ಯ ರಾಜಕಾರಣದಲ್ಲಿ ಮುಖ್ಯವಾಹಿನಿಯ ಪಕ್ಷವಾಗಿ ಬದಲಾಗುತ್ತಿದ್ದ ಪರ್ವಕಾಲವೂ ಹೌದು. ಉತ್ತಮ ವಾಗ್ಮಿ ಹಾಗೂ ಆರ್‌ಎಸ್‌ಎಸ್ ಹಿನ್ನೆಲೆಯುಳ್ಳವರಾಗಿದ್ದ ರವಿ ಅವರು ಆ ಸಮಯದಲ್ಲಿ ಭರವಸೆಯ ಯುವ ನಾಯಕರೆಂದೇ ಹೆಸರು ಗಳಿಸಿದ್ದರು.

ಇವರ ತ್ವರಿತ ಬೆಳವಣಿಗೆಗೆ ಜಿಲ್ಲೆಯ ಪ್ರಮುಖ ಹೋರಾಟವು ಸಹಕಾರಿಯಾಯಿತು. ಚಿಕ್ಕಮಗಳೂರಿನಲ್ಲಿ ಬಿಜೆಪಿಯ ಬೆಳವಣಿಗೆಗೆ ದತ್ತ ಪೀಠ ಹೋರಾಟ ಬಹುದೊಡ್ಡ ಪಾತ್ರ ವಹಿಸಿದೆ. ಈ ಹೋರಾಟದಲ್ಲಿ ಮುಂಚೂಣಿಯಲ್ಲಿ ಅಂದು ಇದ್ದವರಲ್ಲಿ ಸಿ.ಟಿ.ರವಿ ಪ್ರಮುಖರು. ಕಾರ್ಕಳದ ವಿ.ಸುನೀಲ್ ಕುಮಾರ್, ಶೃಂಗೇರಿಯ ಜಿ.ಎನ್. ಜೀವರಾಜ್, ಮೇಲ್ಮನೆ ಉಪ ಸಭಾಪತಿ ಎಂ.ಕೆ. ಪ್ರಾಣೇಶ್ ಈ ಯುವ ತಂಡದ ಹೋರಾಟವು ಬಿಜೆಪಿಗೆ ಜಿಲ್ಲೆಯಲ್ಲಿ ಭದ್ರನೆಲೆಯನ್ನು ಒದಗಿಸಿದಲ್ಲದೆ ವೈಯಕ್ತಿಕವಾಗಿ ಬೆಳೆಯಲು ಇವರೆಲ್ಲರಿಗೂ ವರವಾಯಿತು.

ದತ್ತಾತ್ರೇಯ ಪೀಠದ ಹೋರಾಟವು ಚಿಕ್ಕಮಗಳೂರು ಕೇಂದ್ರೀಕೃತವಾಗಿದ್ದ ಕಾರಣ ರವಿಯವರಿಗೆ ಯುವಕರನ್ನು ಸಂಘಟಿಸಿ ದತ್ತ ಅಭಿಯಾನವನ್ನು ಯಶಸ್ವಿಗೊಳಿಸುವ ಸವಾಲಿನ ಕೆಲಸ ಹೆಗಲಿಗೆ ಬಂತು. ದೊರೆತ ಅವಕಾಶವನ್ನು ಸೂಕ್ತವಾಗಿ ಬಳಸಿಕೊಳ್ಳುವವರಿಗೆ ಜಯ ಕಟ್ಟಿಟ್ಟ ಬುತ್ತಿ. ರವಿಯವರ ವಿಷಯದಲ್ಲಿ ಆಗಿದ್ದು ಕೂಡಾ ಇದೇ.

90ರ ದಶಕದಲ್ಲಿ ದತ್ತ ಪೀಠ ಹೋರಾಟವು ಉತ್ತುಂಗಕ್ಕೆ ತಲುಪಿತು. ದತ್ತ ಮಾಲೆ, ಶೋಭಾಯಾತ್ರೆ, ಅನುಸೂಯಾ ಜಯಂತಿ ಮುಂತಾದ ವಿನೂತನ ಆಚರಣೆಯು ದತ್ತಪೀಠ ಹೋರಾಟಕ್ಕೆ ಹೊಸ ಮೊನಚು ನೀಡಿತ್ತು. ಈ ಹೋರಾಟಗಳ ಮುಂಚೂಣಿಯಲ್ಲಿದ್ದ ರವಿ ಯುವಕರ ಕಣ್ಮಣಿಯಾಗಿ ಜನಾನುರಾಗವನ್ನು ಪಡೆದರು. ಅವರಿಗೆ ರಾಜ್ಯಾದ್ಯಂತ ಅಸಂಖ್ಯಾತ ಅಭಿಮಾನಿಗಳು ದತ್ತವಾದರು.

ರವಿಯವರು ರಾಜ್ಯ ಯುವಮೋರ್ಚಾ ಪ್ರಧಾನ ಕಾರ್ಯದರ್ಶಿಯಾಗಿದ್ದ ವೇಳೆ ನಾನು ಬೆಂಗಳೂರು ನಗರ ಯುವ ಮೋರ್ಚಾ ಅಧ್ಯಕ್ಷನಾಗಿದ್ದ ಕಾರಣ ಅವರೊಡನೆ ನನಗೆ ನಿಕಟ ಸಂಪರ್ಕ ಬೆಳೆಯಿತು. ಅವರನ್ನು ಬಹು ಹತ್ತಿರದಿಂದ ನೋಡಲು ನನಗೆ ಸಾಧ್ಯವಾಯಿತು.

ರವಿ ಯಾವುದೇ ಜನಪರವಾದ ವಿಚಾರವನ್ನು ಪ್ರಸ್ತಾಪಿಸಲು ತುದಿಗಾಲಿನಲ್ಲಿ ನಿಲ್ಲುತ್ತಿದ್ದರು. ಯೌವನದ ಬಿಸಿ ರಕ್ತ ಅನ್ಯಾಯದ ವಿರುದ್ಧ ಸಿಡಿದೇಳುವಂತೆ ಮಾಡುತ್ತಿತ್ತು. ವಿರೋಧಪಕ್ಷದಲ್ಲಿ ಇದ್ದ ಸಂದರ್ಭದಲ್ಲಿ ಸರ್ಕಾರದ ವಿರುದ್ಧ ಯಾವುದೇ ವಿಷಯವಾಗಲೀ ಅಥವಾ ಹಗರಣವಾಗಲೀ ಇದ್ದರೆ ಅವನ್ನು ಪ್ರಸ್ತಾಪಿಸುವುದರಲ್ಲಿ ಸದಾ ಮುಂದಿದ್ದು, ಅದನ್ನು ತಾರ್ಕಿಕ ಅಂತ್ಯಕ್ಕೆ ಕೊಂಡ್ಯೊಯ್ಯುತ್ತಿದ್ದರು.

2005ರಲ್ಲಿ ಶಾಸಕರಾಗಿದ್ದಾಗ ಚಿಕ್ಕಮಗಳೂರಿನ ಹಲವಾರು ಸಮಸ್ಯೆಗಳನ್ನು ಸರ್ಕಾರದ ಗಮನ ಸೆಳೆಯಲು 285 ಕಿ.ಮೀ. ಯಶಸ್ವಿ ಪಾದಯಾತ್ರೆ ಕೈಗೊಂಡು ತಮ್ಮ ಜನಪರ ಕಾಳಜಿ ಮತ್ತು ಬದ್ಧತೆ ತೋರಿಸಿದ್ದರು.

1994ರಲ್ಲಿಯೇ ಬಿ.ಎಸ್.ಯಡಿಯೂರಪ್ಪನವರ ಜೊತೆ ಶಿವಮೊಗ್ಗದಿಂದ ಬೆಂಗಳೂರಿಗೆ 18 ದಿನಗಳ ಪಾದಯಾತ್ರೆ ಕೈಗೊಂಡು ಗಮನ ಸೆಳೆದಿದ್ದ ಯುವ ನಾಯಕ. ತಮ್ಮ ಕಂಚಿನ ಕಂಠದ ವಾಕ್ಚಾತುರ್ಯದಿಂದ ಬಹುಬೇಗ ಜನನಾಯಕನಾಗಿ ರಾಜ್ಯದೆಲ್ಲೆಡೆ ಕಾರ್ಯಕರ್ತರಲ್ಲಿ ಸ್ಫೂರ್ತಿ ತುಂಬಲು ಅನೇಕ ಕಾರ್ಯಕ್ರಮಗಳಿಗೆ ಬೇಡಿಕೆ ಪಡೆದು ಕೊಂಡಿದ್ದರು.

ಜಿಲ್ಲೆಯ ಮತ್ತು ರಾಜ್ಯದ ಸಮಸ್ಯೆಗಳನ್ನು ಸರ್ಕಾರದ ಗಮನಕ್ಕೆ ತಂದು ಪರಿಹಾರ ಕಂಡುಕೊಳ್ಳಲು ರವಿಯವರು 19 ಪಾದಯಾತ್ರೆಗಳನ್ನು ಕೈಗೊಂಡಿರುವುದು ದಾಖಲೆ.

ಮೊದಲ ಬಾರಿ ಚುನಾಯಿತರಾಗಿ ಶಾಸಕರಾದ ವೇಳೆ ರವಿಯವರ ಮೇಲೆ 64 ಕೇಸುಗಳು ದಾಖಲಾಗಿದ್ದವು. ದಿನನಿತ್ಯ ಜಿಲ್ಲೆಯಲ್ಲಿ ಹೋರಾಟಗಳನ್ನು ಮಾಡುತ್ತಿದ್ದುದರಿಂದ ಅವರ ಮೇಲೆ ಒಂದಲ್ಲ ಒಂದು ಕೇಸ್ ಹಾಕಲಾಗುತ್ತಿತ್ತು.

ದತ್ತಪೀಠ ಚಳವಳಿಯ ವೇಳೆ ಬಂಧಿತರಾಗಿ ಮಂಡ್ಯ ಜೈಲಿನಲ್ಲಿ ಇಡಲಾಗಿತ್ತು. ಶಾಸಕಗಿರಿ ಚಿನ್ನದ ತಟ್ಟೆಯಲ್ಲಿ ಬರಲಿಲ್ಲ. ಬದಲಿಗೆ ಹೋರಾಟ ಜೈಲುವಾಸ ಅನುಭವಿಸಿ ಪಡೆದಿದ್ದು.

ಪ್ರಾಯಶಃ ನಾನು ರಾಜ್ಯ ಮಾಧ್ಯಮ ಸಂಯೋಜಕನಾಗಿ ನೂರಕ್ಕೂ ಹೆಚ್ಚು ಪತ್ರಿಕಾಗೋಷ್ಠಿಯಲ್ಲಿ ಅವರೊಂದಿಗೆ ಭಾಗಿಯಾಗಿರಬಹುದು. ಕರಾರುವಕ್ಕಾದ ಮಾತುಗಳು ವಿವಾದಕ್ಕೆ ಆಸ್ಪದವೇ ಇಲ್ಲದಂತೆ ವಿಷಯ ಮಂಡನೆ ಮತ್ತು ಪ್ರತಿ ಪತ್ರಿಕಾಗೋಷ್ಠಿಯಲ್ಲಿ ಮರುದಿನ ಪತ್ರಿಕೆಯ ತಲೆಬರಹಕ್ಕೆ ಬೇಕಾದ ಪಂಚಿಂಗ್ ಹೇಳಿಕೆ ಸಹಜವಾಗಿ ನೀಡುವ ಜಾಣ್ಮೆ ರವಿಯವರದು.

ಪ್ರಸ್ತುತಿ: ಪಿ.ವಿ. ಬ್ರ್ಯಾಂಡ್ ಸ್ಪಾಟ್

ವಿನಾಕಾರಣ ಯಾರಿಗೂ ಅದರಲ್ಲೂ ಕಾರ್ಯಕರ್ತರಿಗೆ ತೊಂದರೆಯಾದರೆ ಅವರೊಂದಿಗೆ ನಿಲ್ಲುವುದರಲ್ಲಿ ಸಿ.ಟಿ. ರವಿ ಮೊದಲಿಗರು ಎಂದರೆ ಅತಿಶಯೋಕ್ತಿಯಲ್ಲ. ಈ ಕಾರಣಕ್ಕಾಗಿಯೇ ರವಿಯಣ್ಣ ಎಂದು ಕಾರ್ಯಕರ್ತರು ಸದಾ ಮುತ್ತಿಕೊಳ್ಳುವುದು.

2011ರಲ್ಲಿ ಪ್ರಮೋದ್ ಮುತಾಲಿಕ್ ವಿರುದ್ಧ ಬಿಜೆಪಿ ಸರ್ಕಾರದಲ್ಲಿ ವಿವಿಧ ಕಾರಣಗಳಿಗೆ ಕೇಸುಗಳನ್ನು ದಾಖಲಿಸಿ ಅವರ ಬಂಧನವು ಆಗಿತ್ತು. ಪೊಲೀಸರು ಅತಿರೇಕದಿಂದ ವರ್ತಿಸ ತೊಡಗಿದ್ದರು. ನಾನು ಈ ವಿಷಯ ಪ್ರಸ್ತಾಪಿಸಿ ನಮ್ಮ ಸರ್ಕಾರದಲ್ಲಿ ಅವರ ವಿರುದ್ಧ ಕೈಗೊಳ್ಳುತ್ತಿರುವ ಕ್ರಮ ವಿಪರೀತವಾಗಿದೆ. ಇದು ಸರಿಯಲ್ಲ ಎಂದು ಹೇಳಿದ ಕೂಡಲೇ ರವಿ ಸಂಬಂಧಪಟ್ಟವರಿಗೆ ಗಟ್ಟಿ ಧ್ವನಿಯಲ್ಲಿ ಮಾತನಾಡಿ ಕಿರುಕುಳ ನಿಲ್ಲಬೇಕು ಎಂದು ತಿಳಿಸಿ ಪೊಲೀಸ್ ವರ್ತನೆಗೆ ಕಡಿವಾಣ ಹಾಕಿದರು.

ಸಿದ್ಧಾಂತದೊಂದಿಗೆ ಎಂದೂ ರಾಜಿ ಮಾಡಿಕೊಳ್ಳಲಿಲ್ಲ ಮತ್ತು ಅಧಿಕಾರಕ್ಕಾಗಿ ಅಡ್ಡದಾರಿ ಹಿಡಿಯದ ಮಾದರಿ ಕಾರ್ಯಕರ್ತ ರವಿಯವರು. ರಾಷ್ಟ್ರೀಯ ಸ್ವಯಂಸೇವಕ ಸಂಘದ ದಟ್ಟ ಪ್ರಭಾವ ಇದ್ದ ಕಾರಣ ದೇಶ ಮೊದಲು ಎಂಬ ವಿಚಾರವನ್ನು ಗಾಢವಾಗಿ ಮೈಗೂಡಿಸಿಕೊಂಡಿದ್ದರು.

ಸೈದ್ಧಾಂತಿಕ ಬದ್ಧತೆಯಲ್ಲಿ ರಾಜಿ ಇಲ್ಲದ ನಿಲುವು. ಎಂತಹ ಕಠಿಣ ಪರಿಸ್ಥಿತಿಯಲ್ಲಿಯೂ ತಮ್ಮ ಅದ್ಭುತ ವಾದದಿಂದ ಮೇಲುಗೈ ಸಾಧಿಸುವ ಬುದ್ಧಿವಂತಿಕೆ ಮತ್ತು ಬೌದ್ಧಿಕ ಪ್ರಬುದ್ಧತೆ ರವಿಗೆ ಹಾಸುಹೊಕ್ಕಾಗಿದೆ.

1994ರ ವಿಧಾನಸಭಾ ಚುನಾವಣೆಯಲ್ಲಿಯೇ ಅವರು ಪ್ರಬಲ ಆಕಾಂಕ್ಷಿಯಾಗಿದ್ದರು. ಆಗ ಅವರ ವಯಸ್ಸು ಕೇವಲ 27. ಆದರೆ, ಯಾರೋ ಪೊಲೀಸ್ ಹಿರಿಯ ಅಧಿಕಾರಿಯೊಬ್ಬರ ಒತ್ತಡದ ಕಾರಣಕ್ಕಾಗಿ ಶ್ರೀದೇವಿ ಎಂಬುವವರಿಗೆ ಟಿಕೆಟ್ ನೀಡಲಾಗಿತ್ತು.

ಅಯೋಧ್ಯ ರಾಮ ಮಂದಿರ ನಿರ್ಮಾಣ ಹೋರಾಟದಲ್ಲಿ ಭಾಗಿಯಾಗಿ ಡಿಸೆಂಬರ್ 6ರಂದು ಅಯೋಧ್ಯೆಯಲ್ಲಿ ಕರಸೇವೆಯಲ್ಲಿ ಭಾಗಿಯಾಗಿದ್ದು ರವಿಯವರ ಪ್ರಕಾರ ಅವರ ಸಾರ್ವಜನಿಕ ಜೀವನದ ಮಹತ್ತರ ಕ್ಷಣಗಳು.

ಹುಬ್ಬಳ್ಳಿಯ ರಾಷ್ಟ್ರ ಧ್ವಜಾರೋಹಣ ಹೋರಾಟದಲ್ಲಿ ಯುವ ಮೋರ್ಚಾ ಕಾರ್ಯಕರ್ತರನ್ನು ಉತ್ತೇಜಿಸಿ ದೊಡ್ಡ ಸಂಖ್ಯೆಯಲ್ಲಿ ಪಾಲ್ಗೊಳ್ಳಲು ಶ್ರಮಪಟ್ಟ ಸಾರ್ಥಕತೆ ತಮಗಿದೆ ಎಂದು ಅವರು ಹೇಳುತ್ತಿದ್ದರು.

1995ರಲ್ಲಿ ರಾಜ್ಯ ಬಿಜೆಪಿ ಯುವ ಮೋರ್ಚಾ ಅಧ್ಯಕ್ಷರಾಗುವ ಅವಕಾಶವಿತ್ತು. ಆದರೆ, ರಾಜಕೀಯ ಲೆಕ್ಕಾಚಾರದಲ್ಲಿ ಆ ಬಾರಿ ರಘುನಾಥ ಮಲ್ಕಾಪುರೆ ಅಧ್ಯಕ್ಷರಾಗುತ್ತಾರೆ. ಈ ಬಗ್ಗೆ ಆ ದಿನಗಳಲ್ಲಿ ನಾನು ರವಿಯವರಿಗೆ ಕೂಡಲೇ ಅನಂತ್ ಕುಮಾರ್ ಹಾಗೂ ಯಡಿಯೂರಪ್ಪನವರಿಗೆ ಮಾತನಾಡು ಅಧ್ಯಕ್ಷ ಸ್ಥಾನ ಕೈತಪ್ಪಿ ಹೋಗುತ್ತಿದೆ ಎಂದು ಮುಂಚಿತವಾಗಿ ಎಚ್ಚರಿಸಿದ್ದೆ. ಆದರೆ, ಪಕ್ಷದ ತೀರ್ಮಾನದಂತೆ ಚಿಕ್ಕಮಗಳೂರು ಜಿಲ್ಲಾ ಪ್ರಧಾನ ಕಾರ್ಯದರ್ಶಿಯಾಗಿ ಕೆಲಸ ಮಾಡಿದರು. ಚಿಕ್ಕಮಗಳೂರು ಕ್ಷೇತ್ರದಿಂದ ಶಾಸಕನಾಗುವ ಗುರಿ ಇದ್ದ ಕಾರಣ ಕ್ಷೇತ್ರದಲ್ಲಿ ತಮ್ಮ ಛಾಪು ಮೂಡಿಸಲು ಇದರಿಂದ ಹೆಚ್ಚಿನ ಅನುಕೂಲವೇ ಆಗಿತ್ತು.

1999ರಲ್ಲಿ ಮೊದಲ ಬಾರಿ ವಿಧಾನಸಭೆಗೆ ಸ್ಪರ್ಧೆ ಮಾಡಿದರು. ಕಾಂಗ್ರೆಸ್ಸಿನ ಸಗೀರ್ ಅಹಮ್ಮದ್ ವಿರುದ್ಧ ಕೇವಲ 850 ಮತಗಳ ಅಂತರದಿಂದ ಸೋತಿದ್ದರು. ಆದರೆ, ಮುಂದಿನ ದಿನಗಳಲ್ಲಿ ಸತತ ಹೋರಾಟ, ಸಂಘಟನೆಯ ಮೂಲಕ ಕ್ಷೇತ್ರದಲ್ಲಿ ಗಟ್ಟಿಯಾಗಿ ಬೇರೂರಿದರು.

ರವಿಯವರು ಸುದ್ದಿವಾಹಿನಿಗಳ ಚರ್ಚೆಯಲ್ಲಿ ಭಾಗವಹಿಸುತ್ತಿದ್ದರು. ಅವರ ಜನಪ್ರಿಯತೆ ಹೆಚ್ಚಲು ಇದರಿಂದ ಅನುಕೂಲವಾಯಿತು. ತಮ್ಮ ತರ್ಕಬದ್ಧ ವಾದ ಸರಣಿಯಿಂದ ಎದುರಾಳಿಗಳ ಬಾಯಿ ಮುಚ್ಚಿಸುತ್ತಿದ್ದರು. ಎಂತಹ ಸಂದಿಗ್ಧ ವೇಳೆಯಲ್ಲಿಯೂ ಪಕ್ಷವನ್ನು ಸಮರ್ಥಿಸಿಕೊಳ್ಳುವ ಜಾಣ್ಮೆ ಅವರಿಗೆ ಸಹಜವಾಗಿ ಒಲಿದಿತ್ತು. ಎಲ್ಲ ಸುದ್ದಿವಾಹಿನಿಗಳಿಗೂ ಬೇಕಾಗಿದ್ದ ವಕ್ತಾರ ಅವರಾಗಿದ್ದರು.

ದತ್ತಪೀಠ ಹೋರಾಟ ಕಾವೇರುತ್ತಿದ್ದ ಹಾಗೆ ಜಿಲ್ಲೆಯ ರಾಜಕೀಯ ವಾತಾವರಣ ಕೇಸರಿಮಯವಾಗತೊಡಗಿತ್ತು. ಶ್ರೀಕಂಠಪ್ಪ ಅವರು 1998ರಿಂದ ಲೋಕಸಭೆಗೆ ಆಯ್ಕೆಯಾಗುತ್ತಿದ್ದರು. 2004ರ ತರುವಾಯ ವಿಧಾನಸಭೆಗೂ ಬಿಜೆಪಿ ಗೆಲುವು ಸಾಧಿಸಲು ಆರಂಭಿಸಿತ್ತು.

2004ರ ಚುನಾವಣೆಯಲ್ಲಿ ರವಿ 30 ಸಾವಿರಕ್ಕೂ ಅಧಿಕ ಮತಗಳಿಂದ ಗೆದ್ದಿದ್ದರು. ಅಣ್ಣಾ ಈ ಬಾರಿ ನೀವು ಗೆದ್ದರೆ ನಾನು ನಿಮ್ಮ ಜೊತೆ ಧರ್ಮಸ್ಥಳಕ್ಕೆ ಕಾಲ್ನಡಿಗೆಯಲ್ಲಿ ಬರುವುದಾಗಿ ಹರಸಿಕೊಂಡಿದ್ದೇನೆ ಎಂದು ಅಭಿಮಾನಿಯೊಬ್ಬ ಹೇಳಿದ್ದ. ಧರ್ಮಸ್ಥಳ ಮಂಜುನಾಥನ ಪರಮಭಕ್ತರಾದ ರವಿ ಕೊಂಚವು ಬೇಸರಿಸದೆ ಸಮಯ ಹೊಂದಿಸಿಕೊಂಡು ನೂರಾರು ಕಾರ್ಯಕರ್ತರ ತಂಡದೊಂದಿಗೆ ಕಾಲ್ನಡಿಗೆಯಲ್ಲಿ ಮಂಜುನಾಥನ ದರ್ಶನ ಮಾಡಿ ಬಂದಿದ್ದರು.

ಅವರು ವೈಚಾರಿಕ ನೆಲೆಗಟ್ಟಿನ ಮೇಲೆ ಜಿಲ್ಲೆಯಲ್ಲಿ ಪಕ್ಷ ಕಟ್ಟಲು ಒತ್ತು ನೀಡಿದ್ದರು. ಹೀಗಾಗಿ 2012ರಲ್ಲಿ ಬಿಜೆಪಿ ಮತ್ತು ಕೆಜೆಪಿಯಾಗಿ ಇಬ್ಭಾಗವಾದರೂ ಅದರ ಪರಿಣಾಮ ಚಿಕ್ಕಮಗಳೂರಿನಲ್ಲಿ ಬೀರಲಿಲ್ಲ.2013ರ ವಿಧಾನಸಭೆ ಚುನಾವಣೆಯಲ್ಲಿ ಸಿ.ಟಿ.ರವಿ ಮತ್ತೊಮ್ಮೆ ದೊಡ್ಡ ಅಂತರದಿಂದ ಜಯ ಸಾಧಿಸಿದ್ದರು.

ನಮ್ಮ ಕಾರ್ಯಕರ್ತರು ವೈಯಕ್ತಿಕ ಹಿತಾಸಕ್ತಿಗಿಂತ ಪಕ್ಷ ಮುಖ್ಯ ಎಂಬ ಸಂಸ್ಕಾರ ಮೈಗೂಡಿಸಿಕೊಂಡಿದ್ದಾರೆ. ಹೀಗಾಗಿಯೇ ತಾನು ಆಯ್ಕೆಯಾಗಿ ಬಂದಿರುವುದಾಗಿ ಅವರು ಆಗ ಹೇಳಿದ್ದರು. ತಮ್ಮ ಕ್ಷೇತ್ರದ ಕಾರ್ಯಕರ್ತರೊಂದಿಗೆ ಅವರ ಕಷ್ಟ ಸುಖದಲ್ಲಿ ಭಾಗಿಯಾಗುವ ಗುಣ ಮತ್ತು ಜಿಲ್ಲೆಯ ಹಲವು ಸ್ತರದ ಅಧಿಕಾರವನ್ನು ಕಾರ್ಯಕರ್ತರಿಗೆ ನೀಡುವ ಪರಿಪಾಠ ಅವರ ರಾಜಕೀಯ ಬೆಳವಣಿಗೆಗೆ ಕಾರಣವಾಗಿದೆ.

ಚಿಕ್ಕಮಗಳೂರಿನ ಮತ್ತೊಂದು ವಿಶೇಷವೆಂದರೆ ಪಂಚಾಯಿತಿಯಿಂದ ಹಿಡಿದು ಪಾರ್ಲಿಮೆಂಟ್ ವರೆಗೆ ಬಿಜೆಪಿಯ ಹಿಡಿತವಿರುವುದು ಮತ್ತು ಡಿಸಿಸಿ ಬ್ಯಾಂಕ್ ನಲ್ಲಿಯೂ ಬಿಜೆಪಿಯದೇ ಪಾರುಪತ್ಯ.

ಒಂದು ಕಾಲದಲ್ಲಿ ಚಿಕ್ಕಮಗಳೂರು ಜಿಲ್ಲೆಯಲ್ಲಿ ಕಮ್ಯುನಿಷ್ಟರ ಪ್ರಭಾವವಿತ್ತು. ನಂತರ ಕಾಂಗ್ರೆಸ್ ಭದ್ರಕೋಟೆಯಾಯಿತು. ಜೆಡಿ(ಎಸ್) ಕೂಡ ತನ್ನದೇ ಪ್ರಭಾವ ಹೊಂದಿತ್ತು. 1978ರಲ್ಲಿ ಸಂಸತ್ತಿಗೆ ಪುನರಾಯ್ಕೆ ಬಯಸಿ ಇಂದಿರಾ ಗಾಂಧಿಯವರು ಇಲ್ಲಿಂದ ಸ್ಪರ್ಧೆ ಮಾಡಿದ್ದು ಇತಿಹಾಸದ ಪುಟದಲ್ಲಿ ದಾಖಲಾಗಿತ್ತು.

ಈ ಜಿಲ್ಲೆ ಕಳೆದ ಎರಡು ದಶಕಗಳಿಂದ ಬಿಜೆಪಿಯ ಭದ್ರಕೋಟೆಯಾಗಿದೆ. 91ರಿಂದ ಸತತವಾಗಿ ಲೋಕಸಭೆಗೆ ಬಿಜೆಪಿ ಅಭ್ಯರ್ಥಿಗಳು ಆಯ್ಕೆಯಾಗುತ್ತಿರುವುದು ಸಂಘಟನೆಯ ಪ್ರಾಬಲ್ಯವನ್ನು ತೋರಿಸುತ್ತದೆ ಎಂದು ರವಿ ಹೆಮ್ಮೆಪಡುತ್ತಾರೆ.

ಸಗೀರ್ ಅಹಮದ್, ಧರ್ಮೇಗೌಡ, ಭೋಜೇಗೌಡ ಮತ್ತು ಬಿ.ಎಲ್.ಶಂಕರ್ ಅವರಂತಹ ಪ್ರಬಲ ಅಭ್ಯರ್ಥಿಗಳ ವಿರುದ್ಧ ಚುನಾವಣೆ ಎದುರಿಸಿ ವಿಜಯಶಾಲಿಯಾಗಿ ಜಿಲ್ಲೆಯಲ್ಲಿ ತಮ್ಮದೇ ಛಾಪು ಮೂಡಿಸಿರುವ ಹೆಗ್ಗಳಿಕೆ ಸಿ.ಟಿ.ರವಿ ಅವರದ್ದು.

ಈ ಎಲ್ಲದರ ನಡುವೆಯೂ ತಮ್ಮ ಸಂವೇದನಾಶೀಲತೆ ಉಪಕಾರ ಸ್ಮರಣೆಯನ್ನು ಕಳೆದುಕೊಳ್ಳದಿರುವುದು ಪ್ರಶಂಸನೀಯ ಗುಣ. ಇವರ ತಂದೆಯವರು 30 ವರ್ಷದ ಹಿಂದೆ ಅವರ ಸ್ನೇಹಿತರು ಜಾಮೀನು ಪಡೆಯಲು ₹5 ಸಾವಿರ ಕೊಡಿಸಿದ್ದರು. ಆದರೆ, ಅವರು ಹಿಂದಿರುಗಿಸಿರುವುದಿಲ್ಲ. ತಾಯಿಯವರಿಂದ ಈ ಮಾಹಿತಿ ತಿಳಿದ ಮೇಲೆ ಯಾರಿಂದ ಹಣ ಕೊಡಿಸಿದ್ದರೋ ಅವರ ಮನೆಗೆ ಹೋಗಿ ₹1 ಲಕ್ಷ ತಲುಪಿಸಿ ಬಂದಿದ್ದರು. ಆ ವಯೊವೃದ್ಧರಿಗೆ ತಾವು ಇಂತಹವರಿಗೆ ಹಣ ಕೊಟ್ಟಿದ್ದೆ ಎಂಬುದೇ ಮರೆತು ಹೋಗಿತ್ತು.

ಪ್ರಕಾಶ್ ಶೇಷರಾಘವಾಚಾರ್

ಸಚಿವ ಸ್ಥಾನವಾ? ಪಕ್ಷದ ಜವಾಬ್ದಾರಿಯಾ?

ಎಂಬ ಪ್ರಶ್ನೆ ಎದುರಾದಾಗ ಕ್ಷಣಮಾತ್ರವು ಯೋಚಿಸದೆ ಸಚಿವ ಸ್ಥಾನಕ್ಕೆ ರಾಜೀನಾಮೆ ಕೊಟ್ಟು ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಜವಾಬ್ದಾರಿ ಹೊತ್ತುಕೊಂಡಿದ್ದಾರೆ. ಹಿಂದಿ ಮತ್ತು ಇಂಗ್ಲಿಷ್ ಬರದಿದ್ದವರು ಹೇಗೆ ಕೆಲಸ ಮಾಡಲು ಸಾಧ್ಯ ಎಂದು ಕುಹಕವಾಡಿದವರಿಗೆ ತಕ್ಕ ಉತ್ತರ ನೀಡಿದ್ದಾರೆ. ಕಡಿಮೆ ಅವಧಿಯಲ್ಲಿ ಅವರು ಎರಡು ಭಾಷೆಗಳನ್ನು ಕಲಿತಿದ್ದಾರೆ. ಕಲಿಕೆಯ ತುಡಿತವಿರುವ ಅವರು ಮುಕ್ತ ವಿಶ್ವವಿದ್ಯಾಲಯದ ಮೂಲಕ ಎಂ.ಎ.ಪದವಿ ಪಡೆದಿದ್ದಾರೆ. ಈಗ ಪಿಎಚ್.ಡಿ ಪದವಿಗಾಗಿ ಪ್ರಯತ್ನ ಸಾಗಿದೆ.

ಕರ್ನಾಟಕದ ಇಬ್ಬರು ದೈತ್ಯ ಪ್ರತಿಭೆಗಳ ಜೊತೆಗೆ ಯುವ ಪ್ರತಿಭೆಯೊಂದು ರಾಷ್ಟ್ರ ಮಟ್ಟದಲ್ಲಿ ಛಾಪು ಮೂಡಿಸುತ್ತಿರುವುದು ಖುಷಿಯ ವಿಷಯ. ಇವರು ಪಕ್ಷ ಸಂಘಟನೆಗೂ ತಮ್ಮನ್ನು ಅರ್ಪಿಸಿಕೊಂಡಿದ್ದಾರೆ. ಇತ್ತೀಚಿನ ವರ್ಷಗಳಲ್ಲಿ ರಾಷ್ಟ್ರ ರಾಜಕಾರಣದಲ್ಲಿ ರಾಜ್ಯದ ಮೂವರು ವ್ಯಕ್ತಿಗಳು ಯಾವುದೇ ಪಕ್ಷದಿಂದ ಈ ಎತ್ತರಕ್ಕೆ ಏರಿದವರು ಕಂಡಿರಲಿಲ್ಲ. ಮುಂದಿನ ದಿನಗಳಲ್ಲಿ ಕರ್ನಾಟಕದ ಪ್ರತಿಭೆಗಳು ಮುಗಿಲೆತ್ತರ ಬೆಳೆದು ರಾಷ್ಟ್ರ ರಾಜಕಾರಣದಲ್ಲಿ ತಮ್ಮ ಪ್ರಭಾವ ಬೀರುವ ಆಶಾದಾಯಕ ಬೆಳವಣಿಗೆ ಕಾಣಬಹುದು ಎಂದರೆ ಉತ್ಪ್ರೇಕ್ಷೆಯಾಗದು.

ರವಿ ಇಂದು ತಮ್ಮ ರಾಜಕೀಯ ಪಯಣದಲ್ಲಿ ಮಹತ್ತರವಾದ ಘಟ್ಟ ತಲುಪಿದ್ದಾರೆ. ಪಕ್ಷ ಇವರಿಗೆ ಬಹುದೊಡ್ಡ ಅವಕಾಶ ನೀಡಿದೆ. ಇದನ್ನು ಸಮರ್ಪಕವಾಗಿ ಬಳಸಿಕೊಂಡು ಭರವಸೆಯ ನಾಯಕತ್ವ ನೀಡುವ ಗುರುತರ ಜವಾಬ್ದಾರಿ ಇವರ ಮೇಲಿದೆ. ಅದರ ನಿರೀಕ್ಷೆಯಲ್ಲಿ ಇವರ ಲಕ್ಷಾಂತರ ಅಭಿಮಾನಿಗಳು ಕೂಡಾ ಕಾತರದಿಂದ ಕಾಯುತ್ತಿದ್ದಾರೆ. ತಮ್ಮ ಹೊಣೆಗಾರಿಕೆಯನ್ನು ಚೆನ್ನಾಗಿ ಬಲ್ಲವರಾಗಿ ಅತ್ಯಂತ ಭರವಸೆಯ ನಡೆಯನ್ನು ಮುಂದಿಟ್ಟು ಸಾಗುತ್ತಿರುವ ರವಿಯವರು ರಾಜಕೀಯದ ಹೊಸ ಮಜಲು ಏರಲಿ ಎಂಬುದು ಎಲ್ಲರ ಹಾರೈಕೆ.



ಚಿಕ್ಕಮಗಳೂರು ತಾಲ್ಲೂಕಿನ ಕದ್ರಿಮಿದ್ರಿ ಬಳಿ ವೈದ್ಯಕೀಯ ಕಾಲೇಜು ಕಟ್ಟಡ ನಿರ್ಮಾಣಕ್ಕೆ ಗುರುತಿಸಿರುವ ಜಾಗವನ್ನು ಸಚಿವ ಸಿ.ಟಿ.ರವಿ ಮತ್ತು ಅಧಿಕಾರಿಗಳು ಶುಕ್ರವಾರ ಪರಿಶೀಲನೆ ಮಾಡಿದರು.

ದಾಸರಹಳ್ಳಿ ಕ್ಷೇತ್ರದ ಬೆಲ್ಮಾರ್ ಲೇಔಟ್ ನಿವಾಸಿಗಳಿಗೆ ಮಳೆಗಾಲದಲ್ಲಿ ಅರೆನಿದ್ರೆ

ಮೋಡ ಆವರಿಸುತ್ತಲೇ ಶುರುವಾಗುತ್ತದೆ ನಡುಕ!

• ವಿಜಯಕುಮಾರ್ ಎಸ್.ಕೆ.

ಬೆಂಗಳೂರು: ಆಕಾಶದಲ್ಲಿ ಮೋಡ ಕಟ್ಟಿದರೆ ದಾಸರಹಳ್ಳಿ ಭಾಗದ ಕೆಲ ಬಡಾವಣೆಗಳ ನಿವಾಸಿಗಳಲ್ಲಿ ನಡುಕ ಆರಂಭವಾಗುತ್ತದೆ. ಸಣ್ಣ ಮಳೆಗೂ ಉಕ್ಕುವ ರಾಜಕಾಲುವೆಗಳು ಈ ಜನರ ನಿದ್ರೆಗೆಡಿಸಿದೆ. ಎರಡು ರಾಜಕಾಲುವೆಗಳ ನಡುವೆ ಚಾಚಿಕೊಂಡಿರುವ ಬೆಲ್ಮಾರ್ ಬಡಾವಣೆ ನಿವಾಸಿಗಳಂತೂ ಮಳೆಗಾಲದಲ್ಲಿ ಅರೆನಿದ್ರೆಯಲ್ಲೇ ರಾತ್ರಿ ಕಳೆಯುತ್ತಾರೆ.

ರುಕ್ಮಿಣಿನಗರ, ಗುಂಡಪ್ಪ ಬಡಾವಣೆ, ಆರ್.ಆರ್. ಕಾಲೇಜು, ರಾಯಲ್ ಎನ್‌ಕ್ಲೇವ್, ಬಿಟಿಎಸ್ ಬಡಾವಣೆ, ರಾಜಗೋಪಾಲನಗರ, ಚೊಕ್ಕಸಂದ್ರ ಸೇರಿದಂತೆ ಒಟ್ಟು 16ಕ್ಕೂ ಹೆಚ್ಚು ಪ್ರದೇಶಗಳು ದಾಸರಹಳ್ಳಿ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿದ್ದು, ಇಲ್ಲಿನ ನಿವಾಸಿಗಳು ಮಳೆ ಬಂದರೆ ಮುಳುಗುವ ಆತಂಕದಲ್ಲೇ ಕಾಲ ಕಳೆಯುತ್ತಾರೆ. ಅದರಲ್ಲೂ ಬೆಲ್ಮಾರ್ ಬಡಾವಣೆ ನಿವಾಸಿಗಳಂತೂ ಪ್ರವಾಹದಿಂದ ರೋಸಿ ಹೋಗಿದ್ದಾರೆ.

ಚೊಕ್ಕಸಂದ್ರ ಕೆರೆಯಿಂದ ದೊಡ್ಡ ಬಿದರಕಲ್ಲು ಕೆರೆಯ ಕಡೆಗೆ ಹರಿಯುವ ರಾಜಕಾಲುವೆ ಮತ್ತು ನೆಲಗದರನಹಳ್ಳಿ ಕಡೆಯಿಂದ ಬಂದು ಸೇರಿಕೊಳ್ಳುವ ಇನ್ನೊಂದು ರಾಜಕಾಲುವೆ ನಡುವೆ ಬೆಲ್ಮಾರ್ ಬಡಾವಣೆ ವ್ಯಾಪಿಸಿಕೊಂಡಿದೆ.

ಚೊಕ್ಕಸಂದ್ರ ಕರೆ ಕಡೆಯಿಂದ ಬರುವ ರಾಜಕಾಲುವೆ ಎರಡೂ ಕಡೆ ಒತ್ತುವರಿಯಾಗಿ ಕಿರಿದಾಗಿರುವುದು

ಕೊಚ್ಚಿ ಹೋಗದಿರಲಿ ಬದುಕು 1

'ವಿಡಿಯೋ ನೋಡಲು' ಈ ಕೋಡ್ ಸ್ಕ್ಯಾನ್ ಮಾಡಿ

ಪ್ರಜಾವಾಣಿ ನೋಡಿಯೊ

ಚೊಕ್ಕಸಂದ್ರ ಕೆರೆಯಿಂದ ಬರುವ ರಾಜಕಾಲುವೆಯಿಂದ ನೀರು ಉಕ್ಕಿ ಜನ ತೊಂದರೆ ಅನುಭವಿಸುವುದು ನಾಲ್ಕೈದು ವರ್ಷಗಳಲ್ಲಿ ಆಗಾಗ ಮರುಕಳಿಸುತ್ತಿದೆ. ಇದರ ಜೊತೆಗೆ ಈಗ ನೆಲಗದರನಹಳ್ಳಿ ಕಡೆಯಿಂದ ಬರುವ ರಾಜಕಾಲುವೆಯೂ ಸಮಸ್ಯೆ ನೀಡಲು ಆರಂಭಿಸಿದೆ.

ನೆಲಗದರನಹಳ್ಳಿ ಕಡೆಯಿಂದ ಬರುವ ರಾಜಕಾಲುವೆ ಕಿರಿದಾಗಿದ್ದು, ಅದಕ್ಕೆ ಪೀಣ್ಯ ಕೈಗಾರಿಕಾ ಪ್ರದೇಶ ಮತ್ತು ನೆಲಗದರನಹಳ್ಳಿ ಸುತ್ತಮುತ್ತಲ ಪ್ರದೇಶಗಳ ನೀರು ಹರಿದು ಬರುವ ಕಾಲುವೆಯ ಸಂಪರ್ಕವನ್ನೂ ಇತ್ತೀಚೆಗೆ ಕಲ್ಪಿಸಲಾಗಿದೆ. ಬೆಲ್ಮಾರ್ ಲೇಔಟ್‌ನಲ್ಲಿ ಅಷ್ಟೇನೂ ಮಳೆಯಾಗದಿದ್ದರೂ,

ಬೆಲ್ಮಾರ್ ಲೇಔಟ್‌ನಲ್ಲಿ ರಾಜಕಾಲುವೆ ದುರಸ್ತಿ ಕಾರ್ಯ ಸ್ಥಗಿತಗೊಂಡಿರುವುದು

ಎತ್ತರದ ಪ್ರದೇಶದಲ್ಲಿರುವ ನೆಲಗದರನಹಳ್ಳಿ ಮತ್ತು ಪೀಣ್ಯ ಕೈಗಾರಿಕಾ ಪ್ರದೇಶದಲ್ಲಿ ಮಳೆಯಾದರೂ ಈ ಲೇಔಟ್ ಮುಳುಗುತ್ತಿದೆ.

ಈ ರಾಜಕಾಲುವೆ ಹಿಗ್ಗಿಸುವ ಕಾಮಗಾರಿ ಆರಂಭವಾಗಿದೆ. ಮುನೇಶ್ವರ ದೇವಸ್ಥಾನದ ತನಕ ಎತ್ತರದ ತಡೆಗೋಡೆಗಳು ನಿರ್ಮಾಣ ವಾಗಿವೆ. ಅಲ್ಲಿಂದ ಮುಂದಕ್ಕೆ ರಸ್ತೆ ಬದಿಯ ಚರಂಡಿಯಷ್ಟು ಕಿರಿದಾದ ರಾಜಕಾಲುವೆ ಇದೆ. ಅಲ್ಲಿಯ ತನಕ ಸರಾಗವಾಗಿ ಬರುವ ನೀರು ಮುಂದಕ್ಕೆ ಹರಿದು ಹೋಗಲು ಸಾಧ್ಯವಾಗದೆ ಬಡಾವಣೆಗಳಿಗೆ ನುಗ್ಗುತ್ತಿದೆ. ಜುಲೈ 4ರಂದು ರಾತ್ರಿ ಮಳೆ ಸುರಿದು ಹೆಚ್ಚಿನ ಪ್ರಮಾಣದಲ್ಲಿ ನೀರು ನುಗ್ಗಿದಾಗ ಒಂದು ಬದಿಯಲ್ಲಿದ್ದ ಕಲ್ಲಿನ ಕಟ್ಟಡದ ತಡೆಗೋಡೆ ರಾಜಕಾಲುವೆ ಒಳಕ್ಕೆ ಕುಸಿದು ಬಿದ್ದಿದೆ. ನೀರು ಮುಂದೆ ಹರಿಯಲು ಸಾಧ್ಯವಾಗದೆ ಬಡಾವಣೆಯತ್ತ ನುಗ್ಗಿದೆ.

ಮಲಗಿದ್ದ ಮಕ್ಕಳ ಸಹಿತ ಎದ್ದು ಕುಳಿತ ನಿವಾಸಿಗಳು ಮನೆಯಿಂದ ನೀರು ಹೊರ ಹಾಕಲು ಇಡೀ ರಾತ್ರಿ ಜಾಗರಣೆ ಮಾಡಿದ್ದಾರೆ. ಪೀಠೋಪಕರಣ, ಎಲೆಕ್ಟ್ರಾನಿಕ್ ವಸ್ತುಗಳೆಲ್ಲವೂ ಮುಳುಗಿ ಜನ ಪರದಾಡಿದರು. ಪದೇ ಪದೇ ಇದೇ ರೀತಿಯ ಸಮಸ್ಯೆ ಅನುಭವಿಸಿ ಜನ ಅಕ್ಷರಶಃ ರೋಸಿ ಹೋಗಿದ್ದಾರೆ. ರಾಜಕಾಲುವೆ ಹಿಗ್ಗಿಸುವ ಕಾಮಗಾರಿ ಪೂರ್ಣಗೊಂಡರೆ ಸಮಸ್ಯೆಗೆ ಮುಕ್ತಿ ಸಿಗಲಿದೆ ಎನ್ನುತ್ತಾರೆ ಸ್ಥಳೀಯರು.

'ದಾಸರಹಳ್ಳಿ ಕ್ಷೇತ್ರದ ಜನರ ಸಮಸ್ಯೆಗಳಿಗೆ ಸ್ಪಂದಿಸದ ಸರ್ಕಾರ ನಮ್ಮನ್ನು ಶಾಪಗ್ರಸ್ತರನ್ನಾಗಿ ಮಾಡಿದೆ. ಜೆಡಿಎಸ್ ಶಾಸಕರು ಪ್ರತಿನಿಧಿಸುವ ಕ್ಷೇತ್ರ ಎನ್ನುವ ಕಾರಣಕ್ಕೆ ಯಾವುದೇ ಕೆಲಸಕ್ಕೂ ಅನುದಾನ ನೀಡದೆ ತಾರತಮ್ಯ ಮಾಡುತ್ತಿದೆ. ನೀಡಿದ್ದ ಅನುದಾನವನ್ನೂ ವಾಪಸ್ ಪಡೆದಿದೆ. ರಾಜಕೀಯ ಕಾರಣಗಳಿಗಾಗಿ ಸಾಮಾನ್ಯ ಜನರನ್ನು ತೊಂದರೆಗೆ ಸಿಲುಕಿಸುವ ಕೆಲಸವನ್ನು ಸರ್ಕಾರ ಮಾಡುತ್ತಿದೆ' ಎಂದು ಇಲ್ಲಿನ ನಿವಾಸಿ ರಮಾಕಾಂತ ದೂರಿದರು.

ಮಳೆಗಾಲದಲ್ಲಿ ರಾತ್ರಿ ವೇಳೆ ನಿದ್ರೆಯೇ ಬಾರದಂತೆ ಆಗಿದೆ. ನಿವೇಶನ ಖರೀದಿಸಿ ಮನೆ ಕಟ್ಟಿಕೊಂಡರೂ ನೆಮ್ಮದಿಯಿಂದ ನಿದ್ರೆ ಮಾಡಲು ಸಾಧ್ಯವಾಗದ ಸ್ಥಿತಿ ಇದೆ.

ಕಲಾವತಿ, ಬೆಲ್ಮಾರ್ ಲೇಔಟ್ ನಿವಾಸಿ

ಎರಡೂ ಕಡೆಯ ರಾಜಕಾಲುವೆಯಲ್ಲಿ ನೀರು ಸರಾಗವಾಗಿ ಹರಿದು ಹೋಗುವಂತೆ ಮಾಡಿದರೆ ಸಮಸ್ಯೆ ತಪ್ಪಲಿದೆ. ಈ ಕೆಲಸವನ್ನು ಬಿಬಿಎಂಪಿ ಮಾಡಬೇಕು

ರಂಗಸ್ವಾಮಿ, ಬೆಲ್ಮಾರ್ ಲೇಔಟ್ ನಿವಾಸಿಗಳ ಕ್ಷೇಮಾಭಿವೃದ್ಧಿ ಸಂಘದ ಅಧ್ಯಕ್ಷ

ನಾಲ್ಕು ವರ್ಷಗಳಿಂದ ಸಮಸ್ಯೆ ತೀವ್ರಗೊಂಡಿದೆ. ಸರಿಪಡಿಸಲು ಸಿ.ಎಂ ಮುಂದಾಗಬೇಕು. ಇಲ್ಲದಿದ್ದರೆ ಹೋರಾಟ ನಡೆಸಲಾಗುವುದು,

ರಜನಿ ಶ್ರೀನಿವಾಸ್, ಬೆಲ್ಮಾರ್ ಲೇಔಟ್ ನಿವಾಸಿ

16 ಕಡೆ ಅಪಾಯ ಜಾಸ್ತಿ

ದಾಸರಹಳ್ಳಿ ಕ್ಷೇತ್ರದಲ್ಲಿ ರಾಜಕಾಲುವೆ ನೀರು ಮನೆಗಳಿಗೆ ನುಗ್ಗುವ ಅಪಾಯ ಒಟ್ಟು 16 ಜಾಗಗಳನ್ನು ಗುರುತಿಸಲಾಗಿದೆ ಎಂದು ಬಿಬಿಎಂಪಿ ರಾಜಕಾಲುವೆ ವಿಭಾಗದ ಅಧಿಕಾರಿಯೊಬ್ಬರು ಮಾಹಿತಿ ನೀಡಿದರು.

ತುರ್ತಾಗಿ ಅಷ್ಟೂ ಕಡೆ ರಾಜಕಾಲುವೆ ದುರಸ್ತಿಪಡಿಸುವ ಕಾಮಗಾರಿಯನ್ನು ಆರಂಭಿಸ ಬೇಕಾಗಿದೆ. ಸರ್ಕಾರ ಅನುದಾನ ನಿಗದಿ ಮಾಡಿದರೆ ಕಾಮಗಾರಿ ಆರಂಭಿಸಿ ಮುಂದೆ ಆಗಲಿರುವ ಅಪಾಯ ತಪ್ಪಿಸಬಹುದು ಎಂದು ತಿಳಿಸಿದರು.

ಬೆಲ್ಮಾರ್ ಲೇಔಟ್‌ನಲ್ಲಿ ಕಳೆದ ವಾರ ಮನೆಗಳಿಗೆ ನೀರು ನುಗ್ಗಲು ಕಾರಣವಾದ ರಾಜಕಾಲುವೆ ಹಿಗ್ಗಿಸುವ ಕಾರ್ಯ ನಡೆಯುತ್ತಿದೆ. ಮಳೆ ಕಾರಣದಿಂದ ಕಾಮಗಾರಿ ಸದ್ಯಕ್ಕೆ ಸ್ಥಗಿತಗೊಂಡಿದೆ ಎಂದು ಹೇಳಿದರು.

ಟೆಂಡರ್ ಮುಂದುವರಿಸಲು ಒತ್ತಾಯ

ಆರ್. ಮಂಜುನಾಥ್

'ದಾಸರಹಳ್ಳಿ ಕ್ಷೇತ್ರದಲ್ಲಿನ ರಾಜಕಾಲುವೆ ಸರಿಪಡಿಸಲು ₹130 ಕೋಟಿ ಮಂಜೂರಾಗಿ ಟೆಂಡರ್ ಪ್ರಕ್ರಿಯೆ ಆರಂಭವಾಗಿತ್ತು. ಅದನ್ನು ಸರ್ಕಾರ ತಡೆ ಹಿಡಿದಿದೆ' ಎಂದು ಶಾಸಕ ಆರ್. ಮಂಜುನಾಥ್ ಆರೋಪಿಸಿದರು.

'ರುಕ್ಮಿಣಿ ನಗರ, ಚೊಕ್ಕಸಂದ್ರ, ಗುಂಡಪ್ಪ ಬಡಾವಣೆ, ಶೆಟ್ಟಿಹಳ್ಳಿ, ರಾಯಲ್ ಎನ್‌ಕ್ಲೇವ್, ಬಿಟಿಎಸ್ ಬಡಾವಣೆ, ರಾಜಗೋಪಾಲನಗರ, ಮಲ್ಲಸಂದ್ರದಲ್ಲೂ ಮಳೆ ನೀರು ಮನೆಗಳಿಗೆ ನುಗ್ಗುತ್ತಿದೆ. ಅದನ್ನು ತಪ್ಪಿಸಲು ಟೆಂಡರ್ ಪ್ರಕ್ರಿಯೆ ಮುಂದುವರಿಸಬೇಕು' ಎಂದು ಅವರು ಒತ್ತಾಯಿಸಿದರು.

ಭ್ರಷ್ಟ ಜನತಾ ಪಾರ್ಟಿ: ಸಲೀಂ ಅಹ್ಮದ್ ಆರೋಪ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಜನ ಸಾಮಾನ್ಯರು ಕೋವಿಡ್ ಸಂಕಷ್ಟದಲ್ಲಿದ್ದರೆ, ತೆರಿಗೆ ಹಣವನ್ನು ಸರ್ಕಾರ ಲೂಟಿ ಮಾಡುತ್ತಿದೆ. ಹಣ ದೋಚಲು ಸಚಿವರುಗಳ ನಡುವೆಯೇ ಕಿತ್ತಾಟ ನಡೆಯುತ್ತಿದೆ. ಬಿಜೆಪಿ ಎಂದರೆ ಭಾರತೀಯ ಜನತಾ ಪಾರ್ಟಿ ಅಲ್ಲ, ಭ್ರಷ್ಟ ಜನತಾ ಪಾರ್ಟಿ' ಎಂದು ಕೆಪಿಸಿಸಿ ಕಾರ್ಯಾಧ್ಯಕ್ಷ ಸಲೀಂ ಅಹ್ಮದ್ ಆರೋಪಿಸಿದರು.

ಪೆಟ್ರೋಲ್, ಡೀಸೆಲ್ ಮತ್ತು ಅಗತ್ಯ ವಸ್ತುಗಳ ಬೆಲೆ ಏರಿಕೆ ವಿರೋಧಿಸಿ ಕೇಂದ್ರ ಹಾಗೂ ರಾಜ್ಯ ಸರ್ಕಾರದ ವಿರುದ್ಧ ಮಹಾಲಕ್ಷ್ಮಿ ಲೇಔಟ್ ವಿಧಾನಸಭಾ ಕ್ಷೇತ್ರದ ಕಾಂಗ್ರೆಸ್ ಘಟಕದ ವತಿಯಿಂದ ಭಾನುವಾರ ನಡೆದ 'ಸೈಕಲ್ ಜಾಥಾ' ಪ್ರತಿಭಟನೆಯಲ್ಲಿ ಅವರು ಮಾತನಾಡಿದರು

'ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಬಿಜೆಪಿಗೆ ನಂಬಿಕೆ, ವಿಶ್ವಾಸವಿಲ್ಲ. ವಾಮಮಾರ್ಗದಿಂದ ಜಾತಿ, ಧರ್ಮದ ಹೆಸರಿನಲ್ಲಿ ಅಧಿಕಾರ ನಡೆಸುತ್ತಿದೆ. ಕೊರೊನಾ ಉಪಕರಣ ಖರೀದಿಯಲ್ಲಿ ರಾಜ್ಯ ಸರ್ಕಾರ ₹ 2 ಸಾವಿರ ಕೋಟಿಯ ಭ್ರಷ್ಟಾಚಾರ ನಡೆಸಿದೆ' ಎಂದು ವಾಗ್ದಾಳಿ ನಡೆಸಿದರು.

'ದಿನಸಿ ವಸ್ತುಗಳ ಹಾಗೂ ಅಗತ್ಯ ವಸ್ತುಗಳ ಬೆಲೆ ಏರಿಕೆಯಿಂದ ಜನರು ಕಂಗಾಲಾಗಿದ್ದಾರೆ. ಬಿಜೆಪಿಯವರಿಗೆ ಮುಖ್ಯಮಂತ್ರಿ ವಿಚಾರವೊಂದೇ ಮುಖ್ಯವಾಗಿದೆ' ಎಂದರು. ಪ್ರತಿಭಟನೆಯಲ್ಲಿ ಕೆಪಿಸಿಸಿ ಕಾರ್ಯಾಧ್ಯಕ್ಷ ರಾಮಲಿಂಗಾ ರೆಡ್ಡಿ, ವಿಧಾನ ಪರಿಷತ್ ಸದಸ್ಯ ಬಿ.ಕೆ. ಹರಿಪ್ರಸಾದ್, ಕೆಪಿಸಿಸಿ ಮಾಜಿ ಪ್ರಧಾನ ಕಾರ್ಯದರ್ಶಿ ವಿ.ಎಸ್. ಆರಾಧ್ಯ, ಶಿವರಾಜು, ಬೆಂಗಳೂರು ಉತ್ತರ ಡಿಸಿಸಿ ಅಧ್ಯಕ್ಷ ರಾಜ್‌ಕುಮಾರ್ ಇದ್ದರು.

ಸೈಕಲ್ ಜಾಥಾದಲ್ಲಿ ಕೆಪಿಸಿಸಿ ಕಾರ್ಯಾಧ್ಯಕ್ಷರಾದ ರಾಮಲಿಂಗಾರೆಡ್ಡಿ, ಸಲೀಂ ಅಹ್ಮದ್, ಕಾಂಗ್ರೆಸ್ ಮುಖಂಡರಾದ ಬಿ.ಕೆ. ಹರಿಪ್ರಸಾದ್ ಭಾಗವಹಿಸಿದ್ದರು ಪ್ರಜಾವಾಣಿ ಚಿತ್ರ

'ನಾಯಕತ್ವ ಬದಲಾವಣೆ ಸಂದೇಶ ಬಂದಿಲ್ಲ'

ಬೆಂಗಳೂರು: ರಾಜ್ಯ ಸರ್ಕಾರದ ನಾಯಕತ್ವ ಬದಲಾವಣೆ ಸೇರಿದಂತೆ ಯಾವುದೇ ಸಂದೇಶಗಳೂ ಬಂದಿಲ್ಲ ಎಂದು ಕಂದಾಯ ಸಚಿವ ಆರ್. ಅಶೋಕ ಹೇಳಿದರು.

ನಗರದಲ್ಲಿ ಭಾನುವಾರ ಮಾಧ್ಯಮ ಪ್ರತಿನಿಧಿಗಳ ಜತೆ ಮಾತನಾಡಿದ ಅವರು, 'ಯಾವುದೇ ಪ್ರಮುಖ ವಿಷಯಗಳಿದ್ದರೂ ಬಿಜೆಪಿಯ ಕೇಂದ್ರ ನಾಯಕರು ಚರ್ಚಿಸಿ ತೀರ್ಮಾನ ಕೈಗೊಳ್ಳುತ್ತಾರೆ. ರಾಜ್ಯದಲ್ಲಿ ಸರ್ಕಾರದ ನಾಯಕತ್ವ ಬದಲಾವಣೆ ಮಾಡುವಂತಹ ಯಾವುದೇ ಸಂದೇಶ ಈವರೆಗೂ ಬಂದಿಲ್ಲ' ಎಂದರು.

ಬಿಜೆಪಿಯಲ್ಲಿ ಸಮರ್ಥ ನಾಯಕತ್ವ ಇದ್ದು, ಪಕ್ಷದ ಕೇಂದ್ರ ನಾಯಕತ್ವವೂ ಬಲಿಷ್ಠವಾಗಿದೆ. ಪಕ್ಷದೊಳಗೆ ಯಾವುದೇ ಗೊಂದಲಕ್ಕೆ ಅವಕಾಶವಿಲ್ಲ. ನಾಯಕತ್ವ ಬದಲಾವಣೆ ವಿಚಾರ ಪಕ್ಷದ ಮುಂದಿಲ್ಲ. ಮುಂದಿನ ಚುನಾವಣೆಯಲ್ಲಿ ಗೆಲುವು ಸಾಧಿಸುವುದಕ್ಕೆ ತಯಾರಿ ನಡೆಯುತ್ತಿದೆ. ಉಳಿದ ವಿಚಾರಗಳು ಏನೇ ಇದ್ದರೂ ಕೇಂದ್ರದ ನಾಯಕರೇ ನಿರ್ಧಾರ ಕೈಗೊಳ್ಳುತ್ತಾರೆ ಎಂದು ಹೇಳಿದರು.

ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಅವರು ದೆಹಲಿಗೆ ಹೋಗಿ, ಬಂದಿರುವುದರಲ್ಲಿ ವಿಶೇಷಗಳೇನೂ ಇಲ್ಲ. ಕೊರೊನಾ ಹೆಚ್ಚಾಗಿದ್ದ ಕಾರಣದಿಂದ ಹಲವು ತಿಂಗಳಿಂದ ವರಿಷ್ಠರ ಬೇಟಿಗೆ ಹೋಗಿರಲಿಲ್ಲ. ಇನ್ನು ಪ್ರತಿ ತಿಂಗಳೂ ದೆಹಲಿಗೆ ಭೇಟಿ ನೀಡುವುದಾಗಿ ಅವರೇ ಹೇಳಿದ್ದಾರಲ್ಲವೆ ಎಂದು ಪ್ರಶ್ನೆಯೊಂದಕ್ಕೆ ಅಶೋಕ ಉತ್ತರಿಸಿದರು.

ಔತಣಕೂಟ ಮಾತ್ರ: 'ಶಾಸಕಾಂಗ ಪಕ್ಷದ ಸಭೆ ಕುರಿತು ನನಗೆ ಯಾವುದೇ ನೋಟಿಸ್ ಬಂದಿಲ್ಲ. ಬಿಜೆಪಿ ಸರ್ಕಾರ ಅಧಿಕಾರಕ್ಕೆ ಬಂದು ಎರಡು ವರ್ಷಗಳಾಗುತ್ತಿದೆ. ಈ ಕಾರಣಕ್ಕಾಗಿ ಔತಣಕೂಟಕ್ಕೆ ಆಹ್ವಾನಿಸಿದ್ದಾರಷ್ಟೆ' ಎಂದರು.

ಸಚಿವ ಬಿ.ಸಿ. ಪಾಟೀಲ ದೆಹಲಿ ಪ್ರವಾಸಕ್ಕೆ ಹೊರಟಿರುವ ಕುರಿತು ಕೇಳಿದಾಗ, 'ಕೆಲವರು ವೈಯಕ್ತಿಕ ಕೆಲಸಗಳಿಗಾಗಿ ದೆಹಲಿಗೆ ಹೋಗುತ್ತಿರುತ್ತಾರೆ. ನಾನೂ ಹೋಗಬೇಕು ಅಂದುಕೊಂಡಿದ್ದೇನೆ. ಸಚಿವ ಸೋಮಶೇಖರ್ ದೆಹಲಿಗೆ ಹೋಗುವುದಿಲ್ಲ ಎಂದು ನನಗೆ ತಿಳಿಸಿದ್ದಾರೆ' ಎಂದು ಹೇಳಿದರು.

ಕೋವಿಡ್‌ನಿಂದ ಮೃತಪಟ್ಟವರ ಕುಟುಂಬಕ್ಕೆ ₹10 ಸಾವಿರ ಸಹಾಯಧನವನ್ನು ವಿತರಿಸಲಾಯಿತು. ಕಾಂಗ್ರೆಸ್ ಮುಖಂಡರಾದ ವಿ.ಆರ್. ಸುದರ್ಶನ್, ಶ್ರೀಧರ್ ಲಕ್ಷ್ಮಣ್, ಆರ್.ಕೆ. ರಮೇಶ್, ಜಿ.ಕೃಷ್ಣಪ್ಪ ಇದ್ದರು

'ಗಾಯದ ಮೇಲೆ ಬರೆ ಎಳೆಯುತ್ತಿರುವ ಸರ್ಕಾರ'

ಬೆಂಗಳೂರು : 'ಕೊರೊನಾ ಲಾಕ್‌ಡೌನ್ ಸಂದರ್ಭದಲ್ಲಿ ನೊಂದವರ ನೆರವಿಗೆ ಧಾವಿಸಬೇಕಿದ್ದ ಕೇಂದ್ರ ಮತ್ತು ರಾಜ್ಯ ಸರ್ಕಾರವು ಪೆಟ್ರೋಲ್, ಡೀಸೆಲ್, ಅಡುಗೆ ಅನಿಲದ ದರವನ್ನು ಪ್ರತಿ ದಿನ ಏರಿಕೆ ಮಾಡುವ ಮೂಲಕ ಗಾಯದ ಮೇಲೆ ಬರೆ ಎಳೆಯುವ ಕೆಲಸ ಮಾಡುತ್ತಿವೆ' ಎಂದು ಕೆಪಿಸಿಸಿ ಮಾಧ್ಯಮ ಮತ್ತು ಸಂವಹನ ವಿಭಾಗದ ಸಹ ಅಧ್ಯಕ್ಷ ವಿ.ಆರ್.ಸುದರ್ಶನ್ ಆರೋಪಿಸಿದರು.

ಕೋವಿಡ್‌ನಿಂದ ಮೃತಪಟ್ಟ 50 ಜನರ ಕುಟುಂಬ ಸದಸ್ಯರಿಗೆ ಗೊಟ್ಟಿಗೆರೆ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಶ್ರೀಧರ್ ಲಕ್ಷ್ಮಣ್ ಮತ್ತು ಬಮೂಲ್ ಮಾಜಿ ಅಧ್ಯಕ್ಷ, ಕಾಂಗ್ರೆಸ್ ಮುಖಂಡ ಆರ್. ಕೆ.ರಮೇಶ್ ಅವರು ವೈಯಕ್ತಿಕವಾಗಿ ನೀಡಿದ ತಲಾ ₹10 ಸಾವಿರ ಧನಸಹಾಯವನ್ನು ವಿತರಿಸಿ ಮಾತನಾಡಿದರು.

ಆರ್.ಕೆ.ರಮೇಶ್ ಮಾತನಾಡಿ, 'ಬೆಂಗಳೂರು ದಕ್ಷಿಣ ಕ್ಷೇತ್ರ ವ್ಯಾಪ್ತಿಯಲ್ಲಿ ಸಾವಿರಾರು ಜನರ ನೆರವಿಗೆ 'ಕಾಂಗ್ರೆಸ್ ಸಹಾಯಹಸ್ತ' ಕಾರ್ಯಕ್ರಮದಡಿ ನೆರವು ನೀಡಲಾಗುತ್ತಿದೆ' ಎಂದರು.

ಶ್ರೀಧರ್ ಲಕ್ಷ್ಮಣ್ ಮಾತನಾಡಿ, 'ಅಂಜನಾಪುರದ ಕಡುಬಡತನದ ಪ್ರತಿಭಾವಂತ ಪಿಯುಸಿ ವಿದ್ಯಾರ್ಥಿನಿ ಮೇಘನಾ ಅವರಿಗೆ ನಮ್ಮ ಶಿಕ್ಷಣ ಸಂಸ್ಥೆಯಿಂದ ಉಚಿತವಾಗಿ ಪ್ರವೇಶ ನೀಡಲಾಗುವುದು' ಎಂದರು.

ಗೊಟ್ಟಿಗೆರೆ ಬ್ಲಾಕ್ ಕಾಂಗ್ರೆಸ್ ಉಪಾಧ್ಯಕ್ಷ ರವಿ, ವಾರ್ಡ್ ಅಧ್ಯಕ್ಷ ಚಂದ್ರಶೇಖರ್, ಮುಖಂಡರಾದ ಆವಲಹಳ್ಳಿ ರವಿ, ಬ್ಲಾಕ್ ಕಾಂಗ್ರೆಸ್ ಸಮಿತಿ ಸದಸ್ಯರಾದ ನಿಜಾಂ, ಶುಭಂ, ಶ್ರೀಧರ್, ಮುದಾಸೀರ್, ಬಿ.ಟಿ. ನಾಗರಾಜ್, ಫ್ರಾಂಕ್ಲಿನ್ ಇದ್ದರು.

'ಮೇಕೆದಾಟು ಯೋಜನೆಗೆ ಮಾದೇಗೌಡರ ಹೆಸರಿಡಿ'

ಬೆಂಗಳೂರು:'ಕಾವೇರಿ ಹೋರಾಟದಲ್ಲಿ ಮುಂಚೂಣಿಯಲ್ಲಿದ್ದ ಜಿ.ಮಾದೇಗೌಡ ಅವರ ಹೆಸರನ್ನು ಮೇಕೆದಾಟು ಯೋಜನೆಗೆ ಇಡಬೇಕು' ಎಂದು ರಾಜ್ಯ ಒಕ್ಕಲಿಗರ ಒಕ್ಕೂಟ ಸಂಘಟನೆಯು ಸರ್ಕಾರಕ್ಕೆ ಮನವಿ ಮಾಡಿದೆ.

'ರೈತ ಚಳವಳಿ ಹಾಗೂ ಕಾವೇರಿ ನೀರಿನ ಹಕ್ಕಿಗಾಗಿ ದಶಕಗಳ ಕಾಲ ನಡೆದ ಹೋರಾಟದಲ್ಲಿ ಮಾದೇಗೌಡರ ಪಾತ್ರ ಅವಿಸ್ಮರಣೀಯ. ಇದರ ಸ್ಮರಣಾರ್ಥ ಮೇಕೆದಾಟು ಯೋಜನೆಗೆ ಮಾದೇಗೌಡ ಹೆಸರು ನಾಮಕರಣ ಮಾಡುವ ಮೂಲಕ ಸರ್ಕಾರ ಅವರಿಗೆ ಗೌರವ ಸಲ್ಲಿಸಬೇಕು' ಎಂದು ಸಂಘಟನೆಯ ಅಧ್ಯಕ್ಷ ಸಿ.ವಿ.ದೇವರಾಜ್ ಮನವಿ ಮಾಡಿದ್ದಾರೆ.

ವೈಕುಂಠ ಸಮಾರಾಧನೆ

ಶ್ರೀಮತಿ ಕಾಳಮ್ಮ ಚನ್ನಿಗಪ್ಪರವರು

ನಿಧನ : 09-07-2021

ನಮ್ಮ ಪೂಜ್ಯ ತಾಯಿಯವರಾದ ಶ್ರೀಮತಿ ಕಾಳಮ್ಮ ಚನ್ನಿಗಪ್ಪರವರು ದಿನಾಂಕ 09-07-2021ನೇ ಶುಕ್ರವಾರ ಸ್ವರ್ಗಸ್ಥರಾದರೆಂದು ತಿಳಿಸಲು ವಿಷಾದಿಸುತ್ತೇವೆ. ತತ್ಸಂಬಂಧವಾದ "ವೈಕುಂಠ ಸಮಾರಾಧನೆ" ಕಾರ್ಯವನ್ನು ದಿನಾಂಕ : 19-07-2021 ರಂದು ಸೋಮವಾರ ಬೆಳಗ್ಗೆ 7-00 ಗಂಟೆಯಿಂದ ರಾತ್ರಿ 9.00 ಗಂಟೆಯವರೆಗೆ ಮೃತರ ಸ್ವಗೃಹದಲ್ಲಿ ಏರ್ಪಡಿಸಲಾಗಿದೆ.

ತಾವುಗಳು ಆಗಮಿಸಿ ಮೃತರ ಆತ್ಮಕ್ಕೆ ಚಿರಶಾಂತಿಯನ್ನು ಕೋರಬೇಕಾಗಿ ವಿನಂತಿಸಿಕೊಳ್ಳುತ್ತೇವೆ.

ಕಾರ್ಯಕ್ರಮ ನಡೆಯುವ ಸ್ಥಳ :
ಎನ್.ವಿ. ಕಲ್ಯಾಣ ಮಂಟಪ, 11ನೇ ಮುಖ್ಯ ರಸ್ತೆ, ಸಚಿವರಾದ ಕೆ. ಗೋಪಾಲಯ್ಯನವರ ಮನೆಯ ಹಿಂಭಾಗ, ವೃಷಭಾವತಿನಗರ, ಕಾಮಾಕ್ಷಿಪಾಳ್ಯ, ಬೆಂಗಳೂರು-79

ಇಂತಿ ದುಃಖತಪ್ತರು :
ಶ್ರೀ ಕೆ.ಗೋಪಾಲಯ್ಯ, ಮಾನ್ಯ ಅಬಕಾರಿ ಸಚಿವರು,
ಕರ್ನಾಟಕ ಸರ್ಕಾರ ಮತ್ತು ಕುಟುಂಬದವರು ಹಾಗೂ ಬಂಧು-ಮಿತ್ರರು.

ಎಸ್ಸೆಸ್ಸೆಲ್ಸಿ ಪರೀಕ್ಷೆ ಇಂದು

ಒಂದನೇ ಪುಟದಿಂದ

'ಕಳೆದ ಬಾರಿ 3,310 ಇದ್ದ ಪರೀಕ್ಷಾ ಕೇಂದ್ರಗಳನ್ನು 4,885 ಹಾಗೂ 48 ಸಾವಿರ ಪರೀಕ್ಷಾ ಕೊಠಡಿಗಳನ್ನು 73,064ಕ್ಕೆ ಹೆಚ್ಚಿಸಲಾಗಿದೆ. ವಿದ್ಯಾರ್ಥಿಗಳಿಗೆ ಆದಷ್ಟು ಸಮೀಪದ ಪರೀಕ್ಷಾ ಕೇಂದ್ರಗಳಲ್ಲಿ ಪರೀಕ್ಷೆ ಬರೆಯುವ ವ್ಯವಸ್ಥೆ ಮಾಡಲಾಗಿದೆ. ಹಾಲ್ ಟಿಕೆಟ್ ಸಿಗಲಿಲ್ಲ ಎಂದು ಬಂದಿರುವ ದೂರುಗಳನ್ನು ಬಿಇಒ ಹಂತದಲ್ಲಿ ಪರಿಹರಿಸಲಾಗಿದೆ' ಎಂದರು.

'ಕೋವಿಡ್ ದೃಢಪಟ್ಟಿರುವ ವಿದ್ಯಾರ್ಥಿಗಳಿಗೆ ಕೋವಿಡ್ ಆರೈಕೆ ಕೇಂದ್ರದಲ್ಲಿ ಪರೀಕ್ಷೆ ಬರೆಯಲು ಅವಕಾಶ ಮಾಡಿಕೊಡಲಾಗುವುದು. ಜ್ವರ, ಕೆಮ್ಮು, ನೆಗಡಿ ಲಕ್ಷಣ ಕಂಡುಬಂದ ವಿದ್ಯಾರ್ಥಿಗಳಿಗೆ ಪ್ರತ್ಯೇಕ ಕೊಠಡಿ ವ್ಯವಸ್ಥೆ ಮಾಡಲಾಗಿದೆ. ಅಂಥ ವಿದ್ಯಾರ್ಥಿಗಳಿಗೆ ಎನ್ 95 ಮಾಸ್ಕ್ ನೀಡಲಾಗುವುದು. ಮಾಸ್ಕ್ ಮರೆತು ಬಂದ ವಿದ್ಯಾರ್ಥಿಗಳಿಗೂ ಮಾಸ್ಕ್ ಕೊಡುವ ವ್ಯವಸ್ಥೆ ಮಾಡಲಾಗಿದೆ' ಎಂದರು.

ತಿಂಗಳ ಅಂತ್ಯದಲ್ಲಿ ವರದಿ: 'ಶಾಲೆಗಳಲ್ಲಿ ಯಾವ ತರಗತಿಗಳನ್ನು ಮೊದಲು ಆರಂಭಿಸಬೇಕು, ಯಾವಾಗ ಮತ್ತು ಯಾವ ರೀತಿ ಆರಂಭಿಸಬೇಕು ಎಂಬ ಬಗ್ಗೆ ಸಾರ್ವಜನಿಕ ಶಿಕ್ಷಣ ಇಲಾಖೆಯ ಆಯುಕ್ತರ ನೇತೃತ್ವದಲ್ಲಿ ರಚಿಸಲಾಗಿರುವ ಕಾರ್ಯಪಡೆ ಈ ತಿಂಗಳ ಅಂತ್ಯದಲ್ಲಿ ವರದಿ ನೀಡಲಿದೆ' ಎಂದು ಅವರು ತಿಳಿಸಿದರು.

ಕಟೀಲ್ ಆಡಿಯೊ 'ನಕಲಿ'?

ಒಂದನೇ ಪುಟದಿಂದ

'ನನ್ನ ಧ್ವನಿಯನ್ನು ಅನುಕರಿಸಿ ಪಕ್ಷಕ್ಕೆ ಧಕ್ಕೆ ತರುವ ಮಾದರಿಯಲ್ಲಿ ನಕಲಿ ಆಡಿಯೊವನ್ನುಯಾರೋ ಕಿಡಿಗೇಡಿಗಳು ವಾಟ್ಸ್ ಆ್ಯಪ್‌ನಲ್ಲಿ ಹರಿ ಬಿಟ್ಟಿದ್ದು, ಇದರ ಸತ್ಯಾಸತ್ಯತೆ ತನಿಖೆ ಆಗಬೇಕು. ಪಕ್ಷ ಮತ್ತು ಸರ್ಕಾರಕ್ಕೆ ಕೆಟ್ಟ ಹೆಸರು ತರುವ ಉದ್ದೇಶದಿಂದ ಆಡಿಯೊ ಹರಿಬಿಡಲಾಗಿದೆ. ಕಿಡಿಗೇಡಿಗಳನ್ನು ಪತ್ತೆ ಮಾಡಬೇಕು' ಎಂದು ಯಡಿಯೂರಪ್ಪ ಅವರಲ್ಲಿ ಕಟೀಲ್ ಮನವಿ ಮಾಡಿದ್ದಾರೆ.

ಆಡಿಯೊ ಸಂಭಾಷಣೆ:

ನಳಿನ್: ಯಾರಿಗೂ ಹೇಳಲು ಹೋಗಬೇಡಿ.

ಈಶ್ವರಪ್ಪ, ಜಗದೀಶ ಶೆಟ್ಟರ್.... ಆ ತಂಡವನ್ನೇ ತೆಗೆಯುತ್ತೇವೆ.

ಎಲ್ಲ ಹೊಸ ತಂಡ ಮಾಡುತ್ತಿದ್ದೇವೆ. ಹೇಳಲು ಹೋಗಬೇಡಿ. ಈಗ ಸದ್ಯಕ್ಕೆ ಯಾರಿಗೂ ಕೊಡಬೇಡಿ ಅಂದಿದ್ದಾರೆ...

(ನಗು)..

ಇಲ್ಲ. ಯಾರಿಗೂ ಹೇಳಬೇಡಿ.

ಬೇಡ. ಹೂಂ... ಏನೂ ತೊಂದರೆ ಇಲ್ಲ.

ಯಾರಿಗೂ ಹೆದರಬೇಡಿ.

ಯಾರಾದರೂ ಸರಿ ಇನ್ನು ನಮ್ಮ ಕೈಯಲ್ಲೇ ಎಲ್ಲ. ಮೂರು ಹೆಸರುಗಳು ಇವೆ. ಅದರಲ್ಲಿ ಯಾವುದಾದರೂ ಆಗುವ ಸಾಧ್ಯತೆಗಳಿವೆ.

ಇಲ್ಲ.. ಇಲ್ಲ. ಇಲ್ಲಿಂದ ಯಾರನ್ನೂ ಮಾಡುವುದಿಲ್ಲ. ದೆಹಲಿಯಿಂದಲೇ ಹಾಕುತ್ತಾರೆ..

ವಿಟ್ಲ ಪಡ್ನೂರು ಗ್ರಾಮದ ಕೊಡಂಗೆ ಎಂಬಲ್ಲಿ ಗುಡ್ಡ ಕುಸಿದು ಮನೆಯಂಗಳಕ್ಕೆ ಬಿದ್ದಿರುವ ಅಡಿಕೆ ಗಿಡಗಳು

ಭಟ್ಕಳದಲ್ಲಿ ಮನೆಗಳಿಗೆ ನೀರು ನುಗ್ಗಿರುವುದು

ಜಲಾಶಯದ ನೀರಿನ ಮಟ್ಟ (ಸಮುದ್ರ ಮಟ್ಟದಿಂದ)

ಜಲಾಶಯ	ಗರಿಷ್ಠ ಮಟ್ಟ (ಅಡಿಗಳಲ್ಲಿ)	ಇಂದಿನ ಮಟ್ಟ	ಒಳಹರಿವು (ಕ್ಯುಸೆಕ್‌ಗಳಲ್ಲಿ)	ಹೊರಹರಿವು (ಕ್ಯುಸೆಕ್‌ಗಳಲ್ಲಿ)
ಕೆಆರ್‌ಎಸ್*	124.80	97.55	16,601	2,073
ಹಾರಂಗಿ	2,859	2,855.65	4,649	6,341
ಕಬಿನಿ	2,284.00	2,280.35	14,330	15,000
ಹೇಮಾವತಿ	2,922	2,903.88	6,751	250
ಲಿಂಗನಮಕ್ಕಿ	1,819	1,791.20	22,950	-
ಸೂಪಾ (ಮೀ)	564	541.35	12,028	5,048
ಮಾಣಿ	594.36	576.52	2,761	-
ತುಂಗಭದ್ರಾ	1,633	1,615.42	57,127	284
ಮಲಪ್ರಭಾ	2,079.5	2,065.40	3,458	194
ಘಟಪ್ರಭಾ	2,175	2,144.83	7,972	132
ಭದ್ರಾ	186	163	10,072	790
ಆಲಮಟ್ಟಿ (ಮೀ)	519.6	517.76	53,247	46,130
ನಾರಾಯಣಪುರ (ಮೀ)	492.25	491.58	63,000	68,800

* ನೆಲಮಟ್ಟದಿಂದ

ಕರಾವಳಿ, ಕಲ್ಯಾಣ ಕರ್ನಾಟಕದಲ್ಲಿ ಧಾರಾಕಾರ ಮಳೆ • ನದಿಗಳಲ್ಲಿ ಹೆಚ್ಚಿದ ನೀರಿನ ಪ್ರಮಾಣ • ಜನವಸತಿ ಪ್ರದೇಶಗಳು ಜಲಾವೃತ

ಧರೆಗೆ ಉರುಳಿದ ಅಡಿಕೆ ಮರಗಳು: ಬೆಳೆಗಳಿಗೆ ಅಪಾರ ಹಾನಿ

ಪ್ರಜಾವಾಣಿ ವಾರ್ತೆ

ಮಂಗಳೂರು: ದಕ್ಷಿಣ ಕನ್ನಡ, ಉಡುಪಿ ಹಾಗೂ ಚಿಕ್ಕಮಗಳೂರು ಜಿಲ್ಲೆಗಳಲ್ಲಿ ಭಾನುವಾರ ಇಡೀ ದಿನ ಮಳೆಯಾಗಿದ್ದು, ಹಲವೆಡೆ ಗಾಳಿ-ಮಳೆಯಿಂದ ಹಾನಿ ಸಂಭವಿಸಿದೆ.

ಬಂಟ್ವಾಳ ತಾಲ್ಲೂಕಿನ ವಿಟ್ಲಪಡ್ನೂರು ಗ್ರಾಮದ ಕೊಡಂಗೆ ಎಂಬಲ್ಲಿ ಗುಡ್ಡ ಕುಸಿದು ಸುನೀಲ್ ಪಾಯಸ್ ಅವರಿಗೆ ಸೇರಿದ 100ಕ್ಕೂ ಹೆಚ್ಚು ಅಡಿಕೆ ಮರಗಳು ಧರಾಶಾಯಿಯಾಗಿವೆ. ವೀರಕಂಬ- ಬೋಳಂತೂರು ಸಂಪರ್ಕಿಸುವ ರಸ್ತೆಯ ತಡೆಗೋಡೆ ನೀರು ಪಾಲಾಗಿದ್ದು, ರಸ್ತೆ ಕುಸಿಯುವ ಭೀತಿ ಎದುರಾಗಿದೆ. ಬಿ. ಸಿ.ರೋಡ್- ಪುಂಜಾಲಕಟ್ಟೆ ರಾಷ್ಟ್ರೀಯ ಹೆದ್ದಾರಿಯಲ್ಲಿ ಕೆಳಗಿನ ವಗ್ಗ, ಆಲಂಪುರಿ ಕ್ರಾಸ್ ಬಳಿ ರಸ್ತೆ ಬದಿಯ ಗುಡ್ಡ ಜರಿದು 50ಕ್ಕೂ ಹೆಚ್ಚು ಅಡಿಕೆ ಮರಗಳು ಧರೆಗುರುಳಿವೆ.

ಕೃತಕ ನೆರೆ: ಉಡುಪಿ ಜಿಲ್ಲೆಯ ಕಾಪು ತಾಲ್ಲೂಕಿನಲ್ಲಿ ಜನವಸತಿ ಪ್ರದೇಶಗಳು ಜಲಾವೃತಗೊಂಡಿವೆ. ಮನೆಗಳಿಗೆ ನೀರು ನುಗ್ಗಿದೆ. ಮಜೂರು, ಉಳಿಯಾರು, ಕರಂದಾಡಿ, ಮಲ್ಲಾರಿನಲ್ಲಿ ನೆರೆ ಸೃಷ್ಟಿಯಾಗಿದ್ದು, ಜಲಾವೃತ ಪ್ರದೇಶಗಳಲ್ಲಿ ವಾಸವಿದ್ದವರನ್ನು ಸುರಕ್ಷಿತ ಸ್ಥಳಗಳಿಗೆ ಸ್ಥಳಾಂತರಿಸಲಾಗುತ್ತಿದೆ. ಅನಾರೋಗ್ಯ ಪೀಡಿತ ಮಹಿಳೆಯೊಬ್ಬರನ್ನು ಸ್ಥಳೀಯರು ಕುರ್ಚಿಯಲ್ಲಿ ಎತ್ತಿಕೊಂಡು ಸುರಕ್ಷಿತ ಸ್ಥಳಕ್ಕೆ ತಲುಪಿಸಿದರು. ಸಮುದ್ರ ಪ್ರಕ್ಷುಬ್ಧಗೊಂಡಿದ್ದು ಸಮುದ್ರಕ್ಕಿಳಿಯದಂತೆ ಮೀನುಗಾರರಿಗೆ ಸೂಚಿಸಲಾಗಿದೆ.

ಎಡೆಬಿಡದೆ ಸುರಿಯುತ್ತಿರುವ ಮಳೆಗೆ ಬೈಕಂಪಾಡಿಯ ಆದಿಶಕ್ತಿ ಇಂಟರ್‌ಲಾಕ್ ಇಂಡಸ್ಟ್ರಿಗೆ ಹೊಂದಿಕೊಂಡಿರುವ ಮಣ್ಣಿನ ಗುಡ್ಡ ಸಹಿತ ಕಾಂಕ್ರಿಟ್ ತುಂಡುಗಳು ಕುಸಿದು ಬಿದ್ದು ಲಕ್ಷಾಂತರ ರೂಪಾಯಿ ನಷ್ಟ ಸಂಭವಿಸಿದೆ.

ಹೇಮಾವತಿ, ತುಂಗಾ, ಭದ್ರಾ ನದಿಗಳಲ್ಲಿ ಹರಿವಿನ ಪ್ರಮಾಣ ಜಾಸ್ತಿಯಾಗಿದೆ.

ಕಲಬುರ್ಗಿ ವರದಿ: ಕಲಬುರ್ಗಿ ಜಿಲ್ಲೆಯ ಚಿಂಚೋಳಿ ತಾಲ್ಲೂಕಿನ ಸಾಲೇಬೀರನಹಳ್ಳಿ, ದೇಗಲಮಡಿ, ತುಮಕುಂಟಾ, ಶಿರೋಳ್ಳಿ, ಕೆರೋಳ್ಳಿ, ಬೆನಕನಳ್ಳಿ, ಮೊದಲಾದ ಗ್ರಾಮಗಳಲ್ಲಿ ಪ್ರವಾಹ ಪರಿಸ್ಥಿತಿ ತಲೆದೋರಿದೆ. 200ಕ್ಕೂ ಹೆಚ್ಚು ಮನೆಗಳಿಗೆ ನೀರು ನುಗ್ಗಿದೆ.

ಪೋತಂಗಲ್ ಗ್ರಾಮದಲ್ಲಿ ಶನಿವಾರ ಸಂಜೆ ಕಾಗಿಣಾ ನದಿಯಲ್ಲಿ ಪ್ರಹ್ಲಾದ್ ದಶರಥ ದೋಡ್ಡಾ (30) ಎಂಬುವರು ನೀರಿನಲ್ಲಿ ಕೊಚ್ಚಿ ಹೋಗಿದ್ದು, ಅವರಿಗಾಗಿ ಶೋಧ ಮುಂದುವರಿದಿದೆ.

ಸೇಡಂ ತಾಲ್ಲೂಕಿನ 18 ಗ್ರಾಮಗಳಲ್ಲಿ ಅಪಾರ ಮಳೆಯಾಗಿದೆ. ಹೊಲಗಳಲ್ಲಿ ನೀರು ನಿಂತಿದ್ದು, ಅಪಾರ ಪ್ರಮಾಣದ ಬೆಳೆ ನಾಶವಾಗಿದೆ. ಕಾಳಗಿ ತಾಲ್ಲೂಕಿನಲ್ಲಿ ಸತತ ಸುರಿಯುತ್ತಿರುವ ಮಳೆಯಿಂದ ಬೆಣ್ಣೆತೊರಾ ಜಲಾಶಯದ ನೀರಿನ ಒಳಹರಿವು ಹೆಚ್ಚಾಗಿದೆ. ಜಲಾಶಯದಿಂದ ಹೊರಬಿಟ್ಟ ನೀರು ಬಣಬಿ ಗ್ರಾಮದ ಜಮೀನುಗಳಿಗೆ ನುಗ್ಗಿದೆ

ಹೆಚ್ಚು ಮಳೆಯಾದ ಪ್ರದೇಶಗಳು (ಎಲ್ಲವೂ ಉಡುಪಿ ಜಿಲ್ಲೆಗಳು) (ಸೆ.ಮೀ.ಗಳಲ್ಲಿ)

ಕಿರಿಮಂಜೇಶ್ವರ	27.1
ನಾಡ	25.1
ಕುಂದಾಪುರ	12.6
ಬ್ರಹ್ಮಾವರ	12.1
ಕಾಪು	11.5
ಉಡುಪಿ	10.6

ಭಾರಿ ಮಳೆಗೆ ವಿಜಯನಗರ ಜಿಲ್ಲೆ ಹರಪನಹಳ್ಳಿ ತಾಲ್ಲೂಕಿನ ಜಂಗಮ ತುಂಬಿಗೆರೆ ಆಣಜಿಗೆರೆ ಗ್ರಾಮದ ರಸ್ತೆಯ ಮೇಲಿನಿಂದ ಹಳ್ಳದ ನೀರು ಹರಿಯುತ್ತಿದ್ದು, ಎರಡೂ ಗ್ರಾಮಗಳ ನಡುವೆ ಸಂಪರ್ಕ ಕಡಿತಗೊಂಡಿದೆ

ಬಿಡುವು ನೀಡದ ವರುಣ

ಹುಬ್ಬಳ್ಳಿ: ಧಾರವಾಡ, ವಿಜಯಪುರ, ಗದಗ ಹಾಗೂ ಉತ್ತರ ಕನ್ನಡ ಜಿಲ್ಲೆಗಳಲ್ಲಿ ಭಾನುವಾರವೂ ಮಳೆ ಮುಂದುವರಿದಿದೆ. ಉತ್ತರ ಕನ್ನಡ ಜಿಲ್ಲೆಯ ಭಟ್ಕಳ ತಾಲ್ಲೂಕಿನಲ್ಲಿ 20.9 ಸೆಂ.ಮೀ.ನಷ್ಟು ಭಾರಿ ಮಳೆಯಾಗಿದೆ. ಚೌಥನಿಯ ಶರಾಬಿ ನದಿ ಉಕ್ಕಿಹರಿದು ಚೌಥನಿ ಗ್ರಾಮ ಸಂಪೂರ್ಣ ಜಲಾವೃತವಾಗಿದೆ. ಮುಂಡಳ್ಳಿಯ ಹಾವಳಿಕಂಟ ನದಿ, ಮೂಡಭಟ್ಕಳ ಗೋಪಿನಾಥ ನದಿ, ಶಿರಾಲಿ ವೆಂಕಟಾಪುರ ನದಿ, ಬೆಂಗ್ರೆಯಲ್ಲಿ ನದಿ ಉಕ್ಕಿ ಹರಿದು ನೂರಾರು ಮನೆ ಹಾಗೂ ಕೃಷಿ ಭೂಮಿಗೆ ನೀರು ನುಗ್ಗಿದೆ.

ಹೊನ್ನಾವರ ತಾಲ್ಲೂಕಿನಲ್ಲೂ ಮಳೆಯ ಆರ್ಭಟ ಮುಂದುವರಿದಿದೆ. ನಗರೆ ಗ್ರಾಮದ ಹೊಸಹಿತ್ಲದಲ್ಲಿ ಸುಬ್ರಾಯ ಶಂಕರ ಹೆಗಡೆ ಅವರ ಮನೆಯ ಗೋಡೆ ಕುಸಿದಿದೆ.

ಭಟ್ಕಳ ಬಂದರಿನಿಂದ ಕಡಲಿಗಿಳಿದ ಎಂಟು ಪಾತಿ ದೋಣಿಗಳು ನದಿಯ ನೀರಿನ ರಭಸದಿಂದ ಮರಳಿ ದಡಕ್ಕೆ ಬರಲು ಸಾಧ್ಯವಾಗಲಿಲ್ಲ. ಎನ್‌.ಡಿ.ಆರ್‌.ಎಫ್ ತರಬೇತಿ ಪಡೆದ ಕರಾವಳಿ ಕಾವಲು ಪೊಲೀಸ್ ಪಡೆ ಸ್ಥಳಕ್ಕೆ ಧಾವಿಸಿ, ದೋಣಿಗಳನ್ನು ರಕ್ಷಣೆ ಮಾಡಿದೆ. ತುಂಗಭದ್ರಾ ಜಲಾಶಯದ ಒಳಹರಿವು ಸತತ ಹೆಚ್ಚಳವಾಗುತ್ತಿದೆ. ಭಾನುವಾರ 57,127 ಕ್ಯುಸೆಕ್ ಒಳಹರಿವು ದಾಖಲಾಗಿದೆ.

ಕೊಡಗಿನಲ್ಲಿ ಮತ್ತೆ ಮಳೆ ಬಿರುಸು

ಮಡಿಕೇರಿ/ಹಾಸನ/ಮೈಸೂರು: ಕೊಡಗು ಜಿಲ್ಲೆಯಲ್ಲಿ ಎರಡು ದಿನ ಬಿಡುವು ನೀಡಿದ್ದ ಮಳೆ ಮತ್ತೆ ಬಿರುಸು ಪಡೆದಿದೆ. ಭಾನುವಾರ ದಿನವಿಡೀ ಧಾರಾಕಾರ ಮಳೆಯಾಗಿದೆ.

ನಿರಂತರ ಮಳೆಯಿಂದ ನದಿಗಳಲ್ಲಿ ನೀರಿನ ಹರಿವು ಹೆಚ್ಚಾಗಿದೆ. ಬಲಮುರಿಯಲ್ಲಿ ಕಿರುಸೇತುವೆ ಮಟ್ಟಕ್ಕೆ ಕಾವೇರಿ ನದಿ ನೀರು ಹರಿಯುತ್ತಿದೆ. ಭಾಗಮಂಡಲ ವ್ಯಾಪ್ತಿಯಲ್ಲಿ ಮಳೆ ನಿರಂತರ ಮಳೆಯಾಗುತ್ತಿದ್ದು, ಪ್ರವಾಹದ ಭೀತಿ ಎದುರಾಗಿದೆ.

ಬೇಲೂರು ತಾಲ್ಲೂಕಿನ ಬೆಳ್ಳಾವರ, ಹೊಸಳ್ಳಿ ಮಾರ್ಗವಾಗಿ ಅರೇಹಳ್ಳಿ ಗ್ರಾಮಕ್ಕೆ ಸಂಪರ್ಕ ಕಲ್ಪಿಸುವ ಮಲ್ಲಿಗನೂರು ಸೇತುವೆಯ ಎರಡೂ ಬದಿ ಮಣ್ಣು ಕುಸಿಯತೊಡಗಿದೆ. ಸಂಪರ್ಕ ಕಡಿತಗೊಳ್ಳುವ ಆತಂಕ ಗ್ರಾಮಸ್ಥರಿಗೆ ಉಂಟಾಗಿದೆ.

ಚಿತ್ರದುರ್ಗದಲ್ಲಿ 26 ಮನೆಗಳಿಗೆ ಭಾಗಶಃ ಹಾನಿ

ದಾವಣಗೆರೆ, ಶಿವಮೊಗ್ಗ, ಚಿತ್ರದುರ್ಗ: ಶಿವಮೊಗ್ಗ ಜಿಲ್ಲೆಯಲ್ಲಿ ಕಳೆದ ಎರಡು ದಿನಗಳಿಂದ ತುಸು ತಗ್ಗಿದ್ದ ಮಳೆ ಭಾನುವಾರ ಹಲವೆಡೆ ಬೆಳಿಗ್ಗೆಯಿಂದ ಜೋರಾಗಿ ಸುರಿಯಿತು.

ಶರಾವತಿ ಕಣಿವೆ ಪ್ರದೇಶದಲ್ಲಿ ಧಾರಾಕಾರವಾಗಿ ಮಳೆ ಸುರಿದಿದ್ದು, ಲಿಂಗನಮಕ್ಕಿ ಜಲಾಶಯದ ಒಳಹರಿವು ಹೆಚ್ಚತೊಡಗಿದೆ. ಜೋಗದ ಸುತ್ತಮುತ್ತ ಧಾರಾಕಾರ ಮಳೆ ಸುರಿಯುತ್ತಿದ್ದು, ಜಲಪಾತದ ನಾಲ್ಕು ಕವಲುಗಳಾದ ರಾಜ, ರಾಣಿ, ರೋರರ್, ರಾಕೆಟ್ ತುಂಬಿ ಹರಿಯುತ್ತಿವೆ.

ಚಿತ್ರದುರ್ಗ ಜಿಲ್ಲೆಯಲ್ಲಿ 26 ಮನೆಗಳಿಗೆ ಭಾಗಶಃ ಹಾನಿ ಉಂಟಾಗಿದೆ. ಚಳ್ಳಕೆರೆ ತಾಲ್ಲೂಕಿನ ತಳಕು ಹೋಬಳಿಯ ತಪ್ಪಗೊಂಡನಹಳ್ಳಿಯಲ್ಲಿ ಕೆರೆಯ ನೀರು ನುಗ್ಗಿ 36 ಎಕರೆ ಜಮೀನಿನಲ್ಲಿದ್ದ ಬೆಳೆ ನಷ್ಟವಾಗಿದೆ.

ದಾವಣಗೆರೆ ಜಿಲ್ಲೆಯ ಕಾಡಜ್ಜಿ–ಆಲೂರುಹಳ್ಳ ತುಂಬಿದೆ. ಕಾಡಜ್ಜಿಯ ಕೆಪಿಟಿಸಿಎಲ್ ಉಪಕೇಂದ್ರದ ಕಟ್ಟಡಲ್ಲಿ ಸಿಲುಕಿದ್ದ ಸಿಬ್ಬಂದಿಯನ್ನು ರಕ್ಷಿಸಲಾಗಿದೆ. ದಾವಣಗೆರೆ ತಾಲ್ಲೂಕಿನ ಕಡ್ಲೆಬಾಳು ಗ್ರಾಮದ ಜಮೀನಿನಲ್ಲಿ ಟ್ರ್ಯಾಕ್ಟರ್ ಮುಳುಗಡೆಯಾಗಿದ್ದು, ಮಾಗಾನಹಳ್ಳಿ ಓಬಜ್ಜಿ ಮಧ್ಯದ ರಸ್ತೆ ಸಂಪರ್ಕ ಕಡಿತಕೊಂಡಿದೆ.

ನಾಟಿಗೆ ಹಾಕಿದ್ದ ಭತ್ತದ ಮಡಿ, ಮೆಕ್ಕೆಜೋಳ ಬೆಳೆ ನೀರಿನಲ್ಲಿ ಮುಳುಗಿದೆ. ಸಂತೇಬೆನ್ನೂರಿನ ಪುಷ್ಕರಣಿಯ ಜಲಹರಿ ಮಂಟಪದಿಂದ ನೀರು ಧುಮ್ಮಿಕ್ಕುತ್ತಿದೆ.

ಉಚ್ಚಂಗಿದುರ್ಗದ ಫಣಿಯಾಪುರ ಗ್ರಾಮದಲ್ಲಿ ತಂತಿಬೇಲಿ ಹಾಕಿ ಕಟ್ಟಿದ್ದ ಕೆಂಚಪ್ಪ ಎಂಬುವರ 9 ಮೇಕೆಗಳು ಮಳೆ ನೀರಿನಲ್ಲಿ ಕೊಚ್ಚಿಕೊಂಡು ಹೋಗಿವೆ.

ಮಣ್ಣು ತೆರವು: ರೈಲು ಸಂಚಾರ ಪುನರಾರಂಭ

ಮಂಗಳೂರು: ನಗರ ಹೊರವಲಯದ ಕುಲಶೇಖರ ಬಳಿ ರೈಲ್ವೆ ಹಳಿಗೆ ತಡೆಗೋಡೆ ಸಹಿತ ಮಣ್ಣು ಕುಸಿದ ಪರಿಣಾಮ ಸ್ಥಗಿತಗೊಂಡಿದ್ದ ರೈಲು ಸಂಚಾರ ಭಾನುವಾರದಿಂದ ಪುನರಾರಂಭ ಗೊಂಡಿದೆ. ಬೆಳಿಗ್ಗೆ 8.45ರ ವೇಳೆಗೆ ಎರ್ನಾಕುಳಂನಿಂದ ಅಜ್ಮೀರ್‌ಗೆ ಹೋಗುವ ರೈಲು ಈ ಮಾರ್ಗದಲ್ಲಿ ಪ್ರಯಾಣ ಬೆಳೆಸಿತು. ಶನಿವಾರ ತಡರಾತ್ರಿಯವರೆಗೂ ತೆರವು ಕಾರ್ಯ ನಡೆಯಿತು.

ಮತ್ತೆ ಧರೆ ಕುಸಿತ: ಭಾನುವಾರ ಬೆಳಿಗ್ಗೆ ಮಂಗಳೂರು ಜಂಕ್ಷನ್- ಯಶವಂತಪುರ ಎಕ್ಸ್‌ಪ್ರೆಸ್ ಪ್ರಯಾಣಿಕರ ರೈಲು ಚಲಿಸುತ್ತಿರುವಾಗ ಪುತ್ತೂರು- ಕಬಕ- ಸುಬ್ರಹ್ಮಣ್ಯ ಮಾರ್ಗದಲ್ಲಿ ವೀರಮಂಗಲದ ಬಳಿ ಏಕಾಏಕಿ ಧರೆ ಕುಸಿದ ಪರಿಣಾಮ ರೈಲಿನ ಗಾರ್ಡ್‌ಗೆ ಹಾನಿಯಾಗಿದೆ. ಒಂದು ತಾಸಿನಲ್ಲಿ ಮಣ್ಣು ತೆರವು ಮಾಡಿ, ರೈಲು ಸಂಚಾರಕ್ಕೆ ಅನುವು ಮಾಡಿಕೊಡಲಾಯಿತು.

ಮೈದುಂಬಿದ ಉತ್ತರ ಪಿನಾಕಿನಿ

ಚಿಕ್ಕಬಳ್ಳಾಪುರ: ಜಿಲ್ಲೆಯ ಬಹುತೇಕ ಕಡೆಗಳಲ್ಲಿ ಶನಿವಾರ ರಾತ್ರಿ ರಭಸದ ಮಳೆ ಸುರಿದಿದೆ. ಹಳ್ಳ, ಕೊಳ್ಳಗಳು, ಜಲಾಶಯಗಳಿಗೆ ಹೆಚ್ಚು ನೀರು ಹರಿದು ಬಂದಿದೆ. ಅಪಾರ ಪ್ರಮಾಣದಲ್ಲಿ ಬೆಳೆ ನಷ್ಟವಾಗಿದೆ.

ಗೌರಿಬಿದನೂರು ತಾಲ್ಲೂಕಿನ ಉತ್ತರ ಪಿನಾಕಿನಿ ನದಿ ಮೈದುಂಬಿ ಹರಿಯುತ್ತಿದೆ.

ಕೊಳ್ಳೇಗಾಲ ತಾಲ್ಲೂಕಿನ ಭರಚುಕ್ಕಿ ಜಲಪಾತ ಬೋರ್ಗರೆಯುತ್ತಿದ್ದು, ಅದನ್ನು ವೀಕ್ಷಿಸಲು ಭಾನುವಾರ ಸೇರಿದ್ದ ಜನಸ್ತೋಮ

ಸಚಿವ ಆನಂದ್ ಸಿಂಗ್‌ಗೆ ಪಿತೃ ವಿಯೋಗ

ಹೊಸಪೇಟೆ (ವಿಜಯನಗರ): ಮೂಲಸೌಕರ್ಯ ಅಭಿವೃದ್ಧಿ, ಹಜ್ ಮತ್ತು ವಕ್ಫ್ ಖಾತೆ ಸಚಿವ ಆನಂದ್ ಸಿಂಗ್ ಅವರ ತಂದೆ ಪೃಥ್ವಿರಾಜ್ ಸಿಂಗ್ (84) ಭಾನುವಾರ ಇಲ್ಲಿನ ರಾಣಿಪೇಟೆಯ ಅವರ ನಿವಾಸದಲ್ಲಿ ನಿಧನ ಹೊಂದಿದರು.

ಅನಾರೋಗ್ಯದಿಂದ ಬಳಲುತ್ತಿದ್ದ ಅವರು, ಅನೇಕ ದಿನಗಳಿಂದ ಬೆಂಗಳೂರಿನ ಖಾಸಗಿ ಆಸ್ಪತ್ರೆಗೆ ದಾಖಲಾಗಿದ್ದರು. ಚೇತರಿಸಿಕೊಂಡು ಇತ್ತೀಚೆಗಷ್ಟೇ ಮನೆಗೆ ಮರಳಿದ್ದರು. ಭಾನುವಾರ ಪುನಃ ಅವರ ಆರೋಗ್ಯದಲ್ಲಿ ಏರುಪೇರಾಗಿ ಮಧ್ಯಾಹ್ನ 12ಕ್ಕೆ ನಿಧನರಾದರು. ಸಂಜೆ ರಾಣಿಪೇಟೆಯಲ್ಲಿ ಅಂತ್ಯಕ್ರಿಯೆ ನೆರವೇರಿತು.

ಪೃಥ್ವಿರಾಜ್ ಸಿಂಗ್

ಬಳ್ಳಾರಿ ಜಿಲ್ಲೆ ಕಂಪ್ಲಿ ತಾಲ್ಲೂಕಿನ ಶಂಕರ್ ಸಿಂಗ್ ಕ್ಯಾಂಪಿನ ನಿವಾಸಿಯಾದ ಪೃಥ್ವಿರಾಜ್ ಸಿಂಗ್ ಅವರು ಸಾರಿಗೆ ಉದ್ಯಮ ನಡೆಸುತ್ತಿದ್ದರು. ಬಳಿಕ ನಗರದ ರಾಣಿಪೇಟೆಯಲ್ಲಿ ಬಂದು ನೆಲೆಸಿದ್ದರು. ಮೃತರ ಮೊದಲ ಪತ್ನಿ ಹಲವು ವರ್ಷಗಳ ಹಿಂದೆಯೇ ತೀರಿಕೊಂಡಿದ್ದಾರೆ. ಅವರಿಗೆ ಇಬ್ಬರು ಗಂಡು, ಒಬ್ಬ ಹೆಣ್ಣು ಮಗಳಿದ್ದಾರೆ. ಅವರ ಎರಡನೇ ಪತ್ನಿಗೆ ಆನಂದ್ ಸಿಂಗ್ ಏಕೈಕ ಪುತ್ರ. ಪೃಥ್ವಿರಾಜ್ ಸಿಂಗ್ ಅವರು ನೇತ್ರದಾನ ಮಾಡಿದ್ದಾರೆ.

ಪಶ್ಚಿಮ, ಉತ್ತರ ಭಾರತದಲ್ಲಿ ಭಾರಿ ಮಳೆ

ಪ್ರಜಾವಾಣಿ ವಾರ್ತೆ

ಪಶ್ಚಿಮ ಭಾರತದ ರಾಜ್ಯಗಳು ಮತ್ತು ಉತ್ತರ ಭಾರತದ ರಾಜ್ಯಗಳಲ್ಲಿ ಭಾನುವಾರ ರಾತ್ರಿಯಿಂದ ಬುಧವಾರ ರಾತ್ರಿಯವರೆಗೆ ಭಾರಿ ಮಳೆಯಾಗಲಿದೆ ಎಂದು ಹವಾಮಾನ ಇಲಾಖೆ ಹೇಳಿದೆ. ಈ ರಾಜ್ಯಗಳ ಆಯ್ದ ಜಿಲ್ಲೆಗಳಲ್ಲಿ ಕಟ್ಟೆಚ್ಚರ ವಹಿಸಲಾಗಿದೆ. ಅಹಿತಕರ ಘಟನೆಗಳನ್ನು ಎದುರಿಸಲು ರಾಜ್ಯ ವಿಕೋಪ ನಿರ್ವಹಣಾ ಪಡೆಗಳು ಸಜ್ಜಾಗಿವೆ. ಗುರುವಾರದ ನಂತರ ಮಧ್ಯ ಭಾರತ ಮತ್ತು ಪೂರ್ವ ಭಾರತದ ರಾಜ್ಯಗಳಲ್ಲಿ ಭಾರಿ ಮಳೆಯಾಗಲಿದೆ ಹವಾಮಾನ ಇಲಾಖೆ ಹೇಳಿದೆ

- ದೆಹಲಿ ಮತ್ತು ಚಂಡೀಗಡದಲ್ಲಿ ಸೋಮವಾರ ಭಾರಿ ಮಳೆಯಾಗುವ ಸಂಭವವಿದೆ
- ಪಂಜಾಬ್, ಹರಿಯಾಣ ಮತ್ತು ರಾಜಸ್ಥಾನದಲ್ಲಿ ಬುಧವಾರದವರೆಗೂ ಭಾರಿ ಮಳೆಯಾಗುವ ನಿರೀಕ್ಷೆ ಇದೆ
- ಹಿಮಾಚಲ ಪ್ರದೇಶ, ಜಮ್ಮು-ಕಾಶ್ಮೀರ, ಲಡಾಖ್ ಮತ್ತು ಉತ್ತರಾಖಂಡದಲ್ಲಿ ಬುಧವಾರದವರೆಗೂ ಗುಡುಗು-ಮಿಂಚು ಸಹಿತ ಭಾರಿ ಮಳೆಯ ಮುನ್ಸೂಚನೆ ನೀಡಲಾಗಿದೆ
- ಉತ್ತರ ಪ್ರದೇಶ ಮತ್ತು ಮಧ್ಯಪ್ರದೇಶದಲ್ಲಿ ಬುಧವಾರದವರೆಗೂ ಭಾರಿ ಮಳೆಯಾಗಲಿದೆ
- ಮಹಾರಾಷ್ಟ್ರದ ಕೊಂಕಣ ಪ್ರದೇಶದಲ್ಲಿ ಆಗುತ್ತಿರುವ ಭಾರಿ ಮಳೆ ಬುಧವಾರದವರೆಗೂ ಮುಂದುವರಿಯಲಿದೆ. ಗೋವಾದಲ್ಲೂ ಭಾರಿ ಮಳೆ ಇರಲಿದೆ
- ಕರ್ನಾಟಕದ ಕರಾವಳಿ ಮತ್ತು ದಕ್ಷಿಣ ಒಳನಾಡಿನ ಅಲ್ಲಲ್ಲಿ ಬುಧವಾರದವರೆಗೂ ಭಾರಿ ಮಳೆ ಸುರಿಯಲಿದೆ

ಮುಂಬೈ

ಮುಂಬೈನಲ್ಲಿ ಮುಂದಿನ ಮೂರು ದಿನ ಭಾರಿ ಮಳೆಯಾಗಲಿದೆ ಎಂದು ಹವಾಮಾನ ಇಲಾಖೆ ಮುನ್ಸೂಚನೆ ನೀಡಿದೆ. ಶನಿವಾರ ರಾತ್ರಿಯಿಂದ ಭಾನುವಾರ ಬೆಳಿಗ್ಗೆವರೆಗೆ ಸುರಿದ ಮಳೆಯಿಂದಾಗಿ ನಗರದ ಹಲವೆಡೆ ಪ್ರವಾಹ ಸ್ಥಿತಿ ತಲೆದೋರಿದೆ. ಮತ್ತೆ ಭಾರಿ ಮಳೆಯಾಗುವ ಸಂಭವ ಇರುವುದರಿಂದ ನಗರವಾಸಿಗಳು ಅನಗತ್ಯವಾಗಿ ಮನೆಯಿಂದ ಹೊರಗೆ ಬರಬಾರದು ಎಂದು ಬೃಹನ್ ಮುಂಬೈ ಮಹಾನಗರ ಪಾಲಿಕೆ ಸೂಚನೆ ನೀಡಿದೆ

- ನಗರದ ಹಲವೆಡೆ ರಸ್ತೆಗಳು ಜಲಾವೃತ, ಸಂಚಾರ ಅಸ್ತವ್ಯಸ್ಥ. ಬಸ್ ಸಂಚಾರ ಸ್ಥಗಿತ
- ಹಳಿಗಳು ಜಲಾವೃತವಾದ ಕಾರಣ ಮುಂಬೈ ಉಪನಗರ ರೈಲುಗಳ ಸಂಚಾರ ಸ್ಥಗಿತ
- ಬೊರಿವಿಲಿ ಪ್ರದೇಶದಲ್ಲಿ ಪ್ರವಾಹದ ನೀರಿನಲ್ಲಿ ಕೊಚ್ಚಿಹೋದ ಕಾರುಗಳು

180 ಮಿಲಿ ಮೀಟರ್ ಮುಂಬೈನಲ್ಲಿ ಶನಿವಾರ ರಾತ್ರಿಯಿಂದ ಭಾನುವಾರ ಬೆಳಿಗ್ಗೆವರೆಗೆ ಸುರಿದ ಮಳೆಯ ಪ್ರಮಾಣ

204.07 ಮಿಲಿಮೀಟರ್ ಪೂರ್ವ ಮುಂಬೈನಲ್ಲಿ ಸುರಿದ ಮಳೆಯ ಪ್ರಮಾಣ

195.48 ಮಿಲಿಮೀಟರ್ ಪಶ್ಚಿಮ ಮುಂಬೈನಲ್ಲಿ ಸುರಿದ ಮಳೆಯ ಪ್ರಮಾಣ

ಮಧ್ಯಪ್ರದೇಶ

ರಾಜ್ಯದ ಹಲವೆಡೆ ಶನಿವಾರ ರಾತ್ರಿಯಿಂದ ಭಾನುವಾರ ಬೆಳಿಗ್ಗೆವರೆಗೆ ಭಾರಿ ಮಳೆಯಾಗಿದೆ. ಆದರೆ ಯಾವುದೇ ಅಹಿತಕರ ಘಟನೆಗಳು ನಡೆದ ಬಗ್ಗೆ ವರದಿಯಾಗಿಲ್ಲ. ರಾಜ್ಯದ ಹಲವೆಡೆ ಇನ್ನೂ ಮೂರು ದಿನ ಭಾರಿ ಮಳೆಯಾಗುವ ಸಂಭವವಿದೆ. ಹೀಗಾಗಿ 11 ಜಿಲ್ಲೆಗಳಲ್ಲಿ ಯೆಲ್ಲೋ ಅಲರ್ಟ್ ಘೋಷಿಸಲಾಗಿದೆ. ಭೋಪಾಲ್, ಇಂದೋರ್, ಗ್ವಾಲಿಯರ್, ಜಬಲ್‌ಪುರ, ರೇವಾ, ದಾಮೋಹ್ ಜಿಲ್ಲೆಗಳಲ್ಲಿ ಮುಂದಿನ ಎರಡು ದಿನಗಳಲ್ಲಿ ಗುಡುಗು ಸಹಿತ ಭಾರಿ ಮಳೆಯಾಗಲಿದೆ ಎಂದು ಹವಾಮಾನ ಇಲಾಖೆ ಮುನ್ಸೂಚನೆ ನೀಡಿದೆ.

142 ಮಿಲಿಮೀಟರ್ ಶಿವಪುರಿ ಜಿಲ್ಲೆಯಲ್ಲಿ ಭಾನುವಾರ ಸುರಿದ ಮಳೆಯ ಪ್ರಮಾಣ

ಗುಜರಾತ್

ದಕ್ಷಿಣ ಗುಜರಾತ್‌ನ ಹಲವು ಪ್ರದೇಶಗಳಲ್ಲಿ ಭಾನುವಾರ ಭಾರಿ ಮಳೆಯಾಗಿದ್ದು, ಪ್ರವಾಹ ಸ್ಥಿತಿ ಉಂಟಾಹಿದೆ. ದಕ್ಷಿಣ ಗುಜರಾತ್‌ನ ವಲ್ಸಾದ್, ವಾಪಿ ಮತ್ತು ನವಸಾರಿ ಪ್ರದೇಶದಲ್ಲಿ ಭಾನುವಾರ ಬೆಳಿಗ್ಗೆಯಿಂದ ಭಾರಿ ಮಳೆಯಾಗುತ್ತಿದೆ. ಬುಧವಾರದವರೆಗೂ ಈ ಪ್ರದೇಶಗಳಲ್ಲಿ ಭಾರಿ ಮಳೆಯಾಗುವ ಸಂಭವವಿದೆ ಎಂದು ಹವಾಮಾನ ಇಲಾಖೆ ಮುನ್ನೆಚ್ಚರಿಕೆ ನೀಡಿದೆ. ಪ್ರವಾಹ ಸ್ಥಿತಿ ತಲೆದೋರಿದ್ದರೂ ಯಾವುದೇ ಅಹಿತಕರ ಘಟನೆ ವರದಿಯಾಗಿಲ್ಲ. ಸಮುದ್ರಕ್ಕೆ ಇಳಿಯದಂತೆ ಮೀನುಗಾರರಿಗೆ ಎಚ್ಚರಿಕೆ ನೀಡಲಾಗಿದೆ.

226 ಮಿಲಿಮೀಟರ್ ವಾಪಿಯಲ್ಲಿ ಬಳಿಗ್ಗೆ 6ರಿಂದ ಸಂಜೆ 4ರವರೆಗೆ ಸುರಿದ ಮಳೆಯ ಪ್ರಮಾಣ

232 ಮಿಲಿಮೀಟರ್ ಉಮರ್‌ಗಾಂನಲ್ಲಿ ಸುರಿದ ಮಳೆಯ ಪ್ರಮಾಣ

143 ಮಿಲಿಮೀಟರ್ ವಲ್ಸಾದ್ ಪಟ್ಟಣದಲ್ಲಿ ಸುರಿದ ಮಳೆಯ ಪ್ರಮಾಣ

120 ಮಿಲಿಮೀಟರ್ ನವಸಾರಿಯಲ್ಲಿ ಸುರಿದ ಮಳೆಯ ಪ್ರಮಾಣ

118 ಮಿಲಿಮೀಟರ್ ಸೂರತ್ ಜಿಲ್ಲೆಯಲ್ಲಿ ಸುರಿದ ಮಳೆಯ ಪ್ರಮಾಣ

ಮುಂಬೈ: ಪರಿಹಾರ ಘೋಷಣೆ

ಮುಂಬೈ ಮಳೆ ಅವಘಡದಲ್ಲಿ ಮೃತಪಟ್ಟವರ ಕುಟುಂಬಗಳಿಗೆ ಕೇಂದ್ರ ಸರ್ಕಾರ ಮತ್ತು ರಾಜ್ಯ ಸರ್ಕಾರ ಪರಿಹಾರ ಘೋಷಿಸಿವೆ.

ಈ ಘಟನೆಗಳ ಬಗ್ಗೆ ಸಂತಾಪ ಸೂಚಿಸಿ ಪ್ರಧಾನಿ ನರೇಂದ್ರ ಮೋದಿ ಅವರು ಟ್ವೀಟ್ ಮಾಡಿದ್ದಾರೆ. ಮೃತರ ಕುಟುಂಬದವರಿಗೆ ₹ 2 ಲಕ್ಷ ಪರಿಹಾರ ಮತ್ತು ಗಾಯಾಳುಗಳಿಗೆ ತಲಾ ₹ 50,000 ನೆರವು ಘೋಷಿಸಿದ್ದಾರೆ. ರಾಜ್ಯ ಸರ್ಕಾರವು ಮೃತರ ಕುಟುಂಬಗಳಿಗೆ ₹ 5 ಲಕ್ಷ ಪರಿಹಾರ ಘೋಷಿಸಿದೆ.

ಭೂಕುಸಿತದ ಮಾರಿ: ಭಾನುವಾರ ಸುರಿದ ಮಳೆಯಲ್ಲಿ ಭೂಕುಸಿದು 22 ಜನರು ಮೃತಪಟ್ಟಿದ್ದಾರೆ. 29 ವರ್ಷಗಳಲ್ಲಿ ಮುಂಬೈ ನಗರವೊಂದರಲ್ಲೇ ಮಳೆಯಿಂದ ಭೂಕುಸಿದು 290 ಜನರು ಮೃತಪಟ್ಟಿದ್ದಾರೆ. 300ಕ್ಕೂ ಹೆಚ್ಚು ಜನರು ಗಾಯಗೊಂಡಿದ್ದಾರೆ.

ನಗರದ ವಿವಿಧ ಪ್ರದೇಶಗಳಲ್ಲಿ ಭೂಕುಸಿತದ ಅಪಾಯವಿರುವ 257 ಪ್ರದೇಶಗಳನ್ನು ಗುರುತಿಸಲಾಗಿದೆ. ಈ ಪ್ರದೇಶಗಳಲ್ಲಿ 22,483 ಜನರು ವಾಸಿಸುತ್ತಿದ್ದಾರೆ. ಈ ಜನರನ್ನು ಸುರಕ್ಷಿತ ಪ್ರದೇಶಗಳಿಗೆ ಸ್ಥಳಾಂತರ ಮಾಡಲು 2011ರಲ್ಲೇ ಶಿಫಾರಸು ಮಾಡಲಾಗಿತ್ತು. ಆದರೆ ಶಿಫಾರಸುಗಳು ಕಾರ್ಯರೂಪಕ್ಕೆ ಬಂದಿಲ್ಲ.

ಧಾರಾಕಾರ ಮಳೆ ಸಾಧ್ಯತೆ

ಬೆಂಗಳೂರು: 'ಮುಂಗಾರು ಚುರುಕಾಗಿರುವುದು ಹಾಗೂ ಬಂಗಾಳ ಕೊಲ್ಲಿಯಲ್ಲಿ ವಾಯುಭಾರ ಕುಸಿತದಿಂದಾಗಿ ರಾಜ್ಯದ ಬಹುತೇಕ ಜಿಲ್ಲೆಗಳಲ್ಲಿ ಜುಲೈ 19 ರಿಂದ 22ರ ವರೆಗೆ ಗುಡುಗು, ಸಿಡಿಲು ಸಹಿತ ಧಾರಾಕಾರ ಮಳೆಯಾಗುವ ಮುನ್ಸೂಚನೆ ಇದೆ' ಎಂದು ಹವಾಮಾನ ಇಲಾಖೆ ನಿರ್ದೇಶಕ ಸಿ.ಎಸ್.ಪಾಟೀಲ ತಿಳಿಸಿದರು.

'ಕರಾವಳಿ ಜಿಲ್ಲೆಗಳಲ್ಲಿ ಐದು ದಿನಗಳಿಂದ ವ್ಯಾಪಕ ಮಳೆಯಾಗಿದೆ. ಉತ್ತರಕನ್ನಡ, ದಕ್ಷಿಣಕನ್ನಡ, ಉಡುಪಿ, ಚಿಕ್ಕಮಗಳೂರು, ಹಾಸನ, ಕೊಡಗು, ಶಿವಮೊಗ್ಗ ಜಿಲ್ಲೆಗಳಲ್ಲಿ ಜು. 19 ಮತ್ತು 20ರಂದು ಭಾರಿ ಮಳೆಯಾಗುವ ಸಾಧ್ಯತೆ ಇರುವುದರಿಂದ 'ರೆಡ್ ಅಲರ್ಟ್' ಘೋಷಿಸಲಾಗಿದೆ' ಎಂದರು.

'ಕರಾವಳಿಯಲ್ಲಿ ಗಂಟೆಗೆ 60 ಕಿ.ಮೀ ವೇಗದಲ್ಲಿ ಗಾಳಿ ಬೀಸುತ್ತಿದೆ. 3.7 ಮೀಟರ್‌ಗಳಷ್ಟು ಎತ್ತರದ ಅಲೆಗಳೂ ಏಳುವ ಮುನ್ಸೂಚನೆ ಇರುವುದರಿಂದ ಮೀನುಗಾರರು ಸಮುದ್ರಕ್ಕೆ ಇಳಿಯಬಾರದು. ದಾವಣಗೆರೆ, ಹಾವೇರಿ, ಧಾರವಾಡ, ಬಾಗಲಕೋಟೆ, ಬೆಳಗಾವಿ ಜಿಲ್ಲೆಗಳಲ್ಲೂ ಹೆಚ್ಚು ಮಳೆಯಾಗುವ ಸೂಚನೆ ಇರುವುದರಿಂದ 'ಆರೆಂಜ್ ಅಲರ್ಟ್' ಘೋಷಿಸಲಾಗಿದೆ. ಬೀದರ್, ಕಲಬುರ್ಗಿ, ಕೊಪ್ಪಳ, ವಿಜಯಪುರ, ಯಾದಗಿರಿ, ಬಳ್ಳಾರಿ, ಚಾಮರಾಜನಗರ, ಚಿತ್ರದುರ್ಗ, ಮೈಸೂರು ಜಿಲ್ಲೆಗಳಲ್ಲಿ 'ಯೆಲ್ಲೊ ಅಲರ್ಟ್' ನೀಡಲಾಗಿದೆ' ಎಂದು ಹೇಳಿದರು.

ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ

ಮುಖ್ಯ ಇಂಜಿನಿಯರ್, ಗ್ರಾಕುನೀ&ನೈಇ, 1ನೇ ಮಹಡಿ ಇ–ಬ್ಲಾಕ್, ಕೆಹೆಚ್‌ಬಿ ಕಟ್ಟಡ, ಕಾವೇರಿ ಭವನ, ಕೆ.ಜಿ.ರಸ್ತೆ, ಬೆಂಗಳೂರು–560009

ಸಂಖ್ಯೆ ಗ್ರಾಕುನೀ&ನೈಇ/25/ತಾಂತ್ರಿಕ/ಸ.ಇಂ–10/2020–21/ಕರೆ–2 ದಿನಾಂಕ: 16–07–2021

ಅಲ್ಪಾವಧಿ ಟೆಂಡರ್ ಪ್ರಕಟಣೆ

ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆಯಡಿಯಲ್ಲಿ ಹಲವಾರು ಗ್ರಾಮೀಣ ಕುಡಿಯುವ ನೀರು ಯೋಜನೆಗಳ ಅನುಷ್ಠಾನಕ್ಕಾಗಿ Project Management Unit ಸೇವೆ ಒದಗಿಸುವ ಅರ್ಹ ಸಲಹಾ ಸಂಸ್ಥೆಯನ್ನು ಗೊತ್ತುಪಡಿಸುವ ಸಲುವಾಗಿ ಕೆ.ಟಿ.ಪಿ.ಪಿ. ನಿಯಮಾವಳಿಯ ಮೇರೆಗೆ ಇ–ಪ್ರೊಕ್ಯೂರ್‌ಮೆಂಟ್ ಮುಖಾಂತರ ಟೆಂಡರ್‌ಗಳನ್ನು ತಾಂತ್ರಿಕ ಮತ್ತು ಆರ್ಥಿಕ ಎರಡು ಲಕೋಟೆ ಪದ್ಧತಿಯಲ್ಲಿ ಆಹ್ವಾನಿಸಲಾಗಿದೆ.

ಟೆಂಡರ್‌ಗಳನ್ನು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಸಲ್ಲಿಸುವ ಕೊನೆಯ **ದಿನಾಂಕ : 09–08–2021ರಂದು ಸಂಜೆ 5:30** ಗಂಟೆಯವರೆಗೆ ಮತ್ತು ಪ್ರಿ–ಬಿಡ್ ಸಭೆಯನ್ನು **ದಿನಾಂಕ : 26–07–2021ರಂದು** ಟೆಂಡರ್ ಡಾಕ್ಯುಮೆಂಟ್‌ನಲ್ಲಿ ತಿಳಿಸಿರುವ ಪ್ರಕಾರ ನಡೆಸಲಾಗುವುದು. ಟೆಂಡರ್‌ಗಿಟ್ಟ ಮೊತ್ತ **ರೂ.8.45 ಕೋಟಿಗಳು** (ಜಿ.ಎಸ್.ಟಿ. ಹೊರತುಪಡಿಸಿ) **ಮತ್ತು ಇ.ಎಂ.ಡಿ. ಮೊತ್ತ ರೂ. 10,00,000/–**

ಹೆಚ್ಚಿನ ವಿವರಗಳನ್ನು ವೆಬ್‌ಸೈಟ್ **www.eproc.karnataka.gov.in** ನಲ್ಲಿ ಅಥವಾ ಈ ಕಛೇರಿಯ ದೂರವಾಣಿ ಸಂಖ್ಯೆ 080–22533700ಗೆ ಕಛೇರಿ ವೇಳೆ ಸಂಪರ್ಕಿಸಿ ಮಾಹಿತಿ ಪಡೆಯಬಹುದಾಗಿರುತ್ತದೆ.

ಮುಖ್ಯ ಇಂಜಿನಿಯರ್,
ಗ್ರಾಕುನೀ&ನೈ ಇಲಾಖೆ, ಬೆಂಗಳೂರು

ವಾ.ಸ.ಇ/ಬೆಂ.ನಗರ/R.O. No. 879/2020-21

ಕೋವಿಡ್–19 ಆತಂಕ ಬೇಡ: ಮುನ್ನೆಚ್ಚರಿಕೆ ಇರಲಿ

ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಒಳನೋಟ

ಸೊರಗಿದ ಆಟೋಟ

ಬೆಂಗಳೂರು: 'ಆಟಕ್ಕೂ ಕೋವಿಡ್ ಕಾಟ' ಶೀರ್ಷಿಕೆಯಡಿ 'ಪ್ರಜಾವಾಣಿ'ಯಲ್ಲಿ ಭಾನುವಾರ (ಜು.18) ಪ್ರಕಟವಾದ 'ಒಳನೋಟ' ವರದಿಗೆ ರಾಜ್ಯದಾದ್ಯಂತ ಓದುಗರು ಪ್ರತಿಕ್ರಿಯಿಸಿದ್ದಾರೆ. ಆಯ್ದ ಪ್ರತಿಕ್ರಿಯೆಗಳು ಇಲ್ಲಿವೆ.

'ಆರೋಗ್ಯ ಸಮತೋಲನಕ್ಕೆ ಕ್ರೀಡೆ ಅಗತ್ಯ'

ಕೋವಿಡ್ ಮೂರನೇ ಅಲೆಯ ನಿರೀಕ್ಷೆ ವ್ಯಕ್ತವಾಗಿರುವುದರಿಂದ ಆರ್ಥಿಕ ದೃಷ್ಟಿಯಲ್ಲಿ ಮಾತ್ರ ಚರ್ಚೆಗಳು ನಡೆಯುತ್ತಿವೆ. ಆದರೆ, ವಿಶ್ವದಾದ್ಯಂತ ಖಿನ್ನತೆ, ಒತ್ತಡಗಳಂತಹ ಮಾನಸಿಕ ಸಮಸ್ಯೆಗಳಿಂದ ಬಳಲುತ್ತಿರುವವರ ಸಂಖ್ಯೆ ಗಮನಾರ್ಹವಾಗಿ ಏರುತ್ತಿದೆ. ದೇಹ ಮತ್ತು ಮನಸ್ಸು ಸಂಪೂರ್ಣ ಸಮತೋಲನದಲ್ಲಿರುವ ಸ್ಥಿತಿಯೇ ಆರೋಗ್ಯ. ಇದರಲ್ಲಿ ಕ್ರೀಡೆಯೂ ಪ್ರಮುಖ ಪಾತ್ರ ವಹಿಸುತ್ತದೆ. ಕ್ರೀಡೆಯನ್ನೇ ನಂಬಿಕೊಂಡು ಬದುಕು ಕಟ್ಟಿಕೊಂಡಿರುವ ಕೋಚ್‌ಗಳು, ಕ್ರೀಡಾ ಆಸಕ್ತರ ಕನಸುಗಳಿಗೆ ಮತ್ತೆ ಹೊಡೆತ ಬೀಳದಿರಲಿ.

ಆರ್.ಅರ್ಚನಾ, ಜಯನಗರ, ಬೆಂಗಳೂರು

ಪಾಠವಿದೆ, ಆಟವಿಲ್ಲ



ಈ ಹಿಂದೆ ಶಾಲಾ ಕಾಲೇಜುಗಳಲ್ಲಿ 'ಪಾಠದ ಜೊತೆ ಆಟ' ಎನ್ನುವ ಪರಿಪಾಠವಿತ್ತು. ಕೋವಿಡ್‌ನಿಂದಾಗಿ ಈಗ ಆನ್‌ಲೈನ್ ತರಗತಿಗಳಿಂದ ಸಂಪೂರ್ಣ ಪಾಠವೂ ಇಲ್ಲ, ಆಟವೂ ಇಲ್ಲದ್ದಂತಾಗಿದೆ. ಕಳೆದ ವರ್ಷದಿಂದ ಮನೆಯೇ ಶಾಲೆಯಾಗಿರುವುದರಿಂದ ಬಹುತೇಕರು ಆಟಗಳನ್ನೇ ಮರೆತಿದ್ದಾರೆ. ಇದರಿಂದ ಅವರು ಮಾನಸಿಕವಾಗಿಯೂ ಕುಗ್ಗಿದ್ದಾರೆ.

ಸುರೇಶ, ಬೆಳಗಾವಿ

ಆಟಗಳಿಂದ ಅಂತರ

ಈಗಿನ ಕೋವಿಡ್ ಪರಿಸ್ಥಿತಿಯಲ್ಲಿ ಮಕ್ಕಳನ್ನು ಹೊರಗಡೆ ಕಳಿಸಲು ಪೋಷಕರು ಭಯಪಡುತ್ತಿದ್ದಾರೆ. ಒಂದು ರೀತಿಯ ಗೃಹಬಂಧನದಲ್ಲಿರುವ ಮಕ್ಕಳು ಹೊರಗಿನ ಪ್ರಪಂಚ ನೋಡದ ಸ್ಥಿತಿಯಲ್ಲಿದ್ದಾರೆ. ಶಾಲೆಯತ್ತ ಮುಖ ಮಾಡಬೇಕಿದ್ದ ಮಕ್ಕಳು ಅದರ ಪರಿಕಲ್ಪನೆಯಿಂದ ದೂರವಾಗಿದ್ದಾರೆ. ಪಾಠದೊಂದಿಗೆ ಆಟಗಳನ್ನು ಕಲಿಯಬೇಕಿದ್ದ ಸಮಯವೂ ವ್ಯರ್ಥವಾಗಿದೆ.

ರೋಹಿಣಿ, ಬಳ್ಳಾರಿ

ಕ್ರೀಡೆ ಕಮರದಂತೆ ಕಾಪಾಡಿ

ಕೋವಿಡ್ ಜನಸಾಮಾನ್ಯರ ಬದುಕನ್ನೇ ನುಂಗಿ ಹಾಕಿದೆ. ಮೂರನೇ ಅಲೆಯ ಅಪಾಯದ ಬಗ್ಗೆ ಈಗಾಗಲೇ ತಜ್ಞರು ಕಳವಳ ವ್ಯಕ್ತಪಡಿಸಿದ್ದಾರೆ. ಕಳೆದ ವರ್ಷದಿಂದ ಕ್ರೀಡಾ ಕ್ಷೇತ್ರ ನಲುಗಿದೆ. ಕಂಟಕದಲ್ಲಿರುವ ಕ್ರೀಡಾ ಕ್ಷೇತ್ರವನ್ನು ಸರ್ಕಾರ ರಕ್ಷಿಸಬೇಕು. ಕ್ರೀಡಾ ಚಟುವಟಿಕೆಗಳಿಗೆ ಹೆಚ್ಚಿನ ಪ್ರೋತ್ಸಾಹ ನೀಡುವ ಮೂಲಕ ಪ್ರತಿಭೆಗಳಿಗೆ ವೇದಿಕೆ ಕಲ್ಪಿಸಬೇಕು. ಕ್ರೀಡೆಯಲ್ಲಿ ಉತ್ತಮ ಸಾಧನೆ ಮಾಡಿರುವವರ ಕುಟುಂಬಗಳಲ್ಲಿ ಕೋವಿಡ್‌ನಿಂದ ಮೃತರಾದವರಿಗೆ ವಿಶೇಷ ನೆರವು ನೀಡುವ ಮೂಲಕ ಅವರ ಬೆಂಬಲಕ್ಕೆ ನಿಲ್ಲಬೇಕು.

ನಾಗರಾಜ್, ಚನ್ನಗಿರಿ

ಕ್ರೀಡೆಗೆ ಒತ್ತು ನೀಡಬೇಕು

ದೇಶದಲ್ಲಿ ಮೊದಲೇ ಕ್ರೀಡೆಗೆ ಅಷ್ಟೇನೂ ಒತ್ತು ನೀಡಿಲ್ಲ. ಕ್ರೀಡಾ ಸಾಧನೆಗಳಿಗೆ ಕೋವಿಡ್ ಅಡ್ಡಗಾಲಾಗಿ ನಿಂತಿದೆ. ಕೆಲ ಪೋಷಕರು ಮಕ್ಕಳನ್ನು ಕ್ರೀಡಾ ತರಬೇತಿ ಸಂಸ್ಥೆಗಳಿಗೆ ಕಳುಹಿಸಿ ಅವರನ್ನು ಕ್ರೀಡೆಯತ್ತ ಒಲವು ಮೂಡಿಸುತ್ತಿದ್ದರು. ಕೋವಿಡ್‌ನಿಂದಾಗಿ ಅವೂ ಬಾಗಿಲು ಮುಚ್ಚಿಕೊಂಡವು. ಆದಷ್ಟು ಬೇಗ ಈ ಸಮಸ್ಯೆಗಳು ದೂರಾಗಿ, ಮೈದಾನಗಳು ಆಟಗಾರರಿಂದ ತುಂಬಿಕೊಳ್ಳಲಿ.

ಲಕ್ಷ್ಮೀಕಾಂತ ಪಾಟೀಲ, ವಿಜಯಪುರ

ಸರ್ಕಾರದ ನೆರವು ಇರಲಿ

ಆಟವನ್ನು ಹವ್ಯಾಸದ ಜೊತೆಗೆ ವೃತ್ತಿಜೀವನ ಮಾಡಿಕೊಂಡವರಿಗೆ ಮಾತ್ರ ಕೋವಿಡ್ ಪರಿಣಾಮದ ಅರಿವಾಗಿದೆ. ವರ್ಷ ಉರುಳಿದರೂ ಕೋವಿಡ್ ಕಾಟ ಇನ್ನೂ ತಪ್ಪಿಲ್ಲ. ಜಿಮ್, ಒಳಾಂಗಣ ಕ್ರೀಡಾಂಗಣಗಳನ್ನು ನಡೆಸುವವರದ್ದು ಜೀವನ್ಮರಣದ ಸಂಕಷ್ಟ. ಸರ್ಕಾರದ ಪ್ಯಾಕೇಜ್ ಹೊಟ್ಟೆಪಾಡಿಗೂ ಸಾಲುವುದಿಲ್ಲ. ಕ್ರೀಡಾ ಚಟುವಟಿಕೆಗಳಲ್ಲಿ ತೊಡಗಿಕೊಂಡಿರುವವರಿಗೆ ಸರ್ಕಾರದಿಂದ ವಿಶೇಷ ನೆರವಿನ ಅಗತ್ಯವಿದೆ.

ಕೆ.ಎಂ.ನಾಗರಾಜು, ಮೈಸೂರು

ಶಿಕ್ಷಣ

ಶಿಕ್ಷಣವು ಸಂಶೋಧನೆಯ ಹಾದಿಯನ್ನು ಪರಿಚಯಿಸುತ್ತದೆ.



ಸಿಇಟಿ: ಅತ್ಯುನ್ನತ ರ‍್ಯಾಂಕ್‌ಗೆ ಸಿದ್ಧತೆ ಹೀಗಿರಲಿ..

ನಾಗರಾಜ ಕೆ.ಎಲ್.

ದ್ವಿತೀಯ ಪಿಯು ವಿದ್ಯಾರ್ಥಿಗಳು ವೃತ್ತಿಪರ ಶಿಕ್ಷಣದ ವಿವಿಧ ಕೋರ್ಸ್‌ಗಳ ಪ್ರವೇಶಕ್ಕೆ ಅರ್ಹತೆ ಪಡೆಯಲು ಕರ್ನಾಟಕ ಪರೀಕ್ಷಾ ಪ್ರಾಧಿಕಾರ (ಕೆಇಎ) ನಡೆಸುವ ಸಾಮಾನ್ಯ ಪ್ರವೇಶ ಪರೀಕ್ಷೆಯಲ್ಲಿ (ಸಿಇಟಿ) ರ‍್ಯಾಂಕ್ ಗಳಿಸಬೇಕು. ಅತ್ಯುನ್ನತ ಶಿಕ್ಷಣ ಸಂಸ್ಥೆಗಳಲ್ಲಿ ತಮ್ಮ ಆಸಕ್ತಿಯ ಕೋರ್ಸ್‌ಗೆ ಸೀಟು ಸಿಗಬೇಕು ಎಂದರೆ ಸಿಇಟಿ ರ‍್ಯಾಂಕ್ ಸಹ ಅತ್ಯುನ್ನತವಾಗಿರಬೇಕು. ಉನ್ನತ ಶಿಕ್ಷಣದ ಬಗೆಗಿನ ತಮ್ಮ ಕನಸುಗಳನ್ನು ನನಸು ಮಾಡಿಕೊಳ್ಳಲು ವಿದ್ಯಾರ್ಥಿಗಳಿಗೆ ಸಿಇಟಿ ಒಂದು ಮಹತ್ವದ ಪರೀಕ್ಷೆ. ಸೂಕ್ತ ಪೂರ್ವಸಿದ್ಧತೆ ಮತ್ತು ನಿರಂತರ ಅಧ್ಯಯನದೊಂದಿಗೆ ವಿದ್ಯಾರ್ಥಿಗಳು ಅತ್ಯುತ್ತಮ ಸಾಧನೆ ಮಾಡಬಹುದು. ಅದಕ್ಕೆ ಪೂರಕವಾಗಿ ಕೆಲವು ಸಲಹೆಗಳನ್ನು ಇಲ್ಲಿ ನೀಡಲಾಗಿದೆ.

> ಪಿಯುಸಿ ನಂತರ ಎಂಜಿನಿಯರಿಂಗ್ ಸೇರಿದಂತೆ ವಿವಿಧ ವೃತ್ತಿಪರ ಕೋರ್ಸ್‌ಗಳಿಗೆ ಪ್ರವೇಶ ಪಡೆಯುವ ವಿದ್ಯಾರ್ಥಿಗಳು ಸಾಮಾನ್ಯ ಪ್ರವೇಶ ಪರೀಕ್ಷೆಗೆ ಸಿದ್ಧತೆ ನಡೆಸಿರಬಹುದು. ಇದರಲ್ಲಿ ಅತ್ಯುನ್ನತ ರ‍್ಯಾಂಕ್ ಗಳಿಸಬೇಕಾದರೆ ಯಾವ ರೀತಿ ತಯಾರಿ ನಡೆಸಬೇಕು?

1 ಪಠ್ಯಕ್ರಮ ತಿಳಿದುಕೊಳ್ಳಿ: ಕರ್ನಾಟಕ ಪರೀಕ್ಷಾ ಪ್ರಾಧಿಕಾರದ ವೆಬ್‌ಸೈಟ್‌ನಲ್ಲಿ ಲಭ್ಯವಿರುವ ಯುಜಿಸಿಇಟಿ-2021ಕ್ಕೆ ಸಂಬಂಧಿಸಿದ ಪಠ್ಯಕ್ರಮವನ್ನು ಆಧರಿಸಿ ಸಿಇಟಿ ಪ್ರಶ್ನೆಗಳನ್ನು ಕೇಳುವುದರಿಂದ ವಿದ್ಯಾರ್ಥಿಗಳು ಈ ಪಠ್ಯಕ್ರಮವನ್ನು ಸರಿಯಾಗಿ ತಿಳಿದುಕೊಂಡು ಅದಕ್ಕೆ ಅನುಗುಣವಾಗಿ ಸಿದ್ಧತೆ ಮಾಡಬೇಕು. ಹಿಂದಿನ ಶೈಕ್ಷಣಿಕ ವರ್ಷದ ಪ್ರಥಮ ಮತ್ತು ದ್ವಿತೀಯ ಪಿಯು ಪಠ್ಯಕ್ರಮವನ್ನು ಶೇ 30ರಷ್ಟು ಕಡಿತಗೊಳಿಸಲಾಗಿತ್ತು. ಇನ್ನುಳಿದ ಶೇ 70ರಷ್ಟು ಪಠ್ಯಕ್ರಮ ಮತ್ತು ಸಿಇಟಿ ಪಠ್ಯಕ್ರಮ ಎರಡೂ ಒಂದೇ ಆಗಿವೆಯೇ ಎಂಬುದನ್ನು ಪರಿಶೀಲಿಸಿ ಖಚಿತಪಡಿಸಿಕೊಳ್ಳಿ.

2 ಪಠ್ಯಪುಸ್ತಕ ಜತೆಗಿರಲಿ: ಅಧ್ಯಯನದಲ್ಲಿ ಮಹತ್ವದ ಪಾತ್ರ ವಹಿಸುವುದು ವಿಷಯವಾರು ಪಠ್ಯಪುಸ್ತಕಗಳು ಮತ್ತು ನೀವೇ ತಯಾರು ಮಾಡಿರುವ ಕಿರು ಟಿಪ್ಪಣಿ. ಇವುಗಳನ್ನು ಸಾಕಷ್ಟು ಬಾರಿ ಅಭ್ಯಾಸ (ಓದುವುದು, ಬರೆಯುವುದು) ಮಾಡುವುದರಿಂದ ನಿರ್ದಿಷ್ಟ ವಿಷಯದ ಬಗೆಗಿನ ಎಲ್ಲಾ ವಿವರಗಳೂ (ಉದಾ: ಗಣಿತದ ಸೂತ್ರಗಳು, ಜೀವಶಾಸ್ತ್ರದಲ್ಲಿನ ವಿವಿಧ ಚಿತ್ರಗಳು, ರಸಾಯನಶಾಸ್ತ್ರದಲ್ಲಿನ ರಾಸಾಯನಿಕ ಕ್ರಿಯೆಗಳು ಮತ್ತು ವಿವಿಧ ಹೆಸರಿನ ಕ್ರಿಯೆಗಳು) ನಿಮ್ಮ ನೆನಪಿನಲ್ಲಿ ಉಳಿಯುತ್ತವೆ. ಆರಂಭದಲ್ಲಿ ವಿವರವಾದ ನೋಟ್ಸ್ ಅನುಸರಿಸಿ. ಪರೀಕ್ಷೆ ಸಮೀಪಿಸುತ್ತಿರುವಾಗ ನೀವೇ ತಯಾರಿಸಿಕೊಂಡ ಕಿರು ಟಿಪ್ಪಣಿಗಳನ್ನು ಅಭ್ಯಸಿಸಿ.

3 ಹಿಂದಿನ ವರ್ಷದ ಪ್ರಶ್ನೆಪತ್ರಿಕೆಗಳು: ಹಿಂದಿನ ಕನಿಷ್ಠ ಐದು ವರ್ಷಗಳ ಸಿಇಟಿ ಪ್ರಶ್ನೆಪತ್ರಿಕೆಗಳನ್ನು ಅಭ್ಯಸಿಸಿ. ಪ್ರಶ್ನೆಪತ್ರಿಕೆ ವಿನ್ಯಾಸ, ಯಾವ ಪಾಠದ ಯಾವ ವಿಷಯದಿಂದ ಯಾವ ರೀತಿಯ ಪ್ರಶ್ನೆಗಳನ್ನು ಕೇಳಲಾಗಿದೆ ಮತ್ತು ಯಾವೆಲ್ಲ ಪರಿಕಲ್ಪನೆಗಳು ಅತ್ಯಂತ ಮುಖ್ಯವಾದುವು ಎಂಬುದು ಇದರಿಂದ ತಿಳಿಯುತ್ತದೆ. ಅಲ್ಲದೆ ಪ್ರತಿಯೊಂದು ಪಾಠದಿಂದ ಎಷ್ಟು ಅಂಕಗಳಿಗೆ ಪ್ರಶ್ನೆಗಳನ್ನು ಕೇಳಲಾಗಿದೆ ಎಂಬುದರ ಸ್ಥೂಲ ಚಿತ್ರಣ ದೊರೆಯುತ್ತದೆ. ನಿಮ್ಮ ಅಧ್ಯಯನದಲ್ಲಿ ಯಾವ ಪಾಠಗಳಿಗೆ ಎಷ್ಟು ಪ್ರಾಮುಖ್ಯತೆ ಕೊಡಬೇಕು, ಎಷ್ಟು ಪರಿಶ್ರಮ ಹಾಕಬೇಕು ಎಂಬುದು ನಿಮಗೆ ಸ್ಪಷ್ಟವಾಗುತ್ತದೆ. ಇದರಿಂದ ನಿಮ್ಮ ಸಿಇಟಿ ಸಿದ್ಧತೆಗೆ ಸಾಕಷ್ಟು ಸಹಾಯವಾಗುತ್ತದೆ.

4 ಪ್ರಶ್ನೆಕೋಶ ಮರೆಯದಿರಿ: ಪ್ರತಿಯೊಂದು ಪಾಠಕ್ಕೂ ಪ್ರಶ್ನೆಕೋಶಗಳನ್ನು ತಯಾರಿಸಿಕೊಳ್ಳಿ. ಸಿಇಟಿಯ ಹಿಂದಿನ ಪ್ರಶ್ನೆಪತ್ರಿಕೆಗಳಷ್ಟೇ ಅಲ್ಲದೆ ಇನ್ನಿತರ ಪ್ರವೇಶ ಪರೀಕ್ಷೆಗಳು ಮತ್ತು ಅರ್ಹತಾ ಪರೀಕ್ಷೆಗಳ ಪ್ರಶ್ನೆಪತ್ರಿಕೆಗಳನ್ನು ಪರಾಮರ್ಶಿಸಿ. ಪ್ರತಿ ಪಾಠದ ಮಾದರಿ ಪ್ರಶ್ನೆಗಳನ್ನು ಬಿಡಿಸಿ. ಒಂದೇ ಪರಿಕಲ್ಪನೆಯ ಮೇಲೆ ಯಾವ ರೀತಿ ವಿಭಿನ್ನ ಪ್ರಶ್ನೆಗಳನ್ನು (ಸರಳ, ಕಷ್ಟ, ಅತ್ಯಂತ ಕಠಿಣ) ಕೇಳಲಾಗಿದೆ ಎಂಬುದು ಇದರಿಂದ ತಿಳಿಯುತ್ತದೆ. ನಿಮ್ಮಲ್ಲಿ ಇರುವ ವಿಷಯ ಜ್ಞಾನವನ್ನೇ ವಿವಿಧ ಪ್ರಶ್ನೆಗಳಿಗೆ ಅನ್ವಯಿಸಬೇಕಾಗುತ್ತದೆ. ಹಾಗಾಗಿ ಅಭ್ಯಾಸದ ಸಂದರ್ಭದಲ್ಲಿ ಸಾಧ್ಯವಾದಷ್ಟು ಈ ಬಗ್ಗೆ ಒತ್ತು ನೀಡಿ.

5 ನಿರಂತರ ಅಣಕು ಪರೀಕ್ಷೆಗಳು: ಸಿಇಟಿ ತಯಾರಿಯ ಸಂದರ್ಭದಲ್ಲಿ ಅತ್ಯಂತ ಮುಖ್ಯ ಮತ್ತು ಸರಳ ತಂತ್ರ ಎಂದರೆ ನಿರಂತರವಾಗಿ ಅಣಕು ಪರೀಕ್ಷೆಗಳನ್ನು (ಮಾಕ್ ಟೆಸ್ಟ್) ಎದುರಿಸುವುದು. ಇದರಿಂದ ನಿಮ್ಮ ತಯಾರಿ ಯಾವ ಹಂತದಲ್ಲಿದೆ, ಯಾವ ವಿಷಯದಲ್ಲಿ ಇನ್ನಷ್ಟು ಶ್ರಮ ಹಾಕಬೇಕು, ಯಾವುದರಲ್ಲಿ ಪರಿಣತಿ ಸಾಧಿಸಿರುವಿರಿ, ಸಮಯ ನಿರ್ವಹಣೆ ಆಗುತ್ತಿದೆಯೋ ಇಲ್ಲವೋ ಎಂಬುದು ನಿಮಗೆ ತಿಳಿಯುತ್ತದೆ. ಅಣಕು ಪರೀಕ್ಷೆಗಳಲ್ಲಿ ಕಡಿಮೆ ಅಂಕಗಳು ಬಂದರೆ ಹತಾಶರಾಗುವ ಅಗತ್ಯವಿಲ್ಲ. ಯಾವ ಪ್ರಶ್ನೆಗಳಿಗೆ ಉತ್ತರ ತಪ್ಪಾಗಿದೆಯೋ ಅವುಗಳ ಸರಿ ಉತ್ತರ ತಿಳಿದುಕೊಂಡು ಅಧ್ಯಯನ ಮುಂದುವರಿಸಬೇಕು. ಅಂಕಗಳು ಎಷ್ಟೇ ಬರಲಿ, ಧೃತಿಗೆಡದೆ ನಿರಂತರವಾಗಿ ಅಣಕು ಪರೀಕ್ಷೆಗಳನ್ನು ಎದುರಿಸುವುದನ್ನು ಬಿಡಬಾರದು. ಇದರಿಂದ ಸಿಇಟಿ ಎದುರಿಸಲು ಅಗತ್ಯ ಆತ್ಮವಿಶ್ವಾಸ ದೊರೆಯುತ್ತದೆ.

6 ಸಮಯ ನಿರ್ವಹಣೆ ಮತ್ತು ಪುನರಾವರ್ತನೆ: ಅಧ್ಯಯನ ವೇಳಾಪಟ್ಟಿ ರಚಿಸಿಕೊಂಡು ವಿಷಯವಾರು ಸಮಯ ಹಂಚಿಕೆ ಮಾಡಿಕೊಳ್ಳಿ. ಆ ನಿರ್ದಿಷ್ಟ ಸಮಯದಲ್ಲಿ ಅದೇ ವಿಷಯದ ಅಧ್ಯಯನ ಮಾಡಿ. ಪ್ರತಿ ಪಾಠದ ಅಧ್ಯಯನದ ನಂತರ ಆ ಪಾಠಕ್ಕೆ ಸಂಬಂಧಿಸಿದ ಅಣಕು ಪರೀಕ್ಷೆ ಎದುರಿಸಿ. ಪ್ರತಿಯೊಂದು ಪ್ರಶ್ನೆಗೂ ಒಂದು ನಿಮಿಷದ ಸಮಯ ಮಿತಿಯೊಳಗೆ ಉತ್ತರಿಸಲು ಪ್ರಯತ್ನಿಸಿ. ಸಾಧ್ಯವಾದಷ್ಟು ಗರಿಷ್ಠ ಪುನರಾವರ್ತನೆ ಮಾಡಿ. ಪುನರಾವರ್ತಿಸುವುದರಿಂದ ನಿಮ್ಮ ವಿಷಯ ಜ್ಞಾನ ಪರಿಪೂರ್ಣವಾಗುತ್ತದೆ.

(ಲೇಖಕ: ರಸಾಯನಶಾಸ್ತ್ರ ಉಪನ್ಯಾಸಕ, ಪ್ರಾರ್ಥನ ಪದವಿಪೂರ್ವ ಕಾಲೇಜು, ವಿಜಯಪುರ)

ಯೂಟ್ಯೂಬ್ ಚಾನೆಲ್

ಸರ್ಕಾರಿ ಪದವಿಪೂರ್ವ ಕಾಲೇಜುಗಳ ವಿದ್ಯಾರ್ಥಿಗಳು, ಆರ್ಥಿಕವಾಗಿ ಹಿಂದುಳಿದ ಮತ್ತು ಗ್ರಾಮೀಣ ಭಾಗದ ವಿದ್ಯಾರ್ಥಿಗಳನ್ನು ಗಮನದಲ್ಲಿ ಇಟ್ಟುಕೊಂಡು ರಾಜ್ಯ ಪದವಿಪೂರ್ವ ಶಿಕ್ಷಣ ಇಲಾಖೆಯು ಎಸ್‌ಸಿಎಚ್ ಫೌಂಡೇಷನ್ ಸಹಯೋಗದೊಂದಿಗೆ ಯೂಟ್ಯೂಬ್‌ನಲ್ಲಿ 38 ದಿನಗಳ ಸಿಇಟಿ ತರಬೇತಿಯನ್ನು ಆರಂಭಿಸಿದೆ. ಪ್ರಸ್ತುತ ತರಗತಿಗಳು ಮತ್ತು ಈವರೆಗೂ ನಡೆದ ತರಗತಿಗಳು ಲಭ್ಯವಿದ್ದು, ಕನ್ನಡ ಮತ್ತು ಇಂಗ್ಲಿಷ್ ಭಾಷೆಗಳಲ್ಲಿ ಬಹುತೇಕ ತರಗತಿಗಳನ್ನು ನಡೆಸಲಾಗಿದೆ. ಸದ್ಯದಲ್ಲೇ ಮಾದರಿ ಪ್ರಶ್ನೆಪತ್ರಿಕೆಗಳ ಕುರಿತ ತರಬೇತಿ ನಡೆಯಲಿದೆ. ಎಸ್‌ಸಿಎಚ್ ಫೌಂಡೇಷನ್‌ನ ಯೂಟ್ಯೂಬ್ ಚಾನೆಲ್‌ನಲ್ಲಿ ಈ ಎಲ್ಲ ತರಗತಿಗಳೂ ಲಭ್ಯ.

ದೀಕ್ಷಾ

ಕೇಂದ್ರ ಸರ್ಕಾರದ ಶಿಕ್ಷಣ ಸಚಿವಾಲಯವು ದೀಕ್ಷಾ ಆ್ಯಪ್ ಬಿಡುಗಡೆ ಮಾಡಿದ್ದು, ವಿದ್ಯಾರ್ಥಿಗಳು ಇದರ ಪ್ರಯೋಜನವನ್ನು ಸಹ ಪಡೆಯಬಹುದು. ಇದರಲ್ಲಿಯೂ ಸಿಇಟಿ ಸಿದ್ಧತೆಗೆ ಬೇಕಾದ ಎಲ್ಲ ಸಂಪನ್ಮೂಲಗಳು ಲಭ್ಯ. https://play.google.com/store/apps/details?id=in.gov.diksha.app ಲಿಂಕ್ ಬಳಸಿಕೊಂಡು ಡೌನ್‌ಲೋಡ್ ಮಾಡಿಕೊಳ್ಳಬಹುದು.

ಗೆಟ್‌ಸೆಟ್‌ಗೊ

ಉನ್ನತ ಶಿಕ್ಷಣ ಇಲಾಖೆಯು ರಾಜ್ಯದ ಎಲ್ಲಾ ವಿದ್ಯಾರ್ಥಿಗಳಿಗೆ ಸಿಇಟಿ, ನೀಟ್ ಮತ್ತು ಜೆಇಇ ಪರೀಕ್ಷೆಗಳ ಸಿದ್ಧತೆಗೆ ಸಹಾಯವಾಗುವ ನಿಟ್ಟಿನಲ್ಲಿ GetCetGo App ಬಿಡುಗಡೆ ಮಾಡಿದೆ. ಇದರಲ್ಲಿ ಪುನರಾವರ್ತನೆ ವಿಡಿಯೊಗಳು, ವಿಷಯವಾರು ಸಾರಾಂಶ, ಅಭ್ಯಾಸ ಪ್ರಶ್ನೆಪತ್ರಿಕೆಗಳು, ಅಣಕು ಪರೀಕ್ಷೆಗಳು ಇದ್ದು, ನೋಂದಾಯಿತ ವಿದ್ಯಾರ್ಥಿಯ ವಿಶ್ಲೇಷಣಾ ವರದಿಯು ಸಹ ಲಭ್ಯ. ಇದನ್ನು ನಿಮ್ಮ ಸಿದ್ಧತೆಗೆ ಬಳಸಿಕೊಳ್ಳಬಹುದು. ಡೌನ್‌ಲೋಡ್ ಮಾಡಿಕೊಳ್ಳಲು https://play.google.com/store/apps/details?id=com.digilearn.karnatakacet.android ಲಿಂಕ್ ಬಳಸಿ.

ವಿದ್ಯಾರ್ಥಿ ವೇತನ ಕೈಪಿಡಿ

ಐಇಟಿ ಇಂಡಿಯಾ ಸ್ಕಾಲರ್‌ಶಿಪ್ ಅವಾರ್ಡ್ 2021

- **ವಿವರ:** ಎಂಜಿನಿಯರಿಂಗ್ ವಿದ್ಯಾರ್ಥಿಗಳಿಗಾಗಿ ದಿ ಇನ್‌ಸ್ಟಿಟ್ಯೂಟ್ ಆಫ್ ಎಂಜಿನಿಯರಿಂಗ್ ಅಂಡ್ ಟೆಕ್ನಾಲಜಿ ಅರ್ಜಿಗಳನ್ನು ಆಹ್ವಾನಿಸಿದೆ.
- **ಅರ್ಹತೆ:** 1, 2, 3 ಮತ್ತು 4ನೇ ವರ್ಷದ ಎಂಜಿನಿಯರಿಂಗ್ ಓದುತ್ತಿರುವವರಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ. ಎಲ್ಲಾ ಸೆಮಿಸ್ಟರ್‌ಗಳಲ್ಲಿ ಕನಿಷ್ಠ ಶೇ 60 ಅಂಕಗಳನ್ನು ಪಡೆದಿರಬೇಕು. ಪಿಯುಸಿಯಲ್ಲೂ ಶೇ 60ಕ್ಕಿಂತ ಹೆಚ್ಚು ಅಂಕಗಳನ್ನು ಪಡೆದಿರಬೇಕು.
- **ಆರ್ಥಿಕ ಸಹಾಯ:** ₹ 5 ಲಕ್ಷ
- **ಅರ್ಜಿ ಸಲ್ಲಿಕೆಗೆ ಕೊನೆಯ ದಿನಾಂಕ:** 15 ಆಗಸ್ಟ್, 2021
- **ಅರ್ಜಿ ಸಲ್ಲಿಕೆ ವಿಧಾನ:** ಆನ್‌ಲೈನ್ ಅರ್ಜಿಗಳು ಮಾತ್ರ
- **ಹೆಚ್ಚಿನ ಮಾಹಿತಿಗೆ:** www.b4s.in/praja/IET1

ಐಎಸ್‌ಇಸಿ ಬೆಂಗಳೂರು ಪೋಸ್ಟ್ ಡಾಕ್ಟರಲ್ ರಿಸರ್ಚ್ ಪ್ರೋಗ್ರಾಮ್ 2021

- **ವಿವರ:** ಪಿಎಚ್‌ಡಿ ಮುಗಿಸಿರುವವರಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ. ಈ ಫೆಲೋಶಿಪ್ ಅನ್ನು ಗರಿಷ್ಠ 5 ವರ್ಷಗಳವರೆಗೆ ನೀಡಲಾಗುತ್ತದೆ.
- **ಅರ್ಹತೆ:** ಕಳೆದ 10 ವರ್ಷಗಳಲ್ಲಿ ಪಿಎಚ್‌ಡಿ ಮುಗಿಸಿರುವವರು ಅರ್ಜಿ ಸಲ್ಲಿಸಬಹುದಾಗಿದೆ. ರಾಷ್ಟ್ರೀಯ ಅಥವಾ ಅಂತರರಾಷ್ಟ್ರೀಯ ಮಟ್ಟದ ಪತ್ರಿಕೆಗಳಲ್ಲಿ ಕನಿಷ್ಠ ಎರಡು ಬರಹಗಳು ಪ್ರಕಟವಾಗಿರುವುದು ಕಡ್ಡಾಯ.
- **ಆರ್ಥಿಕ ಸಹಾಯ:** ಪ್ರಮಾಣ ಪತ್ರ (Certificate of completion of the PDR Programme)
- **ಅರ್ಜಿ ಸಲ್ಲಿಕೆಗೆ ಕೊನೆಯ ದಿನಾಂಕ:** 31 ಜುಲೈ, 2021
- **ಅರ್ಜಿ ಸಲ್ಲಿಕೆ ವಿಧಾನ:** ಅಂಚೆ ಮೂಲಕ
- **ಹೆಚ್ಚಿನ ಮಾಹಿತಿಗೆ:** www.b4s.in/praja/ISEC1

ಕೃಪೆ:buddy4study.com

ಕೆಮಿಕಲ್ ಎಂಜಿನಿಯರಿಂಗ್
ವ್ಯಾಪ್ತಿ ಅಗಾಧ - ಅವಕಾಶ ಹೇರಳ

ಡಾ. ಜಯನಾರಾಯಣನ್ ಕೆ.

ವಿದ್ಯಾರ್ಥಿಯ ಭವಿಷ್ಯದ ಬೆಳವಣಿಗೆಗೆ ನೆರವು ನೀಡುವ ಕೆಲವು ವೃತ್ತಿಗಳ ಪಟ್ಟಿಯಲ್ಲಿ ಎಂಜಿನಿಯರಿಂಗ್ ಕೂಡ ಪ್ರಮುಖ ಸ್ಥಾನದಲ್ಲಿದ್ದು ಆಕಾಂಕ್ಷಿಗಳ ಗಮನ ಸೆಳೆಯುತ್ತಿರುವುದು ಗೊತ್ತೇ ಇದೆ. ನೀವು ಪ್ರಪಂಚದಲ್ಲಿ ಎಲ್ಲಿಗೇ ಹೋದರೂ ಅಲ್ಲಿ ಎಂಜಿನಿಯರ್‌ಗಳಿಗೆ ನಿರಂತರವಾಗಿ ಬೇಡಿಕೆ ಇರುವುದನ್ನು ನೋಡುತ್ತೀರಿ. ಹಾಗೆಯೇ ಇಂದು ನಾವು ಏನನ್ನು ನೋಡಿದರೂ ಅಲ್ಲಿ ಪ್ರತಿಯೊಂದಕ್ಕೂ ಎಂಜಿನಿಯರಿಂಗ್ ಮೂಲಾಧಾರವಾಗಿರುತ್ತದೆ. ಅದು ವಾಹನಗಳು ಇರಬಹುದು, ಔಷಧ, ಇಂಧನ, ತಂತ್ರಜ್ಞಾನ ಉಪಕರಣಗಳು ಅಥವಾ ಇನ್ನಾವುದೇ ಆಗಿರಲಿ, ಅಲ್ಲಿ ಎಂಜಿನಿಯರಿಂಗ್ ಇದ್ದೇ ಇರುತ್ತದೆ.

ಈ ಪೈಕಿ ಕೆಮಿಕಲ್ ಎಂಜಿನಿಯರಿಂಗ್ ಇತ್ತೀಚಿನ ದಿನಗಳಲ್ಲಿ ಬಹಳಷ್ಟು ಗಮನವನ್ನು ಸೆಳೆಯುತ್ತಿದೆ ಮತ್ತು ಇದಕ್ಕೆ ವಿಪುಲ ಅವಕಾಶಗಳು ಲಭ್ಯವಾಗುತ್ತಿವೆ. ಕೆಮಿಕಲ್ ಎಂಜಿನಿಯರಿಂಗ್ ಬಗ್ಗೆ ವಿದ್ಯಾರ್ಥಿಗಳಲ್ಲಿ ಬೇಡಿಕೆ ಹೆಚ್ಚಾಗಿರುವುದಕ್ಕೆ ಉದ್ಯಮ ಮತ್ತು ತಂತ್ರಜ್ಞಾನದ ಏರಿಕೆ ಪ್ರಮುಖ ಕಾರಣವಾಗಿದೆ. ಕೆಮಿಕಲ್ ಎಂಜಿನಿಯರಿಂಗ್‌ನಲ್ಲಿ ಪದವಿ ಪಡೆದವರು ಜೈವಿಕ ತಂತ್ರಜ್ಞಾನ ಮತ್ತು ಏರೋನಾಟಿಕ್ಸ್ ಸೇರಿದಂತೆ ವಿವಿಧ ಕ್ಷೇತ್ರಗಳಲ್ಲಿ ಉದ್ಯೋಗ ಮಾಡಬಹುದು.

ಕೆಮಿಕಲ್ ಎಂಜಿನಿಯರಿಂಗ್‌ನ ಉದ್ದೇಶವೇನು?

ತಾಂತ್ರಿಕ ಸಮಸ್ಯೆಗಳನ್ನು ಪತ್ತೆ ಮಾಡಲು ಹಾಗೂ ಪರಿಹರಿಸುವ ನಿಟ್ಟಿನಲ್ಲಿ ರಾಸಾಯನಿಕಗಳು ಮತ್ತು ಅವುಗಳ ಪ್ರಕ್ರಿಯೆಗಳ ವಿನ್ಯಾಸ, ಅಭಿವೃದ್ಧಿಯನ್ನು ಈ ವಿಭಾಗವು ಒಳಗೊಂಡಿದೆ. ಜೈವಿಕ ತಂತ್ರಜ್ಞಾನ (ಬಯೋಟೆಕ್ನಾಲಾಜಿ), ನ್ಯಾನೋ ಟೆಕ್ನಾಲಾಜಿ, ಔಷಧ ವಿಜ್ಞಾನ, ಖನಿಜಗಳ ಶುದ್ಧೀಕರಣ, ಪೆಟ್ರೋಲಿಯಂ ಸಂಸ್ಕರಣ ಮತ್ತು ಇತರ ವಿಸ್ತಾರವಾದ ವಿಷಯಗಳನ್ನು ಈ ಎಂಜಿನಿಯರಿಂಗ್ ಒಳಗೊಂಡಿರುತ್ತದೆ. ಕೆಮಿಕಲ್ ಎಂಜಿನಿಯರಿಂಗ್ ವಿಭಾಗವು ಎಂಜಿನಿಯರಿಂಗ್ ಮತ್ತು ರಸಾಯನಶಾಸ್ತ್ರದ ಜ್ಞಾನವನ್ನು ಸಂಯೋಜಿಸಿ ಕಚ್ಚಾ ವಸ್ತುಗಳನ್ನು ಮಾರುಕಟ್ಟೆ ಉತ್ಪನ್ನಗಳನ್ನಾಗಿ ಪರಿವರ್ತಿಸಲು ಅಥವಾ ರಾಸಾಯನಿಕಗಳನ್ನು ಉತ್ಪಾದನೆ ಮಾಡಲು ಮತ್ತು ಅದಕ್ಕೆ ಸಂಬಂಧಿಸಿದ ಉಪ-ಉತ್ಪನ್ನಗಳನ್ನು ಸಂಯೋಜನೆ ಮಾಡಲು ನೆರವಾಗುತ್ತದೆ.

ಈ ವಿಭಾಗದ ತಂತ್ರಜ್ಞಾನಗಳನ್ನು ಈಗ ಸಾವಯವ ಮತ್ತು ಜೈವಿಕವಲ್ಲದ ಕೈಗಾರಿಕೆಗಳಲ್ಲಿ ಬಳಸಲಾಗುತ್ತದೆ. ಹೀಗಾಗಿ ಇದು ರಾಸಾಯನಿಕ ಕಾರ್ಖಾನೆಗಳಿಗೆ ಮಾತ್ರ ಸೀಮಿತವಾಗಿಲ್ಲ. ಇದರ ಪರಿಣಾಮ ಕೆಮಿಕಲ್ ಎಂಜಿನಿಯರಿಂಗ್ ಪದವೀಧರರಿಗೆ ಹೆಚ್ಚಿನ ಬೇಡಿಕೆ ಇದೆ. ಅದರಲ್ಲೂ ವಿಶೇಷವಾಗಿ ಪೆಟ್ರೋಲಿಯಂ ಮತ್ತು ಔಷಧೀಯ ಕ್ಷೇತ್ರಗಳಲ್ಲಿ ಬೇಡಿಕೆ ಹೆಚ್ಚಿದೆ.

ಕೆಮಿಕಲ್ ಎಂಜಿನಿಯರ್ ಉದ್ಯೋಗವೇನು?

- ಉತ್ಪನ್ನಗಳನ್ನು ವಿನ್ಯಾಸ ಮಾಡುವುದು ಮತ್ತು ಸೃಷ್ಟಿ ಮಾಡುವ ಮೂಲಕ ಹೊಸ ರಾಸಾಯನಿಕ ಪ್ರಕ್ರಿಯೆಗಳನ್ನು ಸೃಷ್ಟಿ ಮಾಡುವುದು.
- ಉತ್ಪಾದನಾ ಘಟಕ ಮತ್ತು ಉಪಕರಣಗಳ ನಿರ್ಮಾಣ, ಅಳವಡಿಕೆ ಮತ್ತು ಮೇಲ್ವಿಚಾರಣೆ.
- ಕೈಗಾರಿಕಾ ಘಟಕಗಳ ಕಾರ್ಯಾಚರಣೆಗಳನ್ನು ಸಂಘಟಿಸುವುದು ಮತ್ತು ನಿರ್ವಹಣೆ ಮಾಡುವುದು.
- ಸುಧಾರಿತ ಮತ್ತು ವರ್ಧಿತ ಉತ್ಪಾದನಾ ಪ್ರಕ್ರಿಯೆಗಳನ್ನು ಅಭಿವೃದ್ಧಿಪಡಿಸಲಾಗುತ್ತದೆ.
- ಕೈಗಾರಿಕಾ ಉತ್ಪಾದನೆಗೆ ನವೀಕರಿಸಿದ ಮತ್ತು ಉನ್ನತ ದರ್ಜೆಯ ರಾಸಾಯನಿಕ ವಸ್ತುಗಳು.
- ಆಹಾರ ಮತ್ತು ಕೃಷಿ ಉತ್ಪನ್ನಗಳ ಸಂಸ್ಕರಣೆ, ಸೌಂದರ್ಯವರ್ಧಕಗಳು ಹಾಗೂ ಖನಿಜ ಆಧಾರಿತ ಕೈಗಾರಿಕೆಗಳು ಇದಕ್ಕೆ ಉದಾಹರಣೆಗಳಾಗಿವೆ.
- ರಾಸಾಯನಿಕ ಉದ್ಯಮದಲ್ಲಿ ಕಾರ್ಮಿಕರಿಗೆ ಸುರಕ್ಷತಾ ಮುನ್ನೆಚ್ಚರಿಕೆಗಳನ್ನು ಒದಗಿಸುವುದು.

ಕೆಮಿಕಲ್ ಎಂಜಿನಿಯರಿಂಗ್‌ನ ವ್ಯಾಪ್ತಿ

ಕೆಮಿಕಲ್ ಎಂಜಿನಿಯರಿಂಗ್ ದೊಡ್ಡ ಪ್ರಮಾಣದ ರಾಸಾಯನಿಕಗಳ ತಯಾರಿಕೆಗೆ ಸಂಬಂಧಿಸಿದ ಕ್ಷೇತ್ರವಾಗಿ ಆರಂಭವಾಯಿತು. ಕ್ರಮೇಣ ಇದಕ್ಕೆ ವ್ಯಾಪಕ ಶ್ರೇಣಿಯ ಕ್ಷೇತ್ರಗಳು ಹಾಗೂ ವ್ಯವಹಾರಗಳಲ್ಲಿ ಆ ವಿಭಾಗಕ್ಕೆ ಸಂಬಂಧಿಸಿದ ಇತರ ವಿಷಯಗಳು ಸೇರ್ಪಡೆಗೊಳ್ಳುತ್ತ ವಿಸ್ತಾರಗೊಂಡಿದೆ. ಈ ವಿಭಾಗವು ಜವಳಿ, ಪ್ಲಾಸ್ಟಿಕ್, ಆಹಾರ, ಪೆಟ್ರೋಲಿಯಂ, ಔಷಧಿಗಳು ಮತ್ತು ಇನ್ನೂ ಹೆಚ್ಚಿನ ಕ್ಷೇತ್ರಗಳು ಒಳಗೊಂಡಂತೆ ವ್ಯಾಪಕವಾದ ಕೈಗಾರಿಕೆಗಳನ್ನು ಹೊಂದಿರುವ ವಿಶಾಲವಾದ ಕ್ಷೇತ್ರವಾಗಿದೆ. ಈ ಉತ್ಪಾದನಾ ಮತ್ತು ಸೇವಾ ಕ್ಷೇತ್ರಗಳು ಉದ್ಯೋಗಿಗಳನ್ನು ದೊಡ್ಡ ಸಂಖ್ಯೆಯಲ್ಲಿ ನೇಮಕ ಮಾಡಿಕೊಳ್ಳುವುದರಿಂದ ಕೆಮಿಕಲ್ ಎಂಜಿನಿಯರಿಂಗ್ ಪದವೀಧರರಿಗೆ ಸಾಕಷ್ಟು ಅವಕಾಶಗಳಿವೆ. ಹಾಗೆಯೇ ವಿದೇಶಗಳಲ್ಲೂ ಸಾಕಷ್ಟು ವೃತ್ತಿ ಅವಕಾಶಗಳಿವೆ

(ಲೇಖಕ: ಪ್ರೊಫೆಸರ್ ಮತ್ತು ಚೇರ್‌ಪರ್ಸನ್, ಕೆಮಿಕಲ್ ಎಂಜಿನಿಯರಿಂಗ್, ಅಮೃತಾ ಸ್ಕೂಲ್ ಆಫ್ ಎಂಜಿನಿಯರಿಂಗ್)

ಪೊಲೀಸ್ ಕಾನ್‌ಸ್ಟೇಬಲ್ ನೇಮಕಾತಿ ಪರೀಕ್ಷೆಯ ಮಾದರಿ ಪ್ರಶ್ನೆಗಳು

ಭಾಗ- 25

336. ಡಾರ್ವಿನ್‌ನ ಸಿದ್ಧಾಂತದ ಅತಿ ದೊಡ್ಡ ಲೋಪವೆಂದರೆ ಅವನು ಇದನ್ನು ವಿವರಿಸಲು ಸಾಧ್ಯವಾಗದೇ ಹೋದದ್ದು
ಎ) ಅತೀ ಸಂತಾನ ಸಾಮರ್ಥ್ಯ
ಬಿ) ಅರ್ಹರ ಉಳಿವು
ಸಿ) ಉಳಿವಿಗಾಗಿ ಹೋರಾಟ
ಡಿ) ಭಿನ್ನತೆಗಳು

337. ರಾಷ್ಟ್ರಕೂಟರು ಬಾದಾಮಿ ಚಾಲುಕ್ಯರ ಈ ದೊರೆಯನ್ನು ಸೋಲಿಸಿದರು
ಎ) ಮಹೇಂದ್ರವರ್ಮ
ಬಿ) ಕೀರ್ತಿವರ್ಮ
ಸಿ) ಇಮ್ಮಡಿ ಪುಲಿಕೇಶಿ
ಡಿ) ರಾಜಾ ನರಸಿಂಹ

338. ಎಷ್ಟನೇ ಸಂವಿಧಾನ ತಿದ್ದುಪಡಿಯ ಪ್ರಕಾರ ಮತದಾರರ ವಯೋಮಿತಿಯನ್ನು 21 ರಿಂದ 18ನೇ ವರ್ಷಕ್ಕೆ ಇಳಿಸಲಾಯಿತು
ಎ) 63
ಬಿ) 60
ಸಿ) 61
ಡಿ) 62

339. 2000ನೇ ಇಸವಿಯಲ್ಲಿ ಮಾಡಿದ ಪಂಚಾಯತ್ ರಾಜ್ ಕಾಯ್ದೆಯ 2ನೇ ತಿದ್ದುಪಡಿಯ ಪ್ರಕಾರ ಪ್ರತಿ ಗ್ರಾಮ ಪಂಚಾಯತಿ ಸದಸ್ಯನು ತನ್ನ ಮನೆಯಲ್ಲಿ ಕಡ್ಡಾಯವಾಗಿ ಈ ಸೌಲಭ್ಯವನ್ನು ಹೊಂದಿರಬೇಕು
ಎ) ಗೋಬರ್ ಗ್ಯಾಸ್ ಘಟಕ
ಬಿ) ವಿದ್ಯುತ್ ಸೌಲಭ್ಯ
ಸಿ) ಎಲ್.ಪಿ.ಜಿ ಸೌಲಭ್ಯ
ಡಿ) ಶೌಚಾಲಯ ಸೌಲಭ್ಯ

340. 2011 ರ ಜನಗಣತಿಯ ಪ್ರಕಾರ ಪ್ರಪಂಚದ ಒಟ್ಟು ಜನಸಂಖ್ಯೆಯಲ್ಲಿ ಭಾರತೀಯರ ಪ್ರಮಾಣ ಎಷ್ಟಿದೆ?
ಎ) ಶೇ 15.1
ಬಿ) ಶೇ 16.2
ಸಿ) ಶೇ 17.3
ಡಿ) ಶೇ 18.4

341. ಈ ಕೆಳಗಿನವರುಗಳಲ್ಲಿ ಯಾರು 'ಕರ್ನಾಟಕ ಚಕ್ರವರ್ತಿ' ಎಂಬ ಬಿರುದು ಹೊಂದಿದ್ದರು?
ಎ) ಚಿಕ್ಕದೇವರಾಜ ಒಡೆಯರ್
ಬಿ) 10 ನೇ ಚಾಮರಾಜ ಒಡೆಯರ್
ಸಿ) ಇಮ್ಮಡಿ ಪುಲಿಕೇಶಿ
ಡಿ) ಕೆ.ಶೇಷಾದ್ರಿ ಅಯ್ಯರ್

342. 'ಕಮಲ ಮಹಲ್' ಇರುವ ಸ್ಥಳ
ಎ) ಜೈಪುರ
ಬಿ) ಬಾದಾಮಿ
ಸಿ) ಹಂಪಿ
ಡಿ) ಐಹೊಳೆ

343. ಸಮುದ್ರದಲ್ಲಿ ಮುಳುಗಿರುವ ವಸ್ತುಗಳನ್ನು ಕಂಡುಹಿಡಿಯುವ ಸಾಧನ
ಎ) ರೇಡಾರ್
ಬಿ) ಸೋನಾರ್
ಸಿ) ಲೇಸರ್
ಡಿ) ಮೇಲಿನ ಯಾವುದೂ ಅಲ್ಲ

344. ಕೆಳಗಿನ ಯಾವ ರೋಗ ಬ್ಯಾಕ್ಟೀರಿಯಾದಿಂದ ಉಂಟಾಗುವುದಿಲ್ಲ?
ಎ) ಕಾಲರಾ
ಬಿ) ಡಿಫ್ತೀರಿಯಾ
ಸಿ) ಡೆಂಗಿ
ಡಿ) ಟೈಫಾಯ್ಡ್

345. ಭೂ ವಾತಾವರಣದಲ್ಲಿ ಹೆಚ್ಚಿನ ಪ್ರಮಾಣದಲ್ಲಿ ಇರುವ ಘಟಕ
ಎ) ಇಂಗಾಲದ ಡೈ ಆಕ್ಸೈಡ್
ಬಿ) ಆಮ್ಲಜನಕ
ಸಿ) ಸಾರಜನಕ
ಡಿ) ಜಲಜನಕ

346. ಈ ಕೆಳಗಿನವುಗಳಲ್ಲಿ ಯಾವುದು ಸಾಂವಿಧಾನಿಕ ಸಂಸ್ಥೆ ಅಲ್ಲ?
ಎ) ಚುನಾವಣಾ ಆಯೋಗ
ಬಿ) ಯು.ಪಿ.ಎಸ್.ಸಿ
ಸಿ) ಯು.ಜಿ.ಸಿ
ಡಿ) ಅಂತರ್ ರಾಜ್ಯ ಮಂಡಳಿ

347. ಭಾರತದ ಸರ್ವೋಚ್ಚ ನ್ಯಾಯಾಲಯದ ನ್ಯಾಯಾಧೀಶರು ನಿವೃತ್ತಿ ಹೊಂದುವ ವಯಸ್ಸು
ಎ) 65 ಬಿ) 62
ಸಿ) 68 ಡಿ) 70

348. ಪ್ರಥಮ ಸ್ವಾತಂತ್ರ್ಯ ಸಂಗ್ರಾಮ ನಡೆದದ್ದು
ಎ) 1875 ಬಿ) 1857
ಸಿ) 1760 ಡಿ) 1890

349. 'ಸ್ಥಳೀಯ ಸರ್ಕಾರಗಳ ಪಿತಾಮಹ' ಎಂದು ಹೆಸರಾದವರು
ಎ) ಲಾರ್ಡ್ ಕರ್ಜನ್
ಬಿ) ಲಾರ್ಡ್ ಹಾರ್ಡಿಂಗ್
ಸಿ) ಲಾರ್ಡ್ ಮಿಂಟೋ
ಡಿ) ಲಾರ್ಡ್ ರಿಪ್ಪನ್

350. ಈ ವಸ್ತುಗಳ ಉತ್ಪನ್ನಗಳ ಗುಣಮಟ್ಟ ನಿರ್ಧರಿಸಲು 'ಅಗ್ಮಾರ್ಕ್' ಚಿಹ್ನೆ ಕಡ್ಡಾಯಗೊಳಿಸಲಾಗಿದೆ
ಎ) ಗೃಹ ಕೈಗಾರಿಕೋತ್ಪನ್ನಗಳು
ಬಿ) ಸಣ್ಣ ಕೈಗಾರಿಕೋತ್ಪನ್ನಗಳು
ಸಿ) ವ್ಯವಸಾಯೋತ್ಪನ್ನಗಳು
ಡಿ) ಬೃಹತ್ ಕೈಗಾರಿಕೋತ್ಪನ್ನಗಳು

(ಪ್ರಶ್ನೋತ್ತರ ಸಂಯೋಜನೆ: ಸ್ಲೇಟ್ ಸ್ಪರ್ಧಾತ್ಮಕ ಪರೀಕ್ಷೆಗಳ ತರಬೇತಿ ಕೇಂದ್ರ, ಧಾರವಾಡ)

ಭಾಗ 24 ರ ಉತ್ತರ: 321. ಎ, 322. ಸಿ, 323. ಸಿ, 324. ಬಿ, 325. ಎ, 326. ಬಿ, 327. ಎ, 328. ಸಿ, 329. ಡಿ, 330. ಡಿ, 331. ಎ, 332. ಎ, 333. ಎ, 334. ಬಿ, 335. ಎ

ನಿಮ್ಮ ಪ್ರಶ್ನೆಗೆ ತಜ್ಞರ ಉತ್ತರ

ವಿ. ಪ್ರದೀಪ್‌ಕುಮಾರ್

ಚಾರ್ಟರ್ಡ್ ಅಕೌಂಟೆಂಟ್ ಆಗುವುದು ಹೇಗೆ?

1. ನಾನು ಬಿಬಿಎ ಪದವಿ ಓದುತ್ತಿದ್ದೇನೆ. ಚಾರ್ಟರ್ಡ್ ಅಕೌಂಟೆಂಟ್ ಆಗುವ ಇಚ್ಛೆ ಇದೆ. ಈ ವೃತ್ತಿ ಬಗ್ಗೆ ಮಾಹಿತಿ ನೀಡಿ.

ಹೆಸರು, ಊರು ತಿಳಿಸಿಲ್ಲ.

ಬಿಬಿಎ ಪರೀಕ್ಷೆಯಲ್ಲಿ ಶೇ 60 ಅಂಕಗಳನ್ನು (ಬಿಕಾಂ/ ಎಂಕಾಂ ಆಗಿದ್ದರೆ ಶೇ 55) ಗಳಿಸಿದಲ್ಲಿ ಇಂಟರ್‌ಮೀಡಿಯೆಟ್ ಕೋರ್ಸ್‌ಗೆ ನೇರವಾಗಿ ನೋಂದಾಯಿಸಿಕೊಳ್ಳಬಹುದು. ಜೊತೆಗೆ 3 ವರ್ಷದ ಆರ್ಟಿಕಲ್ ತರಬೇತಿಗೆ ಸೇರಬೇಕು. ಇಂಟರ್‌ಮೀಡಿಯೆಟ್ ಪಾಸಾದ ನಂತರ ಫೈನಲ್‌ಗೆ ನೋಂದಾಯಿಸಿ, ಪರೀಕ್ಷೆಯಲ್ಲಿ ಪಾಸಾಗಬೇಕು. ಫೈನಲ್ ಪರೀಕ್ಷೆಗೆ ಮುಂಚೆ ನಾಲ್ಕು ವಾರಗಳ ಐಟಿ ಮತ್ತು ಸಾಫ್ಟ್ ಸ್ಕಿಲ್ ಕೋರ್ಸ್ ಮಾಡಿರಬೇಕು. ಒಟ್ಟಾರೆ, ಸಿಎ ಕೋರ್ಸ್ ಮಾಡಲು ಕನಿಷ್ಠ 3-4 ವರ್ಷ ಬೇಕಾಗುತ್ತದೆ.

ಈ ವೃತ್ತಿಯಲ್ಲಿ ಯಶಸ್ವಿಯಾಗಲು ನಿಷ್ಠೆ, ಪ್ರಾಮಾಣಿಕತೆಯ ಜೊತೆಗೆ ಸಂಖ್ಯಾ ಕೌಶಲ, ವಿಶ್ಲೇಷಣಾತ್ಮಕ ಕೌಶಲ, ಆರ್ಥಿಕ ನಿರ್ವಹಣೆ ಮತ್ತು ವ್ಯಾಪಾರೋದ್ಯಮ ಕೌಶಲಗಳನ್ನು ಬೆಳೆಸಿಕೊಳ್ಳಬೇಕು. ಚಾರ್ಟರ್ಡ್ ಅಕೌಂಟೆಂಟ್‌ಗಳಿಗೆ ಕಾರ್ಪೊರೇಟ್ ಕ್ಷೇತ್ರದಲ್ಲಿ ಹೆಚ್ಚಿನ ಬೇಡಿಕೆ ಇದೆ. ಹಲವು ವರ್ಷಗಳ ಅನುಭವದ ನಂತರ ಸ್ವತಂತ್ರವಾಗಿ ಪ್ರಾಕ್ಟೀಸ್ ಮಾಡಬಹುದು.

ಹೆಚ್ಚಿನ ವಿವರಗಳಿಗೆ ಪರಿಶೀಲಿಸಿ: https://icai.org/

2. ನನಗೆ ಕಂಪ್ಯೂಟರ್ ಪ್ರೋಗ್ರಾಮಿಂಗ್‌ನಲ್ಲಿ ಆಸಕ್ತಿಯಿದೆ. ಆದ್ದರಿಂದ ಯಾವ ಕೋರ್ಸ್ ಮಾಡುವುದು ಒಳ್ಳೆಯದು?

ಕುಶಾಲ ಕಂಬಾರ, ಬೆಳಗಾವಿ

ಕಂಪ್ಯೂಟರ್ ಪ್ರೋಗ್ರಾಮಿಂಗ್ ಕ್ಷೇತ್ರದಲ್ಲಿ ಪ್ರಮುಖವಾದ ವಲಯಗಳೆಂದರೆ ವೆಬ್ ಡೆವಲಪ್‌ಮೆಂಟ್ (ಫ್ರಂಟ್‌ಎಂಡ್ ಮತ್ತು ಬ್ಯಾಕ್‌ಎಂಡ್), ಮೊಬೈಲ್ ಡೆವಲಪ್‌ಮೆಂಟ್, ಡೇಟಾಬೇಸ್ ಮ್ಯಾನೇಜ್‌ಮೆಂಟ್, ಗೇಮ್ ಡೆವಲಪ್‌ಮೆಂಟ್, ಸಿಸ್ಟಮ್ಸ್ ಡೆವಲಪ್‌ಮೆಂಟ್, ಡೆಸ್ಕ್‌ಟಾಪ್ ಅಪ್ಲಿಕೇಷನ್ಸ್ ಇತ್ಯಾದಿ. ಹಾಗಾಗಿ, ನಿಮಗೆ ಯಾವ ವಲಯದಲ್ಲಿ ಆಸಕ್ತಿಯಿದೆ ಎಂದು ಗುರುತಿಸಿ, ಆ ವಲಯಕ್ಕೆ ಬೇಕಾದ ಪ್ರೋಗ್ರಾಮಿಂಗ್ ಕಲಿಯಬೇಕು. ಉದಾಹರಣೆಗೆ ಜಾವಾ, ಜಾವಾ ಸ್ಕ್ರಿಪ್ಟ್, ಸಿ, ಸಿ++, ಎಚ್‌ಟಿಎಮ್‌ಎಲ್, ಪೈಥಾನ್, ಸ್ವಿಫ್ಟ್, ಯೂನಿಟಿ, ಗೋ, ರಸ್ಟ್ ಇತ್ಯಾದಿ. ನಿಮಗಿರುವ ಸ್ವಾಭಾವಿಕ ಪ್ರತಿಭೆ ಮತ್ತು ಆಸಕ್ತಿಯನ್ನು ಗಮನದಲ್ಲಿಟ್ಟುಕೊಂಡು, ವೃತ್ತಿಯ ಆಯ್ಕೆಗೆ ಅನುಗುಣವಾಗಿ ಯಾವ ಕೋರ್ಸ್ ಮಾಡಬೇಕು ಎನ್ನುವುದನ್ನು ನಿರ್ಧರಿಸಬಹುದು.

3. ನಾನು ದ್ವಿತೀಯ ಪಿಯುಸಿ ಸೈನ್ಸ್ (ಪಿಸಿಎಂಇ) ಮಾಡಿದ್ದೇನೆ. ಯಾವ ಎಂಜಿನಿಯರಿಂಗ್ ಕೋರ್ಸ್ ಮಾಡಬಹುದು. ಬಿಬಿಎ ಮಾಡುವುದಾದರೆ ಯಾವ ವಿಷಯದಲ್ಲಿ ಮಾಡಬಹುದು?

ರಾಕೇಶ್, ಊರು ತಿಳಿಸಿಲ್ಲ.

ನೀವು ದ್ವಿತೀಯ ಪಿಯುಸಿಯಲ್ಲಿ ಆಯ್ಕೆ ಮಾಡಿರುವ ವಿಷಯಗಳಲ್ಲಿ ಆಸಕ್ತಿಯಿದ್ದಲ್ಲಿ ಎಂಜಿನಿಯರಿಂಗ್ ಕೋರ್ಸ್ ಅನ್ನು ಎಲೆಕ್ಟ್ರಾನಿಕ್ಸ್ ಅಂಡ್ ಕಮ್ಯೂನಿಕೇಷನ್ಸ್, ಕಂಪ್ಯೂಟರ್ ಸೈನ್ಸ್, ಎಲೆಕ್ಟ್ರಿಕಲ್ ಅಂಡ್ ಎಲೆಕ್ಟ್ರಾನಿಕ್ಸ್ ವಿಭಾಗಗಳಲ್ಲಿ ಮಾಡಬಹುದು. ಬಿಬಿಎ ಕೋರ್ಸ್‌ನಲ್ಲಿ ಮಾರ್ಕೆಟಿಂಗ್, ಫೈನಾನ್ಸ್, ಬ್ಯಾಂಕಿಂಗ್, ಐಟಿ, ಎಚ್‌ಆರ್ ಸೇರಿದಂತೆ ಅನೇಕ ವಿಭಾಗಗಳಿವೆ.

ಕೋರ್ಸ್ ನಿರ್ಧಾರಕ್ಕೆ ಮುಂಚೆ ನಿಮ್ಮ ವೃತ್ತಿ ಜೀವನದ ಬಗ್ಗೆ ಚಿಂತಿಸಿ, ಸ್ವಾಭಾವಿಕ ಪ್ರತಿಭೆ ಮತ್ತು ಆಸಕ್ತಿಯಿರುವ ವೃತ್ತಿಯನ್ನು ಆರಿಸುವುದು ಒಳ್ಳೆಯದು. ವೃತ್ತಿಯ ಆಯ್ಕೆಯಂತೆ ಕೋರ್ಸ್ ಆಯ್ಕೆ ಮಾಡುವುದು ಸುಲಭ.

4. ಎಂಡಿ (ಪಿಡಿಯಾಟ್ರಿಕ್ಸ್) ಮಾಡಿದ ಮೇಲೆ ವೃತ್ತಿಯ ಅವಕಾಶಗಳ ಬಗ್ಗೆ ತಿಳಿಸಿ.

ಹೆಸರು, ಊರು ತಿಳಿಸಿಲ್ಲ

ಎಂಡಿ (ಪಿಡಿಯಾಟ್ರಿಕ್ಸ್) ಬೇಡಿಕೆಯಲ್ಲಿರುವ ಕ್ಷೇತ್ರ. ಸರ್ಕಾರಿ ಮತ್ತು ಖಾಸಗಿ ಆಸ್ಪತ್ರೆಗಳು, ನರ್ಸಿಂಗ್ ಹೋಮ್ಸ್, ಫಾರ್ಮಾ ಮತ್ತು ರಿಸರ್ಚ್ ಕಂಪನಿಗಳು, ಮೆಡಿಕಲ್ ಕಾಲೇಜು ಮತ್ತು ಆಸ್ಪತ್ರೆಗಳು ಮತ್ತು ಅನೇಕ ಸರ್ಕಾರಿ ಇಲಾಖೆಗಳಲ್ಲಿ ವೃತ್ತಿಯ ಅವಕಾಶಗಳಿವೆ.

ನಿಮ್ಮ ಪ್ರಶ್ನೆಗೆ ತಜ್ಞರ ಉತ್ತರ

ವಿದ್ಯಾರ್ಥಿಗಳೇ, ನಿಮ್ಮ ಮುಂದಿನ ಕೋರ್ಸ್ ಮತ್ತು ಸೂಕ್ತವಾದ ವೃತ್ತಿಯ ಆಯ್ಕೆ ಹಾಗೂ ಭವಿಷ್ಯವನ್ನು ರೂಪಿಸಿಕೊಳ್ಳುವ ಬಗ್ಗೆ ಗೊಂದಲಗಳಿವೆಯೇ? ಹಾಗಿದ್ದರೆ ನಮಗೆ ಬರೆಯಿರಿ. ನಿಮ್ಮ ಪ್ರಶ್ನೆಗಳಿಗೆ ಶಿಕ್ಷಣ ತಜ್ಞ ಮತ್ತು ವೃತ್ತಿ ಸಲಹೆಗಾರ **ವಿ. ಪ್ರದೀಪ್ ಕುಮಾರ್** ಉತ್ತರಿಸಲಿದ್ದಾರೆ. ಪ್ರಶ್ನೆಗಳನ್ನು **shikshana@prajavani.co.in** ಗೆ ಕಳಿಸಬಹುದು.

ಅಭಿಮತ ಪುಟದ ವಿಳಾಸ
ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75, ಎಂ.ಜಿ.ರಸ್ತೆ, ಬೆಂಗಳೂರು-01
ಇ-ಮೇಲ್ : editpage@prajavani.co.in

ಅಭಿಮತ

ಸುಭಾಷಿತ

ಪಶ್ಚಾತ್ತಾಪಪಡುವಂತಹ ಕೆಲಸವನ್ನು ಯಾಕೆ ಮಾಡುತ್ತೀರಿ? ನಿಮಗೆ ನೀವೇ ಕಣ್ಣೀರು ಹಾಕುವಂತೆ ಮಾಡಿಕೊಳ್ಳುವುದೇಕೆ? ಪಶ್ಚಾತ್ತಾಪಕ್ಕೆ ಎಡೆಯಿಲ್ಲದಂತಹ ಕೆಲಸಗಳನ್ನಷ್ಟೇ ಮಾಡಿ, ಸಂತೋಷದಿಂದ ಇರಿ. **–ಗೌತಮ ಬುದ್ಧ**

ಪಡಿತರ ಧಾನ್ಯ ಕಳ್ಳಸಾಗಣೆ ತಡೆಗೆ ಬೇಕು ಇಚ್ಛಾಶಕ್ತಿ

ಬಡವರು ಮತ್ತು ಮಧ್ಯಮ ವರ್ಗದ ಕುಟುಂಬಗಳನ್ನು ಹಸಿವಿನಿಂದ ರಕ್ಷಿಸುವುದಕ್ಕಾಗಿ ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ಆಹಾರ ಭದ್ರತಾ ಕಾಯ್ದೆಯಡಿ ಪಡಿತರವನ್ನು ಉಚಿತವಾಗಿ ಮತ್ತು ರಿಯಾಯಿತಿ ದರದಲ್ಲಿ ಒದಗಿಸುತ್ತಿವೆ. ರಾಜ್ಯದಲ್ಲಿ ಒಟ್ಟು 1.47 ಕೋಟಿ ಪಡಿತರ ಚೀಟಿಗಳಿವೆ. ಈ ಪೈಕಿ 1.15 ಕೋಟಿ ಕುಟುಂಬಗಳು ಆದ್ಯತಾ ವಲಯದ ಪಡಿತರ ಚೀಟಿ (ಬಿಪಿಎಲ್) ಹೊಂದಿವೆ. 10.90 ಲಕ್ಷ ಕುಟುಂಬಗಳು ಅಂತ್ಯೋದಯ ಅನ್ನ ಯೋಜನೆ (ಎಎವೈ) ಪಡಿತರ ಚೀಟಿ ಹೊಂದಿವೆ. 21.13 ಲಕ್ಷ ಕುಟುಂಬಗಳು ಆದ್ಯತೆಯೇತರ ವಲಯದ ಕುಟುಂಬದ (ಎನ್‌ಪಿಎಚ್‌ಎಚ್) ಪಡಿತರ ಚೀಟಿಗಳನ್ನು ಹೊಂದಿವೆ. ಈ ಎಲ್ಲ ಪಡಿತರ ಚೀಟಿದಾರರಿಗೆ ಕೇಂದ್ರ ಮತ್ತು ರಾಜ್ಯದ ವಿವಿಧ ಯೋಜನೆಗಳ ಅಡಿಯಲ್ಲಿ ವಿತರಿಸಬೇಕಿದ್ದ ಪಡಿತರವನ್ನು ಕಾಳಸಂತೆಯಲ್ಲಿ ಮಾರಾಟ ಮಾಡಿದ ಹಲವು ಪ್ರಕರಣಗಳು ವರದಿಯಾಗಿವೆ. ಕೋವಿಡ್ ಲಾಕ್‌ಡೌನ್ ಕಾರಣದಿಂದ, ಪ್ರಧಾನಮಂತ್ರಿ ಗರೀಬ್ ಕಲ್ಯಾಣ ಅನ್ನ ಯೋಜನೆ ಅಡಿಯಲ್ಲಿ ಮೇ ಮತ್ತು ಜೂನ್ ತಿಂಗಳ ಅವಧಿಗೆ ಅಂತ್ಯೋದಯ ಮತ್ತು ಬಿಪಿಎಲ್ ಪಡಿತರ ಚೀಟಿ ಹೊಂದಿರುವ ಕುಟುಂಬಗಳ ಎಲ್ಲ ಸದಸ್ಯರಿಗೂ ತಲಾ 5 ಕೆ.ಜಿ. ಆಹಾರ ಧಾನ್ಯವನ್ನು ಕೇಂದ್ರ ಸರ್ಕಾರ ಉಚಿತವಾಗಿ ಪೂರೈಸಿದೆ. ರಾಜ್ಯ ಸರ್ಕಾರವು ಸಾಮಾನ್ಯ ಸಂದರ್ಭಗಳಲ್ಲಿ ತಿಂಗಳಿಗೆ 2.32 ಲಕ್ಷ ಟನ್ ಅಕ್ಕಿಯನ್ನು ಭಾರತೀಯ ಆಹಾರ ನಿಗಮದಿಂದ (ಎಫ್‌ಸಿಐ) ಪಡೆಯುತ್ತಿದೆ. ಅದರಲ್ಲಿ 2.17 ಲಕ್ಷ ಟನ್ ಉಚಿತವಾಗಿ ಪೂರೈಕೆಯಾದರೆ, 25,000 ಟನ್ ಅಕ್ಕಿಯನ್ನು ಎಫ್‌ಸಿಐನ ಮುಕ್ತ ಮಾರುಕಟ್ಟೆ ಮಾರಾಟ ಯೋಜನೆ ಅಡಿಯಲ್ಲಿ ಖರೀದಿ ಮಾಡುತ್ತಿದೆ. 40,000 ಟನ್ ಗೋಧಿಯನ್ನೂ ಇದೇ ಯೋಜನೆಯಡಿ ಖರೀದಿ ಮಾಡಲಾಗುತ್ತಿದೆ. ಸಾರ್ವಜನಿಕ ವಿತರಣಾ ವ್ಯವಸ್ಥೆಯಡಿ ಉಚಿತ ಮತ್ತು ರಿಯಾಯಿತಿ ದರದಲ್ಲಿ ಆಹಾರ ಧಾನ್ಯಗಳನ್ನು ವಿತರಿಸುವುದಕ್ಕಾಗಿಯೇ ರಾಜ್ಯ ಸರ್ಕಾರವು ವಾರ್ಷಿಕ ₹ 1,800 ಕೋಟಿ ವೆಚ್ಚ ಮಾಡುತ್ತಿದೆ.

ಕಾಳಸಂತೆಕೋರರು ಮತ್ತು ಅಧಿಕಾರಿಗಳ ನಡುವಿನ ನಂಟನ್ನು ತುಂಡರಿಸಬೇಕಾಗಿದೆ

ಇಷ್ಟೊಂದು ದೊಡ್ಡ ಪ್ರಮಾಣದ ಆಹಾರ ಧಾನ್ಯಗಳ ಸಾಗಣೆ, ಪೂರೈಕೆ ಮತ್ತು ವಿತರಣೆಯಲ್ಲಿ ಇರುವ ಲೋಪಗಳನ್ನೇ ಬಳಸಿಕೊಂಡು ಕಾಳಸಂತೆಕೋರರು ಮತ್ತು ಅಧಿಕಾರಿಗಳು ಶಾಮೀಲಾಗಿ ಬಡವರ ಅನ್ನಕ್ಕೆ ಕನ್ನ ಹಾಕುತ್ತಿದ್ದಾರೆ. ಉಚಿತವಾಗಿ ವಿತರಿಸಲು ಪೂರೈಕೆಯಾಗಿದ್ದ ಆಹಾರ ಧಾನ್ಯಗಳನ್ನು ಕಾಳಸಂತೆಗೆ ಕೊಂಡೊಯ್ದಿರುವ ಪ್ರಕರಣಗಳು ಲಾಕ್‌ಡೌನ್ ಅವಧಿಯಲ್ಲಿ ಹೆಚ್ಚಾಗಿವೆ. ಆಹಾರ ಭದ್ರತಾ ಕಾಯ್ದೆಯಡಿ ಹಾಗೂ ಪ್ರಧಾನ ಮಂತ್ರಿ ಗರೀಬ್ ಕಲ್ಯಾಣ ಅನ್ನ ಯೋಜನೆಯಡಿ ಏಕಕಾಲಕ್ಕೆ ಆಹಾರ ಧಾನ್ಯ ಹಂಚಿಕೆಯಾದ ಸಂದರ್ಭವನ್ನೇ ಬಳಸಿಕೊಂಡು ಪಡಿತರ ಚೀಟಿದಾರರಿಗೆ ವಂಚಿಸಿರುವ ಪ್ರಕರಣಗಳೂ ನಡೆದಿವೆ. ಆಹಾರ ಮತ್ತು ನಾಗರಿಕ ಪೂರೈಕೆ ಇಲಾಖೆ ಜಂಟಿ ನಿರ್ದೇಶಕರ ನೇತೃತ್ವದ ರಾಜ್ಯ ಮಟ್ಟದ ತನಿಖಾ ದಳವು ಮೇ ತಿಂಗಳಲ್ಲಿ ಬಂಗಾರಪೇಟೆಯ ಒಂದೇ ಅಕ್ಕಿ ಗಿರಣಿಯಲ್ಲಿ 9,710 ಕ್ವಿಂಟಲ್ ಪಡಿತರ ಅಕ್ಕಿಯನ್ನು ಪತ್ತೆ ಮಾಡಿದೆ. ಚಿಕ್ಕಬಳ್ಳಾಪುರ, ಕೋಲಾರ ಸೇರಿದಂತೆ ಹಲವು ಜಿಲ್ಲೆಗಳಲ್ಲಿ ಪಡಿತರ ಧಾನ್ಯಗಳ ಅಕ್ರಮ ಸಾಗಣೆ, ದಾಸ್ತಾನು ಪತ್ತೆಯಾಗಿವೆ. ಬೆಂಗಳೂರಿನ ಯಶವಂತಪುರದಲ್ಲಿರುವ ಕರ್ನಾಟಕ ಆಹಾರ ಮತ್ತು ನಾಗರಿಕ ಪೂರೈಕೆ ನಿಗಮದ ಸಗಟು ವಿತರಣಾ ಉಗ್ರಾಣಗಳಿಂದಲೇ ಪಡಿತರ ಧಾನ್ಯವನ್ನು ಕಾಳಸಂತೆಗೆ ಕೊಂಡೊಯ್ಯುತ್ತಿದ್ದ ಪ್ರಕರಣವನ್ನೂ ತನಿಖಾ ತಂಡ ಇತ್ತೀಚೆಗೆ ಪತ್ತೆ ಮಾಡಿದೆ. ಇನ್ನೊಂದೆಡೆ, ಬೆಂಬಲ ಬೆಲೆ ಯೋಜನೆಯಡಿ (ಎಂಎಸ್‌ಪಿ) ಖರೀದಿಸಿದ್ದ ಭತ್ತವನ್ನು ಮಂಡ್ಯ ಜಿಲ್ಲೆಯ ಅಕ್ಕಿ ಗಿರಣಿಗಳಲ್ಲಿ ‘ಹಲ್ಲಿಂಗ್’ ಮಾಡಿ ಪಡೆದಿದ್ದ 14,344 ಟನ್ ಅಕ್ಕಿಯನ್ನು ಜೂನ್ ತಿಂಗಳಿನಲ್ಲಿ ಹಲವು ಜಿಲ್ಲೆಗಳಲ್ಲಿ ಪಡಿತರ ವಿತರಣೆಗಾಗಿ ಹಂಚಿಕೆ ಮಾಡಲಾಗಿತ್ತು. ಈ ಅಕ್ಕಿಯನ್ನು ಕಂಪ್ಯೂಟರೀಕೃತ ತೂಕವಿಲ್ಲದೆ, ಗುಣಮಟ್ಟ ಪರಿಶೀಲನೆ ಮಾಡದೆ ಮತ್ತು ಕಣ್ಗಾವಲು ಇಲ್ಲದೇ ಸಾಗಣೆ ಮಾಡಿರುವುದು ಸಂಶಯಕ್ಕೆ ಎಡೆಮಾಡಿದೆ. ಪ್ರಧಾನ ಮಂತ್ರಿ ಗರೀಬ್ ಕಲ್ಯಾಣ ಅನ್ನ ಯೋಜನೆಯಡಿ ಪೂರೈಕೆಯಾದ ಆಹಾರ ಧಾನ್ಯಗಳನ್ನು ಬಳಸಿಕೊಂಡು ಲೆಕ್ಕ ಹೊಂದಾಣಿಕೆ ಮಾಡಿ, ಬೃಹತ್ ಪ್ರಮಾಣದ ಅಕ್ಕಿಯನ್ನು ಕಾಳಸಂತೆಗೆ ಸಾಗಿಸಿರುವ ಮತ್ತು ಗಿರಣಿಗಳಲ್ಲೇ ಬಿಟ್ಟು ಬಂದಿರುವ ಶಂಕೆ ಇದೆ. ಈ ಕುರಿತೂ ತನಿಖಾ ದಳವು ತನಿಖೆ ಆರಂಭಿಸಿದೆ. ಶಾಲಾ ಮಕ್ಕಳ ಮಧ್ಯಾಹ್ನದ ಬಿಸಿಯೂಟಕ್ಕೆ ಪೂರೈಕೆಯಾಗುತ್ತಿರುವ ಆಹಾರ ಧಾನ್ಯ ಮತ್ತು ಇತರ ಪಡಿತರ ವಸ್ತುಗಳನ್ನೂ ವ್ಯಾಪಕವಾಗಿ ಕಾಳಸಂತೆಗೆ ಸಾಗಿಸುತ್ತಿರುವ ಆರೋಪಗಳಿವೆ.

ರಾಜ್ಯದಲ್ಲಿ ಪಡಿತರ ಧಾನ್ಯವನ್ನು ಕಾಳಸಂತೆಗೆ ಕೊಂಡೊಯ್ದು ಮಾರಾಟ ಮಾಡುವ ಬೃಹತ್ ಜಾಲ ವ್ಯವಸ್ಥಿತವಾಗಿ ಕೆಲಸ ಮಾಡುತ್ತಿದೆ ಎಂಬುದಕ್ಕೆ ಇತ್ತೀಚಿನ ದಿನಗಳಲ್ಲಿ ಹಲವು ಸಾಕ್ಷ್ಯಗಳು ಲಭಿಸಿವೆ. ನ್ಯಾಯಬೆಲೆ ಅಂಗಡಿಗಳ ಮಾಲೀಕರು, ಕರ್ನಾಟಕ ಆಹಾರ ಮತ್ತು ನಾಗರಿಕ ಪೂರೈಕೆ ನಿಗಮ ಹಾಗೂ ತಾಲ್ಲೂಕು ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಗಳ ಸಗಟು ಉಗ್ರಾಣಗಳ ವ್ಯವಸ್ಥಾಪಕರು, ಆಹಾರ ಮತ್ತು ನಾಗರಿಕ ಪೂರೈಕೆ ಇಲಾಖೆಯ ಆಹಾರ ನಿರೀಕ್ಷಕರು, ಹಿರಿಯ ಅಧಿಕಾರಿಗಳು ಸೇರಿದಂತೆ ಹಲವರು ಕಾಳಸಂತೆಕೋರರ ಜತೆ ಕೈಜೋಡಿಸಿರುವುದರಿಂದಲೇ ಆಹಾರ ಧಾನ್ಯಗಳ ಕಳ್ಳಸಾಗಣೆ ನಿರಾತಂಕವಾಗಿ ನಡೆದಿದೆ. ಪಡಿತರ ಧಾನ್ಯಗಳ ಕಳ್ಳಸಾಗಣೆ ಮತ್ತು ಅಕ್ರಮ ಸಾಗಣೆ ಪತ್ತೆಯಾದಾಗ ಪೊಲೀಸರು ಸಾಗಣೆದಾರರು ಮತ್ತು ಖರೀದಿದಾರರನ್ನಷ್ಟೇ ಕೇಂದ್ರೀಕರಿಸಿ ತನಿಖೆ ನಡೆಸುತ್ತಿರುವುದೂ ಕಾಳಸಂತೆಕೋರರಿಗೆ ವರದಾನವಾಗಿದೆ. ಬಹುತೇಕ ಪ್ರಕರಣಗಳಲ್ಲಿ ಆಹಾರ ಧಾನ್ಯವನ್ನು ಕಳ್ಳಸಾಗಣೆದಾರರಿಗೆ ನೀಡಿದವರು ಮತ್ತು ಕಾಳಸಂತೆಯನ್ನು ನಿಯಂತ್ರಿಸುವವರ ವಿರುದ್ಧ ಕಾನೂನು ಕ್ರಮ ಆಗುತ್ತಿಲ್ಲ. ಇದು ರಾಜ್ಯದ ಬಹುತೇಕ ಸಗಟು ಪಡಿತರ ವಿತರಣಾ ಉಗ್ರಾಣಗಳ ಮೇಲೆ ಕಾಳಸಂತೆಕೋರರು ನೇರ ಹಿಡಿತ ಸಾಧಿಸಲು ಕಾರಣವಾಗಿದೆ. ರಾಜ್ಯದ ಹೆಚ್ಚಿನ ಸಗಟು ಪಡಿತರ ವಿತರಣಾ ಉಗ್ರಾಣಗಳಲ್ಲಿ ಇನ್ನೂ ಸಿ.ಸಿ ಟಿ.ವಿ ಕ್ಯಾಮೆರಾ ಕಣ್ಗಾವಲು ಇಲ್ಲ. ಪಡಿತರ ಸಾಗಣೆ ವಾಹನಗಳಿಗೆ ಜಿಪಿಎಸ್ ಕಡ್ಡಾಯಗೊಳಿಸುವ ಪ್ರಸ್ತಾವ ದೂಳು ತಿನ್ನುತ್ತಿದೆ. ಎಫ್‌ಸಿಐ ಮತ್ತು ಅಕ್ಕಿ ಗಿರಣಿಗಳು, ಎಂಎಸ್‌ಪಿ ಖರೀದಿ ಕೇಂದ್ರಗಳಿಂದ ಆಹಾರ ಧಾನ್ಯ ಎತ್ತುವಳಿ ಹಾಗೂ ಸಾಗಣೆ ಮೇಲೆ ಸರಿಯಾದ ನಿಗಾ ಇಡುವ ವ್ಯವಸ್ಥೆಯೇ ಇಲ್ಲ. ಬಡವರ ಹೊಟ್ಟೆ ತುಂಬಿಸಬೇಕಾದ ಆಹಾರ ಧಾನ್ಯಗಳು ಕಾಳಸಂತೆಕೋರರ ಪಾಲಾಗುವಂತೆ ಮಾಡಿರುವುದು ಅಕ್ಷಮ್ಯ. ಕಾಳಸಂತೆಕೋರರು ಮತ್ತು ಅಧಿಕಾರಿಗಳ ನಡುವಿನ ನಂಟನ್ನು ತುಂಡರಿಸಬೇಕು. ಪಡಿತರ ಧಾನ್ಯಗಳು ಕಾಳಸಂತೆಕೋರರ ಕೈ ಸೇರದಂತೆ ತಡೆಯುವ ಇಚ್ಛಾಶಕ್ತಿಯನ್ನು ರಾಜ್ಯ ಸರ್ಕಾರ ಪ್ರದರ್ಶಿಸಲೇಬೇಕಿದೆ.

ದಿನದ ಟ್ವೀಟ್

ಅಭಿರುಚಿ ಬೆಳೆಸಿಕೊಳ್ಳಿ

ಜೀವನದಲ್ಲೇ ಮೊದಲ ಬಾರಿಗೆ, ಕನ್ನಡಕ್ಕೆ ಡಬ್ ಮಾಡಿದ ಹಿಂದಿ ಚಿತ್ರ ‘ಮೇರಿ ಕೋಮ್’ ವೀಕ್ಷಿಸಿದೆ. ಡಬ್ಬಿಂಗ್ ಸಂಸ್ಕೃತಿಯನ್ನು ಬೆಂಬಲಿಸಿದ ನಾನು, ಬಹಳ ನಿರಾಶಳಾಗಿದ್ದೇನೆ... ಭಾಷೆ ಹಾಗಿರಲಿ, ಸ್ವಲ್ಪ ಅಭಿರುಚಿ ಬೆಳೆಸಿಕೊಳ್ಳಿ ಮೊದಲು, ಡಬ್ಬಿಂಗ್ ಆಮೇಲೆ ನೋಡೋಣ. #BadDubbing

ರಮ್ಯಾ ವಸಿಷ್ಠ, ಗಾಯಕಿ

ಕಿಡಿನುಡಿ

ಬೆಳಗಾವಿಯ ಸುವರ್ಣ ವಿಧಾನಸೌಧದಲ್ಲಿ ಎರಡು ವರ್ಷದಿಂದ ಅಧಿವೇಶನ ನಡೆದಿಲ್ಲ. ಸರ್ಕಾರದ ಪ್ರತಿನಿಧಿಗಳೂ ಅಲ್ಲಿಗೆ ಬಂದಿಲ್ಲ. ಅಲ್ಲಿನ ಕುರ್ಚಿ, ಮೇಜುಗಳನ್ನು ಹೆಗ್ಗಣಗಳು ತಿನ್ನುತ್ತಿವೆ. ಈ ರೀತಿ ಉತ್ತರ ಕರ್ನಾಟಕದ ನಿರ್ಲಕ್ಷ್ಯ ಏಕೆ? ಸುವರ್ಣ ವಿಧಾನಸೌಧದಲ್ಲಿ ಅಧಿವೇಶನ ನಡೆಸದೇ ಇದ್ದರೆ ಸುಮ್ಮನೆ ಬಾಗಿಲು ಹಾಕಿಡುವ ಬದಲು ಬಾಡಿಗೆಗಾದರೂ ಕೊಡಲಿ.

ಡಿ.ಕೆ.ಶಿವಕುಮಾರ್, ಕೆಪಿಸಿಸಿ ಅಧ್ಯಕ್ಷ

25 ವರ್ಷಗಳ ಹಿಂದೆ

ಶುಕ್ರವಾರ, 19-7-1996

• ಮಹಿಳೆಗೆ ಶೇ 33 ಮೀಸಲು: ಶೀಘ್ರ ಮಸೂದೆ

ನವದೆಹಲಿ, ಜುಲೈ 18 (ಪಿಟಿಐ, ಯುಎನ್‌ಐ)– ಶಾಸನಸಭೆಗಳಲ್ಲಿ ಹಾಗೂ ಸರ್ಕಾರಿ ಉದ್ಯೋಗದಲ್ಲಿ ಮಹಿಳೆಯರಿಗೆ ಮೀಸಲಾತಿ ನೀಡುವ ಮಸೂದೆಯನ್ನು ಲೋಕಸಭೆಯ ಪ್ರಸಕ್ತ ಅಧಿವೇಶನದ ಅವಧಿಯಲ್ಲಿಯೇ ಮಂಡಿಸಲಾಗುವುದು ಎಂದು ಪ್ರಧಾನಿ ಎಚ್.ಡಿ.ದೇವೇಗೌಡ ಹೇಳಿದ್ದಾರೆ.

ಈ ಕಾಯ್ದೆಯ ಅನ್ವಯ ಲೋಕಸಭೆ ಮತ್ತು ರಾಜ್ಯ ವಿಧಾನಸಭೆಗಳಲ್ಲಿ ಮಹಿಳೆಯರಿಗೆ ಶೇ 33 ಮೀಸಲಾತಿ ಹಾಗೂ ಸರ್ಕಾರಿ ಉದ್ಯೋಗದಲ್ಲಿ ಶೇ 30 ಮೀಸಲಾತಿ ನೀಡಲಾಗುವುದು.

50 ವರ್ಷಗಳ ಹಿಂದೆ

ಸೋಮವಾರ, 19-7-1971

• ‘ಆಸ್ತಿಗೆ ನೀಡುವ ಪರಿಹಾರಕ್ಕೆ ನ್ಯಾಯಾಲಯದ ವ್ಯಾಪ್ತಿ ಬೇಡ’

ನವದೆಹಲಿ, ಜುಲೈ 18– ಸ್ವಾಧೀನಪಡಿಸಿಕೊಳ್ಳುವ ಆಸ್ತಿಗೆ ಪರಿಹಾರದ ಪ್ರಮಾಣ ನಿರ್ಧರಿಸುವ ಅಧಿಕಾರವನ್ನು ಸಂಸತ್ತಿಗೆ ನೀಡುವಂತೆ ಹಾಗೂ ಅಂಥ ಪರಿಹಾರ ಸಾಕೇ ಎಂಬುದನ್ನು ಯಾವ ನ್ಯಾಯಾಲಯದಲ್ಲಿಯೂ ಪ್ರಶ್ನಿಸಲಾಗದಂತೆ ಸಂವಿಧಾನಕ್ಕೆ ತಿದ್ದುಪಡಿ ತರಬೇಕೆಂದು ಆಡಳಿತ ಕಾಂಗ್ರೆಸ್ಸಿನ ಸಂಸತ್ ಸದಸ್ಯರು ಹಾಗೂ ಕಾನೂನು ತಜ್ಞರನೇಕರು ಇಂದು ಅಪೇಕ್ಷಿಸಿದರು.

ಜನತೆಯ ಆಶೋತ್ತರ ಪೂರೈಸಲು ಸಂಸತ್ತಿನ ಚುನಾಯಿತ ಜನತಾ ಪ್ರತಿನಿಧಿಗಳಿಗೆ ಅಂಥ ಅಧಿಕಾರವಿರಬೇಕು ಎಂದು ಆಡಳಿತ ಕಾಂಗ್ರೆಸ್ ಸಂಸತ್ ಪಕ್ಷ ಏರ್ಪಡಿಸಿರುವ ‘ನಮ್ಮ ಸಂವಿಧಾನ ಹಾಗೂ ಸಮಾಜ ಸುಧಾರಣೆ’ ವಿಷಯ ಕುರಿತ ವಿಚಾರಗೋಷ್ಠಿಯ 2ನೇ ದಿನವಾದ ಇಂದು ಬಹುತೇಕ ಭಾಷಣಕಾರರು ಹೇಳಿದರು. ಅವರಲ್ಲಿ ಕೆಲವರು, ಪರಿಹಾರ ನೀಡಿಕೆಯನ್ನೇ ವಿರೋಧಿಸಿದರು.

ಗಿಡ ನೆಡುವ ಕಾರ್ಯಕ್ರಮದಲ್ಲಿ ವೈಜ್ಞಾನಿಕ ವಿಧಾನಗಳನ್ನು ಅನುಸರಿಸಬೇಕಾಗಿದೆ

ಪರಿಸರ ಪೋಷಣೆಗೆ ಇರಲಿ ಅರಿವಿನ ಕವಚ

ವಿಶ್ಲೇಷಣೆ

ಡಾ. ಸಂಜಯ್ ಗುಬ್ಬಿ

ಮಳೆಗಾಲ ಬಂದಿದೆ. ಎಲ್ಲೆಡೆ ಹಸಿರು ಚಿಗುರಿದೆ. ಇದರೊಡನೆ ಗಿಡ ನೆಡುವ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲು ಪರಿಸರಾಸಕ್ತರು, ಪರಿಸರ ಸಂಘಟನೆಗಳು, ತಾರೆಯರು, ಪ್ರಭಾವಿ ವ್ಯಕ್ತಿಗಳು, ಸಾರ್ವಜನಿಕರು ಉತ್ಸುಕತೆ ತೋರುತ್ತಿರುತ್ತಾರೆ.

ಕಾಡಿನ ನಾಶ ತಡೆಗೆ ಸುಲಭವಾದ, ಆಕರ್ಷಕವಾದ, ಒಮ್ಮತದ ಪ್ರಾಪಂಚಿಕ ದೃಷ್ಟಿಕೋನ- ಗಿಡ ನೆಡುವುದು. ಕಾಡು ಕಡಿಯಬೇಡ ಎಂದಾಗ ಹುಟ್ಟಿಕೊಳ್ಳುವ ಚರ್ಚೆ, ವಿವಾದ, ಅಭಿವೃದ್ಧಿವಿರೋಧಿ ಎಂಬ ಪಟ್ಟ, ಇನ್ನಿತರ ಯಾವುದೇ ವಿವಾದಗಳು ಗಿಡ ನೆಡುವ ಕಾರ್ಯಕ್ರಮಕ್ಕೆ ಅಡ್ಡಿಯಾಗುವುದಿಲ್ಲ. ಈ ಚಟುವಟಿಕೆ ಒಳ್ಳೆಯ ಉದ್ದೇಶಗಳನ್ನು ಒಳಗೊಂಡಿದ್ದರೂ ಅದು ತನ್ನದೇ ಆದ ನ್ಯೂನತೆಗಳನ್ನು ಹೊಂದಿದೆ.

ಸ್ಥಳೀಯ ಜಾತಿಯ ಗಿಡಗಳು ಎಂದ ತಕ್ಷಣ ಆಲ, ಅರಳಿ, ಬೇವು, ಮತ್ತಿ ಅಷ್ಟೇ ಅಲ್ಲ. ಎಷ್ಟೋ ಪ್ರದೇಶಗಳಲ್ಲಿ ಈ ಜಾತಿಯ ಮರಗಳು ನೈಸರ್ಗಿಕವಾಗಿ ಬೆಳೆಯುವುದೇ ಇಲ್ಲ. ಅಲ್ಲಿನ ಹವಾಗುಣ, ಮಣ್ಣಿನ ಗುಣಮಟ್ಟ, ಹವಾಮಾನ ವೈಪರೀತ್ಯ, ಮಳೆಯ ಪ್ರಮಾಣ, ಇತರ ವಿಚಾರಗಳಿಗೆ ಒಗ್ಗಿದಂತಹ ಬೇರೆ ಜಾತಿಯ ಗಿಡಮರಗಳಿರಬಹುದು. ಅವುಗಳ ಸಂತಾನೋತ್ಪತ್ತಿಯನ್ನು ಬೆಂಬಲಿಸುವ ಕೀಟ, ಪಕ್ಷಿ, ಪ್ರಾಣಿ ಅಥವಾ ಗಾಳಿ, ನೀರಿನಂತಹ ವ್ಯವಸ್ಥೆಗಳಿರಬಹುದು. ಅಲ್ಲಿಗೆ ಆಲ, ಅರಳಿಯಂತಹ ಪ್ರಭೇದಗಳು ಪರಕೀಯ ಗಿಡಗಳಾಗಿ ಬಿಡುತ್ತವೆ. ಹಲವಾರು ಬಾರಿ ಸಸಿ ನೆಡುವ ಕಾರ್ಯಕ್ರಮದ ಆಯೋಜಕರು ಈ ಪರಿಸರ ಸೂಕ್ಷ್ಮತೆಯನ್ನು ಅರ್ಥೈಸಿಕೊಂಡಿರುವುದಿಲ್ಲ. ಸ್ಥಳೀಯ ಆವಾಸಕ್ಕೆ ತಮಗೆ ಅರಿವಿಲ್ಲದಂತೆ ಪರಕೀಯ ಗಿಡಗಳನ್ನು ಪರಿಚಯಿಸಿ ಆ ಭಾಗದ ಆವಾಸಸ್ಥಾನಕ್ಕೆ ಧಕ್ಕೆ ತಂದಿರುತ್ತಾರೆ.

ಲಕ್ಷಾಂತರ ಬೀಜದುಂಡೆಗಳನ್ನು ಮಾಡಿ ಮನಸೋ ಇಚ್ಛೆ ಪಸರಿಸುವ ಪ್ರವೃತ್ತಿ ಬೆಳೆದಿದೆ. ಬಹುಶಃ ಈ ಚಟುವಟಿಕೆಯಿಂದ ಪರಿಸರದ ಮೇಲೆ ದುಷ್ಪರಿಣಾಮಗಳೇ ಹೆಚ್ಚು. ಬೀಜದುಂಡೆಗೆ ಬಳಸುವ ಮಣ್ಣಿನಲ್ಲಿ ಲಂಟಾನ, ಪಾರ್ಥೇನಿಯಂನಂತಹ ಕಳೆಗಳ ಬೀಜಗಳಿರಬಹುದು. ಇದರಿಂದ ಈ ಕಳೆಗಳನ್ನು ನಾವೇ ಪಸರಿಸಿದಂತಾಗುತ್ತದೆ. ಅತ್ತಿಮರ ತನ್ನ ಬೀಜ ಪಸರಿಸಲು ಕೆಲ ಜಾತಿಯ ಹಣ್ಣಿನ ನೊಣದ ಮೇಲೆ ಅವಲಂಬಿತವಾಗಿರುತ್ತದೆ. ಈ ಮರವನ್ನು ಅದಕ್ಕೆ ಬೆಂಬಲವಾಗಿ ನಿಲ್ಲುವ ನೊಣದ ಸಂತತಿಯಿಲ್ಲದ ಪ್ರದೇಶಕ್ಕೆ ತೆಗೆದುಕೊಂಡು ಇದು ಸ್ಥಳೀಯ ಗಿಡವೆಂದು ನೆಟ್ಟರೆ ಅತ್ತಿಮರ ಸಂತಾನೋತ್ಪತ್ತಿ ಮಾಡುವುದಾದರೂ ಹೇಗೆ? ಅಚ್ಚ ಕನ್ನಡಿಗರನ್ನು ಕರೆದುಕೊಂಡು ಹೋಗಿ ಅಫ್ಘಾನಿಸ್ತಾನಕ್ಕೊ ಅಥವಾ ಸೈಬೀರಿಯಾಕ್ಕೊ ಬಿಟ್ಟುಬಂದ ಹಾಗಿರುತ್ತದೆ. ಪ್ರತಿಯೊಂದು ಜಾತಿಯ ಮರಕ್ಕೂ ಇದು ಅನ್ವಯಿಸುತ್ತದೆ.

ಹುಲ್ಲುಗಾವಲು ಮತ್ತು ಹೆಚ್ಚು ಮರಗಳಿಲ್ಲದ ಗುಡ್ಡಗಳನ್ನು ಕಂಡರೆ ಗಿಡ ನೆಡುವ ಕೆಲವು ಹವ್ಯಾಸಿಗಳಿಗೆ, ಅರಣ್ಯ ಇಲಾಖೆಯ ಕೆಲ ಅಧಿಕಾರಿಗಳಿಗೆ ಬಲು ಇಷ್ಟ. ಅವರಿಗೆ ಅಲ್ಲಿ ಹೆಚ್ಚು ಗಿಡಗಳನ್ನು ಬೆಳೆಸಬೇಕೆಂಬ ಅಭಿಲಾಷೆಯೊಡೆಯುತ್ತದೆ. ಅಂತಹ ಪ್ರದೇಶಗಳನ್ನು ‘ಬರಡು’ ಭೂಮಿಯೆಂದು ಘೋಷಿಸಿಬಿಡುತ್ತಾರೆ. ವಾಸ್ತವಾಂಶವೆಂದರೆ ಹುಲ್ಲುಗಾವಲುಗಳು, ಹುಲ್ಲುಗಾಡುಗಳು ತಮ್ಮದೇ ಆದ ವಿಶಿಷ್ಟ ಆವಾಸಸ್ಥಾನಗಳು.

ಹಾಗೆಯೇ, ಹೆಚ್ಚಾಗಿ ಕರಾವಳಿ ಪ್ರದೇಶದ ಜಂಬುಮಣ್ಣಿನ (ಲ್ಯಾಟರೈಟ್) ಕಲ್ಲುಬಂಡೆಗಳ ಮೇಲೆ ಕಂಡುಬರುವ ಹುಲ್ಲುಗಾವಲುಗಳು ಕೂಡ ನಿರ್ದಿಷ್ಟ ಆವಾಸಸ್ಥಾನಗಳಾಗಿವೆ. ಬೇಸಿಗೆಯಲ್ಲಿ ಒಣಗುವ ಈ ಹುಲ್ಲುಗಾವಲುಗಳು ಮುಂಗಾರು ಬಂದೊಡನೆ ಜೀವತಳೆದು ಅಭೂತಪೂರ್ವವಾಗಿ ಪರಿವರ್ತನೆಗೊಳ್ಳುತ್ತವೆ. ಮಳೆಗಾಲದಲ್ಲಿ ಇಲ್ಲಿ ಹೂ ಬಿಡುವ ಸಸ್ಯಗಳು ಹೃದಯ ಸೂರೆಗೊಳ್ಳುತ್ತವೆ ಮತ್ತು ಚಿಟ್ಟೆಗಳಿಗೆ ಮಕರಂದ ಹೀರಲು ಭರ್ಜರಿ ಅವಕಾಶ ಒದಗಿಸುತ್ತವೆ. ಇವುಗಳ ಕಲ್ಲುಬಂಡೆಗಳಲ್ಲಿ ಒಣಗಿದ್ದ ಗುಂಡಿಗಳೆಲ್ಲ ನೀರು ತುಂಬಿ ಪುಟ್ಟ ಅಂದದ, ತಾತ್ಕಾಲಿಕ ಜೌಗು ಪ್ರದೇಶಗಳಾಗಿ ಮಾರ್ಪಾಡಾಗುತ್ತವೆ. ಈ ಜಂಬುಮಣ್ಣಿನ ಜೌಗು ಪ್ರದೇಶಗಳಿಗೆ ಸೀಮಿತವಾದ ಮಿಕ್ರೋಹೈಲ ಲ್ಯಾಟರೈಟ್ ಎಂಬ ಕಪ್ಪೆಯನ್ನು ಮೊದಲ ಬಾರಿಗೆ 2013ರಲ್ಲಿ ಮಣಿಪಾಲದ ಹತ್ತಿರ ಗುರುತಿಸಲಾಯಿತು. ಇಂತಹ ಜಂಬುಮಣ್ಣಿನ ಹುಲ್ಲುಗಾವಲುಗಳಲ್ಲಿ ಮಾತ್ರ ಸಿಗುವ ಇನ್ನೂ 20 ಜಾತಿಯ ಕಪ್ಪೆಗಳನ್ನು ಪಟ್ಟಿ ಮಾಡಲಾಗಿದೆ. ಮಹಾರಾಷ್ಟ್ರದ ಸಾತಾರ, ಸಿಂಧುದುರ್ಗ ಮತ್ತು ರತ್ನಾಗಿರಿ ಜಿಲ್ಲೆಗಳ ಜಂಬುಮಣ್ಣಿನ ಹುಲ್ಲುಗಾವಲು ಪ್ರದೇಶಗಳಲ್ಲಿ ಹಲ್ಲಿಗಳು, ನೆಲಗಪ್ಪೆಗಳ ಹೊಸ ಪ್ರಭೇದಗಳನ್ನು ವಿಜ್ಞಾನಿಗಳು ಗುರುತಿಸಿದ್ದಾರೆ. ಹೀಗೆ ವಿಜ್ಞಾನಕ್ಕೆ ತಿಳಿದಿರದ ಇನ್ನೆಷ್ಟು ಪ್ರಭೇದಗಳಿವೆಯೋ?

ಈ ಜಂಬುಮಣ್ಣಿನ ಪ್ರದೇಶಗಳಲ್ಲಿ ವಿರಳವಾಗಿ, ಕುಬ್ಜವಾದ ಮರಗಳಿರುವ ಹಾಲು ಕಾಡುಗಳು ಸಹ ವೈಶಿಷ್ಟ್ಯಪೂರ್ಣ ಆವಾಸಸ್ಥಾನಗಳು. ಇಲ್ಲಿ ಬೂದುತಲೆಯ ಪಿಕಳಾರ, ಶ್ರೀಲಂಕಾದ ಕಪ್ಪೆಬಾಯಿಯಂತಹ ಪಕ್ಷಿಗಳು ಕಂಡುಬರುತ್ತವೆ. ಇಂತಹ ಸುಂದರ ಜಂಬುಮಣ್ಣಿನ ಹುಲ್ಲುಗಾವಲುಗಳಲ್ಲಿ ಡೈನಮೈಟ್ ಉಪಯೋಗಿಸಿ ಗಿಡಗಳನ್ನು ನೆಟ್ಟ ನಿದರ್ಶನಗಳಿವೆ.

ಇಂತಹ ಪರಿಸರ ವ್ಯವಸ್ಥೆಗಳನ್ನು ರೂಢಿಸಿಕೊಂಡು ಬದುಕುವ ಸಸ್ಯ ಪ್ರಭೇದಗಳು, ಅಣಬೆಗಳು, ಕ್ರಿಮಿಕೀಟಗಳು, ಸರೀಸೃಪಗಳು, ಪಕ್ಷಿ-ಸಸ್ತನಿಗಳಿರುತ್ತವೆ. ಅಂತಹ ಪ್ರದೇಶಗಳನ್ನು ನಾವು ಕಾಡಾಗಿ ಮಾಡಲು ಪ್ರಯತ್ನಿಸಿದರೆ ಅಲ್ಲಿನ ಸ್ಥಳೀಯ ಪರಿಸರವ್ಯವಸ್ಥೆಯಲ್ಲಿ ಏರುಪೇರಾಗುತ್ತದೆ, ನಂತರ ಈ ವಿಶಿಷ್ಟ ಆವಾಸಸ್ಥಾನಗಳು ಕಣ್ಮರೆಯಾಗುತ್ತವೆ. ನಮ್ಮ ಉತ್ಸುಕತೆಗೆ ಸ್ವಲ್ಪ ವಿಜ್ಞಾನದ ತಳಹದಿ, ನಿಸರ್ಗದ ಅರಿವಿನ ಕವಚವಿದ್ದರೆ ಪರಿಸರ ಕಾಪಾಡುವ ಸಡಗರಕ್ಕೆ ಒಂದು ನಿಜವಾದ ಅರ್ಥವಿರುತ್ತದೆ ಮತ್ತು ಕೈಯಾರೆ ನಿಸರ್ಗದ ಜಟಿಲ ವ್ಯವಸ್ಥೆಯನ್ನು ಹಾಳುಮಾಡುವುದನ್ನು ಸ್ವಲ್ಪಮಟ್ಟಿಗಾದರೂ ತಡೆಯಬಹುದು.

ಗಿಡ ನೆಡುವ ಕಾರ್ಯಕ್ರಮಗಳಿಂದ ಮೈದೇನಹಳ್ಳಿ, ರಾಣೆಬೆನ್ನೂರು ಹೀಗೆ, ಪರಿಸರ ವ್ಯವಸ್ಥೆಯಲ್ಲಿ ಬಹುಮುಖ್ಯ ಕಾರ್ಯನಿರ್ವಹಿಸುವ ಹಲವು ಹುಲ್ಲುಗಾವಲುಗಳನ್ನು ಕಳೆದುಕೊಂಡಿದ್ದೇವೆ. ಅಲ್ಲಿದ್ದ ತೋಳ, ಎರಳೊಡ್ಡು ಪಕ್ಷಿಗಳು ಯಾರಿಗೂ ತಿಳಿಯದೆ ಮಾಯವಾಗಿವೆ. 1994ರಲ್ಲಿ ತುಮಕೂರು ಜಿಲ್ಲೆಯ ಮೈದೇನಹಳ್ಳಿ ಪ್ರದೇಶದಲ್ಲಿ ಆರು ತೋಳಗಳಿದ್ದ ಗುಂಪೊಂದನ್ನು ನೋಡಿ ಸಮ್ಮೋಹನಗೊಂಡಿದ್ದ. ಈಗ ಅಲ್ಲಿ ತೋಳಗಳ ಬದಲು ಚಿರತೆಗಳು ಕಂಡುಬರುತ್ತವೆ. ಇದಕ್ಕೆ ಬಹುಮುಖ್ಯ ಕಾರಣ ಆ ಪ್ರದೇಶಕ್ಕೆ ರಕ್ಷಣೆಯ ಹೆಸರಿನಲ್ಲಿ ಜಾನುವಾರುಗಳನ್ನು ತಡೆದದ್ದು, ಮತ್ತು ಹಸಿರೀಕರಣದ ಸೋಗಿನಲ್ಲಿ ಗಿಡ ನೆಟ್ಟದ್ದು. ಹುಲ್ಲುಗಾವಲುಗಳಿಗೆ ಮಿತವಾದ ಹುಲ್ಲುಮೇಯುವಿಕೆ ಅತ್ಯಗತ್ಯ. ಅದನ್ನು ಸಂಪೂರ್ಣವಾಗಿ ತಡೆದರೆ ಹುಲ್ಲುಗಾವಲು ಕುರುಚಲು ಕಾಡಾಗಿ ಅಲ್ಲಿರುವ ಕೃಷ್ಣಮೃಗ, ತೋಳ, ಕಪ್ಪಲು ನರಿ ಇನ್ನಿತರ ವನ್ಯಜೀವಿಗಳು ಕಣ್ಮರೆಯಾಗುತ್ತವೆ. ಮೈದೇನಹಳ್ಳಿಯಲ್ಲಿ ಕೃಷ್ಣಮೃಗಗಳೆಲ್ಲ ಸಂರಕ್ಷಣಾ ಮೀಸಲು ಪ್ರದೇಶಕ್ಕಿಂತ ಹೆಚ್ಚಾಗಿ ಕೃಷಿ ಭೂಮಿಗಳಲ್ಲಿ ಕಂಡುಬರುತ್ತವೆ. ಇದಕ್ಕೆ ಬಹುಮುಖ್ಯ ಕಾರಣ ಸಂರಕ್ಷಣೆಯ ಹೆಸರಿನಲ್ಲಿ ಹುಲ್ಲುಗಾವಲನ್ನು ಕಾಡಾಗಿ ಪರಿವರ್ತಿಸಿದ್ದು.

ಹಾವೇರಿ ಜಿಲ್ಲೆಯ ರಾಣೆಬೆನ್ನೂರು ಕೃಷ್ಣಮೃಗ ವನ್ಯಜೀವಿಧಾಮದಲ್ಲಿ ವ್ಯಾಪಕವಾಗಿ ಹಮ್ಮಿಕೊಂಡ ಗಿಡ ನೆಡುವ ಕಾರ್ಯಕ್ರಮಗಳಿಂದ ಎರಳೊಡ್ಡು ಪಕ್ಷಿ ಅಲ್ಲಿ ಸ್ಥಳೀಯವಾಗಿ ನಶಿಸಲು ಕಾರಣವಾಯಿತು. ಒಮ್ಮೆ ನಮ್ಮ ದೇಶದ ರಾಷ್ಟ್ರಪಕ್ಷಿಯಾಗಿ ನಾಮನಿರ್ದೇಶನವಾಗಬೇಕಿದ್ದ ಈ ಸುಂದರ ಹಕ್ಕಿ ಇಂದು ಭೂಮಿಯ ಮೇಲಿಂದಲೇ ನಶಿಸುವ ಹಂತದಲ್ಲಿದೆ.

2020ರಲ್ಲಿ ಸ್ಕಾಟ್ಲೆಂಡಿನಲ್ಲಿ ನಡೆಸಿದ ವೈಜ್ಞಾನಿಕ ಅಧ್ಯಯನದ ಪ್ರಕಾರ, ಅಲ್ಲಿನ ಹೆಥೆರ್ ಹುಲ್ಲುಗಾವಲುಗಳು ಅಲ್ಲಿ ನೆಟ್ಟು ಬೆಳೆಸಿದ ಕಾಡುಗಳಿಗಿಂತ ಹೆಚ್ಚು ಇಂಗಾಲ ಹಿಡಿದಿಟ್ಟುಕೊಳ್ಳುವ ಸಾಮರ್ಥ್ಯವನ್ನು ಹೊಂದಿವೆ. ಇದಲ್ಲದೆ ಹಲವಾರು ವೈಜ್ಞಾನಿಕ ಅಧ್ಯಯನಗಳು ಈ ಅವ್ಯವಸ್ಥಿತ ಗಿಡ ನೆಡುವ ಯೋಜನೆಗಳು ನಿಸರ್ಗ ಸಂರಕ್ಷಣೆಗೆ ರಾಮಬಾಣವಲ್ಲ ಎಂದು ಎತ್ತಿತೋರಿಸಿವೆ.

ಹಲವಾರು ಕಡೆಗಳಲ್ಲಿ ಗಿಡ ನೆಡುವ ತರಾತುರಿಯಲ್ಲಿ ನಮ್ಮ ಕೆರೆಗಳನ್ನೇ ಕಳೆದುಕೊಂಡಿದ್ದೇವೆ. ಕೆರೆಗಳಲ್ಲಿ ಗೊಬ್ಬಳಿ, ಬಿದಿರು ಹೀಗೆ ಹಲವು ಜಾತಿಯ ಸಸ್ಯ ಪ್ರಭೇದಗಳನ್ನು ಬೆಳೆಸಿ ನೀರು ಸಂಗ್ರಹಣಾ ಉಗ್ರಾಣಗಳನ್ನು ಮುಚ್ಚಿದ್ದೇವೆ.

ಗಿಡ ನೆಡುವುದು ಸಂಪೂರ್ಣ ಸರಿಯಲ್ಲ ಎಂದು ಹೇಳುತ್ತಿಲ್ಲ. ಆದರೆ ಎಲ್ಲೆಲ್ಲೋ ಯಾವುದೋ ಗಿಡಗಳ ಪ್ರಭೇದಗಳನ್ನು ನೆಡುವುದರಿಂದ ಆಗುವ ದುಷ್ಪರಿಣಾಮದ ಬಗ್ಗೆಯಿರುವ ಉಪೇಕ್ಷೆ, ನಾವು ಗಿಡ ನೆಡುವ ಬಗ್ಗೆಯಿರುವ ವಸಾಹತುಶಾಹಿ ಕಾಲದ ಅಭಿಪ್ರಾಯಗಳನ್ನು ಬದಲಿಸಿಕೊಂಡು ಪರಿಸರ ವ್ಯವಸ್ಥೆ, ನಿಸರ್ಗದ ನಿಯಮಕ್ಕೆ ಹೊಂದುವ ಯೋಚನೆ ಮಾಡುವುದು ಸೂಕ್ತ.

ಲೇಖಕ: ವನ್ಯಜೀವಿ ವಿಜ್ಞಾನಿ

ಚುರುಮುರಿ

ಬ್ಯಾಗಿನಲ್ಲಿ ಕುರ್ಚಿ

• ಸುಮಂಗಲಾ

‘ಬ್ರೇಕ್ ಇನ್‌ಸ್ಪೆಕ್ಟರ್ ಆಗಾಕೆ ಏನು ಓದಬಕು?’ ಮೊನ್ನೆ ಬೆಕ್ಕಣ್ಣ ಬಲು ಗಂಭೀರವಾಗಿ ಕೇಳಿತು.

‘ಏನರ ಡಿಗ್ರಿ ಮಾಡಿರಬಕು... ನಿನಗೆದಕ್ಕಲೇ’ ಎಂದೆ.

‘ಬ್ರೇಕ್ ಇನ್‌ಸ್ಪೆಕ್ಟರ್ ಆಗತೀನಿ. 30 ಅಲ್ಲದಿದ್ದರೂ ಒಂದಾದರೂ ಸೈಟು ಮಾಡಬೌದು’ ಎಂದಿತು.

ಮೊನ್ನೆ ಪೇಪರಿನಲ್ಲಿ ಬ್ರೇಕ್ ಇನ್‌ಸ್ಪೆಕ್ಟರ್ ಒಬ್ಬರು 30 ನಿವೇಶನ ಸೇರಿ ಬಹಳಷ್ಟು ಆಸ್ತಿಪಾಸ್ತಿ ಮಾಡಿದ್ದಾರೆಂದು ಓದಿದಾಗಿನಿಂದ ಬೆಕ್ಕಣ್ಣನ ತಲೆಯಲ್ಲಿ ಇದೇ ಹುಳ ಓಡಾಡುತ್ತಿತ್ತು ಅಂತ ಕಾಣುತ್ತೆ.

‘ಬರೀ ಓದಿದ್ರೆ ಆಗಂಗಿಲ್ಲ, ಬೆರಿಕಿತನ, ಚಾಣಾಕ್ಷತನ ಬೇಕು, ಮೊದ್ಲು ಇಲಿ ಹಿಡಿಯೂದ ಕಲಿ’ ಎಂದು ಬೈದೆ.

ತದನಂತರ ನಿನ್ನೆ ಟಿ.ವಿ. ರಿಪೋರ್ಟರ್ ಆಗಿ ಬ್ರೇಕಿಂಗ್ ನ್ಯೂಸ್ ಬಿತ್ತರಿಸುವ ಹುಳ ತಲೆಗೆ ಹೊಕ್ಕಿತ್ತು. ಮೈಕ್ ಹಿಡಿದು, ನಟಿಸುತ್ತ ಪ್ರ್ಯಾಕ್ಟೀಸ್ ಮಾಡುತ್ತಿತ್ತು. ಆಮೇಲೆ ಕಾವೇರಕ್ಕಂಗೆ ವಿಡಿಯೊ ಕಾಲ್ ಮಾಡಿತು. ‘ಕಾವೇರಕ್ಕ... ಇದನ್ನೆಲ್ಲ ನೋಡುದ್ರೆ, ಕೇಳುದ್ರೆ ಏನನ್ನಿಸುತ್ತೆ ನಿಮಗೆ’ ಸ್ಟೈಲಾಗಿ ಕೇಳಿತು.

‘ಯಾರನ್ನೂ ಅಡ್ಡ ಮಲಗಸಾದು ಬ್ಯಾಡ, ವಣ ತೌಡುಕುಟ್ಟೂದು ಬ್ಯಾಡ...ಗಣಿಗಾರಿಕೆ ನಿಲ್ಲಿಸುದ್ರೆ ಕೆಆರ್‌ಎಸ್ ಬಿರುಕಷ್ಟೇ ಅಲ್ಲ, ಭೂಮ್ತಾಯಿನೂ ತಣ್ಣಗಿರತಾಳೆ’.

‘ಮತ್ತೆ ಅತ್ ಕಡೆ ನಿಮ್ಮ ಗಂಗಕ್ಕಾರು ಹೆಂಗದಾರಂತೆ ಈಗ?’

‘ಸೆಂದಾಗವಳೆ. ವಿಶ್ವದಾಗೆ ಉತ್ತರಪ್ರದೇಶ ಅತ್ಯುತ್ತಮ ಕೋವಿಡ್ ನಿರ್ವಹಣೆ ಮಾಡ್ಯೆತಂತ ಪ್ರಧಾನಿಗಳೇ ಹೊಗಳವ್ರೆ. ಕೊರೊನಾಗೆ ಅಂಜಿ ಅಲ್ಲ, ಸುಪ್ರೀಂ ಚಾಟಿಗೆ ಅಂಜಿ ಕಾವಂಡ್ ಯಾತ್ರೆ ಪವಿತ್ರಸ್ನಾನ ರದ್ದು ಮಾಡಿದ್ರು’ ಕಾವೇರಕ್ಕ ಮುಗುಮ್ಮಾಗಿ ಹೇಳಿದಳು.

ಬೆಕ್ಕಣ್ಣನ ಮುಂದಿನ ವಿಡಿಯೊ ಕಾಲ್ ದೆಹಲಿಯಿಂದ ವಾಪಸಾಗಿ ವಿಮಾನ ಇಳಿಯುತ್ತಿದ್ದ ಯೆಡ್ಯೂರಜ್ಜಾರಿಗೆ. ‘ಅರು ದೊಡ್ಡ ಬ್ಯಾಗಿನಲ್ಲಿ ಏನೋ ತಗಂಡು ಹೋಗಿದ್ರಂತೆ...’ ಬೆಕ್ಕಣ್ಣನ ಪ್ರಶ್ನೆಗೆ ಯೆಡ್ಯೂರಜ್ಜಾರು ದೇಶಾವರಿ ನಕ್ಕರು.

‘ಮುಖ್ಯಮಂತ್ರಿ ಕುರ್ಚಿ ಬೋಲ್ಟು ಟೈಟು ಮಾಡಿಸಾದು ಅಲ್ಲೇ, ಅದಕ್ಕೇ ಕುರ್ಚಿನ ಬಿಚ್ಚಿ ತಗಂಡು ಹೋಗಿದ್ದೆ. ಈಗ ಎಲ್ಲಾ ಟೈಟು’.

‘ಬ್ಯಾಗಿನಲ್ಲಿ ಕುರ್ಚಿ’ ಎಂದು ಬೆಕ್ಕಣ್ಣ ಬ್ರೇಕಿಂಗ್ ನ್ಯೂಸ್ ವದರಿತು!

ಚರ್ಚೆ

ಭಾಷೆಯ ಹಕ್ಕಿಗಿರಲಿ ಮನ್ನಣೆ

ಬ್ಯಾಂಕಿಂಗ್ ನೇಮಕಾತಿಯಲ್ಲಿ ರಾಜ್ಯವಾರು ಆಯ್ಕೆಯೇ ಪರಿಹಾರ

ರಾಷ್ಟ್ರೀಕೃತ ಬ್ಯಾಂಕುಗಳ ನೇಮಕಾತಿ ಪರೀಕ್ಷೆಗಳಲ್ಲಿ ಕನ್ನಡದಲ್ಲಿ ಪ್ರಶ್ನೋತ್ತರ ಇರಬೇಕೆಂಬ ಬೇಡಿಕೆಗೆ, ಇಂತಹ ಕ್ರಮದಿಂದ ಹೆಚ್ಚು ಗೊಂದಲ ಆಗುತ್ತದೆ ಎಂಬ ಅಭಿಪ್ರಾಯವನ್ನು ಡಿ.ಎಸ್.ರಾಮಸ್ವಾಮಿ (ಸಂಗತ, ಜುಲೈ 16) ಮತ್ತು ಡಾ. ಈಶ್ವರ ಶಾಸ್ತ್ರಿ ಮೋಟಿನಸರ (ವಾ.ವಾ., ಜುಲೈ 17) ವ್ಯಕ್ತಪಡಿಸಿದ್ದಾರೆ. ಇದು ನೆಗಡಿ ಆಗುತ್ತದೆ ಎಂದು ಮೂಗು ಕತ್ತರಿಸಿಕೊಂಡಂತೆ. ಕನ್ನಡದಲ್ಲಿ ಪ್ರಶ್ನೆಪತ್ರಿಕೆ ನೀಡಿದಾಕ್ಷಣ ಎಲ್ಲ ಪರಿಹಾರ ಆದಂತೆ ಅಲ್ಲ. ಕನ್ನಡ ಮಾಧ್ಯಮದ ಅಭ್ಯರ್ಥಿಗಳಿಗೆ ಸ್ವಲ್ಪ ಸುಲಭ ಆಗಬಲ್ಲದು. ಅದಕ್ಕೆ ಪ್ರತ್ಯೇಕವಾದ ತರಬೇತಿ ಇತ್ಯಾದಿ ಖಂಡಿತ ಬೇಕು. ಒಮ್ಮೆ ನಾವು ನಮ್ಮ ಭಾಷೆ ಕುರಿತ ಹಕ್ಕನ್ನು ಕಳೆದುಕೊಂಡರೆ ಮತ್ತೆ ಲಭಿಸದು.

ಎರಡನೆಯದಾಗಿ, ಇದು ಕನ್ನಡ ಭಾಷೆಯ ಬಳಕೆಯಲ್ಲಿನ ಗೊಂದಲ ಅಲ್ಲ. ಅದು, ಕನ್ನಡದಲ್ಲಿ ಬಳಕೆ ಇಲ್ಲದ, ಸಹಜವಲ್ಲದ ಕನ್ನಡ ಪದಗಳನ್ನು ಬಳಸಿದ್ದರ ಪರಿಣಾಮವಾಗಿ ಆಗುವ ಗೊಂದಲ. ಶಾಸ್ತ್ರಿ ಅವರು ಹೇಳಿರುವ ‘ಅಸ್ತಾಪಿಸು’ ಪದ ಬಳಕೆಯೇ ತಪ್ಪು. ‘ಸ್ತಾಪಿಸು’ ಪದಕ್ಕೆ ಎದುರು ಪದವಾಗಿ ಇದನ್ನು ಬಳಸಲಾಗಿದೆ. ಇದು ಗೂಗಲ್ ಅನುವಾದ, ಅದನ್ನು ಹಾಗೆಯೇ ಬಳಕೆ ಮಾಡಲಾಗಿದೆ. ಇವೆಲ್ಲ ಆರಂಭದ ಗೊಂದಲ. ಕನ್ನಡವನ್ನು ನಾವು ಎಲ್ಲ ಕಡೆ ಬಳಸುತ್ತ ಸಜ್ಜುಗೊಳಿಸಬೇಕು. ಬಳಸುತ್ತ ಹೋದಂತೆ ಇವೆಲ್ಲ ಸರಿಯಾಗುತ್ತವೆ.

ಡಾ. ಎಚ್.ಟಿ.ಕೃಷ್ಣಮೂರ್ತಿ, ಶಿವಮೊಗ್ಗ

ಪ್ರವೃತ್ತಿ ಬದಲಾಗಲಿ

ಬಿಎಸ್‌ಆರ್‌ಬಿ (ಬ್ಯಾಂಕಿಂಗ್ ಸರ್ವಿಸ್ ರೆಕ್ರೂಟ್‌ಮೆಂಟ್ ಬೋರ್ಡ್) ಮೂಲಕ 1980ರಲ್ಲಿ ಸುಮಾರು 250 ಮಂದಿ ಕೃಷಿ ಅಧಿಕಾರಿಗಳಾಗಿ ಆಗಿನ ಕೆನರಾ ಬ್ಯಾಂಕ್ ಮತ್ತು ಸಿಂಡಿಕೇಟ್ ಬ್ಯಾಂಕ್‌ಗೆ ನೇಮಕಗೊಂಡಿದ್ದೆವು. ಎಲ್ಲರೂ ಕರ್ನಾಟಕದಿಂದ ಮತ್ತು ಕರ್ನಾಟಕದಲ್ಲೇ ಉದ್ಯೋಗಕ್ಕೆ ಸೇರಿದ್ದೆವು. ನಂತರ 1982ರಲ್ಲಿ, 84ರಲ್ಲಿ ಮತ್ತು 86ರಲ್ಲೂ ಇದೇ ರೀತಿಯ ನೇಮಕಾತಿಗಳು ಆಗಿದ್ದವು. ಆದರೆ ಇತ್ತೀಚಿನ ವರ್ಷಗಳಲ್ಲಿ ಕರ್ನಾಟಕದಿಂದ ಬ್ಯಾಂಕಿಂಗ್ ಕ್ಷೇತ್ರಕ್ಕೆ ನೇಮಕಾತಿಗಳು ಆಗದೆ ಉತ್ತರಪ್ರದೇಶ, ಬಿಹಾರ, ಆಂಧ್ರಪ್ರದೇಶ, ಕೇರಳ ರಾಜ್ಯಗಳಿಂದ ಅಧಿಕಾರಿ ವರ್ಗಕ್ಕೆ ನೇಮಕಗೊಂಡು ನಮ್ಮ ರಾಜ್ಯಕ್ಕೆ, ಅದರಲ್ಲೂ ಗ್ರಾಮೀಣ ಶಾಖೆಗಳಿಗೆ ನಿಯುಕ್ತರಾಗುತ್ತಿದ್ದಾರೆ. ಆದ್ದರಿಂದ ಗ್ರಾಹಕರ ಜೊತೆ ವ್ಯವಹರಿಸುವಾಗ ಭಾಷೆಯ ಸಮಸ್ಯೆ ಬರುತ್ತದೆ.

ಅವರು ಕಷ್ಟಪಟ್ಟೋ ಅಥವಾ ಇಷ್ಟಪಟ್ಟೋ ಕನ್ನಡ ಕಲಿಯುವಷ್ಟರಲ್ಲಿ 2-3 ವರ್ಷ ಆಗಿ ಅವರು ಸ್ವರಾಜ್ಯಗಳಿಗೆ ಹೋಗುತ್ತಾರೆ. ಮತ್ತೆ ಹೊಸಬರು ಬಂದರೆ ಇದೇ ಪುನರಾವರ್ತನೆಯಾಗುತ್ತದೆ. ಆದ್ದರಿಂದ ಸಾರ್ವಜನಿಕ ಸೇವಾ ವಲಯಗಳಲ್ಲಿ ನೇಮಕಾತಿ ಮಾಡುವಾಗ ಆಯಾ ರಾಜ್ಯವಾರು ಪರೀಕ್ಷೆಗಳನ್ನು ಮಾಡಿ ಆಯ್ಕೆ ಮಾಡುವುದು ಒಂದು ಪರಿಹಾರ.

ಎರಡನೆಯದಾಗಿ, ನಮ್ಮ ರಾಜ್ಯದ ಯುವಕರು ಐ.ಟಿ., ಬಿ.ಟಿ. ಕಡೆಗೇ ಒಲವನ್ನು ತೋರಿಸುವುದು ಇನ್ನೊಂದು ಕಾರಣ. ಬಿ.ಎ, ಬಿ.ಎಸ್ಸಿ, ಬಿ.ಕಾಂ ಪದವೀಧರರೂ ಕಡಿಮೆ ವೇತನವಾದರೂ ಸರಿ ಐ.ಟಿ., ಬಿ.ಟಿ ಕಂಪನಿಗಳನ್ನೇ ಸೇರಲು ಬಯಸುತ್ತಾರೆ ಮತ್ತು ಬೆಂಗಳೂರು, ಮೈಸೂರಿನಲ್ಲೇ ಇರಬಯಸುತ್ತಾರೆ. ಈ ಪ್ರವೃತ್ತಿ ಬದಲಾಗಬೇಕು. ಒಳ್ಳೆಯ ತರಬೇತಿ ಮತ್ತು ತಯಾರಿ ನಡೆಸಿ ಪರೀಕ್ಷೆ ಎದುರಿಸಿದರೆ ನಮ್ಮ ಹುಡುಗರೂ ಈ ಕ್ಷೇತ್ರಗಳಲ್ಲಿ ನೌಕರಿಗೆ ಸೇರಬಹುದು.

ಟಿ.ವಿ.ಬಿ.ರಾಜನ್, ಬೆಂಗಳೂರು



ತರ್ಜುಮೆಯ ನೆಪ ಬೇಡ

‘ಕನ್ನಡಕ್ಕೆ ತರ್ಜುಮೆಯಾದ ಮೂಲ ಇಂಗ್ಲಿಷ್ ಪ್ರಶ್ನೆಯನ್ನು ಅರ್ಥ ಮಾಡಿಕೊಳ್ಳುವುದಕ್ಕಿಂತ ಅಪಾರ್ಥ ಮಾಡಿಕೊಳ್ಳುವ ಅಪಾಯವೇ ಹೆಚ್ಚು’ ಎಂಬುದು ತಪ್ಪು ಗ್ರಹಿಕೆಯಾಗಿದೆ. ನನ್ನದೇ ಆದ ಎರಡು ಉದಾಹರಣೆಗಳನ್ನು ಕೊಡುವೆ. ಕೆಲವು ವರ್ಷಗಳ ಹಿಂದೆ ವಿಮೆ ಕಂಪನಿಗಳಿಗೆ ಏಜೆಂಟ್ ಅಥವಾ ಸಲಹೆಗಾರರಾಗುವುದಕ್ಕೆ ಪರೀಕ್ಷೆಗಳು ಇಂಗ್ಲಿಷ್, ಹಿಂದಿ, ತಮಿಳು, ಗುಜರಾತಿ ಮುಂತಾದ ಭಾಷೆಗಳಲ್ಲಿ ಮಾತ್ರ ನಡೆಯುತ್ತಿದ್ದವು. ಕನ್ನಡದಲ್ಲಿ ಇರಲಿಲ್ಲ. ಕನ್ನಡದಲ್ಲಿ ಪರೀಕ್ಷೆಗೆ ಅನುವು ಮಾಡಿಕೊಟ್ಟಾಗ ‘ಸಾಮಾನ್ಯ ವಿಮೆ’ ಮತ್ತು ‘ಜೀವವಿಮೆ’- ಈ ಎರಡೂ ಪರೀಕ್ಷೆಗಳನ್ನು ನಾನು ಕನ್ನಡದಲ್ಲಿ ಬರೆದು ಪಾಸಾಗಿದ್ದೇನೆ. ಕನ್ನಡದಲ್ಲಿ ಈ ಪರೀಕ್ಷೆ ಬರೆದ ಮೊದಲ ತಂಡದ ಅಭ್ಯರ್ಥಿ ಆಗಿದ್ದಕ್ಕೆ ನನಗೆ ಹೆಮ್ಮೆಯೂ ಇದೆ. ಇಂದು ರಾಜ್ಯದಾದ್ಯಂತ ಪ್ರತಿವರ್ಷ ನೂರಾರು ಅಭ್ಯರ್ಥಿಗಳು ಕನ್ನಡದಲ್ಲಿ ಪರೀಕ್ಷೆಗಳನ್ನು ಬರೆದು ಯಶಸ್ವಿ ವಿಮೆ ಸಲಹೆಗಾರರಾಗಿ ನೇಮಕಗೊಳ್ಳುತ್ತಿದ್ದಾರೆ.

ಬ್ಯಾಂಕಿಂಗ್ ಪರೀಕ್ಷೆ ಕೂಡ ಇದಕ್ಕೆ ಹೊರತಾಗಿಲ್ಲ. ಪೂರ್ಣ ಇಂಗ್ಲಿಷ್ ಬಾರದ ಅಸಂಖ್ಯಾತ ಹಿಂದಿ, ಗುಜರಾತಿ ಹಾಗೂ ಇತರ ಭಾಷೆಗಳ ಅಭ್ಯರ್ಥಿಗಳು ಇಂದು ಅವರವರ ಭಾಷೆಯಲ್ಲಿ ಪರೀಕ್ಷೆ ಪಾಸಾಗಿ ಬ್ಯಾಂಕ್ ಹುದ್ದೆ ಪಡೆಯುತ್ತಿದ್ದಾರೆ.

ಈಗ ಕನ್ನಡಕ್ಕೆ ತರ್ಜುಮೆಯಾದರೆ ಅಪಾರ್ಥ ಆಗುತ್ತದೆಂದರೆ ಅದು ಸರಿಯಾದ ತರ್ಜುಮೆ ಅಲ್ಲ. ಅಪಾರ್ಥ ಆಗುತ್ತದೆ ಅಂತ ನೆಪ ಒಡ್ಡಿ ಭಾಷೆಯ ಬಳಕೆ ಮತ್ತು ಅಭಿವೃದ್ಧಿಯನ್ನು ಕೈಬಿಡುವುದು ಮೂರ್ಖತನವಾದೀತು. ಕನ್ನಡ ಮಾಧ್ಯಮದಲ್ಲಿ ಓದುತ್ತಿರುವ ಲಕ್ಷಾಂತರ ವಿದ್ಯಾರ್ಥಿಗಳ ಭವಿಷ್ಯದ ದೃಷ್ಟಿಯಿಂದಲೂ ಎಲ್ಲ ಕ್ಷೇತ್ರದ ಎಲ್ಲ ಮಟ್ಟದ ಪರೀಕ್ಷೆಗಳು ಕನ್ನಡದಲ್ಲಿ ಇರಲೇಬೇಕಾಗುತ್ತದೆ.

ಪ್ರಕಾಶ ವಿ. ಹೆಬ್ಬಳ್ಳಿ, ಬೆಂಗಳೂರು

ವಾಚಕರ ವಾಣಿ

ಡೈಲಾಗ್ ಹೊಡೆದರಷ್ಟೇ ಸಾಲದು

ಕಥೆ, ಚಿತ್ರಕಥೆ, ನಟನೆ ಹಾಗೂ ಮೇರು ತಂತ್ರಜ್ಞಾನದಿಂದ ಪ್ರಖ್ಯಾತಿ ಪಡೆಯಬೇಕಾದ ಕನ್ನಡ ಚಿತ್ರರಂಗ ಇಂದು ಕೆಲವರ ವೈಯಕ್ತಿಕ ಬದುಕಿನ ಆರೋಪ ಪ್ರತ್ಯಾರೋಪಗಳಿಂದ ಜರ್ಜರಿತವಾಗುತ್ತಿರುವುದು ನಾಚಿಕೆಗೇಡಿನ ಸಂಗತಿ. ಸಿನಿಮಾಗಳಲ್ಲಿ ವೀಕ್ಷಕರಿಗೆ ತಾಳ್ಮೆ, ಸಂಯಮ ಹಾಗೂ ನೀತಿ ಪಾಠದ ಉದ್ದುದ್ದ ಡೈಲಾಗ್ ಹೊಡೆಯುವ ಇದೇ ಕೆಲವು ನಟ ಹಾಗೂ ನಿರ್ದೇಶಕರು, ನಿಜ ಜೀವನದಲ್ಲಿ ಅವೆಲ್ಲವನ್ನೂ ಗಾಳಿಗೆ ತೂರಿ ಬಹಿರಂಗವಾಗಿಯೇ ಮಾಧ್ಯಮಗಳೆದುರು ಅಸಂಬದ್ಧ ಪದಗಳನ್ನು ಬಳಸುವುದು ಅಸಹ್ಯಕರ ಬೆಳವಣಿಗೆ.

ಸಾರ್ವಜನಿಕ ರಂಗದಲ್ಲಿರುವ ನಟ-ನಿರ್ದೇಶಕರು ತಮ್ಮ ವೈಯಕ್ತಿಕ ಬದುಕಿನಲ್ಲೂ ಉತ್ತಮ ನಡವಳಿಕೆಯನ್ನು ರೂಢಿಸಿಕೊಳ್ಳುವುದು ಒಳ್ಳೆಯದು. ಏಕೆಂದರೆ ಅವರನ್ನೇ ಅನುಸರಿಸುವ ಸಾವಿರಾರು ಅಭಿಮಾನಿಗಳಿರುತ್ತಾರೆ. ಅವರೆಲ್ಲರಿಗೂ ಇವರು ವ್ಯಕ್ತಿತ್ವದಿಂದ ಆದರ್ಶಪ್ರಾಯರಾಗಿರಬೇಕೇ ಹೊರತು, ಕೆಟ್ಟ ಪದಪುಂಜಗಳ ಸಂಬೋಧನೆಯಿಂದಲ್ಲ.

ಹರಳಹಳ್ಳಿ ಪುಟ್ಟರಾಜು, ಪಾಂಡವಪುರ

ಬಾಗಿನ ಅರ್ಪಣೆ ರೀತಿ ಇದಲ್ಲ

ರಾಜ್ಯದಲ್ಲಿನ ಜಲಾಶಯಗಳು ಭರ್ತಿಯಾದಾಗ ಜನಪ್ರತಿನಿಧಿಗಳಿಂದ ಜಲಾಶಯಕ್ಕೆ ಪೂಜೆ ಸಲ್ಲಿಸುವುದು ಹಾಗೂ ಬಾಗಿನ ಅರ್ಪಿಸುವುದು ವಾಡಿಕೆ. ಆದರೆ ಅವರು ಬಾಗಿನ ಅರ್ಪಿಸುವ ರೀತಿ ಸರಿಯಾಗಿ ಇರುವುದಿಲ್ಲ. ಜಲಾಶಯಕ್ಕೆ ಪೂಜೆ ಸಲ್ಲಿಸಿದ ನಂತರ ಅಣೆಕಟ್ಟೆಯ ಮೇಲಿನಿಂದಲೇ ಮೊರದ ಬಾಗಿನವನ್ನು ನೀರಿಗೆ ಎಸೆಯುವುದು ಬಾಗಿನ ಅರ್ಪಣೆಯ ಪದ್ಧತಿಗೆ ಅಪಮಾನ ಮಾಡಿದಂತೆ. ಜಲಾಶಯದ ಪೂಜೆಯ ನಂತರ ನದಿಯ ತೀರಕ್ಕೆ ತೆರಳಿ, ದಡದಲ್ಲಿ ನಿಂತು ಮಾತೆಗೆ ನೀರಿನಲ್ಲಿ ಬಾಗಿನವನ್ನು ತೇಲಿಬಿಡುವುದು ಸರಿಯಾದ ಕ್ರಮ.

ಕೆ.ಪ್ರಭಾಕರ, ಬೆಂಗಳೂರು

ಸಮಾಧಿ ನಿರ್ಮಾಣ: ಇರಲಿ ಗಟ್ಟಿ ನಿರ್ಧಾರ

ಸಮಾಧಿ ನಿರ್ಮಾಣದ ವಿಚಾರದಲ್ಲಿ ‘ಸ್ಮಶಾನಸದೃಶ’ ಅಭಿಮಾನವೇಕೆ? ಎಂಬ ಎನ್.ಎಸ್.ಶಂಕರ್ ಅವರ ಅಭಿಪ್ರಾಯ (ಪ್ರ.ವಾ., ಜುಲೈ 17) ಸಮಂಜಸವಾಗಿದೆ. ಅಭಿಮಾನಿಗಳ ಒತ್ತಾಯಕ್ಕೆ ಮಣಿದು ಸರ್ಕಾರವು ಸರ್ಕಾರಿ ಜಾಗದಲ್ಲಿ ಸ್ಮಾರಕಗಳನ್ನು ನಿರ್ಮಿಸುತ್ತಾ ಹೋಗುವುದಾದಲ್ಲಿ ಮುಂದೊಂದು ದಿನ ಕರ್ನಾಟಕದ ಬಹುಮುಖ್ಯ ಸ್ಥಳಗಳೆಲ್ಲಾ ಸ್ಮಶಾನಗಳಾದರೂ ಅಚ್ಚರಿಯಿಲ್ಲ.

ಕುವೆಂಪು ಅವರು ನಿಧನರಾದಾಗ ಅವರ ಭಕ್ತರು ಮಾನಸಗಂಗೋತ್ರಿ ಆವರಣದಲ್ಲಿಯೇ ಸಮಾಧಿ ಮಾಡಬೇಕೆಂದು ಬಯಸಿದ್ದರು. ಆದರೆ ಕುವೆಂಪು ಅವರ ಮಗ ಪೂರ್ಣಚಂದ್ರ ತೇಜಸ್ವಿ ‘ನಮ್ಮ ತಂದೆಯವರನ್ನು ಇಲ್ಲಿ ಸಮಾಧಿ ಮಾಡಿದರೆ ಮುಂದೆ ನಿಧನರಾಗುವ ಎಲ್ಲ ಕುಲಪತಿಗಳನ್ನೂ ಇಲ್ಲಿಯೇ ಸಮಾಧಿ ಮಾಡಿ, ಮಾನಸ ಗಂಗೋತ್ರಿಯನ್ನು ಸ್ಮಶಾನ ಗಂಗೋತ್ರಿಯನ್ನಾಗಿ ಮಾಡಬೇಕಾಗುತ್ತದೆ’ ಎಂದು ಹೇಳಿ, ಮಹಾಕವಿಯ ಹುಟ್ಟೂರು ಕುಪ್ಪಳಿಯ ಪ್ರಕೃತಿಯಲ್ಲಿ ಅಂತ್ಯಸಂಸ್ಕಾರ ನೆರವೇರಿಸಿದರು. ಇದು ಎಲ್ಲರಿಗೂ ಆದರ್ಶವಾಗಬೇಕು. ರಾಜ್ಯ ಸರ್ಕಾರ ಇಂತಹ ವಿಷಯಗಳಲ್ಲಿ ಗಟ್ಟಿ ನಿರ್ಧಾರವನ್ನು ತೆಗೆದುಕೊಳ್ಳಬೇಕು. ರಾಜ್ಯದ ಆಯಕಟ್ಟಿನ ಸ್ಥಳಗಳೆಲ್ಲಾ ಸ್ಮಾರಕಗಳಾಗುವುದು ವಿವೇಕವಲ್ಲ.

ಮೋದೂರು ಮಹೇಶಾರಾಧ್ಯ, ಹುಣಸೂರು

ವಸ್ತ್ರಸಂಹಿತೆ: ವಿವೇಕಯುತ ಸುತ್ತೋಲೆ

ವಸ್ತ್ರಸಂಹಿತೆಯು ಇದೀಗ ಒಳ್ಳೆಯ ಕಾರಣಕ್ಕೆ ಸುದ್ದಿಯಲ್ಲಿದೆ. ಸಲ್ವಾರ್ ಕಮೀಜ್ ಅಥವಾ ಚೂಡಿದಾರ್ ಎಲ್ಲ ರೀತಿಯಲ್ಲೂ ಸೂಕ್ತವಾದ ಕಂಫರ್ಟಬಲ್ ಉಡುಗೆ ಆಗಿರುವುದರಿಂದ ಸೀರೆಯ ಜೊತೆಗೆ ಅದನ್ನೂ ತಮ್ಮ ದೈನಂದಿನ ಉಡುಗೆ ಮಾಡಿಕೊಳ್ಳಲು ಬಹುತೇಕ ಯುವ ಅಧ್ಯಾಪಕಿಯರು ಬಯಸುವುದಿದೆ. ಆದರೆ ಅಧ್ಯಾಪಕಿಯರು ಕಡ್ಡಾಯವಾಗಿ ಸೀರೆಯನ್ನೇ ತೊಟ್ಟು ಬರಬೇಕು ಎಂದು ಸಂಬಂಧಪಟ್ಟ ಮುಖ್ಯಸ್ಥರು ಮೌಖಿಕ ಸೂಚನೆ ಕೊಡುವುದು, ಸಲ್ವಾರ್ ತೊಟ್ಟು ಬಂದ ಅಧ್ಯಾಪಕಿಯರನ್ನು ಅವಮಾನ, ಅಸಹನೆ, ಆಕ್ಷೇಪಕ್ಕೆ ಈಡು ಮಾಡುವುದು ಹಲವು ಕಡೆ ನಡೆದೇ ಇದೆ. ಹೀಗಿರುವಾಗ, ಶಿಕ್ಷಕಿಯರು ಶಾಲೆಗೆ ಸಲ್ವಾರ್ ಧರಿಸಿ ಬರುವುದರ ಬಗ್ಗೆ ಆಕ್ಷೇಪ ವ್ಯಕ್ತವಾಗಿದ್ದರ ಹಿನ್ನೆಲೆಯಲ್ಲಿ ಚಿಕ್ಕಮಗಳೂರಿನ ಸಾರ್ವಜನಿಕ ಶಿಕ್ಷಣ ಇಲಾಖೆಯ ಉಪನಿರ್ದೇಶಕರು ಇತ್ತೀಚೆಗೆ ಹೊರಡಿಸಿರುವ ಸುತ್ತೋಲೆ ಒಂದು ವಿವೇಕದ ನಡೆ. ಸಭ್ಯ ಉಡುಗೆ ಧರಿಸಿ ಕರ್ತವ್ಯ ನಿರ್ವಹಿಸುವುದು ಬೋಧಕ, ಬೋಧಕೇತರ ಸಿಬ್ಬಂದಿಯ ಸ್ವಾತಂತ್ರ್ಯವಾಗಿರುತ್ತದೆ, ನಿರ್ದಿಷ್ಟ ಉಡುಗೆಗಳನ್ನು ಧರಿಸಲು ನಿರ್ದೇಶನ ನೀಡಿ ಅವರ ವೈಯಕ್ತಿಕ ಸ್ವಾತಂತ್ರ್ಯವನ್ನು ಕಸಿಯುವುದು ಸಾಧ್ಯವಿಲ್ಲ ಎಂದು ಅವರು ಸುತ್ತೋಲೆಯಲ್ಲಿ ಸ್ಪಷ್ಟವಾಗಿ ಹೇಳಿದ್ದಾರೆ. ಇದು ಪ್ರಶಂಸನೀಯ ಸಂಗತಿ.

ಉಡುಗೆಯ ಕಾರಣಕ್ಕೆ ಹೆಣ್ಣುಮಕ್ಕಳು ಅನುಭವಿಸುವ ಕಿರಿಕಿರಿ ಅಷ್ಟಿಷ್ಟಲ್ಲ. ಶಾಲಾ ಕಾಲೇಜು ಸಿಬ್ಬಂದಿಯ ಉಡುಪಿನ ಬಗ್ಗೆ ಯಾವುದೇ ಲಿಖಿತ ನಿಯಮ ಇಲ್ಲದಿರುವಾಗಲೂ ಸಭ್ಯತೆ, ಸಂಸ್ಕೃತಿಯ ಹೆಸರಿನಲ್ಲಿ ಇಂಥವುಗಳನ್ನು ಹೆಣ್ಣುಮಕ್ಕಳ ಮೇಲೆ ಹೇರಲಾಗುತ್ತದೆ. ಪುರುಷರು ಪ್ಯಾಂಟ್, ಶರ್ಟು ಧರಿಸಿಕೊಂಡು ತಮ್ಮ ಕಂಫರ್ಟ್ ಕಂಡುಕೊಂಡಿದ್ದಾರೆ. ಅದೇ ಹೆಣ್ಣುಮಕ್ಕಳು ಸಲ್ವಾರ್ ಕಮೀಜ್ ಸೂಕ್ತ ಉಡುಗೆ ಎಂದರೂ ಅದನ್ನು ಧರಿಸುವುದು ಸಲೀಸಲ್ಲ. ಇಲ್ಲಿ ಬಟ್ಟೆಯ ಶೀಲ, ಅಶ್ಲೀಲತೆಯ ಪ್ರಶ್ನೆಗಿಂತ ಹೆಣ್ಣುಮಕ್ಕಳು ಕಟ್ಟು ಮೀರಿ ಒಂದಿಷ್ಟು ಸ್ವತಂತ್ರವಾಗಿ ಕಾಣಲು ಬಯಸುವುದನ್ನು ಸಹಿಸದ ಮನಃಸ್ಥಿತಿ ತೋರುವ ಅಸಹನೆಯೇ ಎದ್ದು ಕಾಣುತ್ತದೆ.

ಇರುವ ಎಷ್ಟೋ ಸದುದ್ದೇಶದ ನಿಯಮಗಳನ್ನು ಜಾರಿ ಮಾಡುವಲ್ಲಿ ತೋರದ ತುರ್ತು, ಈ ವಿಷಯದಲ್ಲಿ ಇಲ್ಲದಿರುವ ನಿಯಮವನ್ನು ಸ್ಥಾಪಿಸುವಲ್ಲಿ ಕಾಣುವುದಕ್ಕೆ ಇಂತಹ ಅಸಹನೆಯೇ ಕಾರಣ. ಈ ದಿಸೆಯಲ್ಲಿ ಉಪನಿರ್ದೇಶಕರ ನಡೆಯು ವಿವೇಕದಿಂದ ಕೂಡಿದ್ದು, ಸಾಂವಿಧಾನಿಕ ಮೌಲ್ಯಗಳಿಗೆ ಬದ್ಧವಾಗಿದೆ. ಆಡಳಿತ ನಡೆಸುವವರು ಸಂವೇದನಾಶೀಲರಾಗಿದ್ದಾಗ ಎಷ್ಟೋ ಸಮಸ್ಯೆಗಳು ಬಗೆಹರಿಯುತ್ತವೆ ಎನ್ನುವುದನ್ನು ಇದು ತೋರುತ್ತದೆ. ಈ ಬಗೆಯ ವಿವೇಕ ಎಲ್ಲೆಡೆಯೂ ಕಾಣಿಸಿಕೊಳ್ಳಲಿ ಎಂದು ನಾವು ಬಯಸುತ್ತೇವೆ.

ಕಾವ್ಯಶ್ರೀ ನಾಯ್ಕ ಮನ್ಮನೆ, ಉಷಾರಾಣಿ ಹಡಗಲಿ, ಭಾರತಿದೇವಿ ಪಿ., ಶಿವಲೀಲಾ ಮಲ್ಲಿಕಾರ್ಜುನಪ್ಪ, ದೀಪಾ ಹಿರೇಗುತ್ತಿ, ಕೋಮಲ ಕಲ್ಲುಡಿ, ವಿಜಯಲಕ್ಷ್ಮಿ ಆರ್.ಜೆ., ಜೀನತ್ ಕಣವಿ, ಡಾ. ಜಯಲಕ್ಷ್ಮಿ, ವೃಂದಾ ಹೆಗ್ಡೆ, ಅಕ್ಷತಾ ಹುಂಚದಕಟ್ಟೆ

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor: Sudesha Doddapalya (Responsible for selection of news under the PRB Act). Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080 - 45557333, Editorial: 080 - 45557251, Circ: 1800-425-8009, Advt: 1800-425-8008. Also printed at Hubballi-Dharwad, Mangaluru, Kalaburagi, Davanagere, Mysuru and Hosapete. © All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ಈಗ ನಡೆಯುತ್ತಿರುವ ವಿದ್ಯಮಾನಗಳನ್ನು ಗಮನಿಸಿದರೆ ಬಹುಶಃ ಎರಡು ರೀತಿಯ ಬೆಳವಣಿಗೆಗಳು ನಮಗೆ ಕಾಣಬಹುದು. ರಾಜ್ಯದ ಪಟ್ಟಿಗೆ ಸಂದಿರುವ ಸಹಕಾರ ವ್ಯವಸ್ಥೆಯ ಕೇಂದ್ರೀಕರಣದ ಪ್ರಯತ್ನಗಳು ನಡೆಯುವುದರಲ್ಲಿ ಯಾವುದೇ ಅನುಮಾನವಿಲ್ಲ. ರಾಜ್ಯದ ಪಟ್ಟಿಯಲ್ಲಿರುವ ಆರೋಗ್ಯ, ಕೃಷಿ, ವಿದ್ಯಾಕ್ಷೇತ್ರಗಳಲ್ಲಿ ಕೇಂದ್ರ ಸರ್ಕಾರ ಹೆಚ್ಚಿನ ಆಸಕ್ತಿಯನ್ನು ತೋರುತ್ತಾ ಆ ವಿಷಯಗಳ ಬಗ್ಗೆ ಕಾನೂನು ನಿಯಮಾವಳಿಗಳನ್ನು ಈಗಾಗಲೇ ರೂಪಿಸಿದೆ. ಅನೇಕ ಮಾರ್ಗಗಳನ್ನು ಉಪಯೋಗಿಸಿ, ತನ್ನ ಛಾಪು ಮೂಡಿಸುತ್ತಿರುವುದನ್ನೂ ನೋಡುತ್ತಿದ್ದೇವೆ

ಕೇಂದ್ರದ ಸಹಕಾರ ಸಚಿವಾಲಯ
ಹೊಸ ಆತಂಕ, ಹೊಸ ಅವಕಾಶ

• ಎಂ.ಎಸ್. ಶ್ರೀರಾಮ್

ಕೇಂದ್ರ ಸರ್ಕಾರದ ಮಂತ್ರಿಮಂಡಲ ಪುನರ್‌ರಚನೆಗೆ ಒಂದು ದಿನ ಮುಂಚೆ ಹೊಸ ಸಹಕಾರಿ ಸಚಿವಾಲಯದ ಏರ್ಪಾಟಿನ ಸುದ್ದಿ ಬಂತು. ಸರ್ಕಾರದ ಅನೇಕ ಸಚಿವಾಲಯಗಳ ಪುನರ್‌ರಚನೆಯಂತೆ ಇದೂ ಇರಬಹುದು ಎನ್ನುವ ನಂಬಿಕೆಯಿಂದ ಅದರ ಬಗ್ಗೆ ಹೆಚ್ಚಿನ ಮಾತುಕತೆ ಆದಂತಿಲ್ಲ. ಅಲ್ಲಿ ಇಲ್ಲಿ ಇದನ್ನು ಸ್ವಾಗತಿಸುವ ಸದ್ದುಗಳು ಬಂದವು. ಆದರೆ ಈ ಹೊಸ ಸಚಿವಾಲಯವನ್ನು ದೇಶದ ಗೃಹ ಮಂತ್ರಿ ಅಮಿತ್ ಶಾ ಕೈಗೆ ಕೊಟ್ಟಾಗಿನಿಂದ ಈ ಬಗೆಗಿನ ಚರ್ಚೆಗಳು ಮಂತ್ರಿಮಂಡಲದ ಪುನರ್‌ರಚನೆಯ ವಿಷಯದಲ್ಲಿ ಇರುವ ಟಿಪ್ಪಣಿಗಳಷ್ಟೇ ಮಹತ್ವವನ್ನು ಪಡೆದಿವೆ. ನಮ್ಮ ಕಾಲದ ದುರಂತವೆಂದರೆ, ಕೆಲ ವ್ಯಕ್ತಿಗಳ ಕೈಗೆ ಕೆಲ ಕೆಲಸಗಳನ್ನು ಒಪ್ಪಿಸಿದರೆ, ತಕ್ಷಣ ಅದಕ್ಕೆ ಇರಬಹುದಾದ ಮತ್ತು ಇಲ್ಲದಿರಬಹುದಾದ ಪದರಗಳು ಸೇರಿಕೊಳ್ಳುತ್ತವೆ. ಹೀಗಾಗಿಯೇ ಹೊಸ ಸಹಕಾರಿ ಸಚಿವಾಲಯದ ವಿಷಯವನ್ನು ನಾವು ಜಾಗರೂಕರಾಗಿ ನೋಡಬೇಕಾಗಿದೆ.

ಸಾಂವಿಧಾನಿಕವಾಗಿ ಸಹಕಾರ ವ್ಯವಸ್ಥೆ ರಾಜ್ಯ ಸರ್ಕಾರದ ಅಧಿಕಾರದ ವ್ಯಾಪ್ತಿಯಲ್ಲಿ ಬರುತ್ತದೆ. ಬಹುರಾಜ್ಯ ಸಹಕಾರಿ ಸಂಘಗಳಷ್ಟೇ ಕೇಂದ್ರ ಸರ್ಕಾರದ ವ್ಯಾಪ್ತಿಗೆ ಬರುತ್ತವಾದ್ದರಿಂದ ಈ ಹೊಸ ಸಚಿವಾಲಯವು ಅನೇಕ ಪ್ರಶ್ನೆಗಳಿಗೂ ಕುತೂಹಲಕ್ಕೂ ಕಾರಣವಾಗಿದೆ. ಇದನ್ನು ನಾವು ಜಾಗರೂಕತೆಯಿಂದ ನೋಡಬೇಕು. ಭಾರತದಲ್ಲಿರುವ ಸಹಕಾರಿ ವ್ಯವಸ್ಥೆಯನ್ನು ನಾವು ಮುಖ್ಯವಾಗಿ ನಾಲ್ಕು ವಿಭಾಗಗಳಲ್ಲಿ ನೋಡಬಹುದು. ಇವುಗಳ ಮೇಲೆ ಹೊಸ ಸಚಿವಾಲಯವು ಯಾವ ರೀತಿಯಲ್ಲಿ ಪ್ರಭಾವ ಬೀರಬಹುದು?

ಮೊದಲನೆ ಸಹಕಾರಿ ವ್ಯವಸ್ಥೆಯಲ್ಲಿ ಪ್ರಮುಖ ಪಾತ್ರವನ್ನು ವಹಿಸಿರುವ ಗ್ರಾಮೀಣ ಪತ್ತಿನ ಸಂಘಗಳ ವಿಷಯಕ್ಕೆ ಬರೋಣ. ಈ ಪತ್ತಿನ ಸಂಘಗಳ ಕಾಯಕಲ್ಪಕ್ಕೆ ಕೇಂದ್ರ ಸರ್ಕಾರ ವೈದ್ಯನಾಥನ್ ಸಮಿತಿಯನ್ನು ರಚಿಸಿತ್ತು. ಆ ಸಮಿತಿಯು ಹದಿನೈದು ವರ್ಷಗಳ ಹಿಂದೆ ಕೊಟ್ಟ ವರದಿಯನ್ನು ಸಹಕಾರ ವ್ಯವಸ್ಥೆ ತುಂಬು ಹೃದಯದಿಂದ ಸ್ವಾಗತಿಸಿದರೂ ಅದನ್ನು ಜಾರಿ ಮಾಡುವಾಗ ಅನೇಕ ರಾಜ್ಯಗಳನ್ನು ಮಾರ್ಪಡಿಸಿಕೊಂಡಿದ್ದರಿಂದ ನಾವು ಹಿಂದಿದ್ದ ಸ್ಥಿತಿಗೆ ಮುಟ್ಟಿದ್ದೇವೆ.

ಕೇರಳದಲ್ಲಿ ಜಿಲ್ಲಾ ಬ್ಯಾಂಕುಗಳನ್ನು – ರಾಜ್ಯ ಸಹಕಾರಿ ಬ್ಯಾಂಕಿನೊಂದಿಗೆ ವಿಲೀನಗೊಳಿಸಿ – ಮೂರು ಸ್ತರದ ಸಹಕಾರಿ ವ್ಯವಸ್ಥೆಯನ್ನು ಎರಡು ಸ್ತರಗಳಿಗೆ ಇಳಿಸಿರುವುದನ್ನು ಕಂಡಿದ್ದೇವೆ. ಈ ಬಗ್ಗೆ ಭಾರತೀಯ ರಿಸರ್ವ್ ಬ್ಯಾಂಕ್ ಇತ್ತೀಚೆಗೆ ದಿಶಾ ನಿರ್ದೇಶನದ ಸುತ್ತೋಲೆಯನ್ನು ಹೊರಡಿಸಿ ಇತರ ರಾಜ್ಯಗಳು ಕೂಡ ತಮ್ಮ ಸಹಕಾರಿ ವ್ಯವಸ್ಥೆಯನ್ನು ಕೇರಳ ಮಾದರಿಯಲ್ಲಿ ಪುನರ್‌ರಚಿಸುವುದನ್ನು ಪ್ರೋತ್ಸಾಹಿಸಿದೆ. ಈ ಕ್ಷೇತ್ರದಲ್ಲಿ ಕೇಂದ್ರ ಸರ್ಕಾರ ಮೂಗು ತೂರಿಸುವುದೇನೂ ಇಲ್ಲ. ವೈದ್ಯನಾಥನ್ ಸಮಿತಿಯು ಸೂಚಿಸಿದ ಕಾಯಕಲ್ಪವನ್ನು ಮಾಡಬಹುದಾದರೂ, ಅದಕ್ಕಿರುವ ಅವಕಾಶಗಳು ಸೀಮಿತವಾಗಿವೆ.

ವೈದ್ಯನಾಥನ್ ಸಮಿತಿ ರಾಜ್ಯದ ಕಾನೂನುಗಳಲ್ಲಿ ಅನೇಕ ಸುಧಾರಣೆಗಳನ್ನು ಸೂಚಿಸಿತ್ತು. ಆದರೆ, ನಮ್ಮ ಸಂವಿಧಾನಕ್ಕೆ 2013ರಲ್ಲಿ ಮಾಡಿದ 97ನೇ ತಿದ್ದುಪಡಿ ರಾಜ್ಯದ ಕಾನೂನಿನಲ್ಲಿರಬಹುದಾದ ಅನೇಕ ವಿರೋಧಾಭಾಸಗಳನ್ನು ಇತ್ಯರ್ಥ ಮಾಡಿದಂತಿತ್ತು. ಹೀಗಾಗಿ ಗ್ರಾಮೀಣ ಪತ್ತಿನ ವ್ಯವಸ್ಥೆಯಲ್ಲಿ ದೊಡ್ಡ ಪ್ರಮಾಣದ ಸುಧಾರಣೆಯ ಲಕ್ಷಣಗಳು ನಮಗೆ ಈ ಪ್ರಕ್ರಿಯೆಯಲ್ಲಿ ಕಾಣುತ್ತಿಲ್ಲ.

ಸಹಕಾರ ಕ್ಷೇತ್ರದಲ್ಲಿ ಮಹತ್ವದ ಪಾತ್ರವನ್ನು ವಹಿಸಿರುವ ಮತ್ತೊಂದು ವ್ಯವಸ್ಥೆ ಪಟ್ಟಣ ಸಹಕಾರಿ ಬ್ಯಾಂಕುಗಳದ್ದು. ಇವುಗಳನ್ನು ರಿಸರ್ವ್ ಬ್ಯಾಂಕಿನ ಮೂಲಕ ಕೇಂದ್ರದ ಅಡಿಗೆ ತರುವ ಪ್ರಕ್ರಿಯೆಯನ್ನು ಬ್ಯಾಂಕಿಂಗ್ ಕಾಯ್ದೆಗಳ ತಿದ್ದುಪಡಿಯೊಂದಿಗೆ ಸರ್ಕಾರ ಮಾಡಿಯಾಗಿದೆ. ಇಲ್ಲೂ ಸುಧಾರಣೆ-ಕಾಯಕಲ್ಪದ ಸಾಧ್ಯತೆಯಿದ್ದು, ಸದರಿ ಸುಧಾರಣೆಗಳನ್ನು ಪರೀಕ್ಷಿಸಲು ಈ ಲೇಖಕನನ್ನು ಒಳಗೊಂಡಿರುವ ಸಮಿತಿಯನ್ನು ರಿಸರ್ವ್ ಬ್ಯಾಂಕು ನೇಮಿಸಿದೆ. ಈ ಸಮಿತಿಯ ವರದಿ ಶೀಘ್ರದಲ್ಲಿ ಸಲ್ಲಿಕೆಯಾಗುವ ಸಾಧ್ಯತೆಯಿದೆ. ಇದನ್ನು ಸದ್ಯಕ್ಕೆ ಬಿಟ್ಟುಬಿಡೋಣ.

ಈ ಎರಡೂ ಕ್ಷೇತ್ರಗಳನ್ನು ಬಿಟ್ಟರೆ, ಕೃಷಿ ಉತ್ಪನ್ನಗಳಿಗೆ ಸಂಬಂಧಿಸಿದ ಸಹಕಾರ ಸಂಘಗಳನ್ನು ನಾವು ಕಾಣಬಹುದು. ಈ ಕ್ಷೇತ್ರದಲ್ಲಿ ವಿಕೇಂದ್ರೀಕೃತವಾಗಿ, ಅಡಕೆ, ಕೋಕೋ, ತೆಂಗು, ಅಡಿಗೆ ತೈಲ, ಕೈಮಗ್ಗ ಹೀಗೆ ವಿವಿಧ ಕ್ಷೇತ್ರಗಳಿಗೆ ಸಂಬಂಧಿಸಿದ ಸಹಕಾರ ಸಂಘಗಳಿವೆಯಾದರೂ ಪ್ರಮುಖವಾಗಿ ನಿಲ್ಲುವುದು ಸಕ್ಕರೆ (ಮಹಾರಾಷ್ಟ್ರ) ಮತ್ತು ಹೈನುಗಾರಿಕೆ (ಗುಜರಾತ್, ಕರ್ನಾಟಕ) ಸೇರಿದ ಸಹಕಾರ ವ್ಯವಸ್ಥೆ. ಈ ಕ್ಷೇತ್ರಗಳು ರಾಜಕೀಯದ ದೃಷ್ಟಿಯಿಂದ ಮುಖ್ಯವಾದವು. ಇದಕ್ಕಿಂತ ಮಿಗಿಲಾಗಿ ಸಹಕಾರ ಕ್ಷೇತ್ರದಲ್ಲಿ ಬಹುದೊಡ್ಡ ಅಜೆಂಡಾ ಹುಟ್ಟು ನಡೆಯುತ್ತಿದ್ದರೂ, ಸಹಕಾರಿ ಸಂಘಗಳಲ್ಲದ, ಆದರೆ ಸಹಕಾರದ ತತ್ವದ ಮೇಲೆ ನಡೆಯುವ ಸಂಸ್ಥೆಗಳು – ರೈತರ ಉತ್ಪನ್ನ ಸಂಸ್ಥೆ – ಎಫ್‌ಪಿಒ -ಗಳು ಭವಿಷ್ಯದ ಕಡೆಗೆ ಮುಖ ಮಾಡಿ ನಿಂತಿವೆ.

ಈ ನಾಲ್ಕು ಸ್ತಂಭಗಳಲ್ಲಿ ಗೃಹ (ಮತ್ತೀಗ ಸಹಕಾರ) ಮಂತ್ರಿಗಳ ದೃಷ್ಟಿ ಯಾವುದರತ್ತ ಬೀಳುತ್ತದೋ – ಅವರ ಮನಸ್ಸಿನಲ್ಲಿ ಏನಿದೆಯೋ ತಿಳಿಯುವುದು ಕಷ್ಟದ ಮಾತೇ.

ಆದರೆ, ಈಗ ನಡೆಯುತ್ತಿರುವ ವಿದ್ಯಮಾನಗಳನ್ನು ಗಮನಿಸಿದರೆ ಬಹುಶಃ ಎರಡು ರೀತಿಯ ಬೆಳವಣಿಗೆಗಳು ನಮಗೆ ಕಾಣಬಹುದು. ರಾಜ್ಯದ ಪಟ್ಟಿಗೆ ಸಂದಿರುವ ಸಹಕಾರ ವ್ಯವಸ್ಥೆಯ ಕೇಂದ್ರೀಕರಣದ ಪ್ರಯತ್ನಗಳು ನಡೆಯುವುದರಲ್ಲಿ ಯಾವುದೇ ಅನುಮಾನವಿಲ್ಲ. ರಾಜ್ಯದ ಪಟ್ಟಿಯಲ್ಲಿರುವ ಆರೋಗ್ಯ, ಕೃಷಿ, ವಿದ್ಯಾಕ್ಷೇತ್ರಗಳಲ್ಲಿ ಕೇಂದ್ರ ಸರ್ಕಾರ ಹೆಚ್ಚಿನ ಆಸಕ್ತಿಯನ್ನು ತೋರುತ್ತಾ ಆ ವಿಷಯಗಳ ಬಗ್ಗೆ ಕಾನೂನು ನಿಯಮಾವಳಿಗಳನ್ನು ಈಗಾಗಲೇ ರೂಪಿಸಿದೆ. ಅನೇಕ ಮಾರ್ಗಗಳನ್ನು ಉಪಯೋಗಿಸಿ, ತನ್ನ ಛಾಪು ಮೂಡಿಸುತ್ತಿರುವುದನ್ನೂ ನೋಡುತ್ತಿದ್ದೇವೆ.

ಹೀಗಾಗಿ, ಸಹಕಾರ ಕ್ಷೇತ್ರವು ರಾಷ್ಟ್ರೀಯ ಮಟ್ಟದಲ್ಲಿ ಪ್ರಬಲವಾಗುವ ಮತ್ತು ಕ್ಷೇತ್ರೀಯ ಮಟ್ಟದಲ್ಲಿ ದುರ್ಬಲವಾಗುವ ಸಾಧ್ಯತೆಗಳನ್ನು ನಮಗೆ ಕಾಣಬಹುದು. ಉದಾಹರಣೆಗೆ ಗುಜರಾತಿನ ಅಮುಲ್ ಸಂಸ್ಥೆ ಆ ರಾಜ್ಯಕ್ಕೆ ಸೀಮಿತವಾಗಿರುವ ಸಂಸ್ಥೆಯಾದರೂ ಅನೇಕ ರಾಜ್ಯಗಳಲ್ಲಿ ತನ್ನ ವಹಿವಾಟುಗಳನ್ನು ನಡೆಸುತ್ತಿದೆ. ಇದಕ್ಕೆ ಹೆಚ್ಚಿನ ಬಲ ಕೊಟ್ಟು ಅದನ್ನೊಂದು ರಾಷ್ಟ್ರೀಯ ಮಟ್ಟದ ಸಹಕಾರಿ ವ್ಯವಸ್ಥೆಯನ್ನಾಗಿಸಿ, ಸ್ಥಳೀಯ ಸಹಕಾರ ವ್ಯವಸ್ಥೆ ಅದರಡಿ ಬರುವ (ನಂದಿನಿ) ಹುನ್ನಾರವನ್ನು ನಾವು ಕಾಣಬಹುದು. ಆಗ ಸಂಪನ್ಮೂಲಗಳೆಲ್ಲಾ ಒಂದೆಡೆ ಸೇರಿದಂತಾಗುತ್ತದೆ. ಈ ಒಂದು ವಿಚಿತ್ರ 'ರಾಷ್ಟ್ರೀಕರಣ', ಕೇಂದ್ರೀಕರಣವನ್ನು ಕಾಣುತ್ತೇವೇನೋ.

ಹಾಗೆಯೇ ಹಣಕಾಸು ಸಚಿವರು ಬಜೆಟ್‌ನಲ್ಲಿ ಘೋಷಿಸಿದ ಸಾಮಾಜಿಕ ಷೇರು ವಿನಿಮಯ ವ್ಯವಸ್ಥೆಯ ಬಗೆಗಿನ ವರದಿಗಳು ಬಂದಿವೆ. ತನ್ಮೂಲಕ ಸಹಕಾರಿ ವ್ಯವಸ್ಥೆಗೆ ಖಾಸಗಿ ಮೂಲಗಳಿಂದ ಹೂಡಿಕೆ ಆಕರ್ಷಿಸುವ ಯೋಜನೆಗಳು ಬರುವುದರಲ್ಲಿ ಅನುಮಾನವಿಲ್ಲ. ಸಹಕಾರಿ ವ್ಯವಸ್ಥೆಯಲ್ಲಿ ನವ ದಕ್ಷತೆ ಮತ್ತು ಹೂಡಿಕೆ ತರುವ ನೆಪಹೂಡಿ ಬೆಳವಣಿಗೆ ಕನಸನ್ನು ಕಾಣಿಸುತ್ತಾ ಸಹಕಾರಿ ವ್ಯವಸ್ಥೆಯ ಖಾಸಗೀಕರಣದತ್ತ ನಾವು ಸಾಗುತ್ತಿರಬಹುದೇ...

ಕೃಷಿ ಕ್ಷೇತ್ರವನ್ನು ಖಾಸಗೀಕರಣದತ್ತ ತಳ್ಳುತ್ತಿರುವ ಮತ್ತು ದಕ್ಷತೆಗೂ, ಹೂಡಿಕೆಗೂ, ಖಾಸಗಿ ಕ್ಷೇತ್ರಕ್ಕೂ ನಂಟುಹಾಕಿರುವ ಈ ವಿಚಾರದ ಮುಂದಿನ ದಾರಿ ಇದೇ ಇರಬಹುದು. ಅಲ್ಪಸ್ವಲ್ಪ ದಕ್ಷತೆಯಿಂದ ನಡೆಯುತ್ತಿರುವ ಸಹಕಾರ ವ್ಯವಸ್ಥೆಯಲ್ಲಿ ಖಾಸಗಿ ಕ್ಷೇತ್ರ ನುಸುಳದಂತೆ – ಅದಕ್ಕೆ ಕೊಂಡಿ ಹಾಕಿಕೊಂಡಿರುವ ಕೃಷಿ ಮತ್ತು ಕೃಷಿ ಮಾರುಕಟ್ಟೆ ವ್ಯವಸ್ಥೆ ತಮ್ಮ ಅಸ್ಮಿತೆ ಮತ್ತು ಅಸ್ತಿತ್ವವನ್ನು ಜಾಗರೂಕವಾಗಿ ಕಾಪಾಡಿಕೊಳ್ಳಬೇಕಾದ ಸಮಯ ಬಂದಿದೆಯೇನೋ.

ಖಾಸಗಿ ಕ್ಷೇತ್ರ ಇರಬಾರದು ಎನ್ನುವುದು ನಮ್ಮ ವಾದವಲ್ಲ. ಖಂಡಿತವಾಗಿ ಮಾರುಕಟ್ಟೆಯಲ್ಲಿ ಪಾಲ್ಗೊಳ್ಳಲು ಯಾರಿಗಾದರೂ ಹಕ್ಕಿರಬೇಕು. ಆದರೆ, ಬಂಡವಾಳದ ಮೂಲವನ್ನು ನಿರಾಕರಿಸಿ ಸದಸ್ಯರ ಹಿತಾಸಕ್ತಿಯನ್ನು ಕೇಂದ್ರದಲ್ಲಿಟ್ಟು ಮುಂದುವರಿದಿರುವ ಸಹಕಾರಿ ವ್ಯವಸ್ಥೆಯನ್ನು ಒಳಗಿನಿಂದ ದುರ್ಬಲಗೊಳಿಸುವ ಯತ್ನದ ವಿರುದ್ಧ ನಾವು ಜಾಗರೂಕರಾಗಿರಬೇಕು.

ಈ ಹೊಸ ಸಚಿವಾಲಯದಿಂದ ನಮಗೆ ಆಶಾಕಿರಣ ಕಾಣುವುದಕ್ಕೆ ಬದಲು ಆತಂಕ ಏಕೆ ಕಾಣಿಸುತ್ತಿದೆ? ಏಕೆ ಹಲವು ದಿನಗಳಿಂದ ಅನೇಕ ಲೇಖನಗಳು ಸಹಕಾರಿ ವ್ಯವಸ್ಥೆಯನ್ನು ಪರೀಕ್ಷಿಸುತ್ತಿರುವುದಲ್ಲದೇ ಯಾಕೆ ಈ ಸಚಿವಾಲಯವು ಹುಟ್ಟಿಕೊಂಡಿತೆಂದು ಗಾಳಿಪಟಗಳನ್ನು ಹಾರಿಸುತ್ತಿದ್ದೇವೆ?

ಈ ಪ್ರಶ್ನೆಯನ್ನು ಕೇಳಿಕೊಂಡಾಗ ಸದರಿ ಕೇಂದ್ರ ಸರ್ಕಾರದ ಬಗ್ಗೆ ಇರುವ ನಂಬಿಕೆ ಎಷ್ಟು ಮಟ್ಟಿನದ್ದೆಂದು ನಮಗೆ ತಿಳಿದು ಬರುತ್ತದೆ. ಆದರೆ ಅದೃಷ್ಟವಶಾತ್ ಈ ಒಂದು ಕ್ರಮದಿಂದ ಸಹಕಾರ ಕ್ಷೇತ್ರವು ಆರ್ಥಿಕ ವಲಯದಲ್ಲಿ ಒಂದು ಪ್ರಬಲ ವ್ಯಾಪಾರ ಮಾಧ್ಯಮವಾಗಿ ಬೆಳೆಯುವುದೇ ಆದರೆ ಅದಕ್ಕಿಂತ ಒಳ್ಳೆಯ ಸಮತಾವಾದದ ಸುದ್ದಿ ಏನಿರಬಹುದು?

ಆದರೆ, ಸದರಿ ಸರ್ಕಾರ ಏಳುವರ್ಷಗಳಿಂದ ಪಾಲಿಸುತ್ತಾ ಬಂದಿರುವ ಆರ್ಥಿಕ-ವಿತ್ತೀಯ ನೀತಿಗಳನ್ನು ಕಂಡಾಗ ನಂಬಿಕೆಗಿಂತ ಅನುಮಾನಗಳೇ ಬರುತ್ತಿವೆಯಲ್ಲಾ... ಯಾವುದು ಏನೇ ಇದ್ದರೂ ಒಟ್ಟಾರೆ ಸಹಕಾರ ವ್ಯವಸ್ಥೆಯ ಬಗ್ಗೆ, ಅದರ ಗುಣಾಗುಣಗಳ ಬಗ್ಗೆ, ಅದರ ಅವಶ್ಯಕತೆಗಳ ಬಗ್ಗೆ ಒಂದು ಮುಕ್ತ ಚರ್ಚೆಗೆ ಇದು ನಾಂದಿ ಹಾಡಿದೆ.

ಆರ್ಥಿಕ ಬೆಳವಣಿಗೆ-ಒಳಗೊಳ್ಳುವಿಕೆಯ ವಿಚಾರವಾದದ ಬಗ್ಗೆ ನಾವು ಚರ್ಚಿಸಲು ಮುಂದಾಗಿದ್ದೇವೆ ಎನ್ನುವುದು ಜಾತಿ-ಜನಸಂಖ್ಯೆ-ಧರ್ಮ-ಪುನರ್ ನಾಮಕರಣ-ಗೋಹತ್ಯೆಗಳ ಚರ್ಚೆಗಿಂತ ಉತ್ತಮವಾದದ್ದೇ. ಆ ದೃಷ್ಟಿಯಿಂದಲಾದರೂ ನಾವು ಈ ಕ್ರಮವನ್ನು ಸ್ವಾಗತಿಸುತ್ತಲೇ, ರಾಜ್ಯಗಳಿಗೆ ತಮ್ಮ ಹಿತಾಸಕ್ತಿಗಳನ್ನು ಕಾಪಾಡಿಕೊಳ್ಳಿರೆಂಬ ಕಿವಿಮಾತನ್ನು ಹೇಳಬೇಕಾಗಿದೆ.

ಹಿಂದಿನ ಸ್ಥಾಪಿತ ವ್ಯವಸ್ಥೆಗಳನ್ನು ಅಲುಗಾಡಿಸದೇ, ಹೈನುಗಾರಿಕೆಯಲ್ಲಿ ಕ್ರಾಂತಿ ತಂದಂತೆ ಕೃಷಿ ಕ್ಷೇತ್ರದಲ್ಲಿ ಕ್ರಾಂತಿ ತರಲು ನಮ್ಮ ಗೃಹ-ಸಹಕಾರ ಸಚಿವರು ಹೊರಟಿದ್ದರೆ ಅದು ಸ್ವಾಗತಾರ್ಹವೇ. ಕಾದು ನೋಡೋಣ.

ಲೇಖಕ: ಐಐಎಂನ ಸಂದರ್ಶಕ ಪ್ರಾಧ್ಯಾಪಕ

ಸಿಧು ಪಂಜಾಬ್ ಕಾಂಗ್ರೆಸ್ ಅಧ್ಯಕ್ಷ

ಪ್ರಜಾವಾಣಿ ವಾರ್ತೆ

ನವದೆಹಲಿ: ಪಂಜಾಬ್ ಪ್ರದೇಶ ಕಾಂಗ್ರೆಸ್‌ನ ಅಧ್ಯಕ್ಷನಾಗಿ ಪಕ್ಷದ ನಾಯಕ ನವಜೋತ್ ಸಿಂಗ್ ಸಿಧು ಅವರನ್ನು ನೇಮಕ ಮಾಡಲಾಗಿದೆ. ಪಕ್ಷದ ವರಿಷ್ಠರು ಭಾನುವಾರ ಈ ನಿರ್ಧಾರ ತೆಗೆದುಕೊಂಡಿದ್ದಾರೆ. ಪಂಜಾಬ್ ಮುಖ್ಯಮಂತ್ರಿ ಅಮರಿಂದರ್ ಸಿಂಗ್ ಅವರ ವಿರೋಧದ ಮಧ್ಯೆಯೂ ಈ ನಿರ್ಧಾರ ತೆಎಗದುಕೊಳ್ಳಲಾಗಿದೆ ಎಂದು ಮೂಲಗಳು ಹೇಳಿವೆ.



ಸಿಧು

ಅಮರಿಂದರ್ ಸಿಂಗ್ ಮತ್ತು ನವಜೋತ್ ಸಿಂಗ್ ಸಿಧು ಮಧ್ಯೆ ಹಲವು ತಿಂಗಳಿನಿಂದ ಭಿನ್ನಮತವಿತ್ತು. ಈ ಸಂಬಂಧ ಸಿಧು ಅವರು ಪಕ್ಷದ ನಾಯಕರಾದ ಸೋನಿಯಾ ಗಾಂಧಿ, ಪ್ರಿಯಾಂಕಾ ಗಾಂಧಿ ವಾದ್ರಾ ಮತ್ತು ರಾಹುಲ್ ಗಾಂಧಿ ಅವರನ್ನು ಭೇಟಿ ಮಾಡಿ ಮಾತುಕತೆ ನಡೆಸಿದ್ದರು. ಇದರ ಮಧ್ಯೆಯೂ ಪಂಜಾಬ್ ಕಾಂಗ್ರೆಸ್‌ನ ಅಧ್ಯಕ್ಷರಾಗಿ, ಪಕ್ಷದ ಹಿರಿಯ ನಾಯಕ ಪ್ರತಾಪ್ ಸಿಂಗ್ ಬಾಜ್ವಾ ಅವರನ್ನು ನೇಮಕ ಮಾಡಲಾಗುತ್ತದೆ ಎಂಬ ವದಂತಿ ಹರಡಿತ್ತು. ಈಗ ಸಿಧು ಅವರನ್ನು ನೇಮಕ ಮಾಡುವ ಮೂಲಕ ಪಕ್ಷವು ಈ ವದಂತಿಗೆ ಕೊನೆಹಾಡಿದೆ.

'40ಕ್ಕೂ ಹೆಚ್ಚು ಭಾರತೀಯ ಪತ್ರಕರ್ತರ ಫೋನ್‌ಗಳು ಹ್ಯಾಕ್'

ಪ್ರಜಾವಾಣಿ ವಾರ್ತೆ

ನವದೆಹಲಿ: 'ಪೆಗಾಸಸ್' ಗೂಢಚರ್ಯೆ ತಂತ್ರಾಂಶ ಬಳಸಿಕೊಂಡು 40 ಪತ್ರಕರ್ತರು ಹಾಗೂ ಭೀಮಾ ಕೋರೆಗಾಂವ್ ಪ್ರಕರಣದ ಆರೋಪಿಗಳು ಸೇರಿದಂತೆ 12 ಕಾರ್ಯಕರ್ತರ ಫೋನ್‌ಗಳನ್ನು ಹ್ಯಾಕ್ ಮಾಡಿ, ಅವರ ಮೇಲೆ ಕಣ್ಗಾವಲು ಇಡಲಾಗಿದೆ ಎಂಬ ಮಾಹಿತಿ ಬಹಿರಂಗವಾಗಿದೆ.

ಇವರೇ ಅಲ್ಲದೆ ಕೆಲ ಸಚಿವರು, ವಿರೋಧ ಪಕ್ಷಗಳ ನಾಯಕರು, ಕಾನೂನು ಸಮುದಾಯದವರು, ಉದ್ಯಮಿಗಳು, ಸರ್ಕಾರಿ ಅಧಿಕಾರಿಗಳು, ವಿಜ್ಞಾನಿಗಳು, ಮಾನವ ಹಕ್ಕು ಕಾರ್ಯಕರ್ತರು ಸೇರಿದಂತೆ 300 ಭಾರತೀಯರ ಮೊಬೈಲ್‌ಗಳು ಹ್ಯಾಕ್ ಆಗಿವೆ ಎಂದು 'ದಿ ವೈರ್' ಭಾನುವಾರ ರಾತ್ರಿ ವರದಿ ಮಾಡಿದೆ.

ನಿರ್ದಿಷ್ಟ ಜನರ ಮೇಲಿನ ಕಣ್ಗಾವಲಿಗೆ ಸಂಬಂಧಿಸಿದಂತೆ ಸ್ಪಷ್ಟನೆ ನೀಡಿರುವ ಸರ್ಕಾರ, 'ಇದರಲ್ಲಿ ಸತ್ಯಾಂಶವಿಲ್ಲ, ನಿರಾಧಾರ' ಎಂದು ಹೇಳಿಕೆ ನೀಡಿದೆ. 2019ರ ಅಕ್ಟೋಬರ್‌ನಲ್ಲಿ ಇದೇ ರೀತಿಯ ಸುದ್ದಿ ಬಿತ್ತರವಾಗಿತ್ತು. ಈಗಿನದ್ದು ಅದರ ಮುಂದುವರಿದ ಭಾಗದಂತೆ ಇದೆ. ಇದು ಭಾರತದ ಪ್ರಜಾಪ್ರಭುತ್ವ ಮತ್ತು ಅದರ ಸಂಸ್ಥೆಗಳಿಗೆ ಕೆಡಕು ತರುವ ಯತ್ನವಾಗಿದೆ ಎಂದು ಸರ್ಕಾರ ದೂರಿದೆ.

ಸೋರಿಕೆಯಾದ ದತ್ತಾಂಶವನ್ನು ಪ್ಯಾರಿಸ್ ಮೂಲದ ಲಾಭೋದ್ದೇಶವಿಲ್ಲದ ಮಾಧ್ಯಮ ಸಂಸ್ಥೆ 'ಫಾರ್ಬಿಡನ್ ಸ್ಟೋರಿಸ್', 'ಅಮ್ನೆಸ್ಟಿ ಇಂಟರ್‌ನ್ಯಾಷನಲ್' ಸಂಸ್ಥೆಗಳು ದಿ ವೈರ್, ಲೆ ಮಾಂಡೆ, ದಿ ಗಾರ್ಡಿಯನ್, ವಾಷಿಂಗ್ಟನ್ ಪೋಸ್ಟ್, ಡೈ ಜೈಟ್, ಸೇರಿದಂತೆ 10 ಇತರ ಮೆಕ್ಸಿನ್, ಅರಬ್ ಮತ್ತು ಯುರೋಪಿನ ಸುದ್ದಿ ಸಂಸ್ಥೆಗಳೊಂದಿಗೆ ಹಂಚಿಕೊಂಡಿವೆ. ಈ ಸಂಸ್ಥೆಗಳು ಜಂಟಿಯಾಗಿ ಕೈಗೊಂಡಿರುವ ಈ ತನಿಖೆಗೆ 'ಪೆಗಾಸಸ್ ಪ್ರಾಜೆಕ್ಟ್' ಎಂದು ಕರೆಯಲಾಗಿದೆ.

ದಿ ವೈರ್ ವರದಿಯ ಪ್ರಕಾರ, ಭೀಮಾ ಕೋರೆಗಾಂವ್ ಪ್ರಕರಣದಲ್ಲಿ ಬಂಧಿತರಾದ ಎಂಟು ಕಾರ್ಯಕರ್ತರು, ವಕೀಲರು ಮತ್ತು ಶಿಕ್ಷಣ ತಜ್ಞರ ಮೊಬೈಲ್‌ಗಳು ಹ್ಯಾಕ್ ಆಗಿವೆ.

ಪತ್ರಕರ್ತರ ಪೈಕಿ ಸುಶಾಂತ್ ಸಿಂಗ್, ಜೆ. ಗೋಪಿಕೃಷ್ಣನ್, ಶಿಶಿರ್ ಗುಪ್ತಾ, ರಿತಿಕಾ ಚೋಪ್ರಾ, ಪ್ರಶಾಂತ್ ಝಾ, ಪ್ರೇಮ್ ಶಂಕರ್ ಝಾಂ, ಸ್ವಾತಿ ಚತುರ್ವೇದಿ, ರಾಹುಲ್ ಸಿಂಗ್, ಮುಜಮ್ಮಿಲ್ ಜಲೀಲ್, ಇಫ್ತಿಕಾರ್ ಗೀಲಾನಿ ಮತ್ತು ಸಂದೀಪ್ ಉನ್ನಿತಾನ್, ದಿ ವೈರ್‌ನ ಸಂಸ್ಥಾಪಕ–ಸಂಪಾದಕರಾದ ಸಿದ್ಧಾರ್ಥ್ ವರದರಾಜನ್ ಮತ್ತು ಎಂ.ಕೆ.ವೇಣು ಅವರ ಹೆಸರುಗಳೂ ಈ ಪಟ್ಟಿಯಲ್ಲಿವೆ.

ಪ್ರವಾಸೋದ್ಯಮ ನಿಗಮ: ಕಾಪು ಸಿದ್ಧಲಿಂಗಸ್ವಾಮಿ ಅಧ್ಯಕ್ಷ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯ ಪ್ರವಾಸೋದ್ಯಮ ಅಭಿವೃದ್ಧಿ ನಿಗಮದ ಅಧ್ಯಕ್ಷರಾಗಿ ಕಾಪು ಸಿದ್ಧಲಿಂಗಸ್ವಾಮಿ ಅವರನ್ನು ನೇಮಿಸಿ ರಾಜ್ಯ ಸರ್ಕಾರ ಆದೇಶ ಹೊರಡಿಸಿದೆ.

ಸದ್ಯ ಅಧ್ಯಕ್ಷರಾಗಿ ಕಾರ್ಯ ನಿರ್ವಹಿಸುತ್ತಿರುವ ಶೃತಿ ಅವರ ನೇಮಕಾತಿಯನ್ನು ಹಿಂಪಡೆದು, ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಅವರ ಆಪ್ತ ವಲಯದಲ್ಲಿ ಗುರುತಿಸಿಕೊಂಡಿರುವ ಮೈಸೂರು ಜಿಲ್ಲೆ ನಂಜನಗೂಡು ತಾಲ್ಲೂಕಿನವರಾದ ಸಿದ್ಧಲಿಂಗಸ್ವಾಮಿ ಅವರನ್ನು ನೇಮಿಸಲಾಗಿದೆ.

ಕಾಪು ಸಿದ್ದಲಿಂಗಸ್ವಾಮಿ ಬಹಳ ವರ್ಷ ಯಡಿಯೂರಪ್ಪ ಅವರಿಗೆ ಆಪ್ತ ಸಹಾಯಕರಾಗಿ ಕಾರ್ಯನಿರ್ವಹಿಸಿದ್ದರು. ಯಡಿಯೂರಪ್ಪ ಅವರು ಕೆ.ಜೆ.ಪಿ ಮಾಡಿದಾಗ ವರುಣಾಕ್ಷೇತ್ರದಿಂದ ಸಿದ್ದರಾಮಯ್ಯ ಅವರ ವಿರುದ್ಧ ಚುನಾವಣೆಗೆ ಸ್ಪರ್ಧಿಸಿದ್ದರು. ಪಕ್ಷಕ್ಕಾಗಿ ಕೆಲಸ ಮಾಡಿದ ಶೃತಿ ಅವರನ್ನು ತೆಗೆದು, ಸಿದ್ದಲಿಂಗಸ್ವಾಮಿ ಅವರನ್ನು ನೇಮಿಸಿದ್ದು, ಪಕ್ಷದ ವಲಯದಲ್ಲಿ ಸಾಕಷ್ಟು ಟೀಕೆಗೆ ಕಾರಣವಾಗಿದೆ.

ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ
9606038256

ಕಾಶ್ಮೀರದ ಶಾಲಾ ಬಾಲಕಿಯರು ಇರುವ ಎರಡು ಚಿತ್ರಗಳು ಸಾಮಾಜಿಕ ಜಾಲತಾಣಗಳಲ್ಲಿ ವೈರಲ್ ಆಗಿವೆ. ಮೊದಲನೆಯ ಚಿತ್ರದಲ್ಲಿ ಮಕ್ಕಳು ಕಲ್ಲು ತೂರಾಟ ನಡೆಸುತ್ತಿರುವ ಚಿತ್ರಣವಿದೆ. ಇದು ಕಾಂಗ್ರೆಸ್ ಅವಧಿಯಲ್ಲಿ ತೆಗೆದ ಚಿತ್ರ ಎಂದು ಬಿಂಬಿಸಲಾಗಿದೆ. ಎರಡನೆಯ ಚಿತ್ರದಲ್ಲಿ ಮಕ್ಕಳು ಕೈಯಲ್ಲಿ ರಾಷ್ಟ್ರ ಧ್ವಜ ಹಿಡಿದಿರುವ ಚಿತ್ರಣವಿದೆ. ಇದು ಬಿಜೆಪಿ ಸರ್ಕಾರ ಬಂದ ಬಳಿಕ ಆಗಿರುವ ಬದಲಾವಣೆ ಎಂದು ಬಿಂಬಿಸಲಾಗಿದೆ.

ಈ ಚಿತ್ರಗಳ ಬಗ್ಗೆ ಆಲ್ಟ್ ನ್ಯೂಸ್ ಪರಿಶೀಲನೆ ನಡೆಸಿದ್ದು, ಎರಡೂ ಚಿತ್ರಗಳು ಬಿಜೆಪಿ ಸರ್ಕಾರದ ಅವಧಿಯಲ್ಲಿ ಸೆರೆಹಿಡಿದ ಚಿತ್ರಗಳು ಎಂದು ತಿಳಿಸಿದೆ. ಮೊದಲನೆಯ ಚಿತ್ರವನ್ನು 2017ರಲ್ಲಿ ವಾಷಿಂಗ್ಟನ್ ಪೋಸ್ಟ್ ಪತ್ರಿಕೆ ಪ್ರಕಟಿಸಿದೆ. ಎರಡನೆಯ ಚಿತ್ರವನ್ನು 2021ರ ಗಣರಾಜ್ಯೋತ್ಸವದ ದಿನ ಸೆರೆಹಿಡಿಯಲಾಗಿದೆ. ಈ ಚಿತ್ರದಲ್ಲಿ ಕೆಲವು ಬಾಲಕಿಯರು ಮಾಸ್ಕ್ ಧರಿಸಿರುವುದನ್ನು ಕಾಣಬಹುದು ಎಂದು ವೆಬ್‌ಸೈಟ್ ತಿಳಿಸಿದೆ.

ಗುಂಡಣ್ಣ



ದಿನ ಭವಿಷ್ಯ

ಸೋಮವಾರ ಜುಲೈ 19, 2021

ಶ್ರೀ ಪ್ಲವ ನಾಮ ಸಂವತ್ಸರ ಉತ್ತರಾಯಣ ಗ್ರೀಷ್ಮ ಋತು ಆಷಾಢ ಮಾಸ ಶುಕ್ಲ ಪಕ್ಷ ಮಳೆ ನಕ್ಷತ್ರ ಪುನರ್ವಸು ದಶಮಿ ಗಂ. 32-51 (ರಾ. 7-18) ಸೋಮವಾರ ನಿತ್ಯ ನಕ್ಷತ್ರ ವಿಶಾಖಾ ಗಂ. 36-26 (ರಾ 8-44) ಶುಭ ನಾಮ ಯೋಗ ಗಂ. 39-35 ತೈತಲ ಕರಣ ಗಂ. 5-53 ಉಪರಿ ಗರಜ ಕರಣ ಗಂ. 26-58 ವಿಷ ಗಂ. 45-42 ಅಮೃತ ಗಂ. 15-46: ರಾಹುಕಾಲ: ಬೆ. ಗಂ. 7-30 ರಿಂದ 9-00 ಗುಳಿಕ ಮ. ಕಾಲ ಗಂ 1-30 ರಿಂದ 3-00 ಯಮಗಂಡ ಕಾಲ ಬೆ. ಗಂ 10-30 ರಿಂದ 12-00 ಸೂರ್ಯೋದಯ: 6-05 ಸೂರ್ಯಾಸ್ತ: 6-46 ಅದೃಷ್ಟ ಸಂಖ್ಯೆ 3, 7

ಮೇಷ: ದಿನಸಿ ವ್ಯಾಪಾರಿಗಳು, ಹಣ್ಣು ಹಂಪಲು, ಹೂವು ವ್ಯಾಪಾರಿಗಳಿಗೆ ಅಧಿಕ ಲಾಭ. ನಿಮ್ಮ ಭವಿಷ್ಯದ ಯೋಜನೆಗಳನ್ನು ರೂಪಿಸಿಕೊಳ್ಳಲು ಉತ್ತಮ ಅವಕಾಶ. ನಿಮಗೆ ಸೂಕ್ತವಾದ ಸಮಯ ಕಾಯುತ್ತಿದೆ.

ವೃಷಭ: ಶ್ರಮಕ್ಕೆ ತಕ್ಕ ಪ್ರತಿಫಲವನ್ನು ನಿರೀಕ್ಷಿಸಬಹುದು. ದಿನದ ಮಟ್ಟಿಗೆ ಹೊಸ ಯೋಜನೆ ಅಥವಾ ಕೆಲಸಗಳನ್ನು ಕೈಗೆತ್ತಿಕೊಳ್ಳುವುದು ಬೇಡ. ದೂರದ ಪ್ರಯಾಣದಿಂದ ಅತಿಯಾದ ಆಯಾಸ. ಆರೋಗ್ಯದ ಬಗ್ಗೆ ಕಾಳಜಿ ಇರಲಿ.

ಮಿಥುನ: ಪ್ರೀತಿಪಾತ್ರರೊಬ್ಬರ ಬಗ್ಗೆ ಉದಾಸೀನ ತೋರುವುದು ಸರಿಯಲ್ಲ. ಸಮಸ್ಯೆಗಳನ್ನು ಧೈರ್ಯದಿಂದ ಎದುರಿಸಿ ಯಶಸ್ಸಿನೆಡೆಗೆ ಸಾಗಲಿದ್ದೀರಿ. ಹಿರಿಯರ ಆರೋಗ್ಯದ ಬಗ್ಗೆ ವೈದ್ಯರ ಸಲಹೆ ಪಡೆಯಿರಿ. ನೆಮ್ಮದಿಯ ದಿನ.

ಕರ್ಕಾಟಕ: ನಿಮ್ಮ ಯೋಜನೆಗಳೆಲ್ಲವೂ ಸರಾಗವಾಗಿ ನಡೆಯಲಿವೆ. ಸಾಮಾಜಿಕ ಕಾರ್ಯವೊಂದರ ನೇತೃತ್ವ ವಹಿಸುವ ಸಾಧ್ಯತೆ. ಹೊಸ ಹೊಸ ಯೋಜನೆಗಳನ್ನು ರೂಪುಗೊಳಿಸಲಿದ್ದೀರಿ. ವಿಶೇಷ ವ್ಯಕ್ತಿಯೊಬ್ಬರ ಸಲಹೆ ಪಡೆಯುವಿರಿ.

ಸಿಂಹ: ಗೃಹಾಲಂಕಾರ ಮತ್ತು ಗೃಹೋಪಯೋಗಿ ಸಾಮಗ್ರಿಗಳನ್ನು ಕೊಂಡುಕೊಳ್ಳುವ ಸಾಧ್ಯತೆ. ಸಂಗಾತಿಯ ಕಡೆಯಿಂದ ಉತ್ತಮ ಸಹಕಾರ. ಉತ್ತಮ ಮಾತುಗಳಿಂದಾಗಿ ಸ್ನೇಹ ಸಂಪಾದನೆ ಮಾಡಲಿದ್ದೀರಿ.

ಕನ್ಯಾ: ಸಾಮರ್ಥ್ಯದ ಬಗ್ಗೆ ವಿಶ್ವಾಸವಿಟ್ಟು ಕಾರ್ಯಮಗ್ನರಾದಲ್ಲಿ ಯಶಸ್ಸು. ಕೆಲಸ ಕಾರ್ಯಗಳ ಬಗ್ಗೆ ಉದಾಸೀನತೆ ಸಲ್ಲದು. ಹೊಸ ಸ್ನೇಹಿತರು ಅಥವಾ ಸಂಗಾತಿಯು ಪ್ರಾಪ್ತವಾಗುವ ಸಾಧ್ಯತೆ ಕಂಡುಬರುವುದು.

ತುಲಾ: ಹೊಸ ಹೊಸ ವಿಷಯಗಳು ನಿಮ್ಮ ಗಮನಕ್ಕೆ ಬರಲಿವೆ. ಅವುಗಳನ್ನು ಯಥಾವತ್ ಕಾರ್ಯರೂಪಕ್ಕೆ ತರುವುದರಿಂದ ಅನುಕೂಲತೆ. ಮನೆಯವರ ಹಾಗೂ ಸ್ನೇಹಿತರ ಸಹಕಾರ ಸಕಾಲದಲ್ಲಿ ದೊರಕಲಿದೆ.

ವೃಶ್ಚಿಕ: ಉದ್ವೇಗದ ಪ್ರಸಂಗವೊಂದು ಎದುರಾದೀತು. ಮನಸ್ಸಿನ ಇಂಗಿತವನ್ನು ಬೇರೆಯವರಲ್ಲಿ ಹಂಚಿಕೊಳ್ಳುವುದರಿಂದ ಮನಸಿನ ಭಾರ ಕಡಿಮೆಯಾಗುವುದು. ಮನೆಯವರ ಸಹಕಾರ ದೊರೆಯಲಿದೆ.

ಧನು: ಉದ್ಯೋಗಸ್ಥ ಮಹಿಳೆಯರಿಗೆ ಪದೋನ್ನತಿ ಅಥವಾ ಸ್ಥಾನ ಬದಲಾವಣೆ ಸಾಧ್ಯತೆ. ವ್ಯಕ್ತಿತ್ವದಲ್ಲಿ ಬದಲಾವಣೆಗಳನ್ನು ಕಾಣಬಹುದು. ಪ್ರಯಾಣದಿಂದ ಅನುಕೂಲ. ಬಂಧುಗಳ ಭೇಟಿಯಾಗುವ ಸಂಭವವಿದೆ.

ಮಕರ: ಆರ್ಥಿಕ ಸಂಪನ್ಮೂಲವೊಂದರ ಅನ್ವೇಷಣೆ ಮಾಡಲಿದ್ದೀರಿ. ಗುಣವಂತರ ಸಹವಾಸ ಮಾಡಲಿದ್ದೀರಿ. ಮಾನಸಿಕ ತೊಳಲಾಟದಿಂದ ಬಳಲಬೇಕಾದೀತು. ದೇವತಾ ದರ್ಶನ ಅರ್ಚನೆಗಳಿಂದ ನೆಮ್ಮದಿ.

ಕುಂಭ: ಕೆಲಸ ಕಾರ್ಯಗಳಲ್ಲಿ ಯಾವುದೇ ತೊಂದರೆ ತಾಪತ್ರಯಗಳು ಎದುರಾಗಲಾರದು. ಮನರಂಜನೆ ಕಾರ್ಯಗಳಲ್ಲಿ ಸಕ್ರಿಯ ಪಾಲುಗೊಳ್ಳುವ ಸಾಧ್ಯತೆ. ಭೂಮಿ ಅಥವಾ ಮನೆಯನ್ನು ಖರೀದಿಸುವ ಚಿಂತನೆ ನಡೆಸಲಿದ್ದೀರಿ.

ಮೀನ: ಆತ್ಮವಿಶ್ವಾಸ ಹೆಚ್ಚಿಸಿಕೊಳ್ಳುವ ಅವಕಾಶವೊಂದು ದೊರೆಯಲಿದ್ದು ಸದುಪಯೋಗ ಪಡಿಸಿಕೊಳ್ಳಿ. ಕಷ್ಟದಲ್ಲಿರುವವರ ಸಹಾಯಕ್ಕೆ ಧಾವಿಸುವ ಸಾಧ್ಯತೆ. ಪ್ರೀತಿಪಾತ್ರರ ಸಂದರ್ಶನದಿಂದಾಗಿ ಮನೋಲ್ಲಾಸ.

ನಿಮ್ಮ ಜನ್ಮದಿನ 19-ಜುಲೈ ಇಂದು ಅತ್ಯಂತ ಶುಭದಾಯಕ. ಬಂಧು ಬಾಂಧವರಿಗೆ ಪೋಷಕರಿಗೆ ಹರ್ಷದಾಯಕ ದಿನ. ಮನೆಯ ಆರ್ಥಿಕ ಪರಿಸ್ಥಿತಿ ಉತ್ತಮಗೊಳ್ಳುವುದರಿಂದ ಚಿಂತೆಯಿಂದ ಮುಕ್ತರಾಗುವಿರಿ. ಕಾರ್ಯಕ್ಷೇತ್ರದಲ್ಲಿನ ನಿಮ್ಮ ಬೇಡಿಕೆಗಳಿಗೆ ಮನ್ನಣೆ ದೊರೆಯಲಿದೆ. ನಿಮ್ಮ ಕೆಲಸ ಕಾರ್ಯಗಳಿಗೆ ಮನೆಮಂದಿಯಿಂದ ಪ್ರೋತ್ಸಾಹ ದೊರಕುವುದು.

ಬೆರಗಿನ ಬೆಳಕು
ಗುರುರಾಜ ಕರಜಗಿ

ಸುಳ್ಳು ಹೇಳಿದ ಬ್ರಾಹ್ಮಣ

ಮುದುಕ ಬ್ರಾಹ್ಮಣ ಪ್ರಯಾಸಪಟ್ಟು ಅರಣ್ಯದಲ್ಲಿ ನಡೆದು ಹೋಗಿ ಎರಡು ದಿನಗಳ ನಂತರ ಅಚ್ಚುತ ಋಷಿ ವಾಸವಾಗಿದ್ದ ಆಶ್ರಮಕ್ಕೆ ಬಂದ. ಆ ಋಷಿ ಬ್ರಾಹ್ಮಣನನ್ನು ಮರ್ಯಾದೆಯಿಂದ ಕರೆದು, ಕುಳ್ಳಿರಿಸಿ ಮಾತನಾಡಿದ. ಬ್ರಾಹ್ಮಣ ಋಷಿಯನ್ನು ಕೇಳಿದ, 'ಋಷಿಗಳೇ, ಆಶ್ರಮದಲ್ಲಿ ತಮ್ಮ ಆರೋಗ್ಯ ಚೆನ್ನಾಗಿದೆಯೇ? ಗೆಡ್ಡೆ ಗೆಣಸುಗಳು, ಹಣ್ಣುಗಳು ಸಾಕಷ್ಟು ದೊರೆಯುತ್ತಿವೆಯೇ? ಪ್ರಾಣಿಗಳ ಕಾಟ ಹೆಚ್ಚಾಗಿದೆಯೇ?' ಋಷಿ ನಕ್ಕುಬಿಟ್ಟು ಹೇಳಿದ, 'ನಾನು ಇಲ್ಲಿ ತಪಸ್ಸಿಗೆ ಬಂದವನು. ಮನಸ್ಸಿಗೆ ಬೇಕೆನ್ನಿಸಿದ್ದನ್ನು ಪಡೆಯಬೇಕಾದರೆ ನಗರದಲ್ಲೇ ಇರಬಹುದಾಗಿತ್ತು. ಇಲ್ಲಿ ದೊರೆತದ್ದನ್ನು ಸಂತೋಷದಿಂದ ಸೇವಿಸುತ್ತೇನೆ. ನಾನು ತುಂಬ ನಿರೋಗಿಯಾಗಿದ್ದೇನೆ. ಇಲ್ಲಿ ಇದ್ದು ಎಷ್ಟೋ ವರ್ಷಗಳು ಕಳೆದುಹೋದರೂ ಒಮ್ಮೆಯೂ ನನಗೆ ಕಾಯಿಲೆಯಾಗಿಲ್ಲ. ಇಲ್ಲ ಫಲಮೂಲಗಳು ಹೇರಳವಾಗಿವೆ. ಕಚ್ಚುವ ಸೊಳ್ಳೆಗಳು, ರಕ್ತ ಹೀರುವ ಹುಳುಗಳು ಅಧಿಕವಾಗಿಲ್ಲ. ಕಾಡಿನಲ್ಲಿ ಬೇಕಾದಷ್ಟು ಉಗ್ರ ಮೃಗಗಳಿವೆ. ಆದರೆ ನನಗೆ ಯಾವ ಪ್ರಾಣಿಯಿಂದಲೂ ತೊಂದರೆಯಾಗಿಲ್ಲ. ಇಂದು ನೀವು ಇಲ್ಲಿಗೆ ಬಂದಿದ್ದೀರಿ. ಸ್ನಾನ ಮಾಡಿ ವಿರಮಿಸಿಕೊಂಡು ಇಲ್ಲಿರುವ ತಿಂದುಕ, ಪಿಯಾಲೆ, ಸಿಹಿ ಕಾಸುಮಾರಿ ಹಣ್ಣುಗಳನ್ನು ಹಾಗೂ ಮತ್ತೆ ದೊರೆಯುವ ಚಿಕ್ಕ ದೊಡ್ಡ ಹಣ್ಣುಗಳನ್ನು ತಿನ್ನಿರಿ. ಈ ಮಡಕೆಯಲ್ಲಿ ಗಿರಿ-ಗಹ್ವರಗಳಿಂದ ತಂದ ತಂಪಾದ ನೀರಿದೆ. ಅದನ್ನು ಬಾಯಾರಿಕೆಯಾದಾಗ ಕುಡಿಯಿರಿ. ಇದೆಲ್ಲ ಸರಿಯಾಯಿತು. ಆದರೆ ನೀವು ಇಲ್ಲಿಗೆ ಬಂದ ಕಾರಣ ತಿಳಿಯಲಿಲ್ಲ'.

'ಋಷಿಗಳೇ ತಾವು ನೀಡಿದ್ದನ್ನೆಲ್ಲ ಸ್ವೀಕರಿಸುತ್ತೇನೆ. ನಾನು ಬಂದ ಉದ್ದೇಶ ವೆಸ್ಸಂತರ ಬೋಧಿಸತ್ವನನ್ನು ನೋಡುವುದು. ಆತನೊಬ್ಬ ಮಹಾತ್ಮ, ಸಿವಿ ದೇಶದ ನಾಗರಿಕರು ಅವನ ಮಹಿಮೆಯನ್ನು ತಿಳಿಯದೇ ದೇಶದಿಂದ ಹೊರಗೆ ಹಾಕಿದ್ದಾರೆ. ಆ ಸಾಧಕನನ್ನು, ಅವನ ಪರಿವಾರವನ್ನು ನೋಡಲು ನಾನು ಕಾತುರನಾಗಿದ್ದೇನೆ. ದಯವಿಟ್ಟು ಅವನ ವಿಳಾಸವನ್ನು, ಅವನ ಆಶ್ರಮವನ್ನು ತಲುಪುವ ದಾರಿಯನ್ನು ತಿಳಿಸಿ' ಎಂದ ಬ್ರಾಹ್ಮಣ. ಒಂದು ಕ್ಷಣ ಕಣ್ಣುಮುಚ್ಚಿ ಚಿಂತಿಸಿ, ನಂತರ ಈ ಬ್ರಾಹ್ಮಣನನ್ನು ದಿಟ್ಟಿಸಿ ನೋಡಿ ಋಷಿ ಹೇಳಿದ, 'ಬ್ರಾಹ್ಮಣ, ನೀನು ವೆಸ್ಸಂತರ ಬೋಧಿಸತ್ವನನ್ನು ನೋಡಲು ಬಂದದ್ದು ಶುಭ-ಸಂಕಲ್ಪವೆಂದು ನನಗೆ ತೋರುವುದಿಲ್ಲ. ನಿನ್ನ ಆಸೆ ಮುಖದಲ್ಲಿ ಕೆಡೆದಿದೆ. ಅವನಿಂದ ಏನನ್ನೋ ಅಪೇಕ್ಷೆ ಮಾಡಿ ನೀನು ಬಂದಿದ್ದೀಯಾ. ಈಗ ಅವನು ಅಪ್ಪಟ ತಪಸ್ವಿ. ಅವನ ಹತ್ತಿರ ಕೊಡಲು ಏನೂ ಇಲ್ಲ. ಆದರೆ ನೀನು ಆಸೆಬುರುಕ. ವೆಸ್ಸಂತರನ ಪತಿವ್ರತಾ ಸ್ತ್ರೀಯನ್ನೇ ಅಪೇಕ್ಷಿಸುತ್ತೀಯೋ ಏನೋ? ಅಥವಾ ಅವನ ಮಗಳು ಕೃಷ್ಣಾಜಿನ ಮತ್ತು ಮಗ ಜಾಲಿಯನ್ನು ದಾಸರಾಗಿ ಪಡೆಯಲು ಬಂದಿದ್ದೀಯೋ?'

ತನ್ನ ಮನದ ಇಚ್ಛೆ ಈ ಸನ್ಯಾಸಿಗೆ ಹೇಗೆ ತಿಳಿಯಿತು ಎಂದು ಬ್ರಾಹ್ಮಣ ಆಶ್ಚರ್ಯಪಟ್ಟ. ತಕ್ಷಣವೇ ನುಡಿದ, 'ಋಷಿಗಳೇ ನನ್ನ ಮೇಲೆ ಸಂಶಯಪಡಬೇಡಿ. ನಾನು ವೆಸ್ಸಂತರನಿಂದ ಏನನ್ನೂ ಯಾಚಿಸಲು ಬಂದಿಲ್ಲ. ಅವನ ದರ್ಶನ ಮಂಗಳಕರ, ಅವನ ಚಿಂತನೆಗಳು ಸುಖಕರ. ಅವನನ್ನು ನೋಡಿ ಗೌರವ ತೋರಿಸಿ ಹೋಗಲು ಬಂದಿದ್ದೇನೆ'. ಋಷಿಗೆ ಸಂಶಯವಿದ್ದರೂ ಬ್ರಾಹ್ಮಣನ ಮಾತನ್ನು ನಂಬಿ, ಅವನಿಗೆ ಎರಡು ದಿನ ಆದರ-ಸತ್ಕಾರ ಮಾಡಿ ಮುಂದಿನ ಪ್ರಯಾಣದ ದಾರಿಯನ್ನು ತಿಳಿಸಿದ. ❖

ಪದಬಂಧ 4662 – ವಿದ್ಯಾ ವಿನಯ್

ಎಡದಿಂದ ಬಲಕ್ಕೆ
1.ಆ ಟೋಪಿ ಧರಿಸಿದಾತನದು ಗರ್ವದ ಪ್ರದರ್ಶನ! (3)
3.ತಪ್ಪು ಒಪ್ಪುಗಳ ವಿಮರ್ಶೆ (3)
5.ಲಾವಣಿ ಹೇಳುತ್ತಾ ಧರಿಸಿರುವ ಮೇಲು ಹೊದಿಕೆ (3)
6.ಇದು ಕನ್ನಡಿಗನ ಅರ್ಜೆಂಟು! (4)
8.ತಡವಾಗಿ ಬಂದಾಗಲೇ ಈ ತಬ್ಬಿಬ್ಬು! (4)
10.ಕಾಣದಂತೆ ಕಣ್ಮರೆಯಾಗುವುದು (4)
12.ಎರಡು ಮೂಲ ಬಣ್ಣಗಳ ಮಿಶ್ರಣದಿಂದಾದ ವರ್ಣ (4)
13.ಕ್ಷಾತ್ರ ಧರ್ಮಕ್ಕೆ ಸೇರಿರುವವನು (3)
16.ಅತ್ಯಲ್ಪ ಕಾಲದಲ್ಲಿ ನಾಶವಾಗುವಂಥದ್ದು (3)
17.ಲೀಲಾಜಾಲವಾಗಿ ನಡೆಸಿದ ಏಲಂ (3)

ಮೇಲಿಂದ ಕೆಳಕ್ಕೆ
1.ವ್ಯಾಜ್ಯ ನಡೆದಿದ್ದು ಈ ತುಪ್ಪಕಾಗಿ! (2)
2.ವಿಳಾಸ ಗುರುತಿಸಿದ ಶೋಧಕ (4)
3.ಭಾರೀ ನೈಪುಣ್ಯವುಳ್ಳವ (4)
4.ಗ್ರಹ ತಾರೆಗಳು ತಿರುಗುವ ಪಥ ಉಲ್ಟಾ ಕಾಣುತ್ತಿದೆ (2)
7.ಚೈತ್ರ ವೈಶಾಖ ಮಾಸಗಳಲ್ಲಿ ಬರುವ ಋತು (3)
9.ದುಡ್ಡು ಕಾಸು ಇಲ್ಲದ ನಿರ್ಗತಿಕ (3)
11.ಬೆಂಬಿಡದೆ ಕಾಡುವವನು (4)
12.ಗೆಲುವನ್ನು ಗಳಿಸಿದವನೀತ (4)
14.ಬಿಡುಗಡೆ ವಾ ವಿಮೋಚನೆ ಎಂದರೂ ಸರಿ (2)
15.ಕಾದಾಡುವುದರಲ್ಲಿರುವ ಬಿಸಿ (2)



4661ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ: 1.ಪಾರ್ಥಿವ 3.ಸ್ವಾನುಭವ 5.ಜರ್ಜರಿತ 7.ಸಮಿತಿ 8.ನಿರಪರಾಧಿ 10.ಆಕಾಂಕ್ಷೆ 11.ಸಭಾಗೃಹ 14.ಮಲೆನಾಡು 15.ಕಸುವು
ಮೇಲಿಂದ ಕೆಳಕ್ಕೆ: 1.ಪಾರಜ 2.ವಲ್ಲರಿ 4.ವದಂತಿ 6.ತವರ 7.ಸಮಾಧಿ 8.ನಿರೀಕ್ಷೆ 9.ರಾಕ್ಷಸ 10.ಆಶ್ರಮ 12.ಭಾವುಕ 13.ಹಗೇವು

ಸುಡೊಕು 5048

9		3		6				2
	4						5	
	1			5		6		4
	8			1		4		
3		4	2		7		8	
	9		4		3			6
6		5					2	
				7		3		1
1		8	9		6		4	

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

5047 ಸುಡೊಕು

7	8	4	2	5	3	9	6	1
1	9	2	6	8	4	5	7	3
6	5	3	1	7	9	8	2	4
5	3	8	9	2	7	4	1	6
9	1	6	4	3	8	7	5	2
4	2	7	5	1	6	3	8	9
2	4	5	7	9	1	6	3	8
8	6	1	3	4	5	2	9	7
3	7	9	8	6	2	1	4	5

ಆರ್ಥಿಕ ಚೇತರಿಕೆಯ ಆಶಾವಾದ ಹೆಚ್ಚಾದ ಪರಿಣಾಮ

ಚಿನ್ನದ ಇಟಿಎಫ್: ತಗ್ಗಿದ ಹೂಡಿಕೆ

ನವದೆಹಲಿ (ಪಿಟಿಐ): ಚಿನ್ನದ ವಿನಿಮಯ ವಹಿವಾಟು ನಿಧಿಗಳಲ್ಲಿ (ಇಟಿಎಫ್) 2020ರ ಜೂನ್ ತ್ರೈಮಾಸಿಕಕ್ಕೆ ಹೋಲಿಸಿದರೆ 2021ರ ಜೂನ್ ತ್ರೈಮಾಸಿಕದಲ್ಲಿ ಬಂಡವಾಳ ಒಳಹರಿವು ಕಡಿಮೆ ಆಗಿದೆ.

ಹೂಡಿಕೆದಾರರು 2021ರ ಜೂನ್ ತ್ರೈಮಾಸಿಕದಲ್ಲಿ ₹ 1,328 ಕೋಟಿ ಬಂಡವಾಳ ತೊಡಗಿಸಿದ್ದಾರೆ. 2020ರ ಜೂನ್ ತ್ರೈಮಾಸಿಕದಲ್ಲಿ ₹ 2,040 ಕೋಟಿ ಹೂಡಿಕೆ ಆಗಿತ್ತು. ಭಾರತೀಯ ಮ್ಯೂಚುವಲ್ ಫಂಡ್ ಕಂಪನಿಗಳ ಒಕ್ಕೂಟ (ಎಎಂಎಫ್ಐ) ಈ ಮಾಹಿತಿ ನೀಡಿದೆ.

ಕೋವಿಡ್–19 ಸಾಂಕ್ರಾಮಿಕದಿಂದಾಗಿ ಆರ್ಥಿಕ ಬೆಳವಣಿಗೆ ಕುರಿತು ಅನಿಶ್ಚಿತತೆ ಮೂಡಿತ್ತು. ಇದರಿಂದಾಗಿ ಕಳೆದ ವರ್ಷದ ಜೂನ್ ತ್ರೈಮಾಸಿಕದಲ್ಲಿ ಚಿನ್ನದ ಇಟಿಎಫ್‌ಗಳಲ್ಲಿ ಒಳಹರಿವು ಹೆಚ್ಚಾಗಿತ್ತು. ಈ ವರ್ಷ ಆರ್ಥಿಕ ಚೇತರಿಕೆಯ ಆಶಾವಾದ ಹೆಚ್ಚು ಇರುವ ಕಾರಣ, ಒಳಹರಿವು ಸ್ವಲ್ಪ ಕಡಿಮೆ ಆಗಿದೆ ಎಂದು ಕ್ವಾಂಟಂ ಮ್ಯೂಚುವಲ್ ಫಂಡ್‌ನ ಹಿರಿಯ ನಿರ್ವಾಹಕ ಚಿರಾಗ್ ಮೆಹ್ತಾ ಹೇಳಿದ್ದಾರೆ.

ಗ್ರೀನ್ ಪೋರ್ಟ್‌ಫೋಲಿಯೊ ಕಂಪನಿಯ ಸಹ ಸ್ಥಾಪಕ ದಿವಂ ಶರ್ಮಾ ಸಹ ಇದೇ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ. ಕೋವಿಡ್ ಮೊದಲ ಅಲೆಯು ಸೃಷ್ಟಿಸಿದ್ದ ಆರ್ಥಿಕ ಅನಿಶ್ಚಿತ ಪರಿಸ್ಥಿತಿಯ ಕಾರಣದಿಂದಾಗಿ 2020-21ರ ಮೊದಲಾರ್ಧದಲ್ಲಿ ಚಿನ್ನದ ಇಟಿಎಫ್‌ನಲ್ಲಿ ಗರಿಷ್ಠ ಹೂಡಿಕೆ ಆಗಿತ್ತು. ಹೂಡಿಕೆದಾರರು ಚಿನ್ನದ ಮೇಲೆ ಹೆಚ್ಚು ಹೂಡಿಕೆ ಮಾಡಲು ಬಯಸಿದ್ದರು. ಈಗ, ಅವರು ತಮ್ಮ ಹೂಡಿಕೆ ಹಣವನ್ನು ಬೇರೆ ಬೇರೆ ಕಡೆಗಳಲ್ಲಿ ವಿನಿಯೋಗ ಮಾಡುತ್ತಿದ್ದಾರೆ ಎಂದು ಅವರು ತಿಳಿಸಿದ್ದಾರೆ.

ಹೂಡಿಕೆ ತಗ್ಗಿದ್ದರೂ, ಚಿನ್ನದ ಇಟಿಎಫ್‌ಗಳಲ್ಲಿನ ನಿರ್ವಹಣಾ ಸಂಪತ್ತು ಮೌಲ್ಯವು ಜೂನ್ ಅಂತ್ಯಕ್ಕೆ ₹ 16,225 ಕೋಟಿಗೆ ತಲುಪಿದೆ. 2020ರ ಜೂನ್ ಅಂತ್ಯದಲ್ಲಿ ನಿರ್ವಹಣಾ ಸಂಪತ್ತು ಮೌಲ್ಯ ₹ 10,857 ಕೋಟಿಗಳಷ್ಟಿತ್ತು.

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು

100 ಮೊಟ್ಟೆಗೆ	₹520
12 ಮೊಟ್ಟೆಗೆ	₹70

ಮೈಸೂರು

100 ಮೊಟ್ಟೆಗೆ	₹520

ರಾಮನಗರ ರೇಷ್ಮೆಗೂಡು ಧಾರಣೆ

ಮಿಶ್ರತಳಿ (ಸಿ.ಬಿ) ₹244-384

ದ್ವಿತಳಿ (ಬಿ.ವಿ) ₹265-479

ವಾಹನಗಳ ರಫ್ತು ಹೆಚ್ಚಳ

ನವದೆಹಲಿ (ಪಿಟಿಐ): ಪ್ರಸಕ್ತ ಹಣಕಾಸು ವರ್ಷದ ಏಪ್ರಿಲ್–ಜೂನ್ ತ್ರೈಮಾಸಿಕದಲ್ಲಿ ಭಾರತದಿಂದ ರಫ್ತು ಆಗಿರುವ ವಾಹನಗಳ ಸಂಖ್ಯೆಯಲ್ಲಿ ಏರಿಕೆ ಕಂಡುಬಂದಿದೆ.

ಭಾರತೀಯ ವಾಹನ ತಯಾರಕರ ಒಕ್ಕೂಟದ (ಎಸ್‌ಐಎಎಂ) ಪ್ರಕಾರ, 2020-21ನೇ ಹಣಕಾಸು ವರ್ಷದ ಮೊದಲ ತ್ರೈಮಾಸಿಕದಲ್ಲಿ 4.36 ಲಕ್ಷ ವಾಹನಗಳು ರಫ್ತಾಗಿದ್ದವು. ಪ್ರಸಕ್ತ ಹಣಕಾಸು ವರ್ಷದ ಮೊದಲ ತ್ರೈಮಾಸಿಕದಲ್ಲಿ 14.19 ಲಕ್ಷ ವಾಹನಗಳು ರಫ್ತಾಗಿವೆ.

ದ್ವಿಚಕ್ರ, ತ್ರಿಚಕ್ರ, ಪ್ರಯಾಣಿಕ ವಾಹನ ಹಾಗೂ ವಾಣಿಜ್ಯ ವಾಹನಗಳ ರಫ್ತು ಪ್ರಮಾಣವು ಹಿಂದಿನ ಮೂರು ವರ್ಷಗಳಿಗಿಂತ ಉತ್ತಮವಾಗಿದೆ. ಹೀಗಿದ್ದರೂ, 2018-19ನೇ ಹಣಕಾಸು ವರ್ಷದ ಮೊದಲ ತ್ರೈಮಾಸಿಕಕ್ಕಿಂತ ಕಡಿಮೆ ಇದೆ ಎಂದು ಒಕ್ಕೂಟದ ಪ್ರಧಾನ ನಿರ್ದೇಶಕ ರಾಜೇಶ್ ಮೆನನ್ ಹೇಳಿದ್ದಾರೆ. ಪ್ರಯಾಣಿಕ ವಾಹನಗಳ ರಫ್ತು 43,619ರಿಂದ 1.27 ಲಕ್ಷಕ್ಕೆ ಏರಿಕೆ ಆಗಿದೆ. ಪ್ರಯಾಣಿಕ ಕಾರು ರಫ್ತು 47,151ರಿಂದ 79,376ಕ್ಕೆ ಏರಿಕೆ ಕಂಡಿದೆ.

ಹೂಡಿಕೆ ಯಶಸ್ಸಿಗೆ 'ಪಂಚ' ತಂತ್ರಗಳು

ಬಂಡವಾಳ ಮಾರುಕಟ್ಟೆ

ಅವಿನಾಶ್ ಕೆ.ಟಿ.

ಪಂಚತಂತ್ರದ ಕಥೆಗಳ ಬಗ್ಗೆ ನಿಮಗೆಲ್ಲಾ ಗೊತ್ತೇ ಇದೆ. ಆದರೆ ಹೂಡಿಕೆಯಲ್ಲಿ ಯಶಸ್ಸು ಕಾಣಲು ಸಹಾಯ ಮಾಡುವ ಪಂಚ ತಂತ್ರಗಳ ಬಗ್ಗೆ ನಿಮಗೆ ಗೊತ್ತೇ? ಬನ್ನಿ, ಜಾಗೃತ ಹೂಡಿಕೆದಾರರಾಗಲು ನೆರವಾಗುವ ಆ ಪಂಚ ತಂತ್ರಗಳನ್ನು ಇವತ್ತು ಕಲಿಯೋಣ.

ವ್ಯಾಲ್ಯೂ ಇನ್ವೆಸ್ಟಿಂಗ್ (ಆಂತರಿಕ ಮೌಲ್ಯ ಅಂದಾಜು ಮಾಡಿ ಹೂಡಿಕೆ): ಷೇರುಪೇಟೆಯಲ್ಲಿ ಕೆಲವು ಉತ್ತಮ ಕಂಪನಿಗಳ ಷೇರುಗಳು ಎಲ್ಲಾ ಸಮಯದಲ್ಲೂ ಕಾಯ್ದುಕೊಂಡು ಇರುತ್ತವೆ. ಅವುಗಳ ಆಂತರಿಕ ಮೌಲ್ಯ ಹೆಚ್ಚಿಗೆ ಇದ್ದರೂ ಷೇರು ಮಾರುಕಟ್ಟೆಯಲ್ಲಿ ಅವುಗಳಿಗೆ ಸಿಗಬೇಕಾದ ಮೌಲ್ಯ ಸಿಕ್ಕಿರುವುದಿಲ್ಲ. ವಾಸ್ತವದಲ್ಲಿ ಇರಬೇಕಾದ ಮೌಲ್ಯಕ್ಕಿಂತ ಕಡಿಮೆ ಮೌಲ್ಯವನ್ನು ಆ ಷೇರುಗಳು ಹೊಂದಿರುತ್ತವೆ. ಅಂತಹ ಷೇರುಗಳನ್ನು ಆಯ್ದು ಹೂಡಿಕೆ ಮಾಡುವುದು ವ್ಯಾಲ್ಯೂ ಇನ್ವೆಸ್ಟಿಂಗ್.

ವ್ಯಾಲ್ಯೂ ಇನ್ವೆಸ್ಟಿಂಗ್‌ಗಾಗಿ ಉತ್ತಮ ಷೇರುಗಳನ್ನು ಹುಡುಕುವುದು ಸುಲಭದ ಮಾತಲ್ಲ. ಕಂಪನಿಯೊಂದರ ಆರ್ಥಿಕ ಸ್ಥಿತಿಗತಿ ಮತ್ತು ಭವಿಷ್ಯದಲ್ಲಿ ಆ ಕಂಪನಿಯ ಸ್ಥಿತಿ ಏನಾಗಬಹುದು ಎಂಬುದನ್ನು ಲೆಕ್ಕಹಾಕಿ (Fundamental Analysis), ಅದನ್ನು ಆಧರಿಸಿ ಹೂಡಿಕೆ ನಿರ್ಧಾರ ಕೈಗೊಳ್ಳಬೇಕಾಗುತ್ತದೆ. ಈ ಲೆಕ್ಕಾಚಾರದಲ್ಲಿ ಹೂಡಿಕೆ ಮಾಡುವವರು 'ವ್ಯಾಲ್ಯೂ ಆಧಾರಿತ' ಷೇರುಗಳಲ್ಲಿ ಮುಖ್ಯವಾಗಿ ಪಾಲು ಹೂಡಿಕೆ ಮಾಡಬೇಕು. ಎಫ್.ಡಿ., ಬಾಂಡ್, ಡಿಬೆಂಚರ್‌ಗಳಲ್ಲಿ ಶೇ 20ರಷ್ಟು ಹೂಡಿಕೆ ಪರಿಗಣಿಸಬಹುದು.

ಗ್ರೋತ್ ಇನ್ವೆಸ್ಟಿಂಗ್ (ಬೆಳವಣಿಗೆ ಕೇಂದ್ರಿತವಾಗಿ ಹೂಡಿಕೆ): ಆದಾಯ ಮತ್ತು ಲಾಭಾಂಶ ಗಣನೀಯವಾಗಿ ಹೆಚ್ಚಳವಾಗುತ್ತಿರುವ ಕಂಪನಿಗಳಲ್ಲಿ ಹೂಡಿಕೆ ಮಾಡುವುದು ಗ್ರೋತ್ ಇನ್ವೆಸ್ಟಿಂಗ್. ಸರಳವಾಗಿ ಇದನ್ನು 'ಬೆಳವಣಿಗೆ ಕೇಂದ್ರಿತವಾಗಿ ಹೂಡಿಕೆ' ಎನ್ನಬಹುದು. ಗ್ರೋತ್ ಇನ್ವೆಸ್ಟಿಂಗ್‌ನಲ್ಲಿ ನೀವು ಷೇರುಗಳನ್ನು ಆಯ್ಕೆ ಮಾಡುವಾಗ ಒಂದೇ ವಲಯದ ಹಲವು ಕಂಪನಿಗಳ ಜತೆ ಹೋಲಿಕೆ ಮಾಡಿ ನೋಡಬಹುದು ಅಥವಾ ನಿರ್ದಿಷ್ಟ ವಲಯದ ಬೆಳವಣಿಗೆಯ ಸರಾಸರಿ ಜತೆ ಅಂದಾಜು ಹೋಲಿಕೆ ಮಾಡಿ ಹೂಡಿಕೆ ತೀರ್ಮಾನ ಕೈಗೊಳ್ಳಬಹುದು. ವಾಸ್ತವದಲ್ಲಿ ಮಾರುಕಟ್ಟೆ ಮೌಲ್ಯೀಕೃತ ನಿರ್ದಿಷ್ಟ ಕಂಪನಿಯೊಂದರ ಷೇರಿನ ಬೆಲೆ ಜಾಸ್ತಿ ಇದ್ದು ಅದು ಉತ್ತಮ ಪ್ರಗತಿ ಸಾಧಿಸುತ್ತಿದ್ದರೆ ಆ ನಿರ್ದಿಷ್ಟ ಷೇರಿನಲ್ಲಿ ಹೂಡಿಕೆ ಮಾಡುವುದನ್ನು ನೀವು ಪರಿಗಣಿಸಬಹುದು. ಇದೇ ಗ್ರೋತ್ ಇನ್ವೆಸ್ಟಿಂಗ್ ಲೆಕ್ಕಾಚಾರ.

ಈ ಲೆಕ್ಕಾಚಾರದಲ್ಲಿ ಹೂಡಿಕೆ ಮಾಡುವವರು ಮುಖ್ಯ ಪಾಲು ಗ್ರೋತ್ ಆಧಾರಿತ ಷೇರುಗಳಲ್ಲಿ ಹೂಡಿ ಉಳಿದ ಶೇ 25ರಷ್ಟು ಎಫ್.ಡಿ., ಬಾಂಡ್, ಡಿಬೆಂಚರ್‌ಗಳಲ್ಲಿ ತೊಡಗಿಸುವುದನ್ನು ಪರಿಗಣಿಸಬಹುದು.

ಆದಾಯಕ್ಕಾಗಿ ಹೂಡಿಕೆ: ಕೆಲವರು ನಿರ್ದಿಷ್ಟ ಮೊತ್ತವನ್ನು ಆದಾಯದ ರೂಪದಲ್ಲಿ ಪಡೆಯಲು ಹೂಡಿಕೆ ಮಾಡುತ್ತಾರೆ. ಅಂತಹವರು ಉತ್ತಮ ಲಾಭಾಂಶ ಕೊಡುವ ಷೇರುಗಳು, ಬಾಂಡ್‌ಗಳು, ಡಿಬೆಂಚರ್‌ಗಳು, ಎಫ್.ಡಿ.ಗಳು ಮತ್ತು ರಿಯಲ್ ಎಸ್ಟೇಟ್ ಇನ್ವೆಸ್ಟ್‌ಮೆಂಟ್ ಟ್ರಸ್ಟ್‌ಗಳಲ್ಲಿ ಹೂಡಿಕೆ ಮಾಡಬಹುದು. ನಿವೃತ್ತ ಜೀವನ ನಡೆಸುತ್ತಿರುವವರು ಸಾಮಾನ್ಯವಾಗಿ ಈ ರೀತಿಯ ಹೂಡಿಕೆಗಳನ್ನು ಪರಿಗಣಿಸುತ್ತಾರೆ.

ಸಾಂಪ್ರದಾಯಿಕ ಹೂಡಿಕೆ: 'ನಾನು ಮಾಡುವ ₹ 1,000 ಹೂಡಿಕೆ ₹ 2000 ಆಗದಿದ್ದರೂ ಚಿಂತೆಯಿಲ್ಲ; ಅದು ₹ 999 ಆಗಬಾರದು' ಎನ್ನುವವರು ಸಾಂಪ್ರದಾಯಿಕ ಹೂಡಿಕೆಗಳನ್ನು ಪರಿಗಣಿಸುತ್ತಾರೆ. ಕಡಿಮೆ ಮತ್ತು ಮಧ್ಯಮ ಪ್ರಮಾಣದ ಹೂಡಿಕೆ ರಿಸ್ಕ್ ತೆಗೆದುಕೊಳ್ಳಲು ಬಯಸುವವರು ಈ ಹೂಡಿಕೆಗಳಲ್ಲಿ ತೊಡಗುತ್ತಾರೆ. ಇಂತಹವರು ಸ್ಮಾಲ್ ಮತ್ತು ಮಿಡ್ ಕ್ಯಾಪ್ ಹೂಡಿಕೆಗಳನ್ನು ಪರಿಗಣಿಸಬಹುದು. ಒಂದಿಷ್ಟು ಹೂಡಿಕೆಯನ್ನು ಲಾರ್ಜ್ ಕ್ಯಾಪ್ ಕಂಪನಿಗಳಲ್ಲಿ ಮಾಡಬಹುದು. ಬಹುಪಾಲು ಹಣವನ್ನು ಬಾಂಡ್, ಡಿಬೆಂಚರ್ ಮತ್ತು ಇತರ ನಿರ್ದಿಷ್ಟ ಆದಾಯ ತಂದುಕೊಡುವ ಹೂಡಿಕೆಗಳಲ್ಲಿ ತೊಡಗಿಸುವುದು ಸೂಕ್ತ.

ಅಗ್ರೆಸಿವ್ ಇನ್ವೆಸ್ಟಿಂಗ್ (ಹೆಚ್ಚು ರಿಸ್ಕ್ ತೆಗೆದುಕೊಂಡು ಹೂಡಿಕೆ): ಸಾಂಪ್ರದಾಯಿಕ ಹೂಡಿಕೆಗೆ ತದ್ವಿರುದ್ಧ ಹೂಡಿಕೆ ಇದು. ಇಂತಹ ಹೂಡಿಕೆಗಳಲ್ಲಿ ರಿಸ್ಕ್ ಹೆಚ್ಚಿಗೆ ಇರುತ್ತದೆ. ಈ ಬಗೆಯಲ್ಲಿ ಹೂಡಿಕೆ ಮಾಡುವವರು ಸ್ಮಾಲ್ ಕ್ಯಾಪ್, ಮಿಡ್ ಕ್ಯಾಪ್ ಮತ್ತು ಕಮಾಡಿಟಿಗಳಲ್ಲಿ ಹೆಚ್ಚು ತೊಡಗಿಸುತ್ತಾರೆ. ಅಗ್ರೆಸಿವ್ ಇನ್ವೆಸ್ಟಿಂಗ್ ಮಾಡುವವರು ಶೇ 70ರಷ್ಟರಿಂದ ಶೇ 80ರಷ್ಟು ಹಣವನ್ನು ಮಿಡ್ ಕ್ಯಾಪ್ ಹಾಗೂ ಸ್ಮಾಲ್ ಕ್ಯಾಪ್ ಕಂಪನಿಗಳ ಷೇರುಗಳಲ್ಲಿ ಹೂಡಿಕೆ ಮಾಡಬಹುದು. ಉಳಿದ ಹಣವನ್ನು ಎಫ್.ಡಿ., ಬಾಂಡ್, ಡಿಬೆಂಚರ್‌ಗಳಲ್ಲಿ ತೊಡಗಿಸಬಹುದು.

(ಲೇಖಕ: ಇಂಡಿಯನ್ ಮನಿ ಡಾಟ್ ಕಾಂನ ಹಣಕಾಸು ಸಲಹಾ ವಿಭಾಗದ ಮುಖ್ಯಸ್ಥ)

ಗೂಳಿ ಹಿಡಿತದಲ್ಲಿ ಷೇರುಪೇಟೆ

ಸತತ ಎರಡು ವಾರಗಳ ಕುಸಿತ ಕಂಡಿದ್ದ ಸೂಚ್ಯಂಕಗಳು ಜುಲೈ 16ಕ್ಕೆ ಕೊನೆಗೊಂಡ ವಾರದಲ್ಲಿ ಪುಟಿದೆದ್ದಿವೆ. ಷೇರುಪೇಟೆಯಲ್ಲಿ ಗೂಳಿ ಓಟ ಚುರುಕಾಗಿದೆ. 53,140 ಅಂಶಗಳಲ್ಲಿ ವಹಿವಾಟು ಪೂರ್ಣಗೊಳಿಸಿರುವ ಸೆನ್ಸೆಕ್ಸ್ ಮತ್ತು 15,923 ಅಂಶಗಳಲ್ಲಿ ವಹಿವಾಟು ಮುಗಿಸಿರುವ ನಿಫ್ಟಿ ವಾರದ ಅವಧಿಯಲ್ಲಿ ಶೇ 1.5ರಷ್ಟು ಗಳಿಕೆ ಕಂಡಿವೆ.

ನಿಫ್ಟಿ ಮಿಡ್ ಕ್ಯಾಪ್ ಸೂಚ್ಯಂಕ ಶೇ 1.7ರಷ್ಟು ಹೆಚ್ಚಳ ಕಂಡಿದ್ದರೆ ಸ್ಮಾಲ್ ಕ್ಯಾಪ್ ಸೂಚ್ಯಂಕ ಶೇ 4.2ರಷ್ಟು ಜಿಗಿದಿದೆ. ಮಾಹಿತಿ ತಂತ್ರಜ್ಞಾನ ಕಂಪನಿಗಳ ತ್ರೈಮಾಸಿಕ ಫಲಿತಾಂಶದಲ್ಲಿ ಉತ್ತಮ ಸಾಧನೆ, ಕೋವಿಡ್ ಪ್ರಕರಣಗಳು ಹೆಚ್ಚಾದರೂ ಜಾಗತಿಕವಾಗಿ ಗಂಭೀರ ಸಮಸ್ಯೆಗಳು ಕಂಡುಬರದಿರುವುದು, ಸರಣಿ ಐಪಿಒಗಳು (ಆರಂಭಿಕ ಸಾರ್ವಜನಿಕ ಹೂಡಿಕೆ) ನಡೆಯುತ್ತಿರುವುದು ಸೇರಿ ಹಲವು ಬೆಳವಣಿಗೆಗಳು ಸೂಚ್ಯಂಕಗಳ ಜಿಗಿತಕ್ಕೆ ಕಾರಣವಾಗಿವೆ.

ವಲಯವಾರು ಪ್ರಗತಿಯಲ್ಲಿ ನಿಫ್ಟಿ ರಿಯಲ್ ಎಸ್ಟೇಟ್ ವಲಯ ಶೇ 8ರಷ್ಟು, ಮಾಹಿತಿ ತಂತ್ರಜ್ಞಾನ ಮತ್ತು ಮೂಲ ಸೌಕರ್ಯ ತಲಾ ಶೇ 2ರಷ್ಟು, ನಿಫ್ಟಿ ಬ್ಯಾಂಕ್ ವಲಯ ಶೇ 2ರಷ್ಟು, ಫಾರ್ಮಾ ವಲಯ ಶೇ 2ರಷ್ಟು ಏರಿಕೆ ಕಂಡಿವೆ.

ಏರಿಕೆ-ಇಳಿಕೆ: ನಿಫ್ಟಿಯಲ್ಲಿ ವಿಪ್ರೊ ಶೇ 9.9ರಷ್ಟು, ಎಲ್‌ಆ್ಯಂಡ್‌ಟಿ ಶೇ 7.9ರಷ್ಟು, ಅಲ್ಟ್ರಾ ಟೆಕ್ ಸಿಮೆಂಟ್ ಶೇ 6.1ರಷ್ಟು, ಟೆಕ್ ಮಹೀಂದ್ರ ಶೇ 4.9ರಷ್ಟು, ಗ್ರಾಸಿಮ್ ಶೇ 4.6ರಷ್ಟು, ಹಿಂಡಾಲ್ಕೋ ಶೇ 3.9ರಷ್ಟು, ಡಿವೀಸ್ ಲ್ಯಾಬ್ಸ್ ಶೇ 3.4ರಷ್ಟು, ಐಸಿಐಸಿಐ ಬ್ಯಾಂಕ್ ಶೇ 3.4ರಷ್ಟು ಗಳಿಕೆ ಕಂಡಿವೆ. ಅದಾನಿ ಪೋರ್ಟ್ಸ್ ಶೇ 5.6ರಷ್ಟು, ಐಷರ್ ಮೋಟರ್ಸ್ ಶೇ 3.5ರಷ್ಟು, ಬಿಪಿಸಿಎಲ್ ಶೇ 1.9ರಷ್ಟು, ಮಾರುತಿ ಸುಜುಕಿ ಶೇ 1.6ರಷ್ಟು, ಬಜಾಜ್ ಆಟೊ ಶೇ 1.6ರಷ್ಟು, ಟೈಟನ್ ಶೇ 1.5ರಷ್ಟು, ಹಿಂದೂಸ್ಥಾನ್ ಯುನಿಲಿವರ್ ಶೇ 1.4ರಷ್ಟು ಮತ್ತು ಇಂಡಿಯನ್ ಆಯಿಲ್ ಶೇ 1.1ರಷ್ಟು ಕುಸಿದಿವೆ.

ತ್ರೈಮಾಸಿಕ ಫಲಿತಾಂಶಗಳು: ಈ ವಾರ ಎಚ್‌ಸಿಎಲ್ ಟೆಕ್, ಬಜಾಜ್ ಫಿನ್‌ಸರ್ವ್, ಐಸಿಐಸಿಐ ಬ್ಯಾಂಕ್, ಸಿಯೆಟ್ ಲಿ., ಹ್ಯಾವೆಲ್ಸ್, ಹ್ಯಾತ್ ವೇ, ಬಯೋಕಾನ್, ಫೆಡರಲ್ ಬ್ಯಾಂಕ್, ಪವರ್ ಇಂಡಿಯಾ, ಯೆಸ್ ಬ್ಯಾಂಕ್, ರಿಲಯನ್ಸ್, ಐಟಿಸಿ, ಎಸಿಸಿ ಸೇರಿ ಪ್ರಮುಖ ಕಂಪನಿಗಳು ತ್ರೈಮಾಸಿಕ ಫಲಿತಾಂಶ ಪ್ರಕಟಿಸಲಿವೆ.

ಮುನ್ನೋಟ: ಸತತ ನಾಲ್ಕೈದು ವಾರಗಳ ಕಾಲ ಹೆಚ್ಚು ಚಲನೆ ತೋರದೆ ಇದ್ದ ಸೂಚ್ಯಂಕಗಳು ಈಗ ಪೇಟೆಯಲ್ಲಿ ಮತ್ತೊಂದು ಹಂತದ ಓಟ ಮುಂದುವರಿಯಲಿದೆ ಎನ್ನುವ ಸೂಚನೆ ನೀಡುತ್ತಿವೆ. ಮಿಡ್ ಕ್ಯಾಪ್ ಮತ್ತು ಸ್ಮಾಲ್ ಕ್ಯಾಪ್ ಕಂಪನಿಗಳ ಷೇರುಗಳು ಹೆಚ್ಚು ಲಾಭ ನೀಡುತ್ತಿದ್ದರೂ ಹೂಡಿಕೆಯಲ್ಲಿ ಎಚ್ಚರಿಕೆಯ ತೀರ್ಮಾನ ಅಗತ್ಯ. ಮತ್ತೊಂದು ವಿಚಾರವೆಂದರೆ, ಷೇರು ಮಾರುಕಟ್ಟೆಯಲ್ಲಿ ಇತ್ತೀಚಿನ ದಿನಗಳಲ್ಲಿ ಸಣ್ಣ ಹೂಡಿಕೆದಾರರ ಸಂಖ್ಯೆ ಗಣನೀಯವಾಗಿ ಹೆಚ್ಚಳವಾಗುತ್ತಿದೆ. ಸರಣಿ ಐಪಿಒಗಳು ನಡೆಯುತ್ತಿರುವುದರಿಂದ ಹೊಸದಾಗಿ ಡಿ-ಮ್ಯಾಟ್ ಖಾತೆ ತೆರೆಯುವವರ ಸಂಖ್ಯೆ ಹೆಚ್ಚಾಗುತ್ತಿದೆ.

ಬ್ರೋಕರೇಜ್ (ದಲ್ಲಾಳಿ) ಸಂಸ್ಥೆಗಳ ಷೇರುಗಳ ಬೆಲೆಯಲ್ಲಿ ಕಳೆದ ವಾರ ಕಂಡುಬಂದಿರುವ ಗಣನೀಯ ಏರಿಕೆ ಷೇರು ಮಾರುಕಟ್ಟೆಯಲ್ಲಿ ಜನಸಾಮಾನ್ಯರ ಪಾಲ್ಗೊಳ್ಳುವಿಕೆ ಹೆಚ್ಚಲಿದೆ ಎನ್ನುವ ಮುನ್ಸೂಚನೆ ನೀಡುತ್ತಿದೆ.

ಪ್ರಜಾವಾಣಿ ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು

ನಿಮ್ಮ ಪ್ರೀತಿಪಾತ್ರರ ಅಗಲಿಕೆಯನ್ನು ಶ್ರದ್ಧಾಂಜಲಿ ಜಾಹೀರಾತು ಮೂಲಕ ಪ್ರಕಟಿಸಲು ಅಥವಾ ನಿಮ್ಮ ಪ್ರೀತಿಪಾತ್ರರ ಸವಿನೆನಪಿಗೆ ಸಂತಾಪ ಸೂಚನೆ ಪ್ರಕಟಿಸಲು ಬಯಸುವಿರಾದರೆ, ನಮ್ಮ

ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿ

ಪತ್ರಿಕೆಗಳಲ್ಲಿ ನಿಮ್ಮ ಜಾಹೀರಾತುಗಳನ್ನು ಪ್ರಕಟಿಸಲು ಅಗತ್ಯವಿರುವ ಎಲ್ಲ ಮಾರ್ಗದರ್ಶನ ನೀಡುತ್ತೇವೆ.

ದಯವಿಟ್ಟು ಸಂಪರ್ಕಿಸಿ:

Santhosh Kumar : 9880856233
Jerry : 9731810277 | Ravichandra : 9901641752
Vishal : 9845114560 | Anitha R: 9900428036

ನಿಮ್ಮ ಮಾರ್ಗದರ್ಶನಕ್ಕಾಗಿ ಕೆಲವು ಅನುಕೂಲಕರ ಫಾರ್ಮಾಟ್ಸ್ ಹಾಗೂ ಟೆಕ್ಸ್ಟ್ ಆಯ್ಕೆಗಳನ್ನು ಹೊಂದಿರುವ ಒಂದು ವೆಬ್‌ಸೈಟ್‌ನ್ನು ಕೂಡ ನಾವು ಆರಂಭಿಸಿದ್ದೇವೆ. ದಯವಿಟ್ಟು ಲಾಗಾನ್ ಮಾಡಿರಿ

https://homages.deccanherald.com

ಅಥವಾ QR code ಸ್ಕ್ಯಾನ್ ಮಾಡಿ

ನಮ್ಮ ಆನ್‌ಲೈನ್ ಬುಕ್ಕಿಂಗ್ ಫಾರಂ ಪಡೆಯಿರಿ.

ಎಫ್‌ಪಿಐ: ಹೊರಹರಿವು

ನವದೆಹಲಿ (ಪಿಟಿಐ): ವಿದೇಶಿ ಬಂಡವಾಳ ಹೂಡಿಕೆದಾರರು (ಎಫ್‌ಪಿಐ) ಜೂನ್ 1ರಿಂದ 16ರವರೆಗಿನ ಅವಧಿಯಲ್ಲಿ ಷೇರುಪೇಟೆಗಳಿಂದ ₹ 4,515 ಕೋಟಿ ಹಿಂದಕ್ಕೆ ಪಡೆದಿದ್ದಾರೆ.

ಇದೇ ಅವಧಿಯಲ್ಲಿ ಸಾಲಪತ್ರ ಮಾರುಕಟ್ಟೆಯಲ್ಲಿ ₹ 3,033 ಕೋಟಿ ಹೂಡಿಕೆ ಮಾಡಿದ್ದಾರೆ. ಇದರಿಂದಾಗಿ, ಮಾರುಕಟ್ಟೆಗಳಿಂದ ಹಿಂದಕ್ಕೆ ಪಡೆದ ಒಟ್ಟು ಮೊತ್ತವು ₹ 1,482 ಕೋಟಿಗಳಷ್ಟಾಗಿದೆ.

ಮಾರುಕಟ್ಟೆಯಲ್ಲಿ ಕಚ್ಚಾ ತೈಲದ ಬೆಲೆ ತಗ್ಗುವ ಸಂಭವ

ತೈಲ ಪೂರೈಕೆ ಹೆಚ್ಚಿಸಲು ಒಪೆಕ್+ ಸಮ್ಮತಿ

ಮಾಸ್ಕೊ / ದುಬೈ / ಲಂಡನ್ (ರಾಯಿಟರ್ಸ್): ಆಗಸ್ಟ್ ತಿಂಗಳಿನಿಂದ ಕಚ್ಚಾ ತೈಲ ಪೂರೈಕೆಯನ್ನು ಹೆಚ್ಚುಮಾಡಲು ಪೆಟ್ರೋಲಿಯಂ ರಫ್ತುದಾರ ರಾಷ್ಟ್ರಗಳ ಒಕ್ಕೂಟ (ಒಪೆಕ್) ಮತ್ತು ಆ ಒಕ್ಕೂಟದ ಮಿತ್ರ-ರಾಷ್ಟ್ರಗಳ (ಒಪೆಕ್+) ಪ್ರತಿನಿಧಿಗಳು ಸಮ್ಮತಿ ಸೂಚಿಸಿದ್ದಾರೆ.

ಕೊರೊನಾ ಸಾಂಕ್ರಾಮಿಕದ ದುಷ್ಪರಿಣಾಮದಿಂದ ವಿಶ್ವದ ಅರ್ಥ ವ್ಯವಸ್ಥೆಯು ಚೇತರಿಸಿಕೊಳ್ಳುತ್ತಿರುವ ಹೊತ್ತಿನಲ್ಲಿ ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ಕಚ್ಚಾ ತೈಲ ಬೆಲೆಯು ಎರಡೂವರೆ ವರ್ಷಗಳ ಗರಿಷ್ಠ ಮಟ್ಟವನ್ನು ತಲುಪಿತ್ತು. ಪೂರೈಕೆ ಜಾಸ್ತಿ ಮಾಡಲು ಒಪ್ಪಿರುವುದರ ಪರಿಣಾಮವಾಗಿ, ಮಾರುಕಟ್ಟೆಯಲ್ಲಿ ಕಚ್ಚಾ ತೈಲದ ಬೆಲೆ ತಗ್ಗಬಹುದು ಎನ್ನಲಾಗಿದೆ.

'ಒಪ್ಪಂದವು ನಮಗೆ ಸಂತೋಷ ತಂದಿದೆ' ಎಂದು ಸಂಯುಕ್ತ ಅರಬ್ ಸಂಸ್ಥಾನದ (ಯುಎಇ) ಇಂಧನ ಸಚಿವ ಸುಹೈಲ್ ಮೊಹಮ್ಮದ್ ಅಲ್-ಮಜ್ರೂಯಿ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು. ಒಪ್ಪಂದಕ್ಕೆ ಬರಲು ಸಾಧ್ಯವಾಗಿದ್ದು ಹೇಗೆ ಎಂಬ ಪ್ರಶ್ನೆಗೆ ಉತ್ತರಿಸಲು ಸೌದಿ ಅರೇಬಿಯಾದ ಇಂಧನ ಸಚಿವ ರಾಜಕುಮಾರ ಅಬ್ದುಲ್‌ಅಜೀಜ್ ಬಿನ್ ಸಲ್ಮಾನ್ ನಿರಾಕರಿಸಿದರು.

ಒಪೆಕ್+ ದೇಶಗಳು ಕಳೆದ ವರ್ಷ ಕಚ್ಚಾ ತೈಲ ಉತ್ಪಾದನೆಯನ್ನು ದಿನವೊಂದಕ್ಕೆ 1 ಕೋಟಿ ಬ್ಯಾರೆಲ್‌ನಷ್ಟು ಕಡಿಮೆ ಮಾಡಿದವು. ಕೋವಿಡ್ ಸಾಂಕ್ರಾಮಿಕದ ಕಾರಣದಿಂದಾಗಿ ಮಾರುಕಟ್ಟೆಯಲ್ಲಿ ಕಚ್ಚಾ ತೈಲಕ್ಕೆ ಬೇಡಿಕೆ ಕುಸಿದು, ಬೆಲೆಯೂ ಭಾರಿ ಪ್ರಮಾಣದಲ್ಲಿ ಇಳಿಕೆ ಆದಾಗ ಅವು ಉತ್ಪಾದನೆ ಕಡಿತದ ಮೊರೆ ಹೋಗಿದ್ದವು. ನಂತರದಲ್ಲಿ ಉತ್ಪಾದನೆಯನ್ನು ತುಸು ಹೆಚ್ಚಿಸಲಾಯಿತು. ಹೀಗಿದ್ದರೂ, ಸಾಮಾನ್ಯ ದಿನಗಳ ಮಟ್ಟಕ್ಕೆ ಹೋಲಿಸಿದರೆ ಕಚ್ಚಾ ತೈಲ ಉತ್ಪಾದನೆಯು ದಿನವೊಂದಕ್ಕೆ 58 ಲಕ್ಷ ಬ್ಯಾರೆಲ್‌ನಷ್ಟು ಕಡಿಮೆ ಇದೆ.

ಆಗಸ್ಟ್‌ನಿಂದ ಡಿಸೆಂಬರ್‌ವರೆಗಿನ ಅವಧಿಯಲ್ಲಿ ಒಪೆಕ್+ ರಾಷ್ಟ್ರಗಳು ಕಚ್ಚಾ ತೈಲ ಉತ್ಪಾದನೆಯನ್ನು 20 ಲಕ್ಷ ಬ್ಯಾರೆಲ್‌ನಷ್ಟು ಹೆಚ್ಚಿಸಲಿವೆ. ಅಂದರೆ, ಪ್ರತಿ ತಿಂಗಳು ಆಗಲಿರುವ ಉತ್ಪಾದನೆಯಲ್ಲಿನ ಹೆಚ್ಚಳವು 4 ಲಕ್ಷ ಬ್ಯಾರೆಲ್‌ನಷ್ಟು ಇರಲಿದೆ ಎಂದು ಒಪೆಕ್ ಪತ್ರಿಕಾ ಹೇಳಿಕೆಯಲ್ಲಿ ತಿಳಿಸಿದೆ.

ದೇಶಿ ಕಂಪನಿಗಳ ವಿದೇಶಿ ಹೂಡಿಕೆ ಎರಡು ಪಟ್ಟು ಹೆಚ್ಚಳ

ಮುಂಬೈ (ಪಿಟಿಐ): ದೇಶಿ ಕಂಪನಿಗಳ ವಿದೇಶಿ ನೇರ ಬಂಡವಾಳ (ಒಎಫ್‌ಡಿಐ) ಹೂಡಿಕೆಯು ಹಿಂದಿನ ವರ್ಷದ ಜೂನ್‌ಗೆ ಹೋಲಿಸಿದರೆ ಈ ವರ್ಷದ ಜೂನ್‌ನಲ್ಲಿ ಎರಡು ಪಟ್ಟು ಹೆಚ್ಚಳ ಆಗಿದೆ.

ದೇಶಿ ಕಂಪನಿಗಳು ವಿದೇಶದಲ್ಲಿರುವ ತಮ್ಮ ಅಂಗಸಂಸ್ಥೆಗಳಲ್ಲಿ ಹಿಂದಿನ ವರ್ಷದ ಜೂನ್‌ನಲ್ಲಿ ₹ 10,286 ಕೋಟಿ ಹೂಡಿಕೆ ಮಾಡಿದ್ದವು. ಈ ವರ್ಷದ ಜೂನ್‌ನಲ್ಲಿ ಹೂಡಿಕೆಯ ಮೊತ್ತವು ₹ 20,720 ಕೋಟಿಗೆ ಏರಿಕೆ ಕಂಡಿದೆ ಎಂದು ಆರ್‌ಬಿಐ ಮಾಹಿತಿ ನೀಡಿದೆ.

ಆದರೆ, ಮೇ ತಿಂಗಳಿನಲ್ಲಿ ಆಗಿದ್ದ ಹೂಡಿಕೆಗೆ ಹೋಲಿಸಿದರೆ ಜೂನ್‌ನಲ್ಲಿ ಆಗಿರುವ ಹೂಡಿಕೆಯಲ್ಲಿ ಶೇ 58ರಷ್ಟು ಇಳಿಕೆ ಆಗಿದೆ. ಹೆಚ್ಚಿನ ಹೂಡಿಕೆ ಮಾಡಿರುವ ಕಂಪನಿಗಳ ಸಾಲಿನಲ್ಲಿ ಟಾಟಾ ಸ್ಟೀಲ್ (₹ 7,400 ಕೋಟಿ), ವಿಪ್ರೊ (₹ 5,827 ಕೋಟಿ) ಹಾಗೂ ಟಾಟಾ ಪವರ್ (₹ 971 ಕೋಟಿ) ಇವೆ.

ಬಿಎಸ್‌ಎನ್‌ಎಲ್: ತಗ್ಗಿದ ನಷ್ಟ

ನವದೆಹಲಿ (ಪಿಟಿಐ): ಸರ್ಕಾರಿ ಸ್ವಾಮ್ಯದ ಭಾರತ್ ಸಂಚಾರ್ ನಿಗಮ್ ಲಿಮಿಟೆಡ್‌ನ (ಬಿಎಸ್‌ಎನ್‌ಎಲ್) ಒಟ್ಟು ನಷ್ಟವು 2020-21ರಲ್ಲಿ ₹ 7,441 ಕೋಟಿಗೆ ಇಳಿಕೆಯಾಗಿದೆ ಎಂದು ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಬಿಎಸ್‌ಎನ್‌ಎಲ್ ಕಂಪನಿಯು 2019-20ರಲ್ಲಿ ಒಟ್ಟು ₹ 15,499 ಕೋಟಿ ನಷ್ಟ ಅನುಭವಿಸಿತ್ತು. 'ಕಂಪನಿಯ 78,569 ನೌಕರರು ಸ್ವಯಂ ನಿವೃತ್ತಿ (ವಿಆರ್‌ಎಸ್) ಪಡೆದಿದ್ದಾರೆ. ಇದರ ಪರಿಣಾಮವಾಗಿ ನೌಕರರ ವೇತನಕ್ಕಾಗಿ ವೆಚ್ಚ ಮಾಡುವ ಮೊತ್ತ ಕಡಿಮೆಯಾಗಿದೆ. ನಷ್ಟ ಕಡಿಮೆ ಆಗಲು ಇದು ಪ್ರಮುಖ ಕಾರಣ' ಎಂದು ಅವರು ಹೇಳಿದ್ದಾರೆ.

'ಎಸ್‌ಟಿ ಮೀಸಲಾತಿ: ಸರ್ಕಾರ ಕಾರ್ಯಪ್ರವೃತ್ತ'

ಪ್ರಜಾವಾಣಿ ವಾರ್ತೆ

ಹೂವಿನಹಡಗಲಿ: 'ಕುರುಬ ಸಮುದಾಯಕ್ಕೆ ಪರಿಶಿಷ್ಟ ಪಂಗಡ ಮೀಸಲಾತಿ ಬೇಡಿಕೆ ಈಡೇರಿಸಲು ಸರ್ಕಾರ ಕಾರ್ಯಪ್ರವೃತ್ತವಾಗಿದೆ. ಕುಲಶಾಸ್ತ್ರ ಅಧ್ಯಯನ ಕಾರ್ಯ ಪ್ರಗತಿಯಲ್ಲಿದೆ. ಮೀಸಲಾತಿ ಪರಾಮರ್ಶೆಗಾಗಿ ಉನ್ನತ ಮಟ್ಟದ ಸಮಿತಿ ರಚಿಸಲಾಗಿದೆ. ಕಾನೂನಾತ್ಮಕ ಅಭಿಪ್ರಾಯ ಪಡೆದು ಸರ್ಕಾರ ಮೀಸಲಾತಿ ನಿರ್ಧಾರ ಕೈಗೊಳ್ಳಲಿದೆ' ಎಂದು ಗೃಹ ಸಚಿವ ಬಸವರಾಜ ಬೊಮ್ಮಾಯಿ ಹೇಳಿದರು.

ತಾಲ್ಲೂಕಿನ ಮೈಲಾರ ಸುಕ್ಷೇತ್ರದ ಕಾಗಿನೆಲೆ ಶಾಖಾ ಮಠದಲ್ಲಿ ₹10 ಕೋಟಿ ವೆಚ್ಚದ ವಸತಿ ಶಾಲೆ ಮತ್ತು ವಿದ್ಯಾರ್ಥಿಗಳ ವಸತಿ ನಿಲಯಕ್ಕೆ ಭಾನುವಾರ ಶಿಲಾನ್ಯಾಸ ನೆರವೇರಿಸಿ ಮಾತನಾಡಿದರು.

ಕುರುಬ ಸಮುದಾಯಕ್ಕೆ ಪರಿಶಿಷ್ಟ ಪಂಗಡ ಮೀಸಲಾತಿ ಕಲ್ಪಿಸುವಂತೆ ಐತಿಹಾಸಿಕ ಪಾದಯಾತ್ರೆಯ ಮೂಲಕ ಹಕ್ಕೊತ್ತಾಯ ಮಂಡಿಸಿದ್ದೇವೆ. ರಾಜ್ಯ ಸರ್ಕಾರ ಕೂಡಲೇ ಈ ಪ್ರಸ್ತಾವವನ್ನು ಕೇಂದ್ರಕ್ಕೆ ಶಿಫಾರಸು ಮಾಡಬೇಕು ಎಂದು ಕಾಗಿನೆಲೆ ಪೀಠದ ನಿರಂಜನಾನಂದಪುರಿ ಸ್ವಾಮೀಜಿ ಆಗ್ರಹಿಸಿದರು.

ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವ ಕೆ.ಎಸ್. ಈಶ್ವರಪ್ಪ, ನಗರಾಭಿವೃದ್ಧಿ ಸಚಿವ ಭೈರತಿ ಬಸವರಾಜ, ತೋಟಗಾರಿಕೆ ಸಚಿವ ಆರ್.ಶಂಕರ್, ಶಾಸಕ ಪಿ.ಟಿ.ಪರಮೇಶ್ವರನಾಯ್ಕ, ಸಂಸದ ವೈ.ದೇವೇಂದ್ರಪ್ಪ, ಎಚ್.ಎಂ.ರೇವಣ್ಣ, ವಿರೂಪಾಕ್ಷಪ್ಪ, ಬಿ.ಚಂದ್ರನಾಯ್ಕ, ಕುರುಬ ಸಮಾಜದ ಅಧ್ಯಕ್ಷ ಹೊಸ್ಕೇರಿ ಬೀರಪ್ಪ, ಮುಖಂಡ ಗಾಜಿಗೌಡ್ರು, ಗ್ರಾಮ ಪಂಚಾಯ್ತಿ ಅಧ್ಯಕ್ಷರಾದ ಭರಮಪ್ಪ ಇಟಿಗಿ, ನಾಗಮ್ಮ ಕುಂದಗೋಳ ಇದ್ದರು.

ಅಭಿವೃದ್ಧಿಗೆ ಶಿಕ್ಷಣವೇ ಅಸ್ತ್ರ: ಇಮ್ಮಡಿ ಸಿದ್ಧರಾಮೇಶ್ವರ ಸ್ವಾಮೀಜಿ

ಸರಳವಾಗಿ ನಡೆದ ಭೋವಿ ಜನೋತ್ಸವ

ಪ್ರಜಾವಾಣಿ ವಾರ್ತೆ

ಚಿತ್ರದುರ್ಗ: ಭೋವಿ ಗುರುಪೀಠದ ಪೀಠಾಧ್ಯಕ್ಷ ಇಮ್ಮಡಿ ಸಿದ್ಧರಾಮೇಶ್ವರ ಸ್ವಾಮೀಜಿ ಅವರ ಜನ್ಮದಿನದ ಪ್ರಯುಕ್ತ ಹಮ್ಮಿಕೊಂಡಿದ್ದ 'ಭೋವಿ ಜನೋತ್ಸವ' ಭಾನುವಾರ ಸರಳವಾಗಿ ನೆರವೇರಿತು.

ಸ್ವಾಮೀಜಿ ಅವರ ಪಟ್ಟಾಧಿಕಾರ ಮಹೋತ್ಸವ ಹಾಗೂ ಸಮಾಜ ಸೇವಾ ದೀಕ್ಷೆಯ ವಾರ್ಷಿಕೋತ್ಸವ ಕೂಡ ಇದೇ ಸಂದರ್ಭದಲ್ಲಿ ನಡೆಯಿತು. ನಾಡಿನ ಹಲವೆಡೆಯಿಂದ ಆಗಮಿಸಿದ್ದ ಮಠಾಧೀಶರು ಹಾಗೂ ಭಕ್ತರು ಕಾರ್ಯಕ್ರಮಕ್ಕೆ ಸಾಕ್ಷಿಯಾದರು.

ಇಮ್ಮಡಿ ಸಿದ್ಧರಾಮೇಶ್ವರ ಸ್ವಾಮೀಜಿ ಮಾತನಾಡಿ, 'ಇದು ಜನ್ಮದಿನೋತ್ಸವವಲ್ಲ, ಜನರನ್ನು ಜಾಗೃತಿ ಮಾಡುವ ಉತ್ಸವ. ಹಟ್ಟಿ, ಕಾಲೊನಿ, ಹಳ್ಳಿಗಳಿಗೆ ಭೇಟಿ ನೀಡುತ್ತಾ ಸಮುದಾಯವನ್ನು ಧಾರ್ಮಿಕ ತಳಹದಿಯ ಮೇಲೆ ಸಂಘಟನೆ ಮಾಡಲಾಗುತ್ತಿದೆ. ಇದರ ನೀಲನಕ್ಷೆ ಜನೋತ್ಸವದಲ್ಲಿ ಸಿದ್ಧವಾಗುತ್ತದೆ' ಎಂದು ಹೇಳಿದರು.

ಚಿತ್ರದುರ್ಗದ ಭೋವಿ ಗುರುಪೀಠದಲ್ಲಿ ಭಾನುವಾರ ಏರ್ಪಡಿಸಿದ್ದ ಭೋವಿ ಜನೋತ್ಸವದಲ್ಲಿ ಇಮ್ಮಡಿ ಸಿದ್ಧರಾಮೇಶ್ವರ ಸ್ವಾಮೀಜಿ ಅವರ ಜನ್ಮದಿನವನ್ನು ಆಚರಿಸಲಾಯಿತು. ಮಲ್ಲಿಕಾರ್ಜುನ ಸ್ವಾಮೀಜಿ, ಶಿವಬಸವ ಸ್ವಾಮೀಜಿ, ಶಾಂತವೀರ ಸ್ವಾಮೀಜಿ, ಬಸವ ಮಾಚಿದೇವ ಸ್ವಾಮೀಜಿ, ರೇಣುಕಾನಂದ ಸ್ವಾಮೀಜಿ, ಚನ್ನಬಸವ ಸ್ವಾಮೀಜಿ, ಬಸವಪ್ರಸಾದ ಸ್ವಾಮೀಜಿ ಇದ್ದಾರೆ

'ಅರೆ ಅಲೆಮಾರಿ ಲಕ್ಷಣ ಹೊಂದಿದ ಸಮುದಾಯದಲ್ಲಿ ಭೂಮಿಹಕ್ಕು ಪಡೆದವರು ಕಡಿಮೆ. ಶ್ರಮಿಕ ವರ್ಗವಾದ ಭೋವಿ ಸಮುದಾಯ ಕೂಲಿ ಕಾರ್ಮಿಕರಾಗಿ ಬದುಕು ಕಟ್ಟಿಕೊಂಡಿದೆ. ಕಟ್ಟಡ, ರಸ್ತೆ ನಿರ್ಮಾಣದಲ್ಲಿ ತೊಡಗಿಕೊಂಡವರ ಸಂಖ್ಯೆ ಹೆಚ್ಚಾಗಿದೆ. ದಶಕದಿಂದ ಈ ಸಮುದಾಯದಲ್ಲಿ ಜಾಗೃತಿ ಮೂಡಿಸಲಾಗುತ್ತಿದೆ' ಎಂದರು.

'ಹೊಟ್ಟೆಪಾಡಿಗೆ ಊರು ಬಿಡುವುದು ಅನಿವಾರ್ಯ. ಆದರೆ, ಮಕ್ಕಳ ಬದುಕು ಹಾಳು ಮಾಡಬಾರದು. ಸಮಸಮಾಜದ ಕನಸು ನಿರ್ಮಾಣವಾಗಬೇಕಾದರೆ ಶಿಕ್ಷಣವೇ ಅಸ್ತ್ರವಾಗಬೇಕು. ಹೀಗಾಗಿ, ಮಠದಲ್ಲಿ ಉಚಿತ ಶಿಕ್ಷಣ ನೀಡಲಾಗುತ್ತಿದೆ. ಉನ್ನತ ಶಿಕ್ಷಣ, ಸ್ಪರ್ಧಾತ್ಮಕ ಪರೀಕ್ಷೆಯಲ್ಲಿ ಯಶಸ್ಸು ಗಳಿಸಿದವರಿಗೆ ಪ್ರೋತ್ಸಾಹ ನೀಡಲಾಗುತ್ತಿದೆ' ಎಂದು ಹೇಳಿದರು.

ಮಾದಾರ ಚನ್ನಯ್ಯ ಗುರುಪೀಠದ ಬಸವಮೂರ್ತಿ ಮಾದಾರ ಚನ್ನಯ್ಯ ಸ್ವಾಮೀಜಿ, ಯಾದವ ಗುರುಪೀಠದ ಶ್ರೀಕೃಷ್ಣ ಯಾದವಾನಂದ ಸ್ವಾಮೀಜಿ, ಕುಂಚಿಟಿಗ ಮಹಾಸಂಸ್ಥಾನದ ಶಾಂತವೀರ ಸ್ವಾಮೀಜಿ, ಹರಿಹರದ ಪಂಚಮಸಾಲಿ ಮಠದ ವಚನಾನಂದ ಸ್ವಾಮೀಜಿ, ಮಡಿವಾಳ ಮಹಾಸಂಸ್ಥಾನದ ಬಸವ ಮಾಚಿದೇವ ಸ್ವಾಮೀಜಿ, ದಾವಣಗೆರೆ ವಿರಕ್ತಮಠದ ಬಸವಪ್ರಭು ಸ್ವಾಮೀಜಿ, ಕೆಎಸ್‌ಆರ್‌ಟಿಸಿ ನಿಗಮದ ಅಧ್ಯಕ್ಷ ಎಂ. ಚಂದ್ರಪ್ಪ, ಹಟ್ಟಿ ಚಿನ್ನದ ಗಣಿ ನಿಗಮದ ಅಧ್ಯಕ್ಷ ಮಾನಪ್ಪ ವಜ್ಜಲ್, ಶಾಸಕ ಅಖಂಡ ಶ್ರೀನಿವಾಸಮೂರ್ತಿ ಇದ್ದರು.

ಪ್ರಜಾವಾಣಿ ಕ್ಲಾಸಿಫೈಡ್ಸ್ ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in

ಜಾಹೀರಾತುಗಳಿಗಾಗಿ ಸಂಪರ್ಕಿಸಿ:

080 - 45557160 /161/ 162/ 163/ 164
9845114560 / 9731810277/ 9886213331

ಉದ್ಯೋಗಾವಕಾಶ

Part-Time Jobs

ಮನೆಯಿಂದಲೇ ಕುಳಿತು ಫಾರಂನಲ್ಲಿ ಅಂಕಿಗಳು ತುಂಬುವ ಮೂಲಕ,ಗಳಿಸಿ 15,000-25,000/-. ಕೊರಿಯರ್ ಬುಕ್,ಪೆನ್ ಚಾರ್ಜಸ್ ನಾವೇ ಕೊಡುತ್ತೇವೆ. 9108059956, 9901929956

ಕನ್ನಡ ಮತ್ತು ಇಂಗ್ಲೀಷ್ ಓದಲು,ಬರೆಯಲು ಬರುವ ಯುವಕ/ಯುವತಿಯರಿಗೆ,ಗೃಹಿಣಿಯರಿಗೆ ವಯಸ್ಸಾದವರು ಮನೆಯಲ್ಲೇ ಕುಳಿತು ನಾವು ಕೊಡುವ ಬುಕ್ ಬರೆಯುವ ಮೂಲಕ ತಿಂಗಳಿಗೆ 12,000-15,000 ವರೆಗೆ ಸಂಪಾದಿಸಿ.ಕೊರಿಯರ್ ಸೌಲಭ್ಯವಿದೆ.8884777502, 8884777503

General

WORK FROM HOME ಮನೆಯಿಂದಲೆ ಬುಕ್ ಬರೆಯುವ ಮೂಲಕ ತಿಂಗಳಿಗೆ 12,000- 15,000ವರೆಗೆ ಸಂಪಾದಿಸಿ. ಕನ್ನಡ/ ಇಂಗ್ಲೀಷ್ ಓದಲು, ಬರೆಯಲು ಬರುವ ಎಲ್ಲರಿಗೂ ಅವಕಾಶ. ಕೊರಿಯರ್ ಸೌಲಭ್ಯವಿದೆ 8095344488/ 8095344466

TVS ಬ್ರಿಟಾನಿಯಾ ವಿಡಿಯೋಕಾನ್ ಗಳಿಗೆ 7th,SSLC,PUC, ಡಿಗ್ರಿಯವರು ITI ನವರುಗಳು ಕರ್ನಾಟಕದ ಎಲ್ಲಾ ಜಿಲ್ಲೆಗಳಿಗೆ ನೇರನೇಮಕಾತಿಯಿರುತ್ತದೆ. ESI, PF ನೊಂದಿಗೆ 16,600- 60,000/- ವಸತಿಯೂಟವಿರುತ್ತದೆ. ಸಂಪರ್ಕಿಸಿ: 7760014526, 9739544856

ಕರ್ನಾಟಕದಾದ್ಯಂತ ಪುನರಾರಂಭವಾಗಿರುವ ಪ್ರಸಿದ್ಧ ಕಂಪನಿ ಹಾಗೂ ಆಫೀಸ್ ಕೆಲಸಗಳಿಗೆ ಯುವಕಯುವತಿಯರು ಬೇಕಾಗಿದ್ದಾರೆ ವಸತಿಯೂಟದೊಂದಿಗೆ Salary+OT 16,800-45000/-. 9980295449, 9902839010

ರಾವ್ ಸಂಸ್ಥೆಗೆ ವಯಸ್ಸಾದವರನ್ನು, ರೋಗಿಗಳನ್ನು, ಮಕ್ಕಳನ್ನು ನೋಡಿಕೊಳ್ಳಲು ಮನೆಕೆಲಸಕ್ಕೆ, ಅಡುಗೆಗೆ ಮಹಿಳೆಯರು ಹೋಂನರ್ಸಗಳು ಹುಡುಗಿಯರು ಬೇಕಾಗಿದ್ದಾರೆ. ಊಟ ವಸತಿಯಿದೆ. 10,000-15,000. 8951315839, 9141634619

TATA ಮೋಟರ್ಸ್, TOYOTA, ಬ್ರಿಟಾನಿಯಾ ಆನ್‌ಲೈನ್ ಕಂಪೆನಿಗಳಿಗೆ SSLC, PUC,Degree, ITI ನವರು ನೇರನೇಮಕಾತಿ 16,800-56,000/- ವಸತಿಯೂಟವಿದೆ. 7204853296, 7204396011

ತಕ್ಷಣ ಬೇಕಾಗಿದ್ದಾರೆ 7th, ಎಸ್.ಎಸ್.ಎಲ್.ಸಿ, ITI, ಡಿಗ್ರಿಯವರು (ವಿದ್ಯಾರ್ಹತೆಯಿಲದಲ್ಲದವರಿಗೂ) ಎಲ್ಲಾ ಜಿಲ್ಲೆಗಳಿಗೆ ನೇರನೇಮಕಾತಿಯಿರುತ್ತದೆ. 16,800/- 52,500/- ವಸತಿಯೂಟವಿರುತ್ತದೆ.ಸಂಪರ್ಕಿಸಿ: 8884412822, 8884412622

ಎಲ್ಲಾ ಜಿಲ್ಲಾ ತಾಲ್ಲೂಕಿನ ಕೆಲವು ಸರ್ಕಾರಿ ಕಛೇರಿಗಳಿಗೆ ಏಜೆನ್ಸಿ ಗುತ್ತಿಗೆ ಮೇಲೆ ಕಂಪ್ಯೂಟರ್ ಆಪರೇಟರ್,ಮೀಟರ್ ರೀಡರ್, ಸೆಕ್ಯೂರಿಟಿ ಬೇಕಾಗಿದ್ದಾರೆ. ROHAN:8073974842

Wanted

ಬಂದ ದಿನವೇ ಕೆಲಸ (ಮಾರ್ಕೆಟಿಂಗ್‌ಅಲ್ಲ) MNC ಕಂಪನಿಗಳಿಗೆ Primary,SSLC, PUC, ITI, any Degree Pass/Fail. ಯುವಕ, ಯುವತಿಯರು ಕೆಲಸಕ್ಕೆ ಬೇಕಾಗಿದ್ದಾರೆ. ESI/ PFನೊಂದಿಗೆ ಊಟ, ವಸತಿಯಿರುತ್ತದೆ. ಸಂಬಳ+ಓಟಿ.15,000 86,000. 7259685221, 7760116548

ಭವಿಷ್ಯ

Astrology

ಕೆಲಸದ ನಂತರ ಕಾಣಿಕೆ. ಸ್ತ್ರೀ ಪುರುಷ ವಶೀಕರಣ. ನಿಮ್ಮ ಯಾವುದೇ ಗುಪ್ತಸಮಸ್ಯೆಗಳಿಗೆ, ಇಷ್ಟಪಟ್ಟವರು. ನಿಮ್ಮಂತೆ ಆಗಲು, 2 ದಿನದಲ್ಲಿ ಪರಿಹಾರ: 9591580089.

★ಮಂತ್ರದುರ್ಗಿ ಮಾಂತ್ರಿಕರು★ ಕೇರಳ, ಕೊಳ್ಳೆಗಾಲದ ಮಂತ್ರಸಿದ್ಧ ವಾಕ್ಸಿದ್ಧಿಯಿಂದ ಸ್ತ್ರೀಪುರುಷ ವಶೀಕರಣ ಕೆಲವೇ ಗಂಟೆಗಳಲ್ಲಿ.ಫೋನಿನ ಮೂಖಾಂತರ ಶಾಶ್ವತ ಪರಿಹಾರ. (ಸ್ತ್ರೀಪುರುಷ ವಶೀಕರಣ ಸ್ಪೆಷಲಿಸ್ಟ್) ಪಂ.ರಾಮಚಂದ್ರಭಟ್. 9008711329

★॥ಶ್ರೀಅಂಬಾಭವಾನಿದೇವಿ॥★ ಜ್ಯೋತಿಷ್ಯರು ಪ್ರೀತಿಪ್ರೇಮ ವಶಿಕರಣ, ದಾಂಪತ್ಯ, ಸಾಲದಬಾದೆ ಇನ್ನಾವುದೇ ಕಠಿಣ ಗುಪ್ತ ಸಮಸ್ಯೆಗಳಿಗೆ 5 ನಿಮಿಷಗಳಲ್ಲಿ ಪರಿಹಾರ. ವಶೀಕರಣ ಸ್ಪೆಷಲಿಸ್ಟ್. 7204848318

★ಶ್ರೀಸಾಯಿಗುರು ಜ್ಯೋತಿಷ್ಯ★ ಸ್ತ್ರೀಪುರುಷ ವಶೀಕರಣ, ಗಂಡ ಹೆಂಡತಿ ಕಲಹ, ಸಂತಾನಭಾಗ್ಯ, ಇನ್ನಾವುದೇ ಎಲ್ಲಿಯೂ ಪರಿಹಾರ ಕಾಣದ ಎಷ್ಟೇಕಠಿಣವಾದ ಗುಪ್ತಸಮಸ್ಯೆಗಳಿಗೆ100% ಪರಿಹಾರ 7829724990

ಸ್ತ್ರೀವಶೀಕರಣ, ಪುರುಷವಶೀಕರಣ ಪ್ರೀತಿಪ್ರೇಮ ಇಷ್ಟಪಟ್ಟವರು ನಿಮ್ಮಂತಾಗಲು 11ಗಂಟೆಗಳಲ್ಲಿ ಸ್ತ್ರೀಯರಿಗೆ ಕಡಿಮೆ ಖರ್ಚಿನಲ್ಲಿ ಪರಿಹಾರ. 9845544363

ವ್ಯಾಪಾರ

Business to Business

Finance

ಸಾಲಗಳು ನಾವು ಎಲ್ಲಾ ರೀತಿಯ ಸಾಲಗಳನ್ನು ನೀಡುತ್ತೇವೆ. ವೈಯಕ್ತಿಕ, ವ್ಯವಹಾರ, ಆಸ್ತಿ, ವಸತಿ, ಕೃಷಿ, ಸ್ವಾಧೀನ ಮತ್ತು ಆಸ್ತಿಗಾಗಿ ಸಾಲ ನೀಡಲಾಗುತ್ತದೆ. ಮೊಬೈಲ್: 7837015557

ವಾಹನ

Four Wheelers Selling

Others

ಯಶಸ್ಸು ಮೂರು ಚಿನ್ನದ ಆನೆಗಳೊಂದಿಗೆ

Ace GOLD CNG ವಾಹನ ಆಕರ್ಷಕ ಕೊಡುಗೆಗಳೊಂದಿಗೆ

4.99%* ಬಡ್ಡಿದರ 48 ತಿಂಗಳು ಅಥವಾ 5.99%* ಬಡ್ಡಿದರ 60 ತಿಂಗಳು

ಕೊಡುಗೆಗಳು ₹25 000/-* ವರೆಗೆ ಎಕ್ಸ್‌ಚೇಂಜ್ ₹12 000/-* ವರೆಗೆ

ಹೆಚ್ಚಿನ ವಿವರಗಳಿಗಾಗಿ ಕರೆಮಾಡಿ

Bangalore -7259784441
Bangalore/Mysore 95389 35533
Tumkur/Davanagere/Chitradurga 98950 23373
Mangalore/Shivamogga/Udupi/Hassan/Chikkamagalur/Karwar 96208 63338
Hubli/Haveri/Gadag/Bellary/Raichur - 96209 55858
Bagalkot/Bijapur/Gulbarga/Bidar - 73899 44057
Hubli/Belgaum 91088 64572

* ಷರತ್ತುಗಳು ಅನ್ವಯಿಸುತ್ತದೆ.

DH DECCAN HERALD

SELL, RENT, BUY PROPERTY THROUGH PROPERTY CLASSIFIEDS ADS IN DECCAN HERALD & PRAJAVANI NEWS PAPER

BOOK YOUR CLASSIFIEDS ADS ONLINE WWW.DHCLASSIFIEDS.COM

ಪ್ರಜಾವಾಣಿ ಕ್ಲಾಸಿಫೈಡ್ಸ್

FOR MORE INFORMATION CONTACT 9880856233 | 9886213331
Email: santhoshkumar@deccanherald.co.in

ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.

ಜಾಹೀರಾತು ವ್ಯವಸ್ಥಾಪಕರು, ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

ಕೋವಿಡ್: 3 ತಿಂಗಳಲ್ಲಿ ಕನಿಷ್ಠ ಮರಣ ಪ್ರಕರಣ

ಬೆಂಗಳೂರು: ಕೊರೊನಾ ಸೋಂಕಿತರಲ್ಲಿ 36 ಮಂದಿ ಮೃತಪಟ್ಟಿರುವುದು ಭಾನುವಾರ ದೃಢಪಟ್ಟಿದೆ. ಇದು ಮೂರು ತಿಂಗಳ ಅವಧಿಯಲ್ಲಿ ವರದಿಯಾದ ಕನಿಷ್ಠ ಮರಣ ಪ್ರಕರಣಗಳು.

ರಾಜ್ಯದಲ್ಲಿ ಏಪ್ರಿಲ್ ಎರಡನೇ ವಾರದ ಬಳಿಕ ಮರಣ ಪ್ರಕರಣಗಳ ಸಂಖ್ಯೆ 50ರ ಗಡಿ ದಾಟತ್ತು. ಬಳಿಕ ಏರಿಕೆ ಕಂಡು, 500ರ ಗಡಿ ತಲುಪತ್ತು. ಕಳೆದೊಂದು ತಿಂಗಳಿನಿಂದ ಮರಣ ಪ್ರಕರಣಗಳ ಸಂಖ್ಯೆ ಕೂಡ ಇಳಿಮುಖ ಮಾಡಿದೆ. ರಾಜ್ಯದ 15 ಜಿಲ್ಲೆಗಳಲ್ಲಿ ಹೊಸದಾಗಿ ಮರಣ ಪ್ರಕರಣಗಳು ದೃಢಪಟ್ಟಿವೆ. ಮರಣ ಪ್ರಮಾಣ ದರವು ಶೇ 2.10 ರಷ್ಟು ವರದಿಯಾಗಿದೆ.

ಬೆಂಗಳೂರಿನಲ್ಲಿ 9 ಹಾಗೂ ದಕ್ಷಿಣ ಕನ್ನಡದಲ್ಲಿ 6 ಮಂದಿ ಸಾವಿಗೀಡಾಗಿರುವುದು ದೃಢಪಟ್ಟಿದೆ. ಉಳಿದ ಜಿಲ್ಲೆಗಳಲ್ಲಿ ಈ ಸಂಖ್ಯೆ 5 ಕ್ಕಿಂತ ಕಡಿಮೆಯಿದೆ. ಈವರೆಗೆ ಕೋವಿಡ್‌ನಿಂದ ಮೃತಪಟ್ಟವರ ಒಟ್ಟು ಸಂಖ್ಯೆ 36,157ಕ್ಕೆ ತಲುಪಿದೆ.

ರಾಜ್ಯದಲ್ಲಿ ಹೊಸದಾಗಿ 1,708 ಮಂದಿ ಕೋವಿಡ್ ಪೀಡಿತರಾಗಿರುವುದು ದೃಢಪಟ್ಟಿದೆ. ಈವರೆಗೆ ಸೋಂಕಿತರಾದವರ ಒಟ್ಟು ಸಂಖ್ಯೆ 28.83 ಲಕ್ಷ ದಾಟಿದೆ. ಒಂದು ದಿನದ ಅವಧಿಯಲ್ಲಿ 1.56 ಲಕ್ಷ ಮಾದರಿಗಳನ್ನು ಪರೀಕ್ಷೆ ಮಾಡಲಾಗಿದ್ದು, ಶೇ 1.09ರಷ್ಟು ಸೋಂಕು ದೃಢ ಪ್ರಮಾಣ ವರದಿಯಾಗಿದೆ.

ಮಾಜಿ ಕುಲಪತಿ ಪ್ರೊ. ಕೆ.ಎಸ್. ರಂಗಪ್ಪಗೆ 'ಸುಪ್ರೀಂ' ನೋಟಿಸ್

ನವದೆಹಲಿ: ಹಣಕಾಸು ಅವ್ಯವಹಾರ ಆರೋಪಕ್ಕೆ ಸಂಬಂಧಿಸಿದಂತೆ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾಲಯದ (ಕೆಎಸ್‌ಒಯು) ಮಾಜಿ ಕುಲಪತಿ ಕೆ.ಎಸ್. ರಂಗಪ್ಪ ಅವರಿಗೆ ಸುಪ್ರೀಂ ಕೋರ್ಟ್ ನೋಟಿಸ್ ಜಾರಿಗೊಳಿಸಿದೆ.

ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಹೈಕೋರ್ಟ್ ಎಫ್‌ಐಆರ್ ರದ್ದುಗೊಳಿಸಿರುವುದನ್ನು ಪ್ರಶ್ನಿಸಿ ವಿಶ್ವವಿದ್ಯಾಲಯದ ಕುಲಸಚಿವರು ಸಲ್ಲಿಸಿರುವ ಅರ್ಜಿಗೆ ಸಂಬಂಧಿಸಿದಂತೆ ಆರು ವಾರಗಳಲ್ಲಿ ಪ್ರತಿಕ್ರಿಯೆ ಸಲ್ಲಿಸುವಂತೆ ರಂಗಪ್ಪ ಅವರಿಗೆ ನ್ಯಾಯಾಲಯ ನೋಟಿಸ್ ನೀಡಿದೆ.

2020ರ ಸೆಪ್ಟೆಂಬರ್ 15ರಂದು ಹೈಕೋರ್ಟ್ ಈ ಪ್ರಕರಣದ ಬಗ್ಗೆ ಆದೇಶ ನೀಡಿತ್ತು. ಎಫ್‌ಐಆರ್‌ನಲ್ಲಿ ಮಾಡಿದ್ದ ಆರೋಪಗಳ ಬಗ್ಗೆ ಪೊಲೀಸರು 'ಬಿ' ರಿಪೋರ್ಟ್ ಸಲ್ಲಿಸಿದ್ದಾರೆ ಎನ್ನುವುದನ್ನು ನ್ಯಾಯಾಲಯ ಪರಿಗಣಿಸಿತ್ತು.

ವಿಶ್ವವಿದ್ಯಾಲಯದ ಕುಲಾಧಿಪತಿಯಾಗಿರುವ ಕರ್ನಾಟಕದ ರಾಜ್ಯಪಾಲರು ವಿಶ್ವವಿದ್ಯಾಲಯದ ಹಣಕಾಸು ವ್ಯವಹಾರಗಳ ಬಗ್ಗೆ ವಿಶೇಷ ಪರಿಶೀಲನೆಗೆ ನಿರ್ದೇಶನ ನೀಡಿದ್ದರು ಮತ್ತು ನಿಯಮಗಳ ಉಲ್ಲಂಘನೆಗಾಗಿ ಕ್ರಿಮಿನಲ್ ಪ್ರಕರಣ ದಾಖಲಿಸಲು ಸೂಚಿಸಿದ್ದರು ಎಂದು ಕೆಎಸ್‌ಒಯು ಪರ ಹಾಜರಾದ ಹಿರಿಯ ವಕೀಲ ಬಸವ ಪ್ರಭು ಪಾಟೀಲ್ ಅವರು ನ್ಯಾಯಾಲಯಕ್ಕೆ ವಿವರಿಸಿದ್ದಾರೆ.

2016ರ ಆಗಸ್ಟ್ 19ರಂದು ಮೊದಲ ದೂರು ದಾಖಲಾಗಿತ್ತು. ಆದರೆ, ಈ ದೂರು ಎಲ್ಲ ಆರೋಪಗಳನ್ನು ಒಳಗೊಂಡಿರಲಿಲ್ಲ. ನಂತರ, 2019ರ ನವೆಂಬರ್ 20ರಂದು ಎರಡನೇ ದೂರು ದಾಖಲಿಸಲಾಗಿತ್ತು. ಈ ದೂರಿನಲ್ಲಿ ಎಲ್ಲ ಆರೋಪಗಳನ್ನು ಸೇರಿಸಲಾಗಿತ್ತು ಎಂದು ಅವರು ತಿಳಿಸಿದ್ದಾರೆ.

ಹೀಗಾಗಿ, ಎಫ್‌ಐಆರ್ ಅನ್ನು ರದ್ದುಪಡಿಸಿರುವ ಹೈಕೋರ್ಟ್ ಆದೇಶ ಸಮರ್ಥನೀಯವಲ್ಲ ಎಂದು ಅವರು ಪ್ರತಿಪಾದಿಸಿದ್ದಾರೆ.

ವಕೀಲರ ವಾದ ಆಲಿಸಿದ ನ್ಯಾಯಮೂರ್ತಿಗಳಾದ ಡಿ.ವೈ. ಚಂದ್ರಚೂಡ್ ಮತ್ತು ಹೃಷಿಕೇಶ್ ರಾಯ್ ಅವರನ್ನೊಳಗೊಂಡ ಪೀಠವು ರಂಗಪ್ಪ ಅವರಿಗೆ ಪ್ರತಿಕ್ರಿಯೆ ಸಲ್ಲಿಸುವಂತೆ ನೋಟಿಸ್ ಜಾರಿಗೊಳಿಸಿದೆ.

'ಸಂಸತ್ ಭವನಕ್ಕೆ ನಿತ್ಯ ಮೆರವಣಿಗೆ'

ನವದೆಹಲಿ: ಮೂರು ಕೃಷಿ ಕಾಯ್ದೆಗಳ ಕುರಿತು ಕೇಂದ್ರ ಸರ್ಕಾರ ಹಾಗೂ ಪ್ರತಿಭಟನೆ ನಿರತ ರೈತರ ನಡುವೆ ತಲೆದೋರಿರುವ ಬಿಕ್ಕಟ್ಟು ಸಂಸತ್ ಅಧಿವೇಶನದಲ್ಲಿ ಮತ್ತಷ್ಟು ಚುರುಕು ಪಡೆಯಲಿದೆ. ಗುರುವಾರದಿಂದ ಆಗಸ್ಟ್ 13ರವರೆಗೆ ಪ್ರತಿದಿನವೂ ಸಂಸತ್ ಭವನಕ್ಕೆ ಮೆರವಣಿಗೆ ನಡೆಸಲು ರೈತರ ಮುಖಂಡರು ಮುಂದಾಗಿದ್ದಾರೆ.

ಮೆರವಣಿಗೆ ನಡೆಸಲು ದೆಹಲಿ ಪೊಲೀಸ್ ಅಧಿಕಾರಿಗಳು ಅನುಮತಿ ನಿರಾಕರಿಸಿದ್ದಾರೆ. ಪರ್ಯಾಯ ಮಾರ್ಗ ಬಳಸುವಂತೆ ಪೊಲೀಸರು ನೀಡಿದ್ದ ಪ್ರಸ್ತಾವವನ್ನು ರೈತರ ಸಂಘಟನೆಗಳು ನಿರಾಕರಿಸಿವೆ. ಸಂಸತ್ತನ್ನು ಮುತ್ತಿಗೆ ಹಾಕಲು ಅಥವಾ ಬಲವಂತವಾಗಿ ಕಟ್ಟಡವನ್ನು ಪ್ರವೇಶಿಸುವ ಯಾವುದೇ ಉದ್ದೇಶ ಇಲ್ಲ ಎಂದು ರೈತರು ಸ್ಪಷ್ಟಪಡಿಸಿದ್ದಾರೆ.

ಸಂಸತ್ತಿನಲ್ಲಿ ಧರಣಿ: ಪ್ರತಿಭಟನೆ ನಡೆಸುತ್ತಿರುವ ರೈತರ ಪರವಾಗಿ ವಿರೋಧ ಪಕ್ಷಗಳ ಸಂಸದರು ಸಂಸತ್ತಿನಲ್ಲಿ ಗುರುವಾರ ಧರಣಿ ನಡೆಸುವ ಸಾಧ್ಯತೆ ಇದೆ.

ಕೋವಿಡ್ ಲಸಿಕೆ: ಪ್ರಗತಿ ಕುಂಠಿತ

ದೇಶದಲ್ಲಿ ಕೋವಿಡ್ ಲಸಿಕೆ ಕಾರ್ಯಕ್ರಮ ಆರಂಭವಾಗಿ ಆರು ತಿಂಗಳು ಕಳೆದಿವೆ. ಲಸಿಕೆ ನೀಡಲು ಹಾಕಿಕೊಳ್ಳಲಾಗಿದ್ದ ಗುರಿಯಲ್ಲಿ ಮೂರನೇ ಒಂದರಷ್ಟು ಜನರಿಗಷ್ಟೇ ಲಸಿಕೆಯ ಮೊದಲ ಡೋಸ್ ನೀಡಲು ಸಾಧ್ಯವಾಗಿದೆ. ಲಸಿಕೆ ಕಾರ್ಯಕ್ರಮದಲ್ಲಿ ಕೆಲವು ರಾಜ್ಯಗಳು ಉತ್ತಮ ಪ್ರಗತಿ ಸಾಧಿಸಿವೆ. ಕೆಲವು ರಾಜ್ಯಗಳು ಮಧ್ಯಮ ಪ್ರಗತಿ ಸಾಧಿಸಿವೆ. ಉಳಿದ ರಾಜ್ಯಗಳು ಲಸಿಕೆ ಕಾರ್ಯಕ್ರಮದಲ್ಲಿ ಬಹಳ ಹಿಂದೆ ಉಳಿದಿವೆ. ಡಿಸೆಂಬರ್ ಅಂತ್ಯದ ವೇಳೆಗೆ 94 ಕೋಟಿ ಜನರಿಗೆ ಲಸಿಕೆಯ ಎರಡೂ ಡೋಸ್ ನೀಡುವ ಗುರಿ ಹಾಕಿಕೊಳ್ಳಲಾಗಿತ್ತು. ಆದರೆ ಈ ವರ್ಷದ ಮೊದಲ ಆರು ತಿಂಗಳಲ್ಲಿ 31.94 ಕೋಟಿ ಜನರಿಗಷ್ಟೇ ಮೊದಲ ಡೋಸ್ ನೀಡಲು ಸಾಧ್ಯವಾಗಿದೆ

ಲಸಿಕೆ ಪ್ರಗತಿ ಮೊದಲ ಡೋಸ್ ಪಡೆದುಕೊಂಡ 18 ವರ್ಷ ಮೇಲ್ಪಟ್ಟವರ ಪ್ರಮಾಣ

ರಾಜ್ಯ/ಕೇಂದ್ರಾಡಳಿತ ಪ್ರದೇಶ	ಲಸಿಕೆಯ ಮೊದಲ ಡೋಸ್ ಪಡೆದವರ ಪ್ರಮಾಣ
ಸಿಕ್ಕಿಂ	100%
ಲಡಾಖ್	84%
ಲಕ್ಷದ್ವೀಪ	81%
ದಾದರ್-ನಗರ್ ಹವೇಲಿ	80%
ತೆಲಂಗಾಣ	49%
ಗುಜರಾತ್	48%
ಕರ್ನಾಟಕ	46%
ರಾಜಸ್ಥಾನ	45%
ದೆಹಲಿ	45%
ಪಶ್ಚಿಮ ಬಂಗಾಳ	26%
ಆಂಧ್ರಪ್ರದೇಶ	26%
ಬಿಹಾರ	24%
ಉತ್ತರಪ್ರದೇಶ	22%

ಅಂಕಿ-ಅಂಶಗಳು

42 ಕೋಟಿ — ರಾಜ್ಯಗಳಿಗೆ ಈವರೆಗೆ ಪೂರೈಕೆ ಮಾಡಲಾಗಿರುವ ಲಸಿಕೆ ಡೋಸ್‌ಗಳ ಸಂಖ್ಯೆ

39.42 ಕೋಟಿ — ರಾಜ್ಯಗಳು ಈವರೆಗೆ ನೀಡಿರುವ ಲಸಿಕೆ ಡೋಸ್‌ಗಳ ಸಂಖ್ಯೆ

2.56 ಕೋಟಿ — ರಾಜ್ಯಗಳ ಬಳಿ ಈಗ ಉಳಿದಿರುವ ಲಸಿಕೆ ಡೋಸ್‌ಗಳ ಸಂಖ್ಯೆ

15.75 ಲಕ್ಷ — ರಾಜ್ಯಗಳಿಗೆ ಕೆಲವೇ ದಿನಗಳಲ್ಲಿ ಪೂರೈಕೆಯಾಗಲಿರುವ ಡೋಸ್‌ಗಳು

ಮೂರನೇ ಒಂದರಷ್ಟು ಜನರಿಗಷ್ಟೇ ಮೊದಲ ಡೋಸ್

94.47 ಕೋಟಿ — ಜನರಿಗೆ ಲಸಿಕೆ ನೀಡುವ ಗುರಿ ಹಾಕಿಕೊಳ್ಳಲಾಗಿದೆ

8.19 ಕೋಟಿ — ಮೊದಲ ಮತ್ತು ಎರಡನೇ ಡೋಸ್ ಎರಡನ್ನೂ ಪಡೆದುಕೊಂಡವರ ಸಂಖ್ಯೆ

31.94 ಕೋಟಿ — ಮೊದಲ ಡೋಸ್ ಪಡೆದುಕೊಂಡವರ ಸಂಖ್ಯೆ

ಆಧಾರ: ಕೋವಿನ್ ಡ್ಯಾಶ್‌ಬೋರ್ಡ್, ಪಿಐಬಿ

ಪ್ರಜಾವಾಣಿ LIVE

Prajavani.net Prajavani Prajavani

ಫೇಸ್‌ಬುಕ್, ಯೂಟ್ಯೂಬ್, ಟ್ವಿಟರ್‌ನಲ್ಲಿ ಏಕಕಾಲಕ್ಕೆ ನೇರ ಪ್ರಸಾರ

ಸಂವಾದ

ಯಡಿಯೂರಪ್ಪ ನಂತರ ಏನು?

ಸಂವಾದದಲ್ಲಿ ಭಾಗವಹಿಸುವವರು

ಎಚ್. ವಿಶ್ವನಾಥ್ ವಿಧಾನ ಪರಿಷತ್ ಸದಸ್ಯ, ಬಿಜೆಪಿ

ವಿ.ಆರ್. ಸುದರ್ಶನ್ ಕಾಂಗ್ರೆಸ್ ಮಾಧ್ಯಮ ವಿಭಾಗದ ಸಹ ಅಧ್ಯಕ್ಷ

ಎನ್. ರವಿಕುಮಾರ್ ವಿಧಾನ ಪರಿಷತ್ ಸದಸ್ಯ ಬಿಜೆಪಿ ರಾಜ್ಯ ವಕ್ತಾರ

ರವೀಂದ್ರ ರೇಷ್ಮೆ ಹಿರಿಯ ಪತ್ರಕರ್ತ, ರಾಜಕೀಯ ವಿಶ್ಲೇಷಕ

ಇಂದು ಬೆಳಿಗ್ಗೆ 10.30 ರಿಂದ 11.30

ಪ್ರಜಾವಾಣಿ ಪಾಡ್‌ಕಾಸ್ಟ್: ವಚನವಾಣಿಗೆ 200ರ ಸಂಭ್ರಮ

ಕನ್ನಡ ಪತ್ರಿಕಾಲೋಕದಲ್ಲಿಯೇ ವಿನೂತನ ಪ್ರಯೋಗವಾಗಿ ಪ್ರಜಾವಾಣಿಯು 'ಕನ್ನಡ ಧ್ವನಿ' ಹೆಸರಿನಲ್ಲಿ ಪಾಡ್‌ಕಾಸ್ಟ್ ಚಾನೆಲ್ ಆರಂಭಿಸಿದ್ದು, ಇದರ ಮೂಲಕ ನಿತ್ಯವೂ ಮೂಡಿಬರುತ್ತಿರುವ 'ವಚನವಾಣಿ: ಶರಣರ ವಚನಗಳ ವಾಚನ, ವಿಶ್ಲೇಷಣೆ ಮತ್ತು ಗಾಯನ' ಸರಣಿಗೆ ಜುಲೈ 19ರಂದು ದಾಖಲೆಯ 200ನೆಯ ಕಂತಿನ ಸಡಗರ.

ಅಂತರ್ಜಾಲದ ಮೂಲಕ ದೇಶ-ವಿದೇಶಗಳಿಗೆ ತಲುಪುತ್ತಿರುವ ಈ 'ಕನ್ನಡ ಧ್ವನಿ' ಕಾರ್ಯಕ್ರಮ ಇದುವರೆಗೆ ನಾಲ್ಕು ಲಕ್ಷಕ್ಕೂ ಅಧಿಕ ಬಾರಿ ಕೇಳಲ್ಪಟ್ಟಿದೆ.

ಪ್ರಜಾವಾಣಿಯ ವಚನವಾಣಿ ಕಾರ್ಯಕ್ರಮ ಸರಣಿಯು ಕನ್ನಡ ಪತ್ರಿಕಾ ಪ್ರಪಂಚದಲ್ಲಿ ದಾಖಲೆ ಎನಿಸಿದೆ. ಡಾ.ಬಸವರಾಜ ಸಾದರ, ಡಾ. ಕುಮಾರ್ ಕಣವಿ, ಕವಿತಾ ಸಾದರ ಮತ್ತು ಬಸವಕುಮಾರ್ ಅವರು ವಚನವಾಣಿ ಪಾಡ್‌ಕಾಸ್ಟ್ ಪ್ರಸ್ತುತಪಡಿಸುತ್ತಿದ್ದಾರೆ.

ಪರಿಕಲ್ಪನೆ, ವಾಚನ ಮತ್ತು ವಿಶ್ಲೇಷಣೆಯನ್ನು ಡಾ. ಬಸವರಾಜ ಸಾದರ ಅವರು ಮಾಡುತ್ತಿದ್ದು, ರಾಗಸಂಯೋಜನೆ-ಗಾಯನವನ್ನು ಡಾ. ಕುಮಾರ್ ಕಣವಿ ಮತ್ತು ಕವಿತಾ ಸಾದರ ನಡೆಸಿಕೊಡುತ್ತಿದ್ದಾರೆ.

ಪ್ರಜಾವಾಣಿ ಕನ್ನಡ ಧ್ವನಿ

ಪ್ರಜಾವಾಣಿ ಕ್ಲಬ್ ಹೌಸ್‌ನಲ್ಲಿ ಅಭಿಮಾನದ ನುಡಿಧಾರೆ

'ಆಲದ ಮರ'ದಡಿ ಸಿದ್ದಲಿಂಗಯ್ಯ ನೆನಪು

ಪ್ರಜಾವಾಣಿ ವಾರ್ತೆ

ಆಲದಮರ (ಪ್ರಜಾವಾಣಿ ಕ್ಲಬ್ ಹೌಸ್): ಭಾನುವಾರ ಬೆಳಿಗ್ಗೆ ನಾಡಿನ ಹಲವೆಡೆ ಧೋ ಎಂದು ಸುರಿಯುತ್ತಿತ್ತು ಮುಗಿಲಿಂದ ಮುಸಲಧಾರೆ. ಪ್ರಜಾವಾಣಿ ಕ್ಲಬ್ ಹೌಸ್ ನಲ್ಲಿ ಅದೇ ವೇಳೆ ಅಗಲಿದ ಕವಿ ಸಿದ್ದಲಿಂಗಯ್ಯವರ ಭಾವುಕ ನೆನಪಿನ ನುಡಿಧಾರೆ. ಸುಮಾರು ಮೂರು ಗಂಟೆಗಳ ಕಾಲ ಗೆಳೆಯರು, ಶಿಷ್ಯರು, ಅಭಿಮಾನಿಗಳು, ಮಗಳು- ಹೀಗೆ ಕವಿಯನ್ನು ನೆನಪಿಸಿಕೊಂಡವರ ಮಾತಿನ ಮಳೆಯಲ್ಲಿ ನೂರಾರು ಜನರು ತೋಯ್ದರು.

ಮೊದಲ ಮಾತು ಆಡಿದ ಅಗ್ರಹಾರ ಕೃಷ್ಣಮೂರ್ತಿ ಅವರು, 'ಸಾಹಿತ್ಯದಲ್ಲಿ ಹಲವಾರು ಸಂಹಿತೆಗಳು ಇವೆ. ಸಿದ್ದಲಿಂಗಯ್ಯ ಅವರದ್ದು ಮೆಲುದನಿಯ ಹಾಸ್ಯ ಸಂಹಿತೆ. ಅವರ ಹಾಡುಗಳು ಎಂಥದ್ದೇ ಕ್ರಾಂತಿಯ ಕಿಡಿ ಹೊತ್ತಿಸಿರಬಹುದು. ಆದರೆ ಮಾತು, ಮನಸ್ಸು ಅಷ್ಟೇ ಸಾತ್ವಿಕವಾಗಿತ್ತು. 1970ರ ದಶಕದ ಆಸುಪಾಸಿನಲ್ಲಿ ನವೋದಯ ಸಾಹಿತ್ಯದ ಕಾಲದಲ್ಲಿ ಇಕ್ರಲ್ಲಾ, ವದೀರ್ಲಾ ಎಂಬ ಸಾಹಿತ್ಯದ ಸಾಲುಗಳು ಅಂದಿನ ಕಾಲದ ಸಾಹಿತ್ಯ ಕೃಷಿ ಮಾಡುತ್ತಿದ್ದ ಹಿರಿಯ ಕವಿಗಳ ಕಿವಿಗೂ ಬಿದ್ದು ಅವರೂ ತಿರುಗಿ ನೋಡುವಂತಾಗಿತ್ತು' ಎಂದರು.

ಸುಬ್ಬು ಹೊಲೆಯಾರ್ ಅವರು ಬಾಳುಪೇಟೆಯಲ್ಲಿ ನಡೆದ ದಲಿತರ ಮೆರವಣಿಗೆಯಲ್ಲಿ ಹುಟ್ಟಿದ 'ಹೋರಾಟದ ಸಾಗರಕೆ ಸಾವಿರಾರು ನದಿಗಳು' ಎಂಬ ಕವಿತೆಯನ್ನು ನೆನಪಿಸಿಕೊಂಡರು. ಈ ಹಾಡುಗಳು ಅಕ್ಷರವನ್ನು ಮೀರಿ ಜನರಿಂದ ಜನರ ಬಾಯಿಗೆ ಹರಿದಾಡಿತು. ಈ ನೆಲೆಯಲ್ಲಿ ಅವರೊಬ್ಬ ಜನಪದ ಕವಿ ಎಂದು ಸಿದ್ದಲಿಂಗಯ್ಯ ಅವರನ್ನು ಬಣ್ಣಿಸಿದರು.

ಬಿ.ಎಂ ಪುಟ್ಟಯ್ಯ ಅವರು ಸಿದ್ದಲಿಂಗಯ್ಯ ಅವರನ್ನು ಬಣ್ಣಿಸಿದ್ದು ಅವರೊಬ್ಬ ಜನಪದ ಕವಿ ಎಂದೇ, 'ಕರ್ನಾಟಕದ ಅಷ್ಟೂ ಹಳ್ಳಿಗಳ ಕಷ್ಟ ಸುಖವನ್ನು ಸಿದ್ದಲಿಂಗಯ್ಯ ಅವರು ಸದನದಲ್ಲಿ ಸಮರ್ಥವಾಗಿ ಮಂಡಿಸಿದ್ದರು. ಇಂದು ಪರಿಶಿಷ್ಟ ವಿದ್ಯಾರ್ಥಿಗಳ ಹಾಸ್ಟೆಲ್‌ಗಳಲ್ಲಿ ವಿದ್ಯಾರ್ಥಿಗಳಿಗೆ ಸೋಪು, ತಲೆಗೆ ಎಣ್ಣೆ ಸಿಗುತ್ತದೆ ಎಂದಾದರೆ ಅದಕ್ಕೆ ಸಿದ್ದಲಿಂಗಯ್ಯ ಅವರು ಬಹಿರಂಗ ಸಭೆಯೊಂದರಲ್ಲಿ ಪ್ರಸ್ತಾಪಿಸಿದ್ದೇ ಕಾರಣ' ಎಂದರು.

ವಿಮರ್ಶಕ ಆರ್.ಜಿ.ಹಳ್ಳಿ ನಾಗರಾಜ್ ಅವರು ಸಿದ್ದಲಿಂಗಯ್ಯ ಅವರ ಆಫ್ರಿಕನ್ ಸಾಹಿತ್ಯದ ಓದು ಮತ್ತು ಪ್ರೀತಿಯ ಕುರಿತು ಗಮನ ಸೆಳೆದರು.

ಸಾಹಿತಿ, ಚಿಂತಕ ಡಾ.ಪುರುಷೋತ್ತಮ ಬಿಳಿಮಲೆ ಅವರು ಮಾತನಾಡಿ, 'ನಾವು ಕೂಡಾ ಸಿದ್ದಲಿಂಗಯ್ಯ ಅವರು ಪ್ರತಿಪಾದಿಸಿದ 'ಚೋಮನ ಮಕ್ಕಳು'. ನಾನೂ ಕೂಡಾ ಚೋಮನ 'ಮಗ'(ನಾಟಕದ ಪಾತ್ರ). ಪುತ್ತೂರಿನ ಗೋಡೆಗಳಲ್ಲಿ ಅವರ ಕಾವ್ಯದ ಸಾಲುಗಳನ್ನು ಬರೆದಿದ್ದೆವು' ಎಂದು ಹಳೆಯ ದಿನಗಳನ್ನು ನೆನಪಿಸಿಕೊಂಡರು.

ಸಿದ್ದಲಿಂಗಯ್ಯ ಅವರ ಪುತ್ರಿ ಡಾ.ಮಾನಸಾ ಸಿದ್ದಲಿಂಗಯ್ಯ ಅವರ ಮಾತು ಹೀಗಿತ್ತು, 'ಅವರು ಎಂದೂ ಆಹಾರವನ್ನು ಇಂಥದ್ದೇ ಬೇಕು ಎಂದು ಬಯಸಿ ಕೇಳಿದವರಲ್ಲ. ಏನು ಬೇಯಿಸಿ ಕೊಡುತ್ತಿದ್ದೆನೋ ಅದನ್ನು ಹಾಗೆಯೇ ಅವರು ಪ್ರೀತಿಯಿಂದ ತಿನ್ನುತ್ತಿದ್ದರು' ಎಂದು ಮಾನಸಾ ಹೇಳಿದರು.

ಮಾನಸಾ ಅವರ ಪುಟ್ಟ ಮಗಳು ತಾತನ ಪದ್ಯವೊಂದನ್ನು ಹಾಡಿದಳು.

ಸಿದ್ದಲಿಂಗಯ್ಯ ಅವರ ಆತ್ಮೀಯರಾಗಿದ್ದ ಗಾಯಕ ಜನ್ನಿ (ಜನಾರ್ದನ್) ಈ ನೆನಪಿನ ಮಳೆಯನ್ನು ಇನ್ನಷ್ಟು ತೇವವಾಗಿಸಿದರು. ಸಿದ್ದಲಿಂಗಯ್ಯ ಅವರ ಎರಡು ಮೂರು ಕವಿತೆಗಳನ್ನು ಜನ್ನಿ ಅವರು ಸುಶ್ರಾವ್ಯವಾಗಿ ಹಾಡಿದರು.

ಗೋಷ್ಠಿಯಲ್ಲಿ ಸಿದ್ದಲಿಂಗಯ್ಯ ಅವರ ಹಾಸ್ಯಪ್ರವೃತ್ತಿಯನ್ನು ತೆರೆದಿಟ್ಟದ್ದು ಕಿರುತೆರೆ ನಿರ್ದೇಶಕ ಟಿ.ಎನ್. ಸೀತಾರಾಂ ಅವರ ಮಾತುಗಳು. ಸಿದ್ದಲಿಂಗಯ್ಯ ಅವರು ಆಸ್ಪತ್ರೆಗೆ ಸೇರುವ ಮುನ್ನಾ ದಿನದ ಸಂಭಾಷಣೆಯನ್ನು ನೆನಪಿಸಿಕೊಂಡು ಅವರು ಭಾವುಕರಾದರು. 'ನಾನು ಸಾಯುವುದಿಲ್ಲ ಗುರುಗಳೇ... ನಾನು ಹೇಗೆ ಸಾಯುವುದಕ್ಕೆ ಸಾಧ್ಯ ನೀವೇ ಹೇಳಿ? ಹೀಗೆ ಸಾವನ್ನೂ ನಗೆಯಾಗಿಯೇ ತೇಲಿಸುತ್ತಲೇ ಹಾಗೇ ಹೊರಟುಬಿಟ್ಟರು ಸಿದ್ದಲಿಂಗಯ್ಯ...' ಎಂದು ಹೇಳುವಲ್ಲಿಗೆ ಸೀತಾರಾಂ ಅವರ ಧ್ವನಿಯೂ ತಡವರಿಸಿಬಿಟ್ಟಿತು.

ಆರಂಭದಲ್ಲಿ, ಗಾಯಕ ಪಿಚ್ಚಳ್ಳಿ ಶ್ರೀನಿವಾಸ್ ಅವರು ಅಂಬೇಡ್ಕರ್ ಕುರಿತು ಸಿದ್ದಲಿಂಗಯ್ಯ ಅವರು ಬರೆದ 'ನಾಡ ನಡುವಿನಿಂದ ಸಿಡಿದ ನೋವಿನ ಕೂಗೇ.. ಹಾಡನ್ನು ಹಾಡಿದರು.

ಅನಿಲ್ ಮನೆಗಳಲ್ಲಿ ಇ.ಡಿ ಶೋಧ

ನಾಗಪುರ: ಹಣ ಅಕ್ರಮ ವರ್ಗಾವಣೆ ಪ್ರಕರಣಕ್ಕೆ ಸಂಬಂಧಿಸಿದಂತೆ ಜಾರಿ ನಿರ್ದೇಶನಾಲಯವು (ಇ.ಡಿ) ನಾಗಪುರ ಜಿಲ್ಲೆಯಲ್ಲಿನ ಎರಡು ಸ್ಥಳಗಳಲ್ಲಿರುವ ಮಹಾರಾಷ್ಟ್ರದ ಮಾಜಿ ಗೃಹ ಸಚಿವ ಅನಿಲ್ ದೇಶಮುಖ್ ಅವರ ಎರಡು ಮನೆಗಳಲ್ಲಿ ಭಾನುವಾರ ಶೋಧ ಕಾರ್ಯಾಚರಣೆ ನಡೆಸಿದೆ.

'ಕಾಟೋಲ್ ಪಟ್ಟಣ ಮತ್ತು ಕಟೋಲ್ ಸಮೀಪದಲ್ಲೇ ಇರುವ ವಾಡ್ವಿಹಿರಾ ಗ್ರಾಮದಲ್ಲಿರುವ ದೇಶ್‌ಮುಖ್ ಅವರ ಮನೆಗಳಲ್ಲಿ ಇ.ಡಿ ಪ್ರತ್ಯೇಕ ತಂಡಗಳು ಶೋಧ ಕಾರ್ಯಾಚರಣೆ ನಡೆಸಿವೆ. ಭಾನುವಾರ ಬೆಳಿಗ್ಗೆ 6 ಗಂಟೆಯಿಂದ ಶೋಧ ಕಾರ್ಯಾಚರಣೆ ನಡೆಸಲಾಯಿತು' ಎಂದು ಪೊಲೀಸ್ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಅನಿಲ್ ದೇಶಮುಖ್

ಅನಿಲ್ ದೇಶಮುಖ್ ವಿರುದ್ಧ ದಾಖಲಾಗಿರುವ ಬಹುಕೋಟಿ ಲಂಚ ಮತ್ತು ಸುಲಿಗೆ ಆರೋಪಕ್ಕೆ ಸಂಬಂಧಿಸಿದಂತೆ ಅಕ್ರಮ ಹಣ ವರ್ಗಾವಣೆ ಪ್ರಕರಣ ಕುರಿತು ಇ.ಡಿ ತನಿಖೆ ನಡೆಸುತ್ತಿದೆ. ಲಂಚ ಪಡೆದ ಆರೋಪಕ್ಕಾಗಿಯೇ ಗೃಹ ಸಚಿವ ಸ್ಥಾನಕ್ಕೆ ದೇಶಮುಖ್ ಅವರು ಕಳೆದ ಏಪ್ರಿಲ್‌ನಲ್ಲಿ ರಾಜೀನಾಮೆ ನೀಡಿದ್ದರು.

ಸಂಸತ್ ಅಧಿವೇಶನ: ತರಾಟೆಗೆ ಪ್ರತಿಪಕ್ಷ ಸಜ್ಜು

ಒಂದನೇ ಪುಟದಿಂದ

ಸುಮಾರು ಎರಡೂವರೆ ಗಂಟೆಗಳ ಕಾಲ ಸಭೆ ನಡೆಯಿತು. ಆಗಸ್ಟ್ 13ರಂದು ಅಧಿವೇಶನ ಕೊನೆಗೊಳ್ಳಲಿದೆ.

ಜನರಿಗೆ ಸಂಬಂಧಿಸಿದ ಸಮಸ್ಯೆಗಳ ಬಗ್ಗೆ ಪಕ್ಷಗಳು ಸೌಹಾರ್ದಯುತವಾಗಿ ದನಿ ಎತ್ತಬೇಕು ಹಾಗೂ ಅದಕ್ಕೆ ಪ್ರತಿಕ್ರಿಯಿಸಲು ಸರ್ಕಾರಕ್ಕೆ ಅವಕಾಶ ನೀಡಬೇಕು ಎಂದು ತಿಳಿಸಿದ ಪ್ರಧಾನಿ, ಅಂತಹ ಅನುಕೂಲಕರ ವಾತಾವರಣವನ್ನು ಸೃಷ್ಟಿಸುವುದು ಎಲ್ಲರ ಜವಾಬ್ದಾರಿಯಾಗಿದೆ ಎಂದು ಒತ್ತಿ ಹೇಳಿದರು.

ಅಧಿವೇಶನ ಸುಗಮವಾಗಿ ನಡೆಯಬೇಕು ಎಂದು ಪ್ರಧಾನಿ ಆಶಿಸಿದರು. 'ಸಂಸದರು ನಿಜವಾಗಿಯೂ ವಾಸ್ತವ ಸ್ಥಿತಿಯನ್ನು ಅರ್ಥ ಮಾಡಿಕೊಂಡಿದ್ದಾರೆ. ಆದ್ದರಿಂದ ಸದನದ ಚರ್ಚೆಗಳಲ್ಲಿ ಅವರ ಭಾಗವಹಿಸುವಿಕೆಯಿಂದ ನಿರ್ಧಾರ ತೆಗೆದುಕೊಳ್ಳುವ ಪ್ರಕ್ರಿಯೆ ಇನ್ನಷ್ಟು ಉತ್ಕೃಷ್ಟವಾಗಿರಲಿದೆ' ಎಂದರು.

ಸಂಸದೀಯ ಸಮಿತಿಯ ಪರಿಶೀಲನೆಗಾಗಿ ಮಸೂದೆಗಳನ್ನು ಕಳುಹಿಸಬೇಕು ಎಂದು ಪ್ರತಿಪಕ್ಷ ಪಕ್ಷಗಳ ನಾಯಕರು ಒತ್ತಾಯಿಸಿದರು. ಸಾಮಗ್ರಿಗಳ ಬೆಲೆ ಏರಿಕೆ, ಇಂಧನ ದರ ಏರಿಕೆ, ರೈತರ ಪ್ರತಿಭಟನೆ, ಕೋವಿಡ್ ನಿರ್ವಹಣೆ, ಆರ್ಥಿಕತೆ ಮತ್ತು ಭಾರತ-ಚೀನಾ ಗಡಿಯಲ್ಲಿನ ಪರಿಸ್ಥಿತಿ ಕುರಿತು ಚರ್ಚಿಸಲು ಬಯಸುವುದಾಗಿ ತಿಳಿಸಿದ ಮುಖಂಡರು, ವಿವಾದಾತ್ಮಕ ಕೃಷಿ ಕಾನೂನುಗಳನ್ನು ರದ್ದುಪಡಿಸಬೇಕು ಎಂದು ಒಗ್ಗಟ್ಟಿನಿಂದ ಒತ್ತಾಯಿಸಿದರು.

ಸಂಸತ್ ಅಧಿವೇಶನದ ಮುನ್ನಾದಿನವಾದ ಭಾನುವಾರ ದೆಹಲಿಯಲ್ಲಿ ಸರ್ವಪಕ್ಷ ಸಭೆ ನಡೆಸಿ ಹೊರಬರುತ್ತಿರುವ ಪ್ರಧಾನಿ ನರೇಂದ್ರ ಮೋದಿ–ಪಿಟಿಐ ಚಿತ್ರ

- ಸಂಸದರ ಪ್ರದೇಶಾಭಿವೃದ್ಧಿ ನಿಧಿ ಮರು ಸ್ಥಾಪಿಸುವಂತೆ ವಿವಿಧ ಪಕ್ಷಗಳು ಮಾಡಿದ ಮನವಿಗೆ ಸ್ಪೀಕರ್ ಓಂ ಬಿರ್ಲಾ ಸ್ಪಂದಿಸಿದ್ದಾರೆ. ಈ ವಿಷಯವನ್ನು ಸಂಬಂಧಪಟ್ಟವರ ಮುಂದೆ ಇರಿಸುವುದಾಗಿ ಭರವಸೆ ನೀಡಿದ್ದಾರೆ.
- ರೈತರ ಸಮಸ್ಯೆಗಳ ಕುರಿತು ಹಲವಾರು ವಿರೋಧ ಪಕ್ಷಗಳು ಸೋಮವಾರ ಸಂಸತ್ತಿನ ಉಭಯ ಸದನಗಳಲ್ಲಿ ನಿಲುವಳಿ ಮಂಡನೆ ನೋಟಿಸ್ ನೀಡಲಿವೆ ಎಂದು ಆರ್‌ಎಸ್‌ಪಿ ನಾಯಕ ಎನ್.ಕೆ. ಪ್ರೇಮಚಂದ್ರನ್ ತಿಳಿಸಿದ್ದಾರೆ.
- ಪ್ರಧಾನಿ ನರೇಂದ್ರ ಮೋದಿ ಅವರು ಭಾನುವಾರ ಎನ್‌ಡಿಎ ಅಂಗಪಕ್ಷಗಳ ಸಭೆ ನಡೆಸಿದರು. ಸಚಿವರಾದ ರಾಜನಾಥ್ ಸಿಂಗ್, ಅಮಿತ್ ಶಾ, ಇತರರು ಉಪಸ್ಥಿತರಿದ್ದರು. ಅಪ್ನಾ ದಳ, ಜೆಡಿಯು, ಎಐಎಡಿಎಂಕೆ, ಆರ್‌ಪಿಐ, ಎಲ್‌ಜೆಪಿ ಮುಖಂಡರು ಇದ್ದರು.

ರಾಜ್ಯಸಭೆಯಲ್ಲಿ ಪ್ರತಿಪಕ್ಷದ ನಾಯಕ ಮಲ್ಲಿಕಾರ್ಜುನ ಖರ್ಗೆ ಮತ್ತು ಕಾಂಗ್ರೆಸ್ ನಾಯಕ ಅಧೀರ್ ರಂಜನ್ ಚೌಧರಿ ಅವರು ಉಪ ಸ್ಪೀಕರ್ ಹುದ್ದೆ ಖಾಲಿ ಇರುವ ವಿಷಯವನ್ನು ಪ್ರಸ್ತಾಪಿಸಿದ್ದಾರೆ ಎಂದು ಮೂಲಗಳು ತಿಳಿಸಿವೆ. ರಫೇಲ್ ಬಗ್ಗೆ ಚರ್ಚೆಯ ಅಗತ್ಯವಿದೆ ಎಂದು ಕಾಂಗ್ರೆಸ್ ನಾಯಕರು ಒತ್ತಿ ಹೇಳಿದರು.

ತೃಣಮೂಲ ಕಾಂಗ್ರೆಸ್ ಮುಖಂಡರಾದ ಸುದೀಪ್ ಬಂದೋಪಾಧ್ಯಾಯ ಮತ್ತು ಡೆರೆಕ್ ಒಬ್ರಿಯಾನ್ ಅವರು ಇಂಧನ ಬೆಲೆ ಏರಿಕೆ, ಲಸಿಕೆ ಕೊರತೆ, ಒಕ್ಕೂಟ ವ್ಯವಸ್ಥೆಯನ್ನು ಹಾಳುಗೆಡವುತ್ತಿರುವ ನಿರ್ಧಾರಗಳು, ಸಂಸತ್ತಿನ ಸ್ಥಳೀಯ ಪ್ರದೇಶಾಭಿವೃದ್ಧಿ ಯೋಜನೆ ಮರುಜಾರಿ (ಎಂಪಿಎಲ್‌ಎಡಿ) ಮತ್ತು ಕೇಂದ್ರ ಸಂಸ್ಥೆಗಳ ಪ್ರೇರಿತ ಕಾರ್ಯವೈಖರಿಯ ಬಗ್ಗೆ ದನಿ ಎತ್ತಿದರು.

ಸಿಪಿಎಂ ಮುಖಂಡ ಎಳಮರಂ ಕರೀಮ್ ಅವರು ರೈತರ ಸಮಸ್ಯೆಗಳ ಬಗ್ಗೆ ಪ್ರತ್ಯೇಕ ಚರ್ಚೆಗೆ ಒತ್ತಾಯಿಸಿದರು. ಕಾರ್ಮಿಕ ಸಂಹಿತೆಗಳನ್ನು ಮರುಪರಿಶೀಲಿಸುವಂತೆಯೂ ಅವರು ಒತ್ತಾಯಿಸಿದರು.

ಶಾಸಕರ ಅನರ್ಹತೆ ವಿಚಾರ ಪ್ರಸ್ತಾಪಿಸುವ ಸಂವಿಧಾನದ 10ನೇ ಶೆಡ್ಯೂಲ್ ಬಗ್ಗೆ ತೃಣಮೂಲ ಕಾಂಗ್ರೆಸ್, ವೈಎಸ್‌ಆರ್ ಕಾಂಗ್ರೆಸ್, ಬಿಎಸ್‌ಪಿ, ಟಿಆರ್‌ಎಸ್ ಪಕ್ಷಗಳು ದನಿ ಎತ್ತಿದವು. ಮೂವರು ಸಂಸದರ ವಿರುದ್ಧ ತೃಣಮೂಲ ಕಾಂಗ್ರೆಸ್ ಮತ್ತು ವೈಎಸ್‌ಆರ್ ಕಾಂಗ್ರೆಸ್ ಸಲ್ಲಿಸಿರುವ ಪ್ರತ್ಯೇಕ ಅರ್ಜಿಗಳು ಲೋಕಸಭಾ ಸ್ಪೀಕರ್ ಮುಂದೆ ಬಾಕಿ ಉಳಿದಿದ್ದು, ಅಂತಹ ಅರ್ಜಿಗಳನ್ನು ಸಮಯಕ್ಕೆ ಸರಿಯಾಗಿ ವಿಲೇವಾರಿ ಮಾಡಬೇಕೆಂದು ಒತ್ತಾಯಿಸಿದವು.

ಸಂಸತ್ತಿನ ಒಳಗೇ ಚರ್ಚೆ: ಪ್ರತಿಪಕ್ಷಗಳ ಇಂಗಿತ

ಕೋವಿಡ್ ಪರಿಸ್ಥಿತಿ ಕುರಿತು ಪ್ರತಿಪಕ್ಷ ಮುಖಂಡರಿಗೆ ಪ್ರಧಾನಿ ನರೇಂದ್ರ ಮೋದಿ ಅವರು ಮಂಗಳವಾರ ಮಾಹಿತಿ ನೀಡಲಿದ್ದಾರೆ ಎಂದು ಸರ್ಕಾರ ಹೇಳಿದೆ. ಆದರೆ ಇದಕ್ಕೆ ಪ್ರತಿಪಕ್ಷಗಳು ವಿರೋಧ ವ್ಯಕ್ತಪಡಿಸಿದ್ದು, ಚರ್ಚೆಗಳು ಸದನದಲ್ಲೇ ಆಗಲಿ ಎಂದು ತಮ್ಮ ನಿಲುವು ಸ್ಪಷ್ಟಪಡಿಸಿವೆ.

ಕಾಂಗ್ರೆಸ್, ತೃಣಮೂಲ ಕಾಂಗ್ರೆಸ್, ಸಿಪಿಎಂ, ಸಿಪಿಐ, ಸಮಾಜವಾದಿ ಪಕ್ಷ ಮತ್ತು ಎಎಪಿ ಮುಂತಾದ ಪಕ್ಷಗಳು ಈ ವಿಚಾರವನ್ನು ವಿರೋಧಿಸಿದ್ದು, ಸರ್ಕಾರವು ಕೇವಲ ಮುಖಂಡರಿಗೆ ಮಾಹಿತಿ ನೀಡುವ ಬದಲು ಸದನದಲ್ಲಿ ಎಲ್ಲ ಸಂಸದರಿಗೆ ವಿವರಿಸಬೇಕು ಎಂದಿವೆ.

ತಜ್ಞರಿಂದ ವಿಷಯ ಮಂಡನೆ ಮಾಡಿಸುವ ಪ್ರಸ್ತಾವವನ್ನು ಸರ್ಕಾರ ಇರಿಸಿದೆ ಎಂದು ಸಚಿವ ಪ್ರಲ್ಹಾದ ಜೋಷಿ ತಿಳಿಸಿದ್ದಾರೆ.

> **ಯಾವುದೇ ವಿಷಯದ ಕುರಿತು ಸರ್ಕಾರ ಚರ್ಚೆಗೆ ಸಿದ್ಧವಾಗಿದೆ. 17 ಹೊಸ ಮಸೂದೆ ಸೇರಿ 31 ಮಸೂದೆ ಮಂಡನೆಯಾಗಲಿವೆ**
>
> **ಪ್ರಲ್ಹಾದ ಜೋಷಿ,** ಸಂಸದೀಯ ವ್ಯವಹಾರಗಳ ಸಚಿವ

ಉತ್ತರ ಪ್ರದೇಶ ವಿಧಾನಸಭಾ ಚುನಾವಣೆ

'ಮೈತ್ರಿಗೆ ಮನಸ್ಸು, ಪಕ್ಷಕ್ಕೆ ಲಾಭವಿಲ್ಲ'

ಪ್ರಜಾವಾಣಿ ವಾರ್ತೆ

ಲಖನೌ: 'ಉತ್ತರ ಪ್ರದೇಶ ವಿಧಾನಸಭೆಯ ಮುಂಬರುವ ಚುನಾವಣೆಯಲ್ಲಿ ಇತರ ಪಕ್ಷಗಳೊಂದಿಗೆ ಮೈತ್ರಿ ಮಾಡಿಕೊಳ್ಳುವ ಬಗ್ಗೆ ಇನ್ನೂ ಯಾವುದೇ ನಿರ್ಧಾರ ಕೈಗೊಂಡಿಲ್ಲ' ಎಂದು ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಪ್ರಿಯಾಂಕಾ ಗಾಂಧಿ ವಾದ್ರಾ ಅವರು ಭಾನುವಾರ ಹೇಳಿದ್ದಾರೆ.

ಪ್ರಿಯಾಂಕಾ ಗಾಂಧಿ ವಾದ್ರಾ

'ಮೈತ್ರಿ ಮಾಡಿಕೊಳ್ಳಲು ತಮ್ಮ ಪಕ್ಷ ಮುಕ್ತ ಮನಸ್ಸು ಹೊಂದಿದೆ. ಆದರೆ, ಮೈತ್ರಿಯಿಂದ ನಮಗೆ ಯಾವುದೇ ರೀತಿಯ ಪ್ರಯೋಜನವಾಗಿಲ್ಲ' ಎಂದು ಅವರು ಹೇಳಿದ್ದಾರೆ.

'ಬಿಜೆಪಿಯನ್ನು ಸೋಲಿಸುವುದೇ ನಮ್ಮ ಗುರಿ. ಹೀಗಾಗಿ, ಸಾಧಕ-ಬಾಧಕಗಳ ಬಗ್ಗೆ ವಿಶ್ಲೇಷಣೆ ನಡೆಸಿದ ಬಳಿಕವೇ ಮೈತ್ರಿಯ ಬಗ್ಗೆ ನಿರ್ಧಾರ ಕೈಗೊಳ್ಳಲಾಗುವುದು. ಆದರೆ, ನಮ್ಮ ಪಕ್ಷದ ಭವಿಷ್ಯಕ್ಕೆ ಹಾನಿಯಾಗುವಂತಹ ಯಾವುದೇ ನಿರ್ಧಾರವನ್ನು ಕೈಗೊಳ್ಳುವುದಿಲ್ಲ' ಎಂದು ಉತ್ತರ ಪ್ರದೇಶದ ಉಸ್ತುವಾರಿಯಾಗಿರುವ ಪ್ರಿಯಾಂಕಾ ತಿಳಿಸಿದ್ದಾರೆ.

'ಪ್ರಿಯಾಂಕಾ ರಾಜಕೀಯ ಪ್ರವಾಸಿಗರು' ಎನ್ನುವ ಬಿಜೆಪಿ ಟೀಕೆಯನ್ನು ತಳ್ಳಿ ಹಾಕಿದ ಅವರು, 'ಇದು ಬಿಜೆಪಿಯ ಅಪಪ್ರಚಾರ. ನಾನು ಮತ್ತು ರಾಹುಲ್ ರಾಜಕೀಯವನ್ನು ಗಂಭೀರವಾಗಿ ತೆಗೆದುಕೊಳ್ಳುವುದಿಲ್ಲ ಎನ್ನುವುದನ್ನು ಬಿಂಬಿಸಲು ಬಿಜೆಪಿ ಪ್ರಯತ್ನಿಸುತ್ತಿದೆ' ಎಂದು ದೂರಿದರು.

ಏಕಾಂಗಿ ಸ್ಪರ್ಧೆಗೆ ಒಲವು: ವಿಧಾನಸಭೆ ಚುನಾವಣೆಯಲ್ಲಿ ಕಾಂಗ್ರೆಸ್ ಏಕಾಂಗಿಯಾಗಿ ಸ್ಪರ್ಧಿಸಬೇಕು ಎಂದು ಶನಿವಾರ ಪಕ್ಷದ ಮುಖಂಡರ ಜತೆ ನಡೆದ ಸಭೆಯಲ್ಲಿ ಪ್ರಿಯಾಂಕಾ ಪ್ರತಿಪಾದಿಸಿದ್ದರು ಎಂದು ಮೂಲಗಳು ತಿಳಿಸಿವೆ.

ಬ್ರಾಹ್ಮಣರ ಸೆಳೆಯಲು ಜುಲೈ 23ರಂದು ಬಿಎಸ್‌ಪಿ ಅಭಿಯಾನ

ಲಖನೌ: ಉತ್ತರ ಪ್ರದೇಶದಲ್ಲಿ 2022ರಲ್ಲಿ ವಿಧಾನಸಭಾ ಚುನಾವಣೆಗಳು ನಡೆಯಲಿದ್ದು, ಬಿಎಸ್‌ಪಿ ಈಗಿನಿಂದಲೇ ಚುನಾವಣಾ ತಂತ್ರಗಾರಿಕೆ ರೂಪಿಸಲು ಸಿದ್ಧತೆ ಆರಂಭಿಸಿದೆ.

ಮಾಯಾವತಿ

'ಬಿಜೆಪಿಯ ವಿರುದ್ಧ ಬ್ರಾಹ್ಮಣ ಸಮುದಾಯವನ್ನು ಜಾಗೃತಗೊಳಿಸಲು ಅಯೋಧ್ಯೆಯಲ್ಲಿ ಮುಂದಿನವಾರದಿಂದ ಬಿಎಸ್ಪಿ ಅಭಿಯಾನ ಆರಂಭಿಸಲಿದೆ' ಎಂದು ಬಿಎಸ್‌ಪಿ ಮುಖ್ಯಸ್ಥೆ ಮಾಯಾವತಿ ಅವರು ಭಾನುವಾರ ಹೇಳಿಕೆ ನೀಡಿದ್ದಾರೆ. ಸುದ್ದಿಗಾರರೊಂದಿಗೆ ಮಾತನಾಡಿದ ಅವರು, 'ಬಿಜೆಪಿಯ ಮಾತುಗಳನ್ನು ಕೇಳಿ ಬ್ರಾಹ್ಮಣ ಸಮುದಾಯವು ದಾರಿ ತಪ್ಪುವುದಿಲ್ಲ. ಮುಂಬರುವ ಚುನಾವಣೆಯಲ್ಲಿ ಅವರು ನಮ್ಮ ಪಕ್ಷಕ್ಕೆ ಮತ ಹಾಕಲಿದ್ದಾರೆ' ಎಂದು ವಿಶ್ವಾಸ ವ್ಯಕ್ತಪಡಿಸಿದ್ದಾರೆ.

'ಬಿಎಸ್‌ಪಿ ಪ್ರಧಾನ ಕಾರ್ಯದರ್ಶಿ ಸತೀಶ್‌ಚಂದ್ರ ಮಿಶ್ರಾ ಅವರ ನೇತೃತ್ವದಲ್ಲಿ ಜುಲೈ 23ರಂದು ಅಯೋಧ್ಯೆಯಲ್ಲಿ ಬ್ರಾಹ್ಮಣ ಸಮುದಾಯದ ಜಾಗೃತ ಅಭಿಯಾನ ಆರಂಭವಾಗಲಿದೆ. ಬಿಎಸ್‌ಪಿ ಆಡಳಿತದಲ್ಲಿ ಬ್ರಾಹ್ಮಣರ ಹಿತಾಸಕ್ತಿಗಳು ಸುರಕ್ಷಿತವಾಗಿ ಉಳಿಯಲಿವೆ' ಎಂದೂ ಅವರು ಭರವಸೆ ನೀಡಿದ್ದಾರೆ.

6 ಮಂದಿ ಮಾತ್ರ ತಪ್ಪಿತಸ್ಥರು: ಕರ್ನಾಟಕದಲ್ಲೂ 22 ಪ್ರಕರಣ

ದೇಶದ್ರೋಹ: 326 ಪ್ರಕರಣ ದಾಖಲು

ನವದೆಹಲಿ: ದೇಶದಲ್ಲಿ 2014 ಮತ್ತು 2019ರ ಅವಧಿಯಲ್ಲಿ ದೇಶದ್ರೋಹಕ್ಕೆ ಸಂಬಂಧಿಸಿದಂತೆ 326 ಪ್ರಕರಣಗಳನ್ನು ದಾಖಲಿಸಲಾಗಿದೆ. ಆದರೆ, ಆರು ಮಂದಿ ಮಾತ್ರ ತಪ್ಪಿತಸ್ಥರೆಂದು ಸಾಬೀತಾಗಿದೆ.

ಕೇಂದ್ರ ಗೃಹ ಸಚಿವಾಲಯ ಈ ಬಗ್ಗೆ ಮಾಹಿತಿ ಒದಗಿಸಿದ್ದು, ಅಸ್ಸಾಂ ರಾಜ್ಯದಲ್ಲಿ ಅತಿ ಹೆಚ್ಚಿನ 54 ಪ್ರಕರಣಗಳು ದಾಖಲಾಗಿವೆ. ಆರು ವರ್ಷಗಳ ಈ ಅವಧಿಯಲ್ಲಿ 141 ಪ್ರಕರಣಗಳಲ್ಲಿ ಮಾತ್ರ ಆರೋಪಪಟ್ಟಿ ದಾಖಲಿಸಲಾಗಿದೆ.

ಅಸ್ಸಾಂನಲ್ಲಿನ 54 ಪ್ರಕರಣಗಳ ಪೈಕಿ 26ರಲ್ಲಿ ಆರೋಪ ಪಟ್ಟಿ ದಾಖಲಿಸಲಾಗಿದೆ. 25 ಪ್ರಕರಣಗಳ ವಿಚಾರಣೆ ಪೂರ್ಣಗೊಳಿಸಲಾಗಿದೆ. ಆದರೆ, 2014 ಮತ್ತು 2019ರ ಅವಧಿಯಲ್ಲಿ ಯಾವುದೇ ಪ್ರಕರಣದಲ್ಲೂ ಆರೋಪಿಗಳು ತಪ್ಪಿತಸ್ಥರು ಎನ್ನುವುದು ಸಾಬೀತಾಗಿಲ್ಲ.

ಕರ್ನಾಟಕದಲ್ಲಿ 22 ದೇಶದ್ರೋಹದ ಪ್ರಕರಣಗಳನ್ನು ದಾಖಲಿಸಲಾಗಿದ್ದು, 17 ಪ್ರಕರಣಗಳಲ್ಲಿ ಆರೋಪಪಟ್ಟಿ ಸಲ್ಲಿಸಲಾಗಿದೆ. ಒಂದು ಪ್ರಕರಣದಲ್ಲಿ ಮಾತ್ರ ವಿಚಾರಣೆ ಮುಗಿದಿದೆ. ಕರ್ನಾಟಕದಲ್ಲೂ ಈ ಆರು ವರ್ಷಗಳ ಅವಧಿಯಲ್ಲಿ ಯಾವುದೇ ಪ್ರಕರಣದಲ್ಲಿಯೂ ಒಬ್ಬ ವ್ಯಕ್ತಿಯೂ ತಪ್ಪಿತಸ್ಥ ಎನ್ನುವುದು ಸಾಬೀತಾಗಿಲ್ಲ.

ಬಿಹಾರ, ಜಮ್ಮು ಮತ್ತು ಕಾಶ್ಮೀರ ಹಾಗೂ ಕೇರಳದಲ್ಲಿ ತಲಾ 25 ಪ್ರಕರಣಗಳನ್ನು ದಾಖಲಿಸಲಾಗಿದೆ. ಮಹಾರಾಷ್ಟ್ರ, ಪಂಜಾಬ್ ಮತ್ತು ಉತ್ತರಾಖಂಡದಲ್ಲಿ ತಲಾ ಒಂದು ಪ್ರಕರಣ ದಾಖಲಿಸಲಾಗಿದೆ.

ಮೇಘಾಲಯ, ಮಿಜೋರಾಂ, ತ್ರಿಪುರಾ, ಸಿಕ್ಕಿಂ, ಅಂಡಮಾನ್ ಮತ್ತು ನಿಕೋಬಾರ್ ದ್ವೀಪಗಳು, ಲಕ್ಷದ್ವೀಪ, ಪುದುಚೇರಿ, ಚಂಡೀಗಡ, ದಮನ್ ಮತ್ತು ದಿಯು, ದಾದ್ರಾ ಮತ್ತು ನಗರ ಹವೇಲಿಯಲ್ಲಿ ದೇಶದ್ರೋಹಕ್ಕೆ ಸಂಬಂಧಿಸಿದ ಪ್ರಕರಣಗಳನ್ನು ದಾಖಲಿಸಿಲ್ಲ.

2019ರಲ್ಲಿ ಅತಿ ಹೆಚ್ಚಿನ 93 ಪ್ರಕರಣಗಳನ್ನು ದಾಖಲಿಸಲಾಗಿದೆ. ನಂತರ, 2018ರಲ್ಲಿ 70, 2017ರಲ್ಲಿ 51, 2014ರಲ್ಲಿ 47, 2016ರಲ್ಲಿ 35 ಮತ್ತು 2015ರಲ್ಲಿ 30 ಪ್ರಕರಣಗಳನ್ನು ದಾಖಲಿಸಲಾಗಿದೆ.

2020ರ ಮಾಹಿತಿಯನ್ನು ಇನ್ನೂ ಸಿದ್ಧಪಡಿಸಿಲ್ಲ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಭಾರತೀಯ ದಂಡ ಸಂಹಿತೆಯ(ಐಪಿಸಿ) 124 (ಎ)(ದೇಶದ್ರೋಹ) ಸೆಕ್ಷನ್ ಅನ್ನು ದುರುಪಯೋಗಪಡಿಸಿಕೊಳ್ಳಲಾಗುತ್ತಿದೆ. ಸ್ವಾತಂತ್ರ್ಯ ಹೋರಾಟವನ್ನು ಹತ್ತಿಕ್ಕುವ ನಿಟ್ಟಿನಲ್ಲಿ ಮಹಾತ್ಮ ಗಾಂಧಿಯಂತ ವ್ಯಕ್ತಿಗಳನ್ನು ಸುಮ್ಮನಿರಿಸಲು ಬ್ರಿಟಿಷರು ಈ ಕಾನೂನಿನ ಮೂಲಕ ಕ್ರಮಕೈಗೊಳ್ಳುತ್ತಿದ್ದರು. ಆದರೆ, ಇಂದಿಗೂ ಈ ಕಾನೂನು ಜಾರಿಯಲ್ಲಿದೆ. ಬ್ರಿಟಿಷರ ಕಾಲದ ಈ ಕಾನೂನು ರದ್ದುಪಡಿಸಲು ಕೇಂದ್ರ ಸರ್ಕಾರ ಏಕೆ ಕ್ರಮಕೈಗೊಂಡಿಲ್ಲ ಎಂದು ಸುಪ್ರೀಂ ಕೋರ್ಟ್ ಕಳೆದ ವಾರ ಪ್ರಶ್ನಿಸಿತ್ತು.

ಬಕ್ರೀದ್ ಆಚರಣೆಗೆ ಕೇರಳದಲ್ಲಿ ಅನುಮತಿ: ಖಂಡನೆ

ನವದೆಹಲಿ: ಬಕ್ರೀದ್ ಆಚರಣೆಗಾಗಿ ಕೇರಳ ಸರ್ಕಾರವು ಕೋವಿಡ್–19 ನಿಯಮಾವಳಿಗಳನ್ನು ಸಡಿಲಿಸಿರುವುದಕ್ಕೆ ಆಕ್ಷೇಪ ಎತ್ತಿರುವ ವಿಶ್ವ ಹಿಂದೂ ಪರಿಷತ್ (ವಿಎಚ್‌ಪಿ), 'ಉತ್ತರಪ್ರದೇಶದ ಕನ್ವರ್ ಯಾತ್ರೆಯಂತೆಯೇ ಈ ಬಗ್ಗೆಯೂ ಸುಪ್ರೀಂ ಕೋರ್ಟ್ ಸ್ವಯಂಪ್ರೇರಿತವಾಗಿ ಪ್ರಕರಣ ದಾಖಲಿಸಿಕೊಳ್ಳಬೇಕು' ಎಂದು ಒತ್ತಾಯಿಸಿದೆ.

'ಸಾರ್ವಜನಿಕ ಆಚರಣೆಗಾಗಿ ನೀಡಿರುವ ಈ ಅನುಮತಿಯನ್ನು ಕೇರಳ ಸರ್ಕಾರ ಹಿಂತೆಗೆದುಕೊಳ್ಳಬೇಕು' ಎಂದು ಭಾರತೀಯ ವೈದ್ಯಕೀಯ ಮಂಡಳಿಯು (ಐಎಂಎ) ಒತ್ತಾಯಿಸಿದೆ. ಒಂದು ವೇಳೆ ಅನುಮತಿ ಹಿಂಪಡೆಯದಿದ್ದರೆ ಸುಪ್ರೀಂ ಕೋರ್ಟ್ ಬಾಗಿಲು ತಟ್ಟುವುದಾಗಿಯೂ ಅದು ಎಚ್ಚರಿಸಿದೆ.

'ಸಾರ್ವಜನಿಕ ಸುರಕ್ಷತೆಗಾಗಿ ಉತ್ತರ ಪ್ರದೇಶ, ಉತ್ತರಾಖಂಡ, ಜಮ್ಮು–ಕಾಶ್ಮೀರದಂಥ ರಾಜ್ಯಗಳು ಸಾಂಪ್ರದಾಯಿಕವಾದ ಧಾರ್ಮಿಕ ಯಾತ್ರೆಗಳನ್ನು ರದ್ದುಗೊಳಿಸಿವೆ. ವೈದ್ಯಕೀಯ ತುರ್ತು ಸಂದರ್ಭದಲ್ಲಿ ಬಕ್ರೀದ್ ಆಚರಣೆಗಾಗಿ ಕೇರಳ ಸರ್ಕಾರವು ತೆಗೆದುಕೊಂಡಿರುವ ಈ ನಿಲುವು ಅನಗತ್ಯವಾಗಿತ್ತು. ಸುಶಿಕ್ಷಿತರ ರಾಜ್ಯವಾಗಿರುವ ಕೇರಳವು ಇಂಥ ನಿರ್ಧಾರ ಕೈಗೊಂಡಿರುವುದು ದುರದೃಷ್ಟಕರ' ಎಂದು ಐಎಂಎನ ಅಧ್ಯಕ್ಷ ಡಾ. ಜೆ.ಎ. ಜಯಲಾಲ್ ಮತ್ತು ಪ್ರಧಾನ ಕಾರ್ಯದರ್ಶಿ ಡಾ.ಜಯೇಶ್ ಲೇಲೆ ಹೇಳಿಕೆಯಲ್ಲಿ ತಿಳಿಸಿದ್ದಾರೆ.

ಕಾಂಗ್ರೆಸ್ ನಾಯಕ ಅಭಿಷೇಕ್ ಮನು ಸಿಂಘ್ವಿ ಅವರು ಕೇರಳ ಸರ್ಕಾರದ ನಡೆಯನ್ನು ಖಂಡಿಸಿದ್ದು, ಇದು ಶೋಚನೀಯ ಸಂಗತಿ ಎಂದಿದ್ದಾರೆ.

'ಪ್ರಸ್ತುತ ಕೋವಿಡ್–19 ಪ್ರಕರಣಗಳು ಹೆಚ್ಚಾಗಿರುವ ಸಂದರ್ಭದಲ್ಲೇ ಕೇರಳ ಸರ್ಕಾರವು ಉದ್ದೇಶಪೂರ್ವಕವಾಗಿ ಬಕ್ರೀದ್ ಆಚರಣೆಗಾಗಿ ಮೂರು ದಿನಗಳ ಮಟ್ಟಿಗೆ ಕೋವಿಡ್ ನಿಯಮಗಳನ್ನು ಸಡಿಲಿಸಿರುವುದು ಸರಿಯಲ್ಲ. ಕನ್ವರ್ ಯಾತ್ರೆ ಮಾಡುವುದು ತಪ್ಪು ಎಂದಾದಲ್ಲಿ, ಸಾರ್ವಜನಿಕವಾಗಿ ಬಕ್ರೀದ್ ಆಚರಿಸುವುದು ಕೂಡಾ ತಪ್ಪು' ಎಂದು ರಾಜ್ಯಸಭಾ ಸದಸ್ಯರೂ ಆಗಿರುವ ಸಿಂಘ್ವಿ ಹೇಳಿದ್ದಾರೆ.

ಸಂಕ್ಷಿಪ್ತ ಸುದ್ದಿ

ದೆಹಲಿಗೆ ಡ್ಯಾನಿಷ್ ಸಿದ್ಧಿಕಿ ಮೃತದೇಹ

ನವದೆಹಲಿ (ಪಿಟಿಐ): 'ತಾಲಿಬಾನ್ ನಡೆಸಿದ ದಾಳಿಯಲ್ಲಿ ಹತ್ಯೆಗೀಡಾದ ಭಾರತೀಯ ಪತ್ರಿಕಾ ಛಾಯಾಗ್ರಾಹಕ ಡ್ಯಾನಿಷ್ ಸಿದ್ಧಿಕಿ ಅವರ ಮೃತದೇಹವನ್ನು ಭಾನುವಾರ ದೆಹಲಿಗೆ ತರಲಾಗಿದ್ದು, ಅವರ ಸಮಾಧಿಯನ್ನು ಜಾಮಿಯಾ ಮಿಲಿಯಾ ಇಸ್ಲಾಮಿಯಾದ (ಜೆಎಂಐ) ಆವರಣದಲ್ಲಿ ಮಾಡಲಾಗುವುದು' ಎಂದು ಜೆಎಂಐ ವಿಶ್ವವಿದ್ಯಾಲಯದ ಅಧಿಕಾರಿಗಳು ತಿಳಿಸಿದ್ದಾರೆ.

'ಜಾಮಿಯಾದ ಸ್ಮಶಾನದಲ್ಲಿ ಸಮಾಧಿ ಮಾಡಬೇಕೆಂಬ ಡ್ಯಾನಿಷ್ ಅವರ ಕುಟುಂಬ ಮಾಡಿರುವ ಮನವಿಗೆ ಜೆಎಂಐನ ಕುಲಪತಿ ಸ್ಪಂದಿಸಿದ್ದಾರೆ. ಈ ಸ್ಮಶಾನದಲ್ಲಿ ವಿಶ್ವವಿದ್ಯಾಲಯದ ನೌಕರರು, ಅವರ ಸಂಗಾತಿ ಮತ್ತು ಅಪ್ರಾಪ್ತ ಮಗುವಿನ ಸಮಾಧಿಗೆ ಮಾತ್ರ ಸ್ಥಳ ಮೀಸಲಾಗಿದೆ. ಆದರೆ, ಡ್ಯಾನಿಷ್ ಅವರಿಗಾಗಿ ವಿನಾಯಿತಿ ನೀಡಲಾಗಿದೆ' ಎಂದು ವಿಶ್ವವಿದ್ಯಾಲಯವು ಹೇಳಿಕೆಯಲ್ಲಿ ತಿಳಿಸಿದೆ.

ಸಿದ್ಧಿಕಿ ಅವರು ಇದೇ ವಿಶ್ವವಿದ್ಯಾಲಯದಲ್ಲಿ ಸ್ನಾತಕೋತ್ತರ ಪದವಿ ಪಡೆದಿದ್ದರು. ಅವರ ತಂದೆ ಅಖ್ತರ್ ಸಿದ್ಧಿಕಿ ಅವರು ಇದೇ ವಿಶ್ವವಿದ್ಯಾಲಯದ ಶಿಕ್ಷಣ ವಿಭಾಗದ ಡೀನ್ ಆಗಿದ್ದರು.

ಗುರುರಾಜ್‌ಗೆ ಜಾಮೀನು

ನವದೆಹಲಿ: ಮಣಿಪಾಲ್ ಎಜುಕೇಷನ್ ಹಾಗೂ ಮೆಡಿಕಲ್ ಗ್ರೂಪ್‌ಗೆ ಹಣ ವಂಚಿಸಿದ್ದ ಆರೋಪಿ ಹಾಗೂ ಅದೇ ಗ್ರೂಪ್‌ನ ಮಾಜಿ ಉಪ ಪ್ರಧಾನ ವ್ಯವಸ್ಥಾಪಕ ಸಂದೀಪ್ ಗುರುರಾಜ್ ಅವರಿಗೆ ಸುಪ್ರೀಂ ಕೋರ್ಟ್ ಜಾಮೀನು ನೀಡಿದೆ.

ಸರ್ಕಾರಿ ಜಮೀನು ಖರೀದಿಗೆ ಸಂಬಂಧಿಸಿದಂತೆ ₹ 1.74 ಕೋಟಿ ಅವ್ಯವಹಾರದ ಮೂರನೇ ಪ್ರಕರಣದಲ್ಲಿ ಸಂದೀಪ್ ಅವರಿಗೆ ಜಾಮೀನು ನೀಡಲಾಗಿದೆ. ನ್ಯಾಯಮೂರ್ತಿಗಳಾದ ಸಂಜಯ್ ಕಿಶನ್ ಕೌಲ್ ಮತ್ತು ಹೇಮಂತ್ ಗುಪ್ತಾ ಅವರನ್ನೊಳಗೊಂಡ ನ್ಯಾಯಪೀಠವು, 'ಈಗಾಗಲೇ ಚಾರ್ಜ್‌ಶೀಟ್ ದಾಖಲಾಗಿದೆ. ಕರ್ನಾಟಕ ಹೈಕೋರ್ಟ್‌ನ 2021ರ ಜ. 18ರ ಆದೇಶ ಪ್ರಕಾರ, ಆರೋಪಿಗೆ ಈಗಾಗಲೇ ₹ 75 ಕೋಟಿ ಮೊತ್ತದ ವಂಚನೆಗೆ ಸಂಬಂಧಿಸಿದ ಪ್ರಕರಣದಲ್ಲಿ ಜಾಮೀನು ನೀಡಲಾಗಿದೆ ಎಂಬುದನ್ನು ನ್ಯಾಯಾಲಯವು ಗಮನಿಸಿದೆ. ಹಾಗಾಗಿ, ಆರೋಪಿಯ ಜಾಮೀನನ್ನು ವಿಸ್ತರಿಸಬಹುದಾಗಿದೆ' ಎಂದು ಅಭಿಪ್ರಾಯಪಟ್ಟಿತು.

ಲೋಕಪಾಲ: ತನಿಖಾ ನಿರ್ದೇಶಕರ ನೇಮಕ ಮಾಡದ ಕೇಂದ್ರ

ನವದೆಹಲಿ: ಭ್ರಷ್ಟಾಚಾರ ನಿಗ್ರಹ ಸಂಬಂಧ ರಚನೆಯಾಗಿರುವ ಲೋಕಪಾಲಕ್ಕೆ ಬರುವ ದೂರುಗಳ ತನಿಖೆ ಮಾಡಲು ಕೇಂದ್ರ ಸರ್ಕಾರ ಎರಡು ವರ್ಷಗಳಿಂದ ತನಿಖಾ ನಿರ್ದೇಶಕರನ್ನು ನೇಮಕ ಮಾಡದೆ ಇರುವ ವಿಷಯ ಮಾಹಿತಿ ಹಕ್ಕು ಕಾಯ್ದೆಯಡಿ (ಆರ್‌ಟಿಐ) ಬಹಿರಂಗಗೊಂಡಿದೆ.

ತನಿಖಾ ನಿರ್ದೇಶಕರ ನೇಮಕ ಕುರಿತು ಪತ್ರಕರ್ತರೊಬ್ಬರು ಆರ್‌ಟಿಐನಲ್ಲಿ ಮಾಹಿತಿ ಕೋರಿದ್ದರು.

'ಕೇಂದ್ರ ಸರ್ಕಾರವು ಇನ್ನೂ ತನಿಖಾ ನಿರ್ದೇಶಕರನ್ನು ನೇಮಿಸಿಲ್ಲ. ಆದರೂ, ಲೋಕಪಾಲಕ್ಕೆ ಸಾರ್ವಜನಿಕರಿಂದ ತನಿಖೆ ನಡೆಸುವಂತೆ ಕೋರಿ ದೂರುಗಳು ಬರುತ್ತಿವೆ. ಅವುಗಳನ್ನು ಸ್ವೀಕರಿಸಲಾಗುತ್ತಿದೆ' ಎಂದು ಕೇಂದ್ರ ಜಾಗೃತ ದಳವು (ಸಿವಿಸಿ) ಆರ್‌ಟಿಐನಲ್ಲಿ ಕೋರಿದ ಮಾಹಿತಿಗೆ ಉತ್ತರ ನೀಡಿದೆ.

ದಕ್ಷಿಣ ಆಫ್ರಿಕಾ ಫುಟ್‌ಬಾಲ್ ಆಟಗಾರರು, ರಗ್ಬಿ ಕೋಚ್, ಐಒಸಿ ಸದಸ್ಯರಿಗೆ ಸೋಂಕು ದೃಢ

ಕ್ರೀಡಾಗ್ರಾಮದಲ್ಲಿ ಹೆಚ್ಚಿದ ಆತಂಕ

ಟೋಕಿಯೊ (ಎಎಫ್‌ಪಿ/ಪಿಟಿಐ/ಎಪಿ): ಕರ್ತವ್ಯದಲ್ಲಿದ್ದ ವ್ಯಕ್ತಿಯೊಬ್ಬರಲ್ಲಿ ಕೋವಿಡ್ ಕಾಣಿಸಿಕೊಂಡ ಕ್ರೀಡಾಗ್ರಾಮದಲ್ಲಿ ಭಾನುವಾರ ಇನ್ನಷ್ಟು ಸೋಂಕಿನ ಪ್ರಕರಣಗಳು ದೃಢವಾಗಿವೆ. ಜಪಾನ್ ಪ್ರವೇಶಿಸಿರುವ ಇತರ ಕೆಲವರಲ್ಲೂ ಸೋಂಕು ಕಾಣಿಸಿಕೊಂಡಿದೆ. ಹೀಗಾಗಿ ಒಲಿಂಪಿಕ್ಸ್ ಸುತ್ತ ಮತ್ತಷ್ಟು ಆತಂಕದ ಕಾರ್ಮೋಡ ಕವಿದಿದೆ.

ಉದ್ಘಾಟನಾ ಸಮಾರಂಭಕ್ಕೆ ನಾಲ್ಕು ದಿನಗಳು ಬಾಕಿ ಇರುವಾಗ ಕ್ರೀಡಾಗ್ರಾಮದಲ್ಲಿ ಇಬ್ಬರು ಕ್ರೀಡಾಪಟುಗಳಿಗೆ ಮತ್ತು ತಂಡವೊಂದರ ಜೊತೆ ಬಂದಿದ್ದ ಅಧಿಕಾರಿಗೂ ಕೋವಿಡ್ ದೃಢವಾಗಿದೆ ಎಂದು ಆಯೋಜಕರು ಸ್ಪಷ್ಟಪಡಿಸಿದ್ದಾರೆ. ಶನಿವಾರ ವ್ಯಕ್ತಿಯೊಬ್ಬರಲ್ಲಿ ಸೋಂಕು ಪತ್ತೆಯಾಗಿತ್ತು. ಅವರು ಕೆಲಸ ಮಾಡುತ್ತಿದ್ದ ಕಟ್ಟಡದಲ್ಲಿ ವಾಸ್ತವ್ಯವಿದ್ದವರ ಪರೀಕ್ಷಾ ವರದಿ ಪಾಸಿಟಿವ್ ಬಂದಿದೆ.

ಈ ನಡುವೆ ದಕ್ಷಿಣ ಕೊರಿಯಾದವರಾದ, ಅಂತರರಾಷ್ಟ್ರೀಯ ಒಲಿಂಪಿಕ್ ಸಮಿತಿಯ ಸದಸ್ಯರೊಬ್ಬರಲ್ಲೂ ಸೋಂಕು ಪತ್ತೆಯಾಗಿದೆ. 2004ರ ಒಲಿಂಪಿಕ್ಸ್‌ನ ಟೇಬಲ್ ಟೆನಿಸ್‌ನಲ್ಲಿ ಚಿನ್ನದ ಪದಕ ಗೆದ್ದಿದ್ದ ರುಯೂ ಸೆಂಗ್ ಮಿನ್ ಅವರನ್ನು ಜಪಾನ್‌ನಲ್ಲಿ ಪರೀಕ್ಷೆಗೆ ಒಳಪಡಿಸಿದಾಗ ಸೋಂಕು ಇರುವುದು ದೃಢವಾಗಿದೆ. ಅವರನ್ನು ಪ್ರತ್ಯೇಕವಾಸದಲ್ಲಿ ಇರಿಸಲಾಗಿದೆ ಎಂದು ವಕ್ತಾರ ಮಾಸಾ ತಕಾಯ ತಿಳಿಸಿದ್ದಾರೆ. ಕ್ರೀಡಾಕೂಟಕ್ಕೆ ಸಂಬಂಧಿಸಿದವರಲ್ಲಿ ಈ ತಿಂಗಳು ಒಟ್ಟು 55 ಪ್ರಕರಣಗಳು ಪತ್ತೆಯಾಗಿವೆ ಎಂದು ಅವರು ವಿವರಿಸಿದ್ದಾರೆ.

ಜಪಾನ್ ತಲುಪಿರುವ ದಕ್ಷಿಣ ಆಫ್ರಿಕಾ ಫುಟ್‌ಬಾಲ್ ತಂಡದ ಇಬ್ಬರು ಆಟಗಾರರಾದ ತಬಿಸೊ ಮೊನ್ಯಾನೆ ಮತ್ತು ಕಮಯೆಲೊ ಮಲೆಟ್ಸಿ, ವಿಡಿಯೊ ಅನಲಿಸ್ಟ್ ಮರಿಯೊ ಮಾಶಾ ಅವರಿಗೆ ಕೋವಿಡ್ ದೃಢಪಟ್ಟಿರುವುದಾಗಿ ತಂಡದ ಮ್ಯಾನೇಜರ್ ಮಕ್ಸೊಲಿಸಿ ಸಿಬಂ ತಿಳಿಸಿದ್ದಾರೆ. ರಗ್ಬಿ ಸೆವೆನ್ಸ್ ತಂಡದ ಕೋಚ್ ನೀಲ್ ಪೊವೆಲ್ ಅವರಿಗೂ ಸೋಂಕು ಇರುವುದು ದೃಢಪಟ್ಟಿದೆ. ನಿರಾಶ್ರಿತರ ತಂಡದ ಉಸ್ತುವಾರಿ ತೆಗ್ಲಾ ಲೊರೊಪ್ ಕೂಡ ಕೋವಿಡ್ ಬಾಧಿತರಾಗಿರುವುದರಿಂದ ತರಬೇತಿ ಕೇಂದ್ರವಿರುವ ದೋಹಾದಿಂದ ತಂಡದ ಪ್ರವಾಸವನ್ನು ತಡೆಹಿಡಿಯಲಾಗಿದೆ.

ಆಸ್ಟ್ರೇಲಿಯಾ ತಂಡಕ್ಕೆ ಕ್ವಾರಂಟೈನ್: ಈ ನಡುವೆ ಆಸ್ಟ್ರೇಲಿಯಾದ ಅಥ್ಲೀಟ್ ಒಬ್ಬರಲ್ಲಿ ಸೋಂಕು ಕಾಣಿಸಿಕೊಂಡಿರುವ ಕಾರಣ ಇಡೀ ತಂಡವನ್ನೇ ಹೊರಡುವ ಮುನ್ನ ಕ್ವಾರಂಟೈನ್‌ಗೆ ಒಳಪಡಿಸಲಾಗಿದೆ. ಆಸ್ಟ್ರೇಲಿಯಾದ ಬ್ಯಾಸ್ಕೆಟ್‌ಬಾಲ್ ಆಟಗಾರ ಲಿಜ್ ಕ್ಯಾಂಬೇಜ್ ಅವರು ಮಾನಸಿನ ಒತ್ತಡ ನಿಭಾಯಿಸಲು ಸಾಧ್ಯವಿಲ್ಲ ಎಂಬ ಕಾರಣ ನೀಡಿ ಕೂಟದಿಂದ ಹಿಂದೆ ಸರಿದಿದ್ದಾರೆ. ಟೆನಿಸ್ ಆಟಗಾರ ನಿಕ್ ಕಿರ್ಗಿಯೋಸ್ ಅವರು ಪ್ರೇಕ್ಷಕರಿಲ್ಲದ ಕಾರಣ ಆಡುವುದಿಲ್ಲ ಎಂದಿದ್ದಾರೆ.

ಭಾರತದ ಆರ್ಚರಿ ತಂಡವನ್ನು ಟೋಕಿಯೊದಲ್ಲಿ ಕಾರ್ಯಕರ್ತರು ಸ್ವಾಗತಿಸಿದರು –ಪಿಟಿಐ ಚಿತ್ರ

ಕ್ರೀಡಾಗ್ರಾಮ ತಲುಪಿದ ಭಾರತ ತಂಡ

ಕೋವಿಡ್ ಆತಂಕದ ನಡುವೆಯೇ ಟೋಕಿಯೊಗೆ ಬಂದಿರುವ ಭಾರತದ ಮೊದಲ ತಂಡ ಕ್ರೀಡಾಗ್ರಾಮ ಪ್ರವೇಶಿಸಿದೆ. ಕ್ರೀಡಾಪಟುಗಳು ಮತ್ತು ಅಧಿಕಾರಿಗಳನ್ನು ಒಳಗೊಂಡ 88 ಮಂದಿಯ ತಂಡ ಶನಿವಾರ ರಾತ್ರಿ ವಿಶೇಷ ವಿಮಾನದಲ್ಲಿ ನವದೆಹಲಿಯಿಂದ ಹೊರಟಿತ್ತು.

‘ಟೋಕಿಯೊ ವಿಮಾನನಿಲ್ದಾಣದಲ್ಲಿ ಆರು ತಾಸು ಕಾಯಬೇಕಾಗಿ ಬಂತು. ಅದು ನಿರೀಕ್ಷಿತವೇ ಆಗಿದ್ದುದರಿಂದ ಬೇಸರವೇನೂ ಆಗಲಿಲ್ಲ. ಈಗ ಕ್ರೀಡಾಗ್ರಾಮದಲ್ಲಿ ಚೆಕ್ ಇನ್ ಆಗಿದ್ದೇವೆ. ಈ ವರೆಗೆ ಎಲ್ಲವೂ ಸುಸೂತ್ರವಾಗಿ ನಡೆದಿದೆ’ ಎಂದು ತಂಡದ ಸದಸ್ಯರೊಬ್ಬರು ತಿಳಿಸಿದರು.

ಬ್ಯಾಡ್ಮಿಂಟನ್ ಪಟು ಪಿ.ವಿ.ಸಿಂಧು, ಆರು ಬಾರಿಯ ವಿಶ್ವ ಚಾಂಪಿಯನ್ ಬಾಕ್ಸರ್ ಎಂ.ಸಿ.ಮೇರಿ ಕೋಮ್, ವಿಶ್ವ ಕ್ರಮಾಂಕದಲ್ಲಿ ಒಂದನೇ ಸ್ಥಾನದಲ್ಲಿರುವ ಬಾಕ್ಸರ್ ಅಮಿತ್ ಪಂಘಾಲ್, ವಿಶ್ವದ ಒಂದನೇ ಕ್ರಮಾಂಕದ ಆರ್ಚರ್ ದೀಪಿಕಾ ಕುಮಾರಿ ಮತ್ತು ಟೇಬಲ್ ಟೆನಿಸ್ ಆಟಗಾರ್ತಿ ಮಣಿಕಾ ಭಾತ್ರಾ ಮೊದಲ ತಂಡದಲ್ಲಿದ್ದಾರೆ.

ಕೃತಜ್ಞತೆ ಸಲ್ಲಿಸಿದ ಮೊಮೊಟ

ಮೊದಲ ಬಾರಿ ಒಲಿಂಪಿಕ್ಸ್‌ನಲ್ಲಿ ಆಡಲು ಸಜ್ಜಾಗಿರುವ ಜಪಾನ್‌ನ ಬ್ಯಾಡ್ಮಿಂಟನ್ ಪಟು ಕೆಂಟೊ ಮೊಮೊಟ ಆಯೋಜಕರಿಗೆ ಹೃದಯಾಂತರಾಳದಿಂದ ಕೃತಜ್ಞತೆ ಸಲ್ಲಿಸುವುದಾಗಿ ಹೇಳಿದ್ದಾರೆ. ಒಂದೂವರೆ ವರ್ಷದ ಹಿಂದೆ ಮಲೇಷ್ಯಾದ ಹೈವೇಯಲ್ಲಿ ಸಂಭವಿಸಿದ ರಸ್ತೆ ಅಪಘಾತದಲ್ಲಿ ಗಂಭೀರ ಗಾಯಗೊಂಡಿದ್ದ ಮೊಮೊಟ ಪ್ರಾಣಾಪಾಯದಿಂದ ಪಾರಾಗಿದ್ದರು.

ಡಿಸೆಂಬರ್‌ನಲ್ಲಿ ಜಪಾನ್‌ನಲ್ಲಿ ನಡೆದ ರಾಷ್ಟ್ರೀಯ ಟೂರ್ನಿಯಲ್ಲಿ ಸ್ಪರ್ಧಾ ಕಣಕ್ಕೆ ಮರಳಿದ್ದ ಅವರು ಜಯದೊಂದಿಗೆ ಸಂಭ್ರಮಿಸಿದ್ದರು. ಮಾರ್ಚ್‌ನಲ್ಲಿ ನಡೆದ ಆಲ್ ಇಂಗ್ಲೆಂಡ್ ಚಾಂಪಿಯನ್‌ಷಿಪ್‌ನ ಕ್ವಾರ್ಟರ್ ಫೈನಲ್‌ನಲ್ಲಿ ಸೋತಿದ್ದರು. ಈಗ ಸಂಪೂರ್ಣ ಫಿಟ್ ಆಗಿದ್ದಾರೆ.

ಆರ್ಚರಿಪಟುಗಳ ಒತ್ತಡ ಪತ್ತೆಗೆ ಕ್ಯಾಮೆರಾಗಳು!

ಟೋಕಿಯೊ (ಪಿಟಿಐ): ವಿಶ್ವದ ಅಗ್ರಕ್ರಮಾಂಕದ ಆರ್ಚರಿ ಪಟು, ಭಾರತದ ದೀಪಿಕಾ ಕುಮಾರಿ ಅವರು ಒಲಿಂಪಿಕ್ಸ್ ಸಂದರ್ಭದಲ್ಲಿ ಹೆಚ್ಚು ಒತ್ತಡಕ್ಕೆ ಒಳಗಾಗುತ್ತಾರೆ. ಆದರೆ ವಿಶ್ವ ಆರ್ಚರಿ ಫೆಡರೇಷನ್ ಈ ಬಾರಿಯ ಕ್ರೀಡಾಕೂಟದಲ್ಲಿ ಒತ್ತಡ ಪತ್ತೆಹಚ್ಚುವ ಕ್ಯಾಮೆರಾಗಳನ್ನು ನಾಕೌಟ್ ಸುತ್ತುಗಳಲ್ಲಿ ಅಳವಡಿಸಲಿದೆ.

ಯುಮೆನೊಶಿಮಾ ಕ್ರೀಡಾಂಗಣದಲ್ಲಿ ನಡೆಯುವ ಈ ಸುತ್ತುಗಳಲ್ಲಿ ಆರ್ಚರಿ ಪಟುಗಳ ಒತ್ತಡ ಮತ್ತು ಹೃದಯ ಬಡಿತವು ಟಿವಿಗಳಲ್ಲಿ ನೇರಪ್ರಸಾರವಾಗಲಿದೆ. ಒಲಿಂಪಿಕ್ಸ್‌ನಲ್ಲಿ ಮೊದಲ ಬಾರಿ ಈ ಪ್ರಯೋಗ ನಡೆಯಲಿದೆ.

‘ಪ್ಯಾನಾಸೋನಿಕ್ ಕಂಪನಿಯ ಈ ಆವಿಷ್ಕಾರದ ಅನ್ವಯ, ಬಿಲ್ಲುಗಾರರ ಹೃದಯ ಬಡಿತವನ್ನು ಕ್ಯಾಮರಾಗಳು ಅಳೆಯುತ್ತವೆ ಮತ್ತು ಪ್ರೇಕ್ಷಕರು ನೇರಪ್ರಸಾರದಲ್ಲಿ ಇದನ್ನು ವೀಕ್ಷಿಸಲಿದ್ದಾರೆ’ ಎಂದು ವಿಶ್ವ ಆರ್ಚರಿ ಫೆಡರೇಷನ್‌ನ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಇದರ ದತ್ತಾಂಶಗಳು ಆರ್ಚರಿಪಟುಗಳಿಗೆ ಗೊತ್ತಾಗುವುದಿಲ್ಲ. ವೈಯಕ್ತಿಕ ವಿಭಾಗದ ಪಂದ್ಯಗಳಿಗೆ ಮಾತ್ರ ಈ ಕ್ಯಾಮೆರಾಗಳನ್ನು ಅಳವಡಿಸಲಾಗುತ್ತಿದೆ.

ಅಂಕಿತಾ ಸುರೇಶ್

ಮಹಿಳಾ ಹಾಕಿ: ಕೊಡಗಿನ ಅಂಕಿತಾ ಸಹಾಯಕ ಕೋಚ್

ಸುಂಟಿಕೊಪ್ಪ (ಕೊಡಗು): ಸಮೀಪದ ಕಂಬಿಬಾಣೆಯ ಹೊನ್ನಂಪಾಡಿ ಅಂಕಿತಾ ಸುರೇಶ್ ಅವರು ಟೋಕಿಯೊ ಒಲಿಂಪಿಕ್ಸ್‌ನಲ್ಲಿ ಭಾರತ ಮಹಿಳಾ ಹಾಕಿ ತಂಡದ ಸಹಾಯಕ ಕೋಚ್ ಆಗಿ ಕಾರ್ಯ ನಿರ್ವಹಿಸಲಿದ್ದಾರೆ.

ಅವರನ್ನು ಒಳಗೊಂಡ ಮಹಿಳಾ ಹಾಕಿ ತಂಡ ಈಗಾಗಲೇ ಟೋಕಿಯೊಗೆ ಪ್ರಯಾಣ ಬೆಳೆಸಿದೆ. ಜುಲೈ 23ರಂದು ಒಲಿಂಪಿಕ್ಸ್ ಆರಂಭವಾಗಲಿದೆ. ಅಂಕಿತಾ ಕಂಬಿಬಾಣೆಯ ಹೊನ್ನಂಪಾಡಿ ಸುರೇಶ್ ಕುಶಾಲಪ್ಪ ಅವರ ಪತ್ನಿ.

ಹ್ಯಾಮಿಲ್ಟನ್‌ಗೆ ಪ್ರಶಸ್ತಿ

ಸಿಲ್ವರ್‌ಸ್ಟೋನ್, ಇಂಗ್ಲೆಂಡ್ (ಎಪಿ): ಅದ್ಭುತ ಸಾಮರ್ಥ್ಯ ತೋರಿದ ಲೂಯಿಸ್ ಹ್ಯಾಮಿಲ್ಟನ್ ಬ್ರಿಟಿಷ್ ಗ್ರ್ಯಾನ್ ಪ್ರಿ ಫಾರ್ಮುಲಾ ಒನ್ ಚಾಂಪಿಯನ್‌ಷಿಪ್ ಪ್ರಶಸ್ತಿಯನ್ನು ಭಾನುವಾರ ಉಳಿಸಿಕೊಂಡರು.

ಹ್ಯಾಮಿಲ್ಟನ್‌ಗೆ ಬ್ರಿಟಿಷ್ ಗ್ರ್ಯಾನ್ ಪ್ರಿಯಲ್ಲಿ ಇದು ಎಂಟನೇ ಪ್ರಶಸ್ತಿ. ಮರ್ಸಿಡಿಸ್ ಚಾಲಕ ಹ್ಯಾಮಿಲ್ಟನ್ ಒಂದು ತಾಸು 58 ನಿಮಿಷ 23.283 ಸೆಕೆಂಡುಗಳಲ್ಲಿ ಗುರಿ ತಲುಪಿದರು. ಫೆರಾರಿ ಕಾರು ಚಾಲಕ ಚಾರ್ಲ್ಸ್ ಲೆಕ್ಲರ್ಕ್ ಎರಡನೇ ಸ್ಥಾನ ಗಳಿಸಿದರು. ಮೂರನೇ ಸ್ಥಾನವು ಮರ್ಸಿಡಿಸ್ ತಂಡದ ವಾಲ್ಟೇರಿ ಬೊಟ್ಟಾಸ್ ಪಾಲಾಯಿತು.

ಟ್ರೋಫಿಯೊಂದಿಗೆ ಲೂಯಿಸ್ ಹ್ಯಾಮಿಲ್ಟನ್– ರಾಯಿಟರ್ಸ್ ಚಿತ್ರ

ಈ ಚಾಂಪಿಯನ್‌ಷಿಪ್‌ನಲ್ಲಿ ಮ್ಯಾಕ್ಸ್ ವರ್ಸ್ಟ್ಯಾಪನ್ ಅವರ ಕಾರು ಅಪಘಾತಕ್ಕೀಡಾಗಿತ್ತು.



▸ ಇದು ಸ್ವರ್ಣ ಭಸ್ಮದಿಂದ ಸಂಮೃದ್ಧವಾಗಿರುವುದರಿಂದ ಶಕ್ತಿಯುತವಾಗಿದೆ.

▸ ಕೀಲು ನೋವು, ಬೆನ್ನು ನೋವು, ಮಂಡಿ–ಕೀಲು ನೋವು, ಉಳುಕು ಮತ್ತು ಸ್ನಾಯು, ಸೆಳೆತ ನಿವಾರಣೆಗೆ ಸಹಕಾರಿ



I. NO. MP/25D/08/040/A/19/12

ರುಮಾರ್ಥೋ ಗೋಲ್ಡ್ ಪ್ಲಸ್ ಕ್ಯಾಪ್ಸ್ಯೂಲ್

ಬೈದ್ಯನಾಥ್ ರ್‍ಹೂಮಾ ತೈಲದ ಜೊತೆಗೆ ಸೇವಿಸಿರಿ

Doctor's consultation: 8448444935
www.baidyanath.co

ಟೋಕಿಯೊ ಒಲಿಂಪಿಕ್ಸ್ 2020 ಭಾರತದ ಕನಸಿನ ಪಯಣ

ಮೀರಾಬಾಯಿ ಹೆಗಲ ಮೇಲೆ ನಿರೀಕ್ಷೆಯ ‘ಭಾರ’

TOKYO 2020

ಇನ್ನು 4 ದಿನ

ಕಳೆದ ಬಾರಿ ರಿಯೊ ಡಿ ಜನೈರೊದಲ್ಲಿ ನಡೆದ ಒಲಿಂಪಿಕ್ಸ್‌ನ ವೇಟ್‌ಲಿಫ್ಟಿಂಗ್‌ನಲ್ಲಿ ಭಾರತವನ್ನು ಪ್ರತಿನಿಧಿಸಿದ್ದ ಇಬ್ಬರೂ ಪದಕದ ಭರವಸೆ ಮೂಡಿಸಿದ್ದರು. ಆದರೆ ನಿರೀಕ್ಷೆ ಹುಸಿಯಾಗಿತ್ತು. ಕಾಮನ್‌ವೆಲ್ತ್ ಗೇಮ್ಸ್‌ನಲ್ಲಿ ಎರಡು ಚಿನ್ನದ ಪದಕ ಗೆದ್ದಿದ್ದ ಸತೀಶ್ ಶಿವಲಿಂಗಂ 11ನೇ ಸ್ಥಾನ ಗಳಿಸಿದರೆ 48 ಕೆಜಿ ವಿಭಾಗದಲ್ಲಿ ಚಿನ್ನದ ಪದಕ ಗೆದ್ದ ಭಾರತದ ಮೊದಲ ಮಹಿಳೆ ಎಂಬ ಖ್ಯಾತಿ ಗಳಿಸಿದ್ದ ಮೀರಾಬಾಯಿ ಚಾನು ಮೂರು ಪ್ರಯತ್ನಗಳಲ್ಲೂ ವೈಫಲ್ಯ ಕಂಡು ಮರಳಿದ್ದರು. ಈ ಬಾರಿ ಮೀರಾಬಾಯಿ ಮತ್ತೆ ಭಾರತವನ್ನು ಪ್ರತಿನಿಧಿಸುತ್ತಿದ್ದಾರೆ.

ಟೋಕಿಯೊದಲ್ಲಿ ಭಾರತದ ಪರ ಭಾರ ಎತ್ತಲಿರುವ ಏಕೈಕ ಕ್ರೀಡಾಪಟು ಮೀರಾಬಾಯಿ ಚಾನು. 2017ರ ವಿಶ್ವ ಚಾಂಪಿಯನ್‌ಷಿಪ್‌ನಲ್ಲಿ ಪದಕ ಗೆದ್ದ ನಂತರ ಮುಂದಿನ ವರ್ಷ ಕಾಮನ್‌ವೆಲ್ತ್ ಗೇಮ್ಸ್‌ನಲ್ಲೂ ಮೀರಾಬಾಯಿ ಚಿನ್ನವನ್ನು ಕೊರಳಿಗೇರಿಸಿಕೊಂಡಿದ್ದರು.

ಕರ್ಣಂ ಮಲ್ಲೇಶ್ವರಿ ಹಾದಿಯ ಕನವರಿಕೆ

ವೇಟ್‌ಲಿಫ್ಟಿಂಗ್ ಕ್ರೀಡೆ ಒಲಿಂಪಿಕ್ಸ್‌ನ ಮೊದಲ ಆವೃತ್ತಿಯಿಂದಲೇ ಇದೆ. ಆದರೆ ಭಾರತ ಈ ಕ್ರೀಡೆಯಲ್ಲಿ ಮೊದಲು ಪಾಲ್ಗೊಂಡದ್ದು 10ನೇ ಆವೃತ್ತಿಯಲ್ಲಿ, 1936ರಲ್ಲಿ. ಆ ವರ್ಷ ಭಾರತವನ್ನು ಪ್ರತಿನಿಧಿಸಿದ್ದು ಬರ್ಮಾ ಮೂಲದ ವು ಜಾ ವೇಕ್. ಭಾರತ ಮೂಲದ ಲಿಫ್ಟರ್ ಮೊದಲು ಪಾಲ್ಗೊಂಡದ್ದು 1948ರ ಲಂಡನ್ ಕೂಟದಲ್ಲಿ. ಈ ಕೀರ್ತಿಗೆ ಪಾತ್ರರಾದವರು ದಂಡಮುಂಡಿ ರಾಜಗೋಪಾಲ್. ಅವರು ಹೆಲ್ಸಿಂಕಿ ಮತ್ತು ಮೆಲ್ಬರ್ನ್ ಕೂಟಗಳಲ್ಲೂ ದೇಶವನ್ನು ಪ್ರತಿನಿಧಿಸಿದ್ದರು. 1936ರಿಂದ ಎಲ್ಲ ಕೂಟಗಳಲ್ಲಿ ಭಾರತ ಪಾಲ್ಗೊಂಡಿದ್ದರೂ ಪದಕ ಗೆಲ್ಲಲು ಯಾರಿಗೂ ಸಾಧ್ಯವಾಗಿರಲಿಲ್ಲ. 1984ರಲ್ಲಿ ಮಹೇಂದ್ರ ಕಣ್ಣನ್ ಮತ್ತು ದೇವನ್ ಗೋವಿಂದಸಾಮಿ ಮೊದಲ ಬಾರಿ ಅಗ್ರ 10ರಲ್ಲಿ ಸ್ಥಾನ ಗಳಿಸಿದ್ದರು.

2000ನೇ ಇಸವಿಯಲ್ಲಿ ಸಿಡ್ನಿಯಲ್ಲಿ ಕರ್ಣಂ ಮಲ್ಲೇಶ್ವರಿ ಕಂಚು ಗೆದ್ದು ಭಾರತಕ್ಕೆ ಮೊದಲ ಪದಕದ ಸವಿ ನೀಡಿದರು. 69 ಕೆಜಿ ವಿಭಾಗದಲ್ಲಿ ಸ್ಪರ್ಧಿಸಿದ್ದ ಅವರು ಸ್ನ್ಯಾಚ್‌ನಲ್ಲಿ 110 ಕೆಜಿ ಸೇರಿದಂತೆ ಒಟ್ಟು 240 ಕೆಜಿ ಭಾರ ಎತ್ತಿದ್ದರು.

ಅವರು ಹಾಕಿಕೊಟ್ಟ ಹಾದಿಯಲ್ಲಿ ಮತ್ತೆ ಹೂ ಅರಳಲೇ ಇಲ್ಲ. ಮೀರಾಬಾಯಿ ಚಾನು ಈ ಶೂನ್ಯವನ್ನು ತುಂಬುವ ಭರವಸೆಯೊಂದಿಗೆ ಟೋಕಿಯೊ ತಲುಪಿದ್ದಾರೆ. 1996ರ ಅಟ್ಲಾಂಟ ಒಲಿಂಪಿಕ್ಸ್‌ನಲ್ಲಿ ಭಾರತ ಅತ್ಯಧಿಕ ಐದು ಮಂದಿಯ ತಂಡವನ್ನು ಕಣಕ್ಕೆ ಇಳಿಸಿತ್ತು. ಆದರೆ ದೇಶವನ್ನು ಒಬ್ಬರೇ ಪ್ರತಿನಿಧಿಸಿದ್ದು ಐದು ಬಾರಿ ಮಾತ್ರ. ಈ ವರ್ಷ ಮತ್ತೆ ಕೋಟಿ ಕೋಟಿ ಜನರ ಪದಕದ ನಿರೀಕ್ಷೆಯ ‘ಭಾರ’ ಅವರ ಹೆಗಲ ಮೇಲೆ ಇದೆ.

ಕರ್ಣಂ ಮಲ್ಲೇಶ್ವರಿ –ಪಿಟಿಐ ಚಿತ್ರ

ಮೀರಾಬಾಯಿ ಚಾನು –ಪಿಟಿಐ ಚಿತ್ರ

18 ಭಾರತ ಪಾಲ್ಗೊಂಡ ಒಟ್ಟು ಆವೃತ್ತಿಗಳು

59 ಪದಕ ಪಟ್ಟಿಯಲ್ಲಿ ಭಾರತದ ಸ್ಥಾನ

40 ಭಾರತವನ್ನು ಪ್ರತಿನಿಧಿಸಿದವರ ಸಂಖ್ಯೆ

48 ಮೀರಾಬಾಯಿ ಚಾನು ಸ್ಪರ್ಧಿಸುವ ವಿಭಾಗ

119 ಮೀರಾಬಾಯಿ ವಿಶ್ವ ದಾಖಲೆ ಮಾಡಿ ಎತ್ತಿದ ಭಾರ

ಸಂಕ್ಷಿಪ್ತ ಸುದ್ದಿ

ಗಾಲ್ಫ್: ಅದಿತಿ–ಪಜರಿಗೆ 3ನೇ ಸ್ಥಾನ

ಮಿಷಿಗನ್, ಅಮೆರಿಕ (ಪಿಟಿಐ): ಉತ್ತಮ ಸಾಮರ್ಥ್ಯ ತೋರಿದ ಭಾರತದ ಅದಿತಿ ಅಶೋಕ್ ಹಾಗೂ ಥಾಯ್ಲೆಂಡ್‌ನ ಪಜರಿ ಅನಣ್ಣರುಕರ್ಣ್ ಅವರು ಇಲ್ಲಿ ನಡೆದ ಡೊವ್ ಗ್ರೇ ಟ್ ಲೇಕ್ಸ್ ಬೇ ಆಹ್ವಾನಿತ ಗಾಲ್ಫ್ ಟೂರ್ನಿಯಲ್ಲಿ ಮೂರನೇ ಸ್ಥಾನ ಗಳಿಸಿದ್ದಾರೆ.

ಅದಿತಿ ಅಶೋಕ್

ಥಾಯ್ಲೆಂಡ್‌ನ ಸಹೋದರಿಯರಾದ ಅರಿಯಾ ಮತ್ತು ಮೊರಿಯಾ ಜುಟಾನುಗರ್ನ್ ಪ್ರಶಸ್ತಿ ಗೆದ್ದುಕೊಂಡರು. ಟೂರ್ನಿಯಲ್ಲಿ ಈ ಹಿಂದೆ ಚಾಂಪಿಯನ್ ಆಗಿದ್ದ ಅಮೆರಿಕದ ಸಿಡ್ನಿ ಕ್ಲ್ಯಾಂಟನ್ ಮತ್ತು ಥಾಯ್ಲೆಂಡ್‌ನ ಜಾಸ್ಮಿನ್ ಸುವಣ್ಣಪುರ 2ನೇ ಸ್ಥಾನ ತಮ್ಮದಾಗಿಸಿಕೊಂಡರು.

ಫ್ರೀಸ್ಟೈಲ್ ಕುಸ್ತಿ: ವಿನೋದ್‌ಕುಮಾರ್ ಕೋಚ್

ಬೆಂಗಳೂರು: ಭಾರತ ಕುಸ್ತಿ ಫೆಡರೇಷನ್, ವಿಶ್ವ ಕೆಡೆಟ್ ಫ್ರೀಸ್ಟೈಲ್ ಮತ್ತು ಗ್ರೀಕೊ ರೋಮನ್ ಕುಸ್ತಿ ಚಾಂಪಿಯನ್‌ಷಿಪ್‌ಗೆ ತಂಡವನ್ನು ಕಳುಹಿಸಿದೆ. ಕರ್ನಾಟಕದ ವಿನೋದ್‌ಕುಮಾರ್ ಕೃಷ್ಣಪ್ಪ ಅವರು ಕೆಡೆಟ್ ಫ್ರೀಸ್ಟೈಲ್ ತಂಡದ ತರಬೇತಿಗೆ ಆಯ್ಕೆಯಾಗಿದ್ದಾರೆ. ಹಂಗರಿಯ ಬುಡಾಪೆಸ್ಟ್‌ನಲ್ಲಿ ಸೋಮವಾರದಿಂದ ಜುಲೈ 25ರವರೆಗೆ ಈ ಚಾಂಪಿಯನ್‌ಷಿಪ್ ನಡೆಯಲಿದೆ.

ಚಾಂಪಿಯನ್‌ಷಿಪ್‌ನ ಪೂರ್ವಸಿದ್ಧತೆಗಾಗಿ ಸೋನೆಪತ್‌ನ ಭಾರತ ಕ್ರೀಡಾ ಪ್ರಾಧಿಕಾರ ಕೇಂದ್ರದಲ್ಲಿ ತರಬೇತಿ ಶಿಬಿರ ನಡೆದಿತ್ತು.

ಆನ್‌ಲೈನ್ ಚೆಸ್: ಚಾರ್ವಿಗೆ ಚಿನ್ನ

ಬೆಂಗಳೂರು: ಕರ್ನಾಟಕದ ಚಾರ್ವಿ ಎ. ಎಐಸಿಎಫ್ ರಾಷ್ಟ್ರೀಯ ಆನ್‌ಲೈನ್ ಶಾಲಾ ಚೆಸ್ ಚಾಂಪಿಯನ್‌ಷಿಪ್‌ನ ಏಳು ವರ್ಷದೊಳಗಿನವರ ವಿಭಾಗದಲ್ಲಿ ಭಾನುವಾರ ಚಿನ್ನದ ಪದಕ ಗೆದ್ದುಕೊಂಡಿದ್ದಾಳೆ. ಇದರೊಂದಿಗೆ ಈ ವರ್ಷದ ಏಷ್ಯನ್ ಆನ್‌ಲೈನ್ ಶಾಲಾ ಚಾಂಪಿಯನ್‌ಷಿಪ್‌ನಲ್ಲಿ ದೇಶವನ್ನು ಪ್ರತಿನಿಧಿಸುವ ಅವಕಾಶ ಪಡೆದಿದ್ದಾಳೆ.

ಚಾರ್ವಿ ಎ.

ಇಲ್ಲಿಯ ರಾಷ್ಟ್ರೋತ್ಥಾನ ವಿದ್ಯಾ ಕೇಂದ್ರದ ವಿದ್ಯಾರ್ಥಿನಿ ಚಾರ್ವಿ, ಒಟ್ಟು ಒಂಬತ್ತು ಪಾಯಿಂಟ್ಸ್ ಗಳಿಸಿ 10 ವರ್ಷದೊಳಗಿನವರ ವಿಶ್ವ ಯೂತ್ ಚೆಸ್ ಚಾಂಪಿಯನ್‌ಷಿಪ್‌ಗೂ ಆಯ್ಕೆಯಾದಳು.

ತೆಲಂಗಾಣದ ಸಂಹಿತಾ ಪುಂಗವನಂ (8 ಪಾಯಿಂಟ್ಸ್) ಮತ್ತು ಮಹಾರಾಷ್ಟ್ರದ ಇರಾ ಬೊಹ್ರಾ (7 ಪಾಯಿಂಟ್ಸ್) ಕ್ರಮವಾಗಿ ಎರಡು ಮತ್ತು ಮೂರನೇ ಸ್ಥಾನ ಗಳಿಸಿದರು ಎಂದು ಯುನೈಟೆಡ್ ಕರ್ನಾಟಕ ಚೆಸ್ ಸಂಸ್ಥೆಯ ಪ್ರಕಟಣೆಯಲ್ಲಿ ತಿಳಿಸಲಾಗಿದೆ.

ಬಿಎಫ್‌ಸಿಗೆ ಹರ್ಮನ್‌ಪ್ರೀತ್

ಬೆಂಗಳೂರು: ಇಂಡಿಯನ್ ಸೂಪರ್ ಲೀಗ್(ಐಎಸ್‌ಎಲ್) ಫುಟ್‌ಬಾಲ್ ಫ್ರಾಂಚೈಸ್ ಬೆಂಗಳೂರು ಎಫ್‌ಸಿಯು ಯುವ ಆಟಗಾರ ಹರ್ಮನ್‌ಪ್ರೀತ್ ಸಿಂಗ್ ಅವರೊಂದಿಗೆ ಭಾನುವಾರ ಒಪ್ಪಂದ ಮಾಡಿಕೊಂಡಿದೆ.

ಈಸ್ಟ್ ಬೆಂಗಾಲ್ ಮತ್ತು ಯುನೈಟೆಡ್ ಪಂಜಾಬ್ ಎಫ್‌ಸಿ ತಂಡಗಳಲ್ಲಿ ಆಡಿದ್ದ 19 ವರ್ಷದ ಹರ್ಮನ್‌ಪ್ರೀತ್, ಫ್ರೀ ಟ್ರಾನ್ಸ್‌ಫರ್ ಆಧಾರದಲ್ಲಿ ಬಿಎಫ್‌ಸಿ ಸೇರಿದ್ದಾರೆ.

ಪ್ರಜಾವಾಣಿ ಕ್ಯಾಚ್ ಇಟ್.. ಕ್ರೀಡಾ ಕಥೆಗಳು

ಹಾಕಿ ಮಾಂತ್ರಿಕನಿಗೆ ಮೈಸೂರಿನ ಕಾಣಿಕೆ

ಹಾಕಿ ಮಾಂತ್ರಿಕ ಮೇಜರ್ ಧ್ಯಾನಚಂದ್ ಅವರ ಜೀವನದ ಮೌಲ್ಯಗಳೇನು? ಅವರಿಗೆ ಮೈಸೂರು ಮಹಾರಾಜರು ಕೊಟ್ಟ ಕಾಣಿಕೆ ಏನು? ಮುಂದೆ ಅದು ಏನಾಯಿತು? ಇಲ್ಲಿದೆ ನೋಡಿ...

QR ಕೋಡ್ ಸ್ಕ್ಯಾನ್ ಮಾಡಿ

ಚೆಸ್: ಆನಂದ್‌ಗೆ ಸ್ಪಾರ್ಕಸನ್ ಟ್ರೋಫಿ

ಡರ್ಟ್‌ಮಂಡ್, ಜರ್ಮನಿ (ಪಿಟಿಐ): ಭಾರತದ ಗ್ರ್ಯಾಂಡ್‌ಮಾಸ್ಟರ್ ವಿಶ್ವನಾಥನ್ ಆನಂದ್ ಅವರು ಸ್ಪಾರ್ಕಸನ್ ಟ್ರೋಫಿ ಚೆಸ್ ಟೂರ್ನಿಯಲ್ಲಿ ಪ್ರಶಸ್ತಿ ಮುಡಿಗೇರಿಸಿಕೊಂಡಿದ್ದಾರೆ. ಭಾನುವಾರ ಇಲ್ಲಿ ಕೊನೆಗೊಂಡ ಟೂರ್ನಿಯಲ್ಲಿ ಅವರು, ದೀರ್ಘಕಾಲದ ಎದುರಾಳಿ ರಷ್ಯಾದ ವ್ಲಾಡಿಮಿರ್ ಕ್ರಾಮ್ನಿಕ್ ಅವರನ್ನು ಹಿಂದಿಕ್ಕಿದರು.

ಬಿಳಿ ಕಾಯಿಗಳೊಂದಿಗೆ ಆಡಿದ ಮಾಜಿ ವಿಶ್ವ ಚಾಂಪಿಯನ್ ಆನಂದ್, ನಾಲ್ಕನೇ ಮತ್ತು ಕೊನೆಯ ಸುತ್ತಿನಲ್ಲಿ ಕ್ರಾಮ್ನಿಕ್ ಎದುರು ಡ್ರಾ ಸಾಧಿಸಿದರು. ಆ ಮೂಲಕ 2.5–1.5ರಿಂದ ಪಂದ್ಯ ಗೆದ್ದುಕೊಂಡರು.

ವಿಶ್ವನಾಥನ್ ಆನಂದ್

ಮೊದಲ ಗೇಮ್‌ನಲ್ಲಿ ಆನಂದ್ ಜಯ ಸಾಧಿಸಿದ್ದರು. ನಂತರದ ಮೂರು ಗೇಮ್‌ಗಳು ಡ್ರಾನಲ್ಲಿ ಅಂತ್ಯವಾಗಿದ್ದವು.

ಕ್ರಿಕೆಟ್: ಶಿಖರ್–ಇಶಾನ್ ಆಟಕ್ಕೆ ಒಲಿದ ಜಯ

ಕೊಲಂಬೊ (ಪಿಟಿಐ): ನಾಯಕನಾಗಿ ಚೊಚ್ಚಲ ಪಂದ್ಯವಾಡಿದ ಶಿಖರ್ ಧವನ್ ಮತ್ತು ಅಂತರರಾಷ್ಟ್ರೀಯ ಏಕದಿನ ಕ್ರಿಕೆಟ್‌ಗೆ ಪದಾರ್ಪಣೆ ಮಾಡಿದ ಇಶಾನ್ ಕಿಶನ್ ಅವರ ಬ್ಯಾಟಿಂಗ್‌ನಿಂದ ಭಾರತ ತಂಡವು ಜಯಭೇರಿ ಬಾರಿಸಿತು.

ಪ್ರೇಮದಾಸ ಕ್ರೀಡಾಂಗಣದಲ್ಲಿ ಭಾನುವಾರ ನಡೆದ ಮೊದಲ ಪಂದ್ಯದಲ್ಲಿ ಭಾರತ ತಂಡವು 7 ವಿಕೆಟ್‌ಗಳಿಂದ ಶ್ರೀಲಂಕಾ ವಿರುದ್ಧ ಜಯಿಸಿತು. ಮೂರು ಪಂದ್ಯಗಳ ಸರಣಿಯಲ್ಲಿ 1–0 ಮುನ್ನಡೆ ಸಾಧಿಸಿತು. ಟಾಸ್ ಗೆದ್ದು ಮೊದಲು ಬ್ಯಾಟಿಂಗ್ ಮಾಡಿದ ಶ್ರೀಲಂಕಾ ತಂಡವು 50 ಓವರ್‌ಗಳಲ್ಲಿ 9 ವಿಕೆಟ್‌ಗಳಿಗೆ 262 ರನ್ ಗಳಿಸಿತು. ಅದಕ್ಕುತ್ತರವಾಗಿ ಭಾರತ ತಂಡವು 36.4 ಓವರ್‌ಗಳಲ್ಲಿ 3 ವಿಕೆಟ್‌ಗಳಿಗೆ 263 ರನ್ ಗಳಿಸಿ ಜಯಿಸಿತು.

ಈ ಪಂದ್ಯದಲ್ಲಿ ಅರ್ಧಶತಕ ಗಳಿಸಿದ ಶಿಖರ್, ಏಕದಿನ ಮಾದರಿಯಲ್ಲಿ ಆರು ಸಾವಿರ ರನ್ ಪೂರ್ಣಗೊಳಿಸಿದರು.

ಇನಿಂಗ್ಸ್ ಆರಂಭಿಸಿದ ಪೃಥ್ವಿ ಶಾ (43; 24ಎ) ಮತ್ತು ಶಿಖರ್ (ಔಟಾಗದೆ 86; 95ಎ) ಮೊದಲ ವಿಕೆಟ್‌ಗೆ 58 ರನ್ ಸೇರಿಸಿ ಉತ್ತಮ ಅಡಿಪಾಯ ಹಾಕಿದರು. ಆರನೇ ಓವರ್‌ನಲ್ಲಿ ಪೃಥ್ವಿ ಔಟಾದರು. ಈ ಸಂದರ್ಭದಲ್ಲಿ ಶಿಖರ್ ಜೊತೆಗೂಡಿದ ಇಶಾನ್ ಕಿಶನ್ (59; 42ಎ) ಬೌಲರ್‌ಗಳನ್ನು ದಂಡಿ ಸಿದರು. ಬೀಡುಬೀಸಾಗಿ ಬ್ಯಾಟಿಂಗ್ ಮಾಡಿದ ಇಶಾನ್ ಆಟಕ್ಕೆ ರನ್‌ಗಳು ಹರಿದು ಬಂದವು. ಇಶಾನ್, ಎಂಟು ಬೌಂಡರಿ ಮತ್ತು ಎರಡು ಸಿಕ್ಸರ್ ಬಾರಿಸಿದರು. ಶಿಖರ್ ಜೊತೆಗೆ ಎರಡನೇ ವಿಕೆಟ್‌ಗೆ 85 ರನ್ ಸೇರಿಸಿದರು.18ನೇ ಓವರ್‌ನಲ್ಲಿ ಇಶಾನ್ ಔಟಾದಾಗ ಕ್ರೀಸ್‌ಗೆ ಬಂದ ಮನೀಷ್ ಪಾಂಡೆ (26; 40ಎ) ಎಚ್ಚರಿಕೆಯಿಂದ ಆಡಿದರು. ತಂಡದ ಮೊತ್ತವು ಇನ್ನೂರ ರ ಗಡಿ ದಾಟುವಂತೆ ನೋಡಿಕೊಂಡರು. ಮನೀಷ್ ಔಟಾದರು. ತಮ್ಮ ಚೊಚ್ಚಲ ಏಕದಿನ ಪಂದ್ಯವಾಡಿದ ಸೂರ್ಯಕುಮಾರ್ ಯಾದವ್ (ಔಟಾಗದೆ 31) ಶಿಖರ್ ಜೊತೆಗೂಡಿ ತಂಡವನ್ನು ಗೆಲುವಿನ ದಡ ಮುಟ್ಟಿಸಿದರು.

ಚಾಹಲ್, ಕುಲದೀಪ್ ಮೋಡಿ: ಲಯ ಕಂಡುಕೊಳ್ಳುವ ಪ್ರಯತ್ನದಲ್ಲಿರುವ ಯಜುವೇಂದ್ರ ಚಾಹಲ್ ಮತ್ತು ಕುಲದೀಪ್ ಯಾದವ್ ತಮ್ಮ ಸ್ಪಿನ್ ಮೋಡಿ ತೋರಿಸಿದರು. ಶ್ರೀಲಂಕಾದ ಆರಂಭಿಕ ಜೋಡಿ ಅವಿಷ್ಕಾ ಫರ್ನಾಂಡೊ (33 ರನ್) ಮತ್ತು ಮಿನೋದ್ ಭಾನುಕಾ (27) ಉತ್ತಮ ಆರಂಭ ನೀಡಿದರು. ಮೊದಲ ವಿಕೆಟ್ ಜೊತೆಯಾಟದಲ್ಲಿ ಈ ಜೋಡಿಯು 49 ರನ್ ಗಳಿಸಿದ್ದಾಗ, ಚಾಹಲ್ 10ನೇ ಓವರ್‌ನಲ್ಲಿ ಈ ಜೊತೆಯಾಟ ಮುರಿದರು. ಇದೇ ಪಂದ್ಯದಲ್ಲಿ ಪದಾರ್ಪಣೆ ಮಾಡಿದ ಶನುಕಾ ರಾಜಪಕ್ಷ (24; 22ಎ) ಅವರು ಭಾನುಕಾ ಜೊತೆಗೂಡಿ ಇನಿಂಗ್ಸ್‌ಗೆ ಸ್ಥಿರತೆ ನೀಡುವ ಪ್ರಯತ್ನ ಮಾಡಿದರು. ಆದರೆ ಈ ಜೊತೆಯಾಟವನ್ನು ಭಾನುಕಾ ವಿಕೆಟ್ ಗಳಿಸಿದ ಕುಲದೀಪ್ ಸಂಭ್ರಮಿಸಿದರು. ಅದೇ ಓವರ್‌ನಲ್ಲಿ ಯಾದವ್ ಅವರು ಮಿನೋದ್ ವಿಕೆಟ್ ಅನ್ನು ಕೂಡ ಗಳಿಸಿದರು. ಮಧ್ಯಮಕ್ರಮಾಂಕದಲ್ಲಿ ಚರಿತ ಅಸ್ಲೆಂಕಾ (38) ಮತ್ತು ನಾಯಕ ದಸುನ್ ಶನಕಾ (39) ಉತ್ತಮವಾಗಿ ಆಡಿದರು. ಆದರೆ, ಕೊನೆಯ ಹಂತದಲ್ಲಿ ಬೀಸಾಟವಾಡಿದ ಚಾಮಿಕಾ ಕರುಣಾರತ್ನೆ (ಔಟಾಗದೆ 43; 35ಎ, 1ಬೌಂ, 2ಸಿ) ತಂಡವು ಹೋರಾಟದ ಮೊತ್ತ ಗಳಿಸಲು ನೆರವಾದರು.

ಶಿಖರ್ ಧವನ್ ಬ್ಯಾಟಿಂಗ್ ವೈಖರಿ– ಪಿಟಿಐ ಚಿತ್ರ

ಸ್ಕೋರ್ ಕಾರ್ಡ್

ಶ್ರೀಲಂಕಾ 9ಕ್ಕೆ 262 (50 ಓವರ್)

ಆವಿಷ್ಕ ಸಿ ಪಾಂಡೆ ಬಿ ಚಾಹಲ್ 33 (35 ಎ, 4x2, 6x1), ಮಿನೋದ್ ಸಿ ಶಾ ಬಿ ಕುಲದೀಪ್ 27 (44 ಎ, 4x3), ರಾಜಪಕ್ಷ ಸಿ ಧವನ್ ಬಿ ಕುಲದೀಪ್ 24 (22 ಎ, 4x2, 6x2), ಧನಂಜಯ ಸಿ ಭುವನೇಶ್ವರ್ ಬಿ ಕೃಣಾಲ್ 14 (27 ಎ, 4x1), ಅಸಲಂಕ ಸಿ ಇಶಾನ್ ಬಿ ಚಾಹರ್ 38 (65 ಎ, 4x1), ಶನಕ ಸಿ ಹಾರ್ದಿಕ್ ಬಿ ಚಾಹಲ್ 39 (50 ಎ, 4x2, 6x1), ವನಿಂದು ಸಿ ಧವನ್ ಬಿ ಚಾಹರ್ 8 (7 ಎ, 4x1), ಚಾಮಿಕಾ ಔಟಾಗದೆ 43 (35 ಎ, 4x1, 6x2) ಉಡಾನ ಸಿ ಚಾಹರ್ ಬಿ ಹಾರ್ದಿಕ್ 8 (9 ಎ), ದುಷ್ಮಂತ ರನ್ ಔಟ್ 13 (7 ಎ, 4x1, 6x1)

ಇತರೆ (ಲೆಗ್ ಬೈ 2, ನೋಬಾಲ್ 1, ವೈಡ್ 12) 15

ವಿಕೆಟ್ ಪತನ: 1-49 (ಆವಿಷ್ಕ ಫರ್ನಾಂಡೊ, 9.1), 2-85 (ಭಾನುಕ ರಾಜಪಕ್ಷ, 16.1), 3-89 (ಮಿನೋದ್ ಭಾನುಕ, 16.4), 4-117 (ಧನಂಜಯ ಡಿಸಿಲ್ವಾ, 24.4), 5-166 (ಚರಿತ ಅಸ್ಲೆಂಕಾ, 37.2), 6-186 (ವನಿಂದು ಹಸರಂಗ, 39.3), 7-205 (ದಸುನ್ ಶನಕ, 43.5), 8-222 (ಇಸುರು ಉಡಾನ, 46.5), 9-262 (ದುಷ್ಮಂತ ಚಮೀರ, 49.6)

ಬೌಲಿಂಗ್: ಭುವನೇಶ್ವರ್ ಕುಮಾರ್ 9-0-63-0, ದೀಪಕ್ ಚಾಹರ್ 7-1-37-2, ಹಾರ್ದಿಕ್ ಪಾಂಡ್ಯ 5-0-34-1, ಯಜುವೇಂದ್ರ ಚಾಹಲ್ 10-0-52-2, ಕುಲದೀಪ್ ಯಾದವ್ 9-1-48-2, ಕೃಣಾಲ್ ಪಾಂಡ್ಯ 10-1-26-1

ಭಾರತ 3ಕ್ಕೆ 263 (36.4 ಓವರ್)

ಪೃಥ್ವಿ ಶಾ ಸಿ ಫರ್ನಾಂಡೊ ಬಿ ಧನಂಜಯ 43 (24 ಎ, 4x9), ಶಿಖರ್ ಧವನ್ ಔಟಾಗದೆ 86 (95 ಎ, 4x6, 6x1), ಇಶಾನ್ ಕಿಶನ್ ಸಿ ಭಾನುಕ ಬಿ ಸಂಡಗನ್ 59 (42 ಎ, 4x8, 6x2), ಮನೀಷ್ ಪಾಂಡೆ ಸಿ ಶನಕ ಬಿ ಧನಂಜಯ 26 (40 ಎ, 4x1, 6x1), ಸೂರ್ಯಕುಮಾರ್ ಯಾದವ್ ಔಟಾಗದೆ 31 (20 ಎ, 4x5)

ಇತರೆ (ಲೆಗ್ ಬೈ 5, ನೋಬಾಲ್ 1, ವೈಡ್ 12) 18

ವಿಕೆಟ್ ಪತನ: 1-58 (ಪೃಥ್ವಿ ಶಾ, 5.3), 2-143 (ಇಶಾನ್ ಕಿಶನ್, 17.5), 3-215 (ಮನೀಷ್ ಪಾಂಡೆ, 30.4))

ಬೌಲಿಂಗ್: ದುಷ್ಮಂತ ಚಮೀರ 7-0-42-0, ಇಸುರು ಉಡಾನ 2-0-27-0, ಧನಂಜಯ ಡಿ‘ಸಿಲ್ವಾ 5-0-49-2, ಲಕ್ಷಣ್ ಸಂಡಗನ್ 8.4-0-53-1, ಚರಿತ ಅಸ್ಲೆಂಕಾ 3-0-26-0, ವನಿಂದು ಹಸರಂಗ 9-1-45-0, ಚಾಮಿಕಾ ಕರುಣಾರತ್ನೆ 2-0-16-0

ಫಲಿತಾಂಶ: ಭಾರತಕ್ಕೆ 7 ವಿಕೆಟ್‌ಗಳ ಜಯ ಸರಣಿಯಲ್ಲಿ 1–0 ಮುನ್ನಡೆ.

24x7 Helpline: 7876977777

ಕೀಲು ನೋವಿಗೆ ಸರಿಸಾಟಿಯಿಲ್ಲದ ಔಷಧಿ

Dr. Juneja's
ಡಾ. ಆರ್ಥೋ®
Ayurvedic Oil, Capsules, Spray & Ointment



ಇದು 8 ಪ್ರಯೋಜನಕಾರಿ ಆಯುರ್ವೇದಿಕ ತೈಲಗಳ ಮಿಶ್ರಣವಾಗಿದ್ದು, ಕೀಲುಗಳ ನೋವನ್ನು ಕಡಿಮೆಗೊಳಿಸಲು ಸಹಕಾರಿಯಾಗಿದೆ. ದಿನಕ್ಕೆ 1–2 ಬಾರಿ ಸುಮಾರು 8–10 ಎಂಎಲ್ ಡಾ. ಆರ್ಥೋ ತೈಲವನ್ನು ನೋವಿರುವ ಭಾಗದ ಮೇಲೆ ಮೃದುವಾಗಿ ಮಸಾಜ್ ಮಾಡಿರಿ.

ಸಂಪೂರ್ಣ ದೇಶಿಯ ಸಂಪೂರ್ಣ ಆಯುರ್ವೇದಿಕ

#VocalforLocal



ಜಾಗ್ರತೆ ಇರಲಿ

ಡಾ. ಆರ್ಥೋ ರವರ ಎಲ್ಲಾ ಉತ್ಪನ್ನಗಳನ್ನು ಡಾ. ಆರ್ಥೋ ಹೆಸರಿನಲ್ಲಿಯೇ ಉತ್ಪಾದಿಸಲಾಗುತ್ತದೆ. ಇದೇ ರೀತಿಯ ಹೆಸರನ್ನು, ಪ್ಯಾಕಿಂಗ್‌ನ್ನು, ಬಾಟಲ್‌ನ್ನು ಮತ್ತು ಜಾಹೀರಾತನ್ನು ಹೊಂದಿರುವ ಉತ್ಪನ್ನಗಳಿಂದ ಎಚ್ಚರವಾಗಿರಿ. ಅತ್ಯುತ್ತಮ ಡಾ. ಆರ್ಥೋ ಉತ್ಪನ್ನ ಮಾತ್ರ ಖರೀದಿಸಿರಿ.